ತಿರುಮಂಗಲ ನೀಲಕಂಠನ್ ವಿರಚಿತ

ಮನುಷ್ಯಾಲಯಚಂದ್ರಿಕಾ



ಸಂಪಾದನ ಅನುವಾದ ವಿವರಣೆ

ಸಿದ್ದ ಮೂಲೆ ಶಂಕರನಾರಾಯಣ ಭಟ್ಟ

ತಿರುಮಂಗಲ ನೀಲಕಂಠನ್ ವಿರಚಿತ

ಮನುಷ್ಯಾಲಯ ಚಂದ್ರಿಕಾ

(ಗೃಹವಾಸ್ತುಶಿಲ್ಪದ ಶಾಸ್ತ್ರೀಯ ಗ್ರಂಥ - ಸಂಸ್ಕೃತ ಮೂಲಶ್ಲೋಕ, ತಾತ್ಪರ್ಯ, ಟಿಪ್ಪಣಿ, ತಾಂತ್ರಿಕ - ಭೌಗೋಳಿಕ - ವೈಜ್ಞಾನಿಕ ವಿಶ್ಲೇಷಣೆ, ಗಣಿತ ಪ್ರಕ್ರಿಯೆ ಮೊದಲಾದ ವಿವರಗಳೊಂದಿಗೆ)

ಅನುವಾದಕರು/ಲೇಖಕರು

ಶ್ರೀ ಸಿದ್ಧಮೂಲೆ ಶಂಕರನಾರಾಯಣ ಭಟ್ಟ,

ಎಂ. ಎ; ಬಿ. ಎಡ್; ವಿದ್ವಾನ್ (ಕನ್ನಡ-ಸಂಸ್ಕೃತ); ರಾ. ಭಾ. ಪ್ರವೀಣ;

ನಿವೃತ್ತ ಪ್ರಾಂಶುಪಾಲರು,

"ನಯನ", ಸಿದ್ಧಮೂಲೆ, ಪೆರ್ಲಂಪಾಡಿ ಅಂಚೆ - 574 212,

ಪುತ್ತೂರು ತಾಲೂಕು, ದ.ಕ. ಜಿಲ್ಲೆ, ಕರ್ನಾಟಕ.

2001

ಪ್ರಕಾಶಕರು

ವಾಸ್ತುಶಿಲ್ಪಶಾಸ್ತ್ರಜ್ಞ- ಜ್ಯೋತಿಷಿ ಮುನಿಯಂಗಳ ಕೃಷ್ಣ ಭಟ್ಟ ಸಂಸ್ಮರಣ ವೇದಿಕೆ,

ಅಂಚೆ - ಸುಬ್ರಹ್ಮಣ್ಯ - 574 238,

ಸುಳ್ಯ ತಾಲೂಕು, ದ.ಕ. ಜಿಲ್ಲೆ, ಕರ್ನಾಟಕ.

Manushyalaya Chandrika, a translation work from Sanskrit in to Kannada with an engineering commentary of Manushyalaya Chandrika of Thirumangala Neelakanthan. Translated by Sri Siddhamoole Shankaranarayana Bhat, Retd, Principal, Perlampady Post, Puttur Tq, D.K. Dist. Published by V.S.S.J. M. Krishna Bhatta Samsmarana Vedike, Subrahmanya Post - 574 238, Sullia Taluk, D. K. Dist. Karnataka State.

Printed at M/s. Manorama Offsets, Bejai, Mangalore., Ph : 212623

First Published : 2001

Pages : 24+6+190+34 = 254

Price : Rs. 150 = 00

@ Author


ಗ್ರಂಥದ ಸಂಪೂರ್ಣಸ್ವಾಮ್ಯ ಅನುವಾದಕರದು.

ಮುಖಪುಟ : ಶ್ರೀ ಕೃಷ್ಣಕುಮಾರ, ಮಂಗಳೂರು

ಬೆಲೆ : ರೂ. 150 = 00

ಪ್ರಕಾಶಕರು : ವಾಸ್ತುಶಿಲ್ಪಶಾಸ್ತ್ರಜ್ಞ, ಜ್ಯೋತಿಷಿ, ಮುನಿಯಂಗಳ ಕೃಷ್ಣ ಭಟ್ಟ ಸಂಸ್ಮರಣ ವೇದಿಕೆ,
ಸುಬ್ರಹ್ಮಣ್ಯ ಅಂಚೆ, ಪಿನ್‌ಕೋಡ್ - 574 238. ಸುಳ್ಯ ತಾಲೂಕು,
ದ.ಕ. ಜಿಲ್ಲೆ, ಕರ್ನಾಟಕ.

ಮುದ್ರಣ : ಮನೋರಮಾ ಆಫ್‌ಸೆಟ್ಸ್
ಬಿಜೈ,
ಮಂಗಳೂರು - 575 004
ಫೋನ್ - 212623, 222505, 211398



ಶ್ರೀ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ.
ಪರ್ಯಾಯ ಶ್ರೀ ಪೇಜಾವರ ಅಧೋಕ್ಷಜ ಮಠ
ಜಗದ್ಗುರು ಶ್ರೀ ಮಧ್ವಾಚಾರ್ಯ ಸಂಸ್ಥಾನ
ಉಡುಪಿ - 576 101,
ದೂರವಾಣಿ : 08252 - 20598, 26598

ತಾ. 02.09.2001

ಜ್ಯೋತಿಷ್ಯ ಮತ್ತು ವಾಸ್ತು ಶಿಲ್ಪ ಶಾಸ್ತ್ರಜ್ಞರಾದ ಮುನಿಯಂಗಳ ಕೃಷ್ಣಭಟ್ಟರು ತಮ್ಮ ವಾಸ್ತು ವಿದ್ಯೆಯ ಮೂಲಕ ನಾಡಿಗೆ ಸಲ್ಲಿಸಿದ ಅಪಾರ ಸೇವೆಯನ್ನು ಸ್ಮರಿಸುತ್ತಿದ್ದೇವೆ. ದೇವಾಲಯ ನಿರ್ಮಾಣ ಕಾರ್ಯದಲ್ಲಿ ಅವರು ಅತ್ಯುತ್ತಮ ಮಾರ್ಗದರ್ಶನವನ್ನು ನೀಡುತ್ತಿದ್ದರು. ವಾಸ್ತು ಶಿಲ್ಪವು ಮನೆ ಮತ್ತು ದೇವಾಲಯ ನಿರ್ಮಾಣದಲ್ಲಿ ಭಾರತೀಯ ಶೈಲಿಯನ್ನು ನಿರೂಪಿಸುತ್ತದೆ. ನಮ್ಮ ಪ್ರಾಚೀನ ಶಿಲ್ಪದ ವಿಶೇಷ ಪರಿಚಯ ಮತ್ತು ಅದರಲ್ಲಿ ಅಭಿಮಾನವು ನಮ್ಮಲ್ಲಿ ಬೆಳೆಯಬೇಕು. ಇತ್ತೀಚೆಗೆ ಈ ಶಿಲ್ಪದ ಬಗ್ಗೆ ಅಭಿಮಾನಕ್ಕಿಂತ ಭಯದ ವಾತಾವರಣ ನಿರ್ಮಾಣವಾಗುತ್ತಿರುವುದು ಆರೋಗ್ಯದ ಲಕ್ಷಣವಲ್ಲ.

ನಿವೃತ್ತ ಪ್ರಾಂಶುಪಾಲರಾದ ಶ್ರೀ ಸಿದ್ಧಮೂಲೆ ಶಂಕರನಾರಾಯಣ ಭಟ್ಟರು ಕನ್ನಡದಲ್ಲಿ ತಾತ್ಪರ್ಯ ವಿಶೇಷ ವಿವರಣೆ ಮೊದಲಾದವುಗಳನ್ನು ಕೊಟ್ಟು ಸಿದ್ಧಪಡಿಸಿದ ಮನುಷ್ಯಾಲಯ ಚಂದ್ರಿಕಾ ಎಂಬ ಗೃಹವಾಸ್ತು ಶಿಲ್ಪದ ಶಾಸ್ತ್ರೀಯ ಗ್ರಂಥವನ್ನು ಸಂಸ್ಮರಣವೇದಿಕೆಯು ಪ್ರಕಟಿಸುತ್ತಿರುವುದು ಅತ್ಯಂತ ಅಭಿನಂದನೀಯವಾಗಿದೆ. ಇಂತಹ ಉತ್ತಮ ಕಾರ್ಯಗಳು ಈ ವೇದಿಕೆಯ ಮೂಲಕ ನಡೆಯುತ್ತಿರಲಿ ಎಂದು ಆಶಿಸುತ್ತೇನೆ.

ಇತಿ

ಸಪ್ರೇಮ ನಾರಾಯಣ ಸ್ಮರಣೆಗಳು
ಶ್ರೀ ವಿಶ್ವೇಶ ತೀರ್ಥ ಶ್ರೀಪಾದರು



ಶ್ರೀ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ.
ಜಗದ್ಗುರು ಶ್ರೀ ಮಧ್ವಾಚಾರ್ಯ ಮಹಾ ಸಂಸ್ಥಾನಮ್
ಶ್ರೀ ಸಂಪುಟ ನರಸಿಂಹಸ್ವಾಮೀ ಸುಬ್ರಹ್ಮಣ್ಯ ಮಠ.
ಸುಬ್ರಹ್ಮಣ್ಯ - ಅಂಚೆ 574 238, ಸುಳ್ಯ ತಾಲೂಕು.
ದ. ಕ. ದೂರವಾಣಿ - 81221, 81211


ದಿ. ಮುನಿಯಂಗಳ ಕೃಷ್ಣಭಟ್ಟರು ವಾಸ್ತು ಶಿಲ್ಪ ಮತ್ತು ಜ್ಯೋತಿಷ್ಯ ಎಂಬ ಎರಡೂ ಶಾಸ್ತ್ರಗಳಲ್ಲಿ ಪ್ರಕಾಂಡ ಪಂಡಿತರೆನಿಸಿದವರು. ಅವರು ತಮ್ಮ ಪಾಂಡಿತ್ಯದ ಮೂಲಕ ನಾಡಿಗೆ ಸಲ್ಲಿಸಿದ ಸೇವೆಯ ನೆನಪಿಗಾಗಿ "ಸಂಸ್ಮರಣ ವೇದಿಕೆ"ಯನ್ನು ಸುಬ್ರಹ್ಮಣ್ಯದಲ್ಲಿ ಸ್ಥಾಪಿಸಲಾಯಿತು. ಅಲ್ಲದೆ ವಾಸ್ತು ಶಿಲ್ಪಕ್ಕೆ ಕುರಿತಾದ ಒಂದು ಆಕರ ಗ್ರಂಥವನ್ನು ಪ್ರಕಟಿಸಲಾಯಿತು.

ಇದೀಗ ವೇದಿಕೆಯ ಎರಡನೆಯ ಕಾರ್ಯಕ್ರಮವಾಗಿ ಗೃಹವಾಸ್ತುವಿಗೆ ಸಂಬಂಧಿಸಿದ ಶಾಸ್ತ್ರೀಯ ಗ್ರಂಥವನ್ನು ಹೊರ ತರುವ ವೇದಿಕೆಯ ಯೋಜನೆ ಶ್ಲಾಘನೀಯವಾದುದು. ನಿವೃತ್ತ ಪ್ರಾಂಶುಪಾಲರೂ, ವಿದ್ವಾಂಸರೂ ಆದ ಶ್ರೀ ಸಿದ್ಧಮೂಲೆ ಶಂಕರನಾರಾಯಣ ಭಟ್ಟರು ಗೃಹ ವಾಸ್ತುವನ್ನೇ ಕುರಿತಾದ "ಮನುಷ್ಯಾಲಯ ಚಂದ್ರಿಕಾ" ಎಂಬ ಸಂಸ್ಕೃತ ಭಾಷೆಯ ಶಾಸ್ತ್ರ ಗ್ರಂಥವನ್ನು ಕನ್ನಡಕ್ಕೆ ಭಾಷಾಂತರಮಾಡಿ, ಟಿಪ್ಪಣಿ, ವಿಶೇಷ ವಿವರಣೆ ಮೊದಲಾದವುಗಳನ್ನು ಕೊಟ್ಟು ಬಹಳ ಉಪಯುಕ್ತವಾಗುವಂತೆ ಮಾಡಿ ಉಪಕರಿಸಿದ್ದಾರೆ. ಇಂತಹ ಬೆಲೆಯುಳ್ಳ ಗ್ರಂಥವನ್ನು ವೇದಿಕೆ ಪ್ರಕಟಿಸಲು ಮುಂದಾಗಿರುವುದು ಬಹಳ ಸಂತೋಷದ ಸಂಗತಿ. ಈ ಸತ್ಕಾರ್ಯ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಇತಿ

ಸುಬ್ರಹ್ಮಣ್ಯ
ದಿನಾಂಕ 18-9-2001

ಸಪ್ರೇಮ ನಾರಾಯಣ ಸ್ಮರಣೆಗಳು
ಶ್ರೀ ವಿದ್ಯಾ ಪ್ರಸನ್ನ ತೀರ್ಥ ಸ್ವಾಮೀಜಿ.



ಡಿ. ವೀರೇಂದ್ರ ಹೆಗ್ಗಡೆಯವರು
ಶ್ರೀ ಧರ್ಮಸ್ಥಳ - 574 216
ಕರ್ನಾಟಕ.

ಶುಭ ಹಾರೈಕೆ

ಭಾರತೀಯ ಸಂಸ್ಕೃತಿಯಲ್ಲಿ ಮಾನವನ ಜೀವನ ವಿಕಾಸವು ಕಲಾತ್ಮಕವಾಗಿರುವುದು ಅನನ್ಯ. ಮಾನವನ ನಾಗರಿಕ ಜೀವನಕ್ಕೆ ಬೇಕಾದ ಮೂಲಭೂತ ಆವಶ್ಯಕತೆಗಳಲ್ಲಿ ವಾಸಗೃಹ, ದೇವಸ್ಥಾನ, ಮಂದಿರಗಳು ಎಲ್ಲವೂ ಕಲಾತ್ಮಕವಾಗಿ ವಾಸ್ತುಶಿಲ್ಪದಲ್ಲಿ ಮೂಡಿಬರಬೇಕು.

ಇವೆಲ್ಲವನ್ನೂ ವೈಜ್ಞಾನಿಕ ಸಂಶೋಧನೆಗಳೊಂದಿಗೆ ತಂದವರೆಲ್ಲರೂ ನಮ್ಮ ಪ್ರಾಚೀನ ಋಷಿ-ಮುನಿಗಳು ಅವರು ಉಪದೇಶಿಸಿದ ಶಿಲ್ಪಶಾಸ್ತ್ರದ ಸೂತ್ರಗಳನ್ನು ಅಧ್ಯಯನ ಮಾಡಿ ಇಂದು ಅನೇಕ ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಗ್ರಂಥಗಳು ಪ್ರಕಟಗೊಂಡಿವೆ.

ಈ ನಿಟ್ಟಿನಲ್ಲಿ, ಜ್ಯೋತಿಷಿ ಹಾಗೂ ವಾಸ್ತು ಶಿಲ್ಪ ಶಾಸ್ತ್ರಜ್ಞ ಶ್ರೀ ಮುನಿಯಂಗಳ ಕೃಷ್ಣ ಭಟ್ಟ ಸಂಸ್ಮರಣ ವೇದಿಕೆಯ ಆಶ್ರಯದಲ್ಲಿ ಶ್ರೀ ಸಿದ್ಧಮೂಲೆ ಶಂಕರನಾರಾಯಣ ಭಟ್ ಇವರು ಸಂಗ್ರಹಿಸಿರುವ ವಾಸ್ತು ಶಿಲ್ಪ ಆಧಾರಿತ "ಮನುಷ್ಯಾಲಯ ಚಂದ್ರಿಕಾ" ಎಂಬ ಆಕರ ಗ್ರಂಥವೊಂದನ್ನು ಪ್ರಕಟಿಸಲಿರುವುದು ಸ್ತುತ್ಯರ್ಹವಾಗಿದೆ.

ಕೀರ್ತಿಶೇಷ ಶ್ರೀ ಮುನಿಯಂಗಳ ಕೃಷ್ಣ ಭಟ್ಟರು ಕರ್ನಾಟಕ, ಕೇರಳ ರಾಜ್ಯಗಳಲ್ಲಿ ವಾಸ್ತುಶಿಲ್ಪ ಮತ್ತು ಜ್ಯೋತಿಷ್ಯ ಶಾಸ್ತ್ರಗಳ ಅಗ್ರಗಣ್ಯ ಪಂಡಿತರೆನಿಸಿದ್ದು, ನಮ್ಮ ನಾಡಿನ ಅನೇಕ ದೇವಾಲಯ, ಮಠ, ಮಂದಿರಗಳ ವಾಸ್ತುಶಿಲ್ಪ ಹಾಗೂ ಜ್ಯೋತಿಷ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಮಾರ್ಗದರ್ಶಕರಾಗಿದ್ದು, ಶ್ರೀ ಕ್ಷೇತ್ರ ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿ ಗರ್ಭಗೃಹದ ಜೀರ್ಣೋದ್ಧಾರ ಕಾರ್ಯದ ಸಂದರ್ಭ ಶ್ರೀಯುತರ ಮಾರ್ಗದರ್ಶನ ಹಾಗೂ ಅನುಭವವನ್ನು ಪಡೆದು ಜೀರ್ಣೋದ್ಧಾರ ಕಾರ್ಯ ನೆರವೇರಿಸಲಾಗಿದೆ.

ಗೃಹ ನಿರ್ಮಾಣದ ಸಂದರ್ಭದಲ್ಲಿ ಆಲಯ ವಾಸ್ತುಗಳನ್ನು ಅನುಕರಿಸುವುದು ಔಚಿತ್ಯ ಪೂರ್ಣವಾಗಿದೆ. ಪ್ರಕೃತಿಯೊಂದಿಗೆ ಹೊಂದಿಕೊಂಡು ವೈಜ್ಞಾನಿಕವಾಗಿ ನಿರ್ಮಾಣ ಮಾಡುವ

ಗೃಹದಲ್ಲಿ ಶಾಂತಿ -ನೆಮ್ಮದಿ, ಯಶಸ್ಸು, ಕೀರ್ತಿ, ಲಾಭ, ಅಭಿವೃದ್ಧಿ ಉಂಟಾಗುವುದು ಖಚಿತ. ಈಗಾಗಲೇ ಆಲಯ ವಾಸ್ತುವನ್ನು ಅನುಸರಿಸಿ ಲಾಭ ಪಡೆದಿರುವವರು ಇದನ್ನು ಒಪ್ಪದಿರಲಾರರು.

ಇದೀಗ ಸರಿಯಾದ ವಾಸ್ತುಜ್ಞಾನವಿಲ್ಲದ ಮಾರ್ಗದರ್ಶಕರಿಂದ ವಾಸ್ತುಶಾಸ್ತ್ರದ ಬಗ್ಗೆ ಕೆಲವಾರು ಕಡೆ ಅಪನಂಬಿಕೆಗಳೂ ಹುಟ್ಟಿಕೊಳ್ಳುತ್ತವೆ. ಅಂತಹ ಸಂದರ್ಭದಲ್ಲಿ, ಅನೇಕ ಖ್ಯಾತ ವಿದ್ವಾಂಸರೂ, ಸಾಮಾನ್ಯ ಪ್ರಜೆಗಳೂ ಸ್ವವೇದ್ಯ, ಸ್ವ-ಅನುಭವ ಪಡೆಯುವ ಅವಕಾಶ ಇರುವ "ಮನುಷ್ಯಾಲಯ ಚಂದ್ರಿಕಾ" ಪುಸ್ತಕವನ್ನು ಪ್ರಕಟಿಸಿ ವಾಸ್ತುಶಿಲ್ಪಶಾಸ್ತ್ರಜ್ಞ ಶ್ರೀ ಮುನಿಯಂಗಳ ಕೃಷ್ಣ ಭಟ್ಟ ಸಂಸ್ಮರಣ ವೇದಿಕೆಯವರು ಮಹದುಪಕಾರ ಮಾಡಿದ್ದಾರೆ. ಆದುದರಿಂದ ಈ ಪುಸ್ತಕ ಪ್ರಕಟಗೊಂಡು ಸರ್ವರಿಗೂ ಉಪಯುಕ್ತ ಆಕರ ಪುಸ್ತಕವಾಗಲೆಂದು ಹಾರೈಸುತ್ತೇನೆ.

ಶ್ರೀ ಮಂಜುನಾಥ ಸ್ವಾಮಿಯ ಅನುಗ್ರಹವಿರಲಿ.

ಡಿ. ವೀರೇಂದ್ರ ಹೆಗ್ಗಡೆ
(ಡಿ. ವೀರೇಂದ್ರ ಹೆಗ್ಗಡೆಯವರು).

ವಾಸ್ತು ಶಿಲ್ಪ ಶಾಸ್ತ್ರಜ್ಞ- ಜ್ಯೋತಿಷಿ

ಶ್ರೀ ಮುನಿಯಂಗಳ ಕೃಷ್ಣಭಟ್ಟ ಸಂಸ್ಮರಣ ವೇದಿಕೆ, ಸುಬ್ರಹ್ಮಣ್ಯ

ಪದಾಧಿಕಾರಿಗಳು

ಮಾರ್ಗದರ್ಶನ	:-	ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಶ್ರೀ ಪೇಜಾವರ ಮಠ. ಶ್ರೀ ಶ್ರೀ ವಿದ್ಯಾ ಪ್ರಸನ್ನ ತೀರ್ಥ ಶ್ರೀಪಾದರು ಶ್ರೀ ಸುಬ್ರಹ್ಮಣ್ಯ ಮಠ.
ಗೌರವಾಧ್ಯಕ್ಷರು	:-	ರಾಜರ್ಷಿ, ಡಾ| ಡಿ. ವೀರೇಂದ್ರ ಹೆಗ್ಗಡೆಯವರು. ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ.
ಅಧ್ಯಕ್ಷರು	:-	ಶ್ರೀ ರಾಜಗೋಪಾಲ ಹೆಬ್ಬಾರ, ನೆರಿಯ
ಉಪಾಧ್ಯಕ್ಷರು	:-	ಶ್ರೀ ಸಾಮೆತ್ತಡ್ಕ ಗೋಪಾಲಕೃಷ್ಣ ಭಟ್, ಪುತ್ತೂರು. ಶ್ರೀ ಪಿ. ಎಸ್. ಚಿದಾನಂದ ರಾವ್, ಬೆಳ್ಳಾರೆ. ಶ್ರೀ ವೇಣುಗೋಪಾಲ ಆಚಾರ್ಯ, ಸುಬ್ರಹ್ಮಣ್ಯ.
ಕಾರ್ಯದರ್ಶಿ	:-	ಶ್ರೀ ಎಂ. ಮಹಾಬಲ ಶೆಟ್ಟಿ, ಸುಬ್ರಹ್ಮಣ್ಯ
ಸಹಕಾರ್ಯದರ್ಶಿ	:-	ಶ್ರೀ ಎನ್. ಕೇಶವ ಭಟ್ಟ, ಸುಬ್ರಹ್ಮಣ್ಯ
ಕೋಶಾಧಿಕಾರಿ	:-	ಶ್ರೀ ಎಸ್. ಎಂ. ಪ್ರಸಾದ, ಮುನಿಯಂಗಳ, ಬಿಳಿನೆಲೆ.
ಸಂಚಾಲಕ	:-	ಶ್ರೀ ಕೆ. ಗೋಪಾಲಕೃಷ್ಣ ಭಟ್ಟ, ಕೈಕಂಬ, ಬಿಳಿನೆಲೆ.
ಸದಸ್ಯರು	:-	ಶ್ರೀ ಕೃಷ್ಣಕುಮಾರ, ರುದ್ರಪಾದ ಡಾ. ಎಸ್. ಎನ್. ಉಡುಪ - ಸುಬ್ರಹ್ಮಣ್ಯ ಶ್ರೀ. ಬಿ. ವಿಠಲರಾವ್, ಸುಬ್ರಹ್ಮಣ್ಯ ಶ್ರೀ ಕೆ. ಗೋಪಾಲರಾವ್, ಬಿಳಿನೆಲೆ ಶ್ರೀ ಮಹೇಶ, ಮುನಿಯಂಗಳ ಶ್ರೀ ರವಿ, ಪೊಸವಣಿಕೆ.
ನಿರ್ದೇಶಕರು	:-	ಶ್ರೀ ಸಿದ್ಧಮೂಲೆ ಶಂಕರನಾರಾಯಣ ಭಟ್ಟ ಪೆರ್ಲಂಪಾಡಿ
ಸಲಹಾ ಸಮಿತಿ	:-	ಶ್ರೀ ಕೆ. ಯು. ಪದ್ಮನಾಭ ತಂತ್ರಿ, ಉಚ್ಚಿಲ, ಸೋಮೇಶ್ವರ ಶ್ರೀ ಎ. ವೆಂಕಟ್ರಮಣ ಭಟ್ಟ, ಮುನಿಯಂಗಳ ಶ್ರೀ ಎಂ. ವಿಷ್ಣು ಭಟ್ಟ, ಗೋಪಾಲ ಪುರ.



ಶ್ರೀಮುಖ

||ಪ್ರಸೀದತು ಶ್ರೀ ರಾಮಚಂದ್ರಃ ||

ಗ ಸಂ :

ಶ್ರೀ ಮತ್ಪರಮಹಂಸಪರಿವ್ರಾಜಕಾಚಾರ್ಯ ಪದವಾಕ್ಯ ಪ್ರಮಾಣ ಪಾರಾವಾರಪಾರೀಣ
ಯಮನಿಯಮಾಸನ
ಪ್ರಾಣಾಯಾಮಪ್ರತ್ಯಾಹಾರಧ್ಯಾನಧಾರಣಸಮಾಧ್ಯಷ್ಟಾಂಗಯೋಗಾನುಷ್ಠಾನನಿಷ್ಠ
ಷಡ್ದರ್ಶನಸ್ಥಾಪನಾಚಾರ್ಯ ತಪಶ್ಚಕ್ರವರ್ತ್ಯಾದ್ಯನೇಕವಿಶೇಷಣ ವಿಶಿಷ್ಟ
ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶಿಷ್ಯ
ಶ್ರೀ ಸುರೇಶ್ವರಾಚಾರ್ಯ ಜ್ಯೇಷ್ಠ ಶಿಷ್ಯ
ವಿದ್ಯಾನಂದಾಚಾರ್ಯಾವಿಚ್ಛಿನ್ನಗುರುಪರಂಪರಾಪ್ರಾಪ್ತ ಸಕಲನಿಗಮಾಗಮಸಾರಹೃದಯ
ಸಾಂಖ್ಯತ್ರಯಪ್ರತಿಪಾದಕ ವೈದಿಕಮಾರ್ಗ ಪ್ರವರ್ತಕ ಸರ್ವತಂತ್ರ ಸ್ವತಂತ್ರಾದಿಬಿರುದಾಂಕಿತ
ವಿದ್ಯಾನಗರಮಹಾರಾಜಧಾನೀ ವೈಭವ
ಸಿಂಹಾಸನಾಧೀಶ್ವರ ವಿಖ್ಯಾತವ್ಯಾಖ್ಯಾನ ಸಿಂಹಾಸನಾರೂಢ ಶ್ರೀ ಮದ್ರಾಜಾಧಿರಾಜಗುರು
ಶ್ರೀ ಗೋಕರ್ಣಮಂಡಲಾಚಾರ್ಯ
ಶ್ರೀ ಮಚ್ಛತಶೃಂಗಪುರವರಾಧೀಶ್ವರ ಶ್ರೀ ಮಚ್ಛರಾವತೀತೀರವಾಸ ಶ್ರೀ
ಮದ್ರಾಮಚಂದ್ರಾಪುರಮಠಸ್ಥ ಶ್ರೀ ಮದ್ರಾಮಚಂದ್ರ
ಚಂದ್ರಮೌಳೀಶ್ವರಪಾದಪದ್ಮಾರಾಧಕ ಶ್ರೀಮದ್ರಾಘವೇಂದ್ರ ಭಾರತೀ ಶ್ರೀ
ಗುರುಕರಕಮಲಸಂಜಾತ
ಶ್ರೀಮದ್ರಾಘವೇಶ್ವರ ಭಾರತೀ ಶ್ರೀ ಸ್ವಾಮಿಭಿಃ

ಅಸ್ಮದತ್ಯಂತ ಪ್ರಿಯಶಿಷ್ಯ ಮಂಗಳೂರು ಹೋಬಳಿ ಪಂಜ ಸೀಮೆಯ ಕೊಳ್ತಿಗೆ ಗ್ರಾಮದ ದಿ|| ಸಿದ್ಧಮೂಲೆ ಲ. ರಾಮಕೃಷ್ಣ ಭಟ್ಟರ ಪುತ್ರ, ನಿವೃತ್ತ ಪ್ರಾಂಶುಪಾಲರಾದ ಶಂಕರ ನಾರಾಯಣ ಭಟ್ಟರಿಗೆ ಶ್ರೀ ಮನ್ನಾರಾಯಣಸ್ಮರಣಪುರಃಸ್ಸರಂ ವಿರಚಿತಾಶಿಷಃ ಸಮುಲ್ಲಸಂತು || ಸಂಪ್ರತಿ

ಆದಾಗಿ ಶ್ರೀಸವಾರಿಯು ಆರಾಧ್ಯ ಶ್ರೀ ಸೀತಾರಾಮಚಂದ್ರ, ಚಂದ್ರಮೌಳೀಶ್ವರ ರಾಜರಾಜೇಶ್ವರೀದೇವತಾದಿವ್ಯಸನ್ನಿಧಿಯಲ್ಲಿ ಅನುದಿನವೂ ಸಮಸ್ತ ಜನತೆಯ ಯೋಗಕ್ಷೇಮಗಳನ್ನು ಸಂಪ್ರಾರ್ಥಿಸುತ್ತಾ ಸದ್ಯ ಈ ಮುಕ್ಕಾಮಿನಲ್ಲಿ ಕ್ಷೇಮದಿಂದ ವಸತಿ ಮಾಡಿದೆ.

ನೀವು ಸಂಗ್ರಹಿಸಿ ಕನ್ನಡಾನುವಾದದೊಂದಿಗೆ ಪ್ರಕಟಿಸಲಿರುವ "ಮನುಷ್ಯಾಲಯ ಚಂದ್ರಿಕೆ" ಎಂಬ ವಾಸ್ತುಶಿಲ್ಪವಿಚಾರದ ಗ್ರಂಥವನ್ನು ಆಮೂಲಾಗ್ರ ಅವಲೋಕಿಸಿ ಸಂತೋಷಪಡಲಾಯಿತು.

"ಸೋಕಾಮಯತ ಬಹುಸ್ಯಾಂ ಪ್ರಜಾಯೇಯ" ಎಂದು ಶ್ರುತಿ ಮಾತೆಯು ಮೊಳಗುವಂತೆ ಆ ಒಂದೇ ಒಂದಾಗಿ, ನಿತ್ಯವಾಗಿ, ಜ್ಯೋತಿರ್ಮಯವಾಗಿ, ಆನಂದಮಯವಾಗಿ ಬೆಳಗುತ್ತಿದ್ದ ಸಚ್ಚಿದಾನಂದ ರೂಪವಾದ ತತ್ತ್ವವು ತನ್ನನ್ನು ತಾನು ವಿಕಾಸಗೊಳಿಸಿಕೊಳ್ಳಬೇಕೆಂದು ಸಂಕಲ್ಪಿಸಿತು.

ಹಾಗೇ ಸಂಕಲ್ಪಿಸಿದಾಗ "ದ್ವಿಧಾಕೃತ್ವಾSSತ್ಮನೋ ದೇಹಂ ಅರ್ಧೇನ ಪುರುಷೋSಭವತ್, ಅರ್ಧೇನ ನಾರೀ" ಎಂಬಂತೆ ತನ್ನನ್ನು ತಾನು ಎರಡಾಗಿ ವಿಭಾಗಿಸಿಕೊಂಡು ಒಂದು ಭಾಗವು ಪ್ರಕೃತಿಯೆಂದೂ ಇನ್ನೊಂದು ಭಾಗವು ಪುರುಷ ಎಂದೂ ಕರೆಯಲ್ಪಟ್ಟಿತು. ಆ ಪ್ರಕೃತಿ ಭಾಗವು ಆ ಪುರುಷನ ದಿವ್ಯ ಶಕ್ತಿಯಾಗಿ, ಬ್ರಹ್ಮ ವಿಷ್ಣು ಮಹೇಶ್ವರಾತ್ಮಕವಾಗಿ, ಸರಸ್ವತೀ-ಲಕ್ಷ್ಮೀ-ಗೌರೀ ರೂಪವಾಗಿ ಸೃಷ್ಟಿಸ್ಥಿತಿಲಯ ವ್ಯಾಪಾರಗಳನ್ನು ನಿರ್ವಹಿಸುತ್ತಾ ಮಹದಹಂಕಾರ - ಏಕಾದಶೇಂದ್ರಿಯ ಪಂಚತನ್ಮಾತ್ರ ಪಂಚ ಭೂತಗಳೆಂಬ ಇಪ್ಪತ್ತನಾಲ್ಕು ಹಜ್ಜೆಯ ವಿಕಾಸವನ್ನು ಹೊಂದಿ ಬೃಹತ್ತಾಗಿ ಬ್ರಹ್ಮಾಂಡವಾಗಿ ಆಯಿತು. ಅದೇ ಬ್ರಹ್ಮಾಂಡದ ಇನ್ನೊಂದು ಪುಟ್ಟಮಾದರಿಯಾಗಿ ಪಿಂಡಾಂಡವೂ ಅದೇ ಇಪ್ಪತ್ತನಾಲ್ಕು ಹಜ್ಜೆಯ ತತ್ವಗಳಿಂದ ಕೂಡಿಕೊಂಡು ಆ ಪರಮಪುರುಷನ ಒಡಲು ರೂಪುಗೊಂಡಿತು. ಅದೊಂದು ಬ್ರಹ್ಮನ-ವಿಶ್ವಕರ್ಮನ ಸಹಜವಾದ ನಿರ್ಮಾಣ. ಆ ಸಹಜವಾದ ಭವ್ಯವೂ, ದಿವ್ಯವೂ ಆದ ಬೃಹದ್ದೇಹದಲ್ಲಿ ಅದರ ಮಾದರಿಯಾದ ಪಿಂಡಾಂಡದಲ್ಲಿ ಪರಮಪುರುಷನೇ ತಾನು ಪ್ರವೇಶಿಸಿದ. "ತತ್ ಸೃಷ್ಟ್ವಾ ತದೇವಾನುಪ್ರಾವಿಶತ್" ಎಂಬಂತೆ ಹೀಗೆ ನಿರ್ಮಾಣವಾದ ಬ್ರಹ್ಮಾಂಡ-ಪಿಂಡಾಂಡಗಳಲ್ಲಿ ಅವನ ವಾಸಕ್ಕೆ ಬೇಕಾದ ಸರ್ವಾಂಗಸುಂದರವೂ, ಅನಾದ್ಯಂತವೂ ಆದ ವ್ಯವಸ್ಥೆಯೊಂದುಂಟು. ಆ ವ್ಯವಸ್ಥೆ ನಿಸರ್ಗಸಹಜವಾದ ವ್ಯವಸ್ಥೆ. ಅಕೃತ್ರಿಮವಾದ ವ್ಯವಸ್ಥೆ. ಅದೊಂದು ದಿವ್ಯ ಶಿಲ್ಪ. ಇದೇ ಮೌಲಿಕವಾದ ವಾಸ್ತುಶಿಲ್ಪ. ಈ ಮೌಲಿಕವಾದ ವಾಸ್ತು ಶಿಲ್ಪವನ್ನು ಸನಾತನಾರ್ಯಭಾರತ ಮಹರ್ಷಿಗಳು ತಮ್ಮ ಪ್ರಜ್ಞಾಮೇಧೆಗಳಿಂದ-ಯೋಗದೃಷ್ಟಿಯಿಂದ ಅರಿತವರಾಗಿ ಆ ಪರಮಪುರುಷನ ಜ್ಯೋತಿಸ್ಫುಲಿಂಗಗಳಾಗಿ ಪಿಂಡಾಂಡಗಳಲ್ಲಿ ವಾಸ ಮಾಡುವ ಜೀವಗಳು ಅವನ ಆಶಯಕ್ಕೆ ತಕ್ಕಂತೆ ಬದುಕು ಸಾಗಿಸಲು ಆಯಾ ಜೀವ ಕೋಟಿಗಳ ಜೀವನದ ವ್ಯಾಪ್ತಿಗೆ ತಕ್ಕಂತೆ ಗೂಡು ಕಟ್ಟಿಕೊಳ್ಳುವ ಕಲೆಯನ್ನು ಆಯಾ ಚೇತನಗಳಲ್ಲೇ ಇರಿಸಿದ್ದಾನೆ ಎಂಬುದನ್ನು ಅರ್ಥಮಾಡಿಕೊಂಡರು. ಅದೆಲ್ಲವೂ ಒಂದೊಂದೂ ಆಶ್ಚರ್ಯಜನಕವೇ ಆಗಿದೆ. ಶಂಖದ ಹುಳು ಎಂತಹ ಸುಂದರವಾದ ವಿಕಾಸವಾದ, ಭದ್ರವಾದ ಗೂಡನ್ನು ಕಟ್ಟುತ್ತದೆ ನೋಡಿ. ಗೀಜಗನ ಗೂಡು ಅದೆಷ್ಟು ವ್ಯವಸ್ಥಿತವಾದ, ವೈಜ್ಞಾನಿಕವಾದ, ಕಲಾಮಯವಾದ ಆವಾಸ! ಕೇವಲ ಕಡ್ಡಿಗಳಿಂದಲೇ ನಿರ್ಮಿತವಾದರೂ ಬಿಂದು ನೀರು ಸಹ ಒಳಗೆ ಸೇರದಂತಹ ಅದ್ಭುತ ಯೋಜನೆ. ಮರಿಯನ್ನು ಕಾಪಾಡಲು ಬೇಕಾದ ಕೋಣೆ. ಅದಕ್ಕೊಂದು ಲಘುದ್ವಾರ. ವೃಕ್ಷದ ಶಾಖೆಯೊಂದರಲ್ಲಿ ನೇತಾಡುವ ಈ ಗೂಡು ಅದೆಷ್ಟು ಚಮತ್ಕಾರದಿಂದ ನಿರ್ಮಿತವಾದದ್ದು. ಈ ಕಲೆಯನ್ನು ಆ ಪಕ್ಷಿಗೆ ಕಲಿಸಿದವರಾರು? ಭಗವಂತನ ಸೃಷ್ಟಿಯಲ್ಲೇ ಅಂತಹ ಜ್ಞಾನ ಅವುಗಳಿಗೆ ಹುಟ್ಟಿನೊಡನೆ ಬಂದಿದೆ. ಅದು ವಿಶ್ವ ಶಿಲ್ಪಿಯ ಶಿಲ್ಪ ವಿಧಾನಗಳಲ್ಲೇ ಒಂದು. ಇದೇ ರೀತಿ ಇರುವೆ, ಗೆದ್ದಲು, ಇಲಿ ಮೊದಲಾಗಿ ತಮ್ಮ ತಮ್ಮ ಜೀವನದ ವ್ಯಾಪ್ತಿಗೆ ಅನುಗುಣವಾದ ಗೂಡನ್ನು ನಿರ್ಮಿಸುತ್ತವೆ. ಇರುವೆಯ ಗೂಡಲ್ಲಿ ಆ ಮಳೆಗಾಲದ ಜೀವಿಕೆ ನಿರ್ವಾಹಕ್ಕಾಗಿ ಆಹಾರ ಧಾನ್ಯಗಳ ದಾಸ್ತಾನಿಗಾಗಿ ಎಂತಹ ವ್ಯವಸ್ಥೆಯುಂಟು ! ಹೀಗೆ ಸೃಷ್ಟಿ ಪರಿಶೀಲನೆಯನ್ನು ಎಸಗುವುದಾದರೆ ಅದೆಷ್ಟೋ ಪರಿಪರಿಯ ಗೂಡುಗಳನ್ನು ನೋಡಬಹುದಲ್ಲವೇ? ಅವೆಲ್ಲವೂ ಅವುಗಳ ಜೀವನದ ವ್ಯಾಪ್ತಿಗೆ ತುಂಬಾ ಅಚ್ಚುಕಟ್ಟಾಗಿಯೇ ನಿರ್ಮಿಸಿಕೊಂಡಿವೆ. ನಿಯತವಾದ ಬುದ್ಧಿ ವಿವೇಕಗಳಿಗೆ ಒಳಪಟ್ಟು ಅವುಗಳು ತಮ್ಮ ವಾಸಕ್ಕೆ ಬೇಕಾದಂತೆ ನಿರ್ಮಿಸಿಕೊಂಡ ಗೂಡುಗಳೆಲ್ಲವೂ ವಾಸ್ತು ಶಿಲ್ಪಗಳೇ ಆಗಿವೆ.

ಮಾನವ ಜೀವಿಯು ಜೀವ ಕೋಟಿಗಳಲ್ಲೆಲ್ಲಾ ಶಿಖರ ಪ್ರಾಯವಾದ ಸೃಷ್ಟಿಯಾಗಿದ್ದಾನೆ. ಬ್ರಹ್ಮನು

ಬಗೆಬಗೆಯ ಜೀವಕೋಟಿಗಳನ್ನು ಸೃಷ್ಟಿಸಿದ. ಆದರೇ ಅಲ್ಲೆಲ್ಲಾ ಅವನಿಗೆ ಅಂತಹ ಆನಂದ, ಸಂತೃಪ್ತಿ ತೋರಲಿಲ್ಲ. ಮಾನವ ದೇಹವನ್ನು ನಿರ್ಮಿಸಿದಾಗ ಅವನಿಗಾದ ಆನಂದ ಅಪಾರ. ಅವನೇ ತನ್ನ ಸೃಷ್ಟಿಯನ್ನು ನೋಡಿ ಆಶ್ಚರ್ಯ ಪಟ್ಟನಂತೆ. ಅಂತೂ ಮಾನವ ಜನ್ಮ ದೊಡ್ಡದು. "ಜಂತೂನಾಂ ನರಜನ್ಮದುರ್ಲಭಂ" ಎಂದು ಶಂಕರ ಭಗವತ್ಪಾದರು ತುಂಬು ಹೃದಯದಿಂದ ಕೊಂಡಾಡುತ್ತಾರೆ. ಅಷ್ಟೇಕೆ! ಎಲ್ಲ ಋಷಿ ಮಹರ್ಷಿಗಳು ಒಕ್ಕೊರಲಿನಿಂದ ಸಾರುವ ಸತ್ಯವದು ಈ ಮಾನವ ದೇಹ ಅದ್ಭುತವಾದ ಸೃಷ್ಟಿಯೆಂದು.

ಈ ದೇಹದಲ್ಲಿ ದೇವನೊಬ್ಬ ನೆಲಸಿದ್ದಾನೆ. ಅವನಿಗೊಂದು ಇಲ್ಲಿ ಹೃದಯ ಗರ್ಭಗುಡಿಯಿದೆ. ಆ ದೇಹ ಗೃಹದಲ್ಲಿ ತಾನು ವಿರಾಜಿಸುತ್ತಾ ಇಡೀ ಈ ದೇಹಕ್ಕೆ ಬೇಕಾಗುವ ಚೈತನ್ಯವನ್ನು ಒದಗಿಸುತ್ತಾನೆ. ಅವನದೇ ಆದ ಒಂದು ದಿವ್ಯ ಶಕ್ತಿಯು ಈ ಒಡಲಿನ ಸ್ಥಿತಿಗಾಗಿ ಉದರ ಸ್ಥಾನದಲ್ಲಿದ್ದು ವೈಶ್ವಾನರನೆಂದು ಹೆಸರು ಪಡೆದು ಪಾಕ ಕಾರ್ಯವನ್ನು ನಿರ್ವಹಿಸುತ್ತಿದೆ. ಈ ದೇಹದಲ್ಲಿ ನವದ್ವಾರಗಳುಂಟು, ದಶನಾಡೀ ಮಹಾಪಥಗಳಿವೆ. ಅತ್ಯಂತ ಹೊರಗಿನ ಅನ್ನಮಯ ಕೋಶದೊಳಗೆ ಪ್ರಾಣಮಯ, ಮನೋಮಯ, ಬುದ್ಧಿಮಯ, ಅಥವಾ ವಿಜ್ಞಾನಮಯ, ಆನಂದಮಯ ಕೋಶಗಳುಂಟು. ಅಷ್ಟೈಶ್ವರ್ಯಗಳು ಬೆಳಗುವ ಕೇಂದ್ರಗಳುಂಟು. ಇಷ್ಟೆಲ್ಲಾ ಅದ್ಭುತ ರಚನೆಯಿಂದ ಕೂಡಿದ ಈ ದೇಹಕ್ಕೆ ಅದರ ಸಂರಕ್ಷಣೆ ಮತ್ತು ಉದ್ದೇಶ್ಯ ಸಾಫಲ್ಯಕ್ಕೆ ಅನುಗುಣವಾದ ಒಂದು ಗೇಹವಿರಬೇಕಲ್ಲವೇ? ಆ ಗೇಹವೇ ಅದರ ಆಶಯವರಿತು ಪ್ರಕಾಶಿತವಾದಾಗ ಗೃಹವಾಸ್ತುಶಿಲ್ಪವಾಗಿ ರೂಪುಗೊಂಡಿದೆ. ಹೀಗೆ ರೂಪುಗೊಂಡ ಶಾಸ್ತ್ರವಾದ್ದರಿಂದ ಇಲ್ಲಿ ತಮ್ಮ ತಮ್ಮ ಬುದ್ಧಿಗೆ ತೋರಿದ ಸೃಷ್ಟಿಗೆ ಹೊಂದದ ಕಲ್ಪನೆಗಳಿಗೆ ಎಡೆಯಿಲ್ಲ. ಅದು ವಿಶ್ವಕರ್ಮನ ಶಾಸನ -ಶಾಸ್ತ್ರ. ಇದು ರಾಜಾಜ್ಞೆ. ಅನುಸರಿಸಿದರೆ ಲಾಭವುಂಟು. ಮೀರಿ ವರ್ತಿಸಿದರೆ ಶಿಕ್ಷೆಯುಂಟು. ಇಲ್ಲಿ ಮಾತ್ರವಲ್ಲ ಸೃಷ್ಟೀಶನ ಆಶಯವನ್ನು ಮೀರಿನಡೆದಾಗಲ್ಲೆಲ್ಲಾ ಅಲ್ಲಿ ಶಿಕ್ಷೆಯುಂಟು. ಇದನ್ನರಿತ ಜ್ಞಾನಿಗಳು "ಏವಂ ಕುರು, ಏವಂ ಮಾಕುರು" ಎಂಬ ವಿಧಿ ನಿಷೇಧಗಳನ್ನು ವ್ಯಕ್ತಪಡಿಸಿದರು. ಆದ್ದರಿಂದ ಮಾನವನ ಯೋಗಕ್ಷೇಮಕ್ಕಾಗಿ ವಾಸ್ತುಶಾಸ್ತ್ರದ ಪಾಲನೆ ಅತ್ಯಗತ್ಯ.

ಯಂತ್ರವೊಂದನ್ನು ಯಂತ್ರವಿಜ್ಞಾನಿ ಯಾವ ಉದ್ದೇಶದಿಂದ ನಿರ್ಮಿಸಿದ್ದಾನೆಯೋ ಅದೇ ಉದ್ದೇಶಕ್ಕೆ ಅದನ್ನು ಬಳಸಿದರೆ ಸಾರ್ಥಕವೆಂದು ಹೇಗೆ ಭಾವಿಸುತ್ತೇವೆಯೋ ಹಾಗೆಯೇ ಮಾನವನು ತನ್ನ ದೇಹದ ನಿರ್ಮಾಣ ವೈಶಿಷ್ಟ್ಯಕ್ಕೆ ತಕ್ಕಂತೆ ಬದುಕು ಸಾಗಿಸಿದರೆ ಮಾತ್ರ ಸಾರ್ಥಕ್ಯ. ಈ ಹಿನ್ನೆಲೆಯಲ್ಲಿ ಈ ದೇಹರಚನೆಯ ವೈಶಿಷ್ಟ್ಯವೇನು ಎಂದು ತಜ್ಞರನ್ನು ಪ್ರಶ್ನಿಸಿದರೆ, ಈ ದೇಹ ಬ್ರಹ್ಮಾಂಡದ ಪ್ರತಿನಿಧಿಯಾದ ಪಿಂಡಾಂಡವಾಗಿದೆ. ಇಲ್ಲಿ ಸಮಸ್ತ ಲೋಕಗಳುಂಟು. ಆ ಸಮಸ್ತ ಲೋಕಗಳ ಸೃಷ್ಟಿ ಸ್ಥಿತಿಲಯಗಳನ್ನು ನಡೆಸುವ ತ್ರಿಮೂರ್ತಿಗಳ ನೆಲೆಗಳಿವೆ. ಆ ತ್ರಿಮೂರ್ತಿಗಳ ಆಧಿಪತ್ಯಕ್ಕೆ ಒಳಪಟ್ಟ ಮೂವತ್ತಮೂರು ಕೋಟಿ ದೇವತೆಗಳುಂಟು. ಇವೆಲ್ಲದರ ಮೂಲವಾದ ಪರಮಾತ್ಮನ ಆವಾಸವುಂಟು. ಇಂತಹ ಒಡಲಿನಲ್ಲಿ ಆವಾಸ ಮಾಡುತ್ತಾ ತನ್ನ ಮೂಲ ನೆಲೆಯನ್ನು ಅಪಸ್ಮಾರನ ಕಾರಣದಿಂದ ಮರೆತು ಒಂದು ಬಂಧನವನ್ನು ತಾನೇ ಏರ್ಪಡಿಸಿಕೊಂಡು ಅಲ್ಲಿಂದ ಬಿಡುಗಡೆ ಕಾಣದ ಸ್ಥಿತಿಯಲ್ಲಿ ಜೀವ ಸಿಕ್ಕಿದೆ. ಇಂತಹ ಜೀವವು ದೇವರ್ಷಿ ಪಿತೃಋಣಗಳನ್ನು ತೀರಿಸಿಕೊಂಡು ಇಂದ್ರಿಯ ಕಲ್ಯಾಣ-ಆತ್ಮಕಲ್ಯಾಣಗಳನ್ನು ಸಾಧಿಸಬೇಕಾದರೆ ಅದಕ್ಕೆ ಬೇಕಾದ ನಿತ್ಯ ನೈಮಿತ್ತಿಕ ಕಾಮ್ಯ ಕರ್ಮಗಳನ್ನು ಸಾಧಿಸಬೇಕಾದರೆ ಇವಕ್ಕೆಲ್ಲಾ ಹೊಂದುವ ಗೃಹವಿರಬೇಕಾಗಿದೆ. ಸೃಷ್ಟಿ ವಿಸ್ತಾರವಾಗುವಾಗ ಸತ್ವ-ರಜಸ್ಸು-ತಮಸ್ಸುಗಳೆಂಬ ತ್ರಿಗುಣಗಳು, ಪ್ರಮಾಣ ತಾರತಮ್ಯದಿಂದ ಸೇರಿಕೊಂಡು ನಾಲ್ಕು ವರ್ಣಗಳ

ವ್ಯವಸ್ಥೆ ತಾನೇ ತಾನಾಗಿ ಏರ್ಪಟ್ಟಿದೆಯೆಂದು ಶಾಸ್ತ್ರಗಳು ತಿಳಿಸುತ್ತಿವೆ. ಹೀಗಿರುವುದರಿಂದ ಭೂಮಿಯಲ್ಲೂ ಸಹ ಬ್ರಾಹ್ಮಣಾದಿ ನಾಲ್ಕು ವಿಭಾಗಗಳುಂಟು. ಆ ವಿಭಾಗಗಳನ್ನು ಅನುಸರಿಸಿ ಅವನವನ ಪ್ರಕೃತಿ -ಪ್ರವೃತ್ತಿ-ವೃತ್ತಿಗಳಿಗನುಗುಣವಾದ ಜೀವನವನ್ನು ನಡೆಸಲು ತಕ್ಕುದಾದ ಭೂಮಿಯನ್ನು ಆಯ್ದುಕೊಂಡು ಸೂಕ್ತ ಗೃಹನಿರ್ಮಾಣ ಮಾಡಿಕೊಳ್ಳಬೇಕಾಗಿದೆ. ಆದ್ದರಿಂದಲೇ ಆದರ್ಶವಾದ ಒಂದು ಗೃಹದಲ್ಲಿ ದೇವಗೃಹ, ಪಾಕಗೃಹ, ಧನಾಗಾರ, ಶೌಚಗೃಹ, ಆಯುಧಾಗಾರ ಮೊದಲಾಗಿ ಜೀವಿಯ ಇಹಪರಗಳ ಸೌಖ್ಯಕ್ಕಾಗಿ ಎಲ್ಲಾ ವ್ಯವಸ್ಥೆಯುಂಟು. ಆ ವ್ಯವಸ್ಥೆಗಳೆಲ್ಲಾ ಒಂದಕ್ಕೊಂದು ಪೋಷಕವಾಗಿರಬೇಕು. ದೇವಗೃಹವು ಭಗವಂತನನ್ನು ಆರಾಧಿಸುವ ಸ್ಥಾನವಾದರೆ ಆ ಭಗವದಾರೋಗಣೆಗೆ ಬೇಕಾದ ನಿವೇದನವನ್ನು ಅಗ್ನಿದೇವನ ಅನುಗ್ರಹದಿಂದ ಸಿದ್ಧಪಡಿಸಬಲ್ಲ ಪಾಕ ಗೃಹವಿರಬೇಕು. ಭಗವನ್ನಿವೇದನಕ್ಕೆ ಬೇಕಾದ ಭೋಗ್ಯ ವಸ್ತುಗಳನ್ನು ಅದಕ್ಕೆ ಬೇಕಾದ ಧನವನ್ನು ಸನ್ಮಾರ್ಗದಲ್ಲಿ ಸಂಪಾದಿಸಿ ಅದನ್ನು ರಕ್ಷಿಸಿಡಲು ಅಲ್ಲೊಂದು ಕುಬೇರನ ಅನುಗ್ರಹಪಾತ್ರ ಸ್ಥಾನವಿರಬೇಕು. ದೇಹ ಧರ್ಮವನ್ನು ಸಂರಕ್ಷಿಸಿಕೊಂಡು ಪರಮಾತ್ಮನ ಆವಾಸವಾದ ಈ ದೇಹವನ್ನು ಶುಚಿಯಾಗಿಟ್ಟುಕೊಳ್ಳಲು ಅಂತಃ ಶುದ್ಧಿ, ಬಹಿರ್‌ಶುದ್ಧಿಗೆ ಅನುಕೂಲವಾದ ಶೌಚಗೃಹವಿರಬೇಕು. ಹೀಗೆ ದೇಹ ರಚನೆಯ ಹಿನ್ನೆಲೆಯಲ್ಲಿ ಬೆಳೆದು ಬಂದಿದೆ ಈ ವಾಸ್ತುಶಾಸ್ತ್ರ. ವಸ ನಿವಾಸೇ ಎಂಬ ಧಾತುವಿನಿಂದ ವಾಸ್ತು ಶಬ್ದರೂಪುಗೊಂಡಿದೆ. ಒಬ್ಬ ಗೃಹಿಗೆ ವಿಶ್ವಕುಟುಂಬಿಯ ಆಶಯದಂತೆ ವಾಸಮಾಡಲು ಯೋಗ್ಯವಾದ ಆವಾಸ. ಗೃಹವಾಸ್ತು ಮತ್ತು ದೇವಾಲಯವಾಸ್ತು ಎಂಬುದು ಇದರ ಎರಡು ವಿಧ. ವೇದಾಂಗವಾದ ಕಲ್ಪ ಹಾಗೂ ಅಥರ್ವ ವೇದದ ಉಪವೇದವಾದ ತಂತ್ರಗಳು ಈ ವಾಸ್ತುವಿಗೆ ಮೂಲವಾದ್ದರಿಂದ ಈ ಶಾಸ್ತ್ರವು ವೇದೋಪಬೃಹಿಂತವಾದದ್ದೇ. ಇದನ್ನೇ ಸ್ಥಾಪತ್ಯ ವೇದವೆಂದೂ ಕರೆದರು. ಆದ್ದರಿಂದ ಈ ಶಾಸ್ತ್ರ ಎಂದಿನಿಂದ ಎಂದರೆ ಯಾವ ಇಸವಿಯಿಂದ ಆರಂಭವಾಯಿತು? ಎಂಬ ಪ್ರಶ್ನೆಗೆ ವಿಷಯವಿಲ್ಲ. ಬ್ರಹ್ಮ ಸೃಷ್ಟಿಯ ಜೊತೆಗೇ ಬಂದ ಅವನ ಶಾಸನವೇ ಶಿಲ್ಪ ಶಾಸ್ತ್ರ. ಆದ್ದರಿಂದಲೇ ಇದನ್ನು ತಂದವರು ಭೃಗು, ಅತ್ರಿ, ವಸಿಷ್ಠ, ವಿಶ್ವಕರ್ಮ, ನಾರದ, ಮಯ, ಶುನಕ, ಭರ್ಗ ಮೊದಲಾದ ಮಹರ್ಷಿಗಳು. ವೇದಪುರುಷನ ಅಂಗೋಪಾಂಗಗಳ ಸಮಗ್ರಜ್ಞಾನವನ್ನು ಪಡೆದ ಮಹರ್ಷಿಗಳು ಲೋಕಹಿತಕ್ಕಾಗಿ ತಂದ ಶಾಸ್ತ್ರ ವಾಸ್ತು.

ಇಂದು ಸಮಾಜದಲ್ಲಿ ಈಶಾನಗುರುದೇವಪದ್ಧತಿ, ಕಾಶ್ಯಪಶಿಲ್ಪ, ಮಾನಸಾರ, ರತ್ನಾವಲೀಸಾರ, ಕುಮಾರಾಗಮ, ಮಯಮತ, ಭಾಸ್ಕರೀಯಮತ ಮೊದಲಾದ ಗ್ರಂಥಗಳು ಈ ವಾಸ್ತು ಶಾಸ್ತ್ರದ ತತ್ವಗಳನ್ನು ಲೋಕದ ಮುಂದಿಡುವ ಪ್ರಮಾಣ ಭೂತ ಗ್ರಂಥಗಳಾಗಿವೆ. ಈ ಗ್ರಂಥಗಳು ದೇಶ - ಕಾಲಗಳ ಭೇದಕಾರಣವಾಗಿ ಕೆಲವಾರು ಭಿನ್ನ ಭಿನ್ನ ಸಿದ್ಧಾಂತಗಳನ್ನೊಳಗೊಂಡಿರುವುದು ಮಾತ್ರವಲ್ಲದೇ ಪ್ರವೇಶಕ್ಕೆ ಕಷ್ಟಸಾಧ್ಯವಾಗಿದೆ. ಈ ಕ್ಲೇಶಗಳನ್ನು ಬಗೆಹರಿಸಿ ಈ ಎಲ್ಲಾ ಗ್ರಂಥಗಳ ಸಾರವನ್ನು ಮಥಿಸಿಕೊಟ್ಟ ನವನೀತದಂತೆ ಹೊರ ಬಂದ ಈ "ಮನುಷ್ಯಾಲಯಚಂದ್ರಿಕೆ" ಹೆಸರೇ ಹೇಳುವಂತೆ ಮನುಷ್ಯವಾಸ ಯೋಗ್ಯವಾದ ಗೃಹ ರಚನೆಗಳ ಮೇಲೆ ಮತ್ತು ತತ್ಸಂಬಂಧಿಯಾದ ವಿಚಾರಗಳ ಮೇಲೆ ಬೆಳದಿಂಗಳನ್ನು ಚೆಲ್ಲುವ ಗೃಹವಾಸ್ತು ಶಿಲ್ಪ ವಿಭಾಗಕ್ಕೆ ಸೇರುವ ಒಂದು ಶ್ರೇಷ್ಠ ಕೃತಿಯಾಗಿದೆ. ಕೇರಳ ರಾಜ್ಯದ ತಿರುಮಂಗಲದ ನೀಲಕಂಠನ್ ಎಂಬ ಶ್ರೇಷ್ಠ ಶಿಲ್ಪ ಶಾಸ್ತ್ರಜ್ಞರು ಈ ಗ್ರಂಥ ರಚಯಿತಾ.

ಮನುಷ್ಯಾಲಯ ಚಂದ್ರಿಕೆ ಚಿಕ್ಕ ಗ್ರಂಥವಾಗಿದ್ದರೂ ವಾಸ್ತುಶಾಸ್ತ್ರದ ಮುಖ್ಯವಾದ ಎಲ್ಲ ವಿಷಯಗಳನ್ನು ಒಳಗೊಂಡು ಮನುಷ್ಯ ಮಾತ್ರನಿಗೆ ಹಿತವೂ ಪ್ರಿಯವೂ ಆಗುವಂತಹ ಸತ್ಯಗಳನ್ನು ಸರಳ ಭಾಷೆಯಲ್ಲಿ ಅಭಿವ್ಯಕ್ತಪಡಿಸುತ್ತಾ ಚಂದ್ರಿಕೆಯ ಚಂದವನ್ನು ಹೊಂದಿ ಸಾರ್ಥಕವಾದ

ನಾಮಧೇಯವುಳ್ಳದ್ದಾಗಿದೆ. ಇದು ಭೂಪರಿಗ್ರಹ, ದಿಕ್-ನಿರ್ಣಯ, ಮಾನ ಪ್ರಭೇದಗಳು, ಶಾಲಾವಿಧಾನ, ಗೃಹಾವಯವ ವಿಧಿ, ಶಿಖರ ನಿಯಮ ಮತ್ತು ಬಾಹ್ಯ ಗೇಹ ಕೂಪ ತಟಾಕಾದಿ ವಿಧಿಗಳೆಂಬ ಏಳು ಅಧ್ಯಾಯಗಳನ್ನೊಳಗೊಂಡಿದೆ.

ದಿಕ್ಕಾಲಗಳಿಂದ ಅನವಚ್ಛಿನ್ನವಾದ ಸತ್ಯವು ತನ್ನನ್ನು ತಾನು ವಿಸ್ತರಿಸಿಕೊಳ್ಳಬಯಸಿದಾಗ ತನ್ನ ಸೌಂದರ್ಯಕ್ಕೆ ತಕ್ಕಂತೆ ತನ್ನ ಒಂದೊಂದು ಶಕ್ತಿಯನ್ನು ಒಂದೊಂದು ಕಡೆಗೆ ಹರಿಸಿ ಅವುಗಳೆಲ್ಲವು ಸಮರಸವಾಗಿ ಸೇರಿಕೊಳ್ಳುವಂತೆ ಒಂದು ವ್ಯವಸ್ಥೆಯುಂಟಾಗಿದೆ. ಈ ವ್ಯವಸ್ಥೆಯನ್ನನುಸರಿಸಿ ವಾಸ್ತುಶಾಸ್ತ್ರವು ಬೆಳೆದಿದೆ. ಆದ್ದರಿಂದ ವಾಸ್ತುಶಾಸ್ತ್ರದಂತೆ ತ್ರಿಪಂಚಾಶತ್ಪದಾತ್ಮಕವಾದ (ಐವತ್ತಮೂರು ಸ್ಥಾನಗಳಿಂದ ಕೂಡಿದ) ಮಂಡಲದಲ್ಲಿ ವಾಸ್ತು ಪುರುಷನು ವಾಸಿಸುತ್ತಾನೆ. ಈಶಾನ್ಯಾದಿ ಆಯಾ ಸ್ಥಾನಗಳಲ್ಲಿ ಆಯಾಯ ಶಕ್ತಿ ಸ್ವಭಾವದ ದೇವತೆಗಳು ವಾಸಮಾಡುತ್ತವೆ.

ಆದ್ದರಿಂದ ಗೃಹರಚನೆಗೆ ಮುನ್ನ ಭೂಪರೀಕ್ಷೆ. ಭೂಮಿಯಲ್ಲಿ ಬ್ರಾಹ್ಮಣಾದಿವರ್ಣದವರು ತಮ್ಮ ಸೃಷ್ಟಿ ಸಹಜವಾದ ದೇವತಾ ಶಕ್ತಿಗಳನ್ನು ಬೆಳೆಸಿಕೊಳ್ಳಲು, ಬಳಸಿಕೊಳ್ಳಲು ಅನುಕೂಲವಾಗುವಂತೆ ಉತ್ತರಾದಿ ನಿಮ್ನ ಭೂಮಿಯನ್ನು ಆಯ್ದುಕೊಳ್ಳಬೇಕು. ಯಾವ ವರ್ಣಕ್ಕೆ ಯಾವುದು ಪೋಷಕವೆಂಬ ಅಂಶವನ್ನು ತಿಳಿಯಲು ಸುಲಭ ಸಾಧ್ಯವಾಗುವಂತೆ ಲಕ್ಷಣಗಳನ್ನು ನಿರೂಪಿಸಿದೆ. ಉದಾಹರಣೆಗೆ ದರ್ಭೆ ಬೆಳೆಯುವ ಭೂಮಿ ಬ್ರಾಹ್ಮಣಭೂಮಿ. ಅದು ಆಜ್ಯಗಂಧದಿಂದ ಕೂಡಿರುತ್ತೆ ಇತ್ಯಾದಿ. ಹೊರ ಲಕ್ಷಣಗಳಿಂದ ಅಳೆಯಲು ಕಷ್ಟಸಾಧ್ಯವಾಗಿರುವಲ್ಲಿ ಅದಕ್ಕಾಗಿ ಪ್ರಯೋಗವೊಂದನ್ನು ನೀಡಿರುವುದುಂಟು.

ಎರಡನೇ ಅಧ್ಯಾಯದಲ್ಲಿ ಭೂಮಿಯನ್ನು ಸಮಗೊಳಿಸಿ ಶಂಕುಸ್ಥಾಪನೆಯ ವಿಧಾನವನ್ನು ನಿರೂಪಿಸುತ್ತಾರೆ. ಶಂಕುವಿನ ನೆರಳಿನ ಆಧಾರದ ಮೇಲೆ ಪೂರ್ವಾದಿ ದಿಕ್ಕುಗಳ ನಿರ್ಣಯ . ನಂತರ ಬ್ರಹ್ಮಸೂತ್ರ-ಯಮ ಸೂತ್ರಗಳ ರಚನೆಯ ಮೂಲಕ ಚತುರಸ್ರ ಸಾಧನೆಯ ಕ್ರಮವನ್ನು ತೋರಿಸಿದ್ದಾರೆ. ಮನೆಯನ್ನು ಬ್ರಾಹ್ಮಣಾದಿ ವರ್ಣದವರು, ನಿವೇಶನದ ಯಾವ ಖಂಡದಲ್ಲಿ ನಿರ್ಮಿಸಬೇಕೆಂಬ ಬಗ್ಗೆ ಪರಿಚಯ, ವೀಥಿ ಪರಿಚಯ, ಪಂಚ ಶಿರಸ್ಸುಗಳ ಸ್ಥಾಪನೆ, ವಾಸ್ತುವಿನ ಪದಗಳ ಪರಿಚಯ - ಅವುಗಳಲ್ಲಿರುವ ದೇವತೆಗಳ ಪರಿಚಯ ಹೀಗೆ ಬೆಳೆದಿದೆ.

ಮೂರನೇ ಅಧ್ಯಾಯದಲ್ಲಿ ಉದ್ದಅಗಲ ಮೊದಲಾಗಿ ಅಳತೆಯನ್ನು ಸಿದ್ಧಪಡಿಸಲು ಒಂದು ವ್ಯವಸ್ಥೆಯನ್ನು ತೋರಿಸಿದ್ದಾರೆ. ಯವೋದರ, ಮಾತ್ರಾಂಗಲ, ವಿತಸ್ತಿ, ಕರ, ಕಿಷ್ಕು ಅರತ್ನೀ, ಭುಜ ಮೊದಲಾದ ಅಳತೆಯನ್ನು ಪರಿಚಯಿಸಿದ್ದಾರೆ. ಬ್ರಾಹ್ಮಣಾದಿ ವರ್ಣಗಳಿಗೆ ತಕ್ಕ ಕೋಲುಗಳನ್ನು ನಿರ್ಣಯಿಸಿದ್ದಾರೆ.


ನಾಲ್ಕನೆಯ ಅಧ್ಯಾಯದಲ್ಲಿ ಮನೆಗಳ ಸಾಮಾನ್ಯ ಲಕ್ಷಣ, ಶಾಲೆಗಳ ಲಕ್ಷಣಗಳನ್ನು ಸವಿಸ್ತಾರವಾಗಿ ನಿರೂಪಿಸಿರುತ್ತಾರೆ. ಐದನೇಯ ಅಧ್ಯಾಯದಲ್ಲಿ ಉಪಪೀಠ, ಮಲ್ಲಿಕಾಕುಟ್ಟಿಮ, ಉಪಾನಹ, ಪತ್ರಮಾನ ಮೊದಲಾದ ಗೃಹಾವಯವಗಳ ನಿರ್ಮಾಣ ವಿಧಿಯನ್ನು ನಿರೂಪಿಸಿದ್ದಾರೆ. ಆರನೆಯ ಅಧ್ಯಾಯದಲ್ಲಿ ವಿಷ್ಕಂಭ, ಋಜು ಮಂಚ, ಭುಜ ಮೊದಲಾದ ರಚನಾ ಕ್ರಮವನ್ನು ಕುರಿತು ವಿವರಣೆಯಿದೆ. ಕೊನೆಯ ಅಧ್ಯಾಯದಲ್ಲಿ ವಲಯ, ಪಟ್ಟಿಕಾ, ಅಪಿಧಾನ, ದ್ವಾರ, ಕವಾಟ, ಅರ್ಗಲ, ಅಂತರಾಲದ್ವಾರ ಮಹಾದ್ವಾರ ಮತ್ತು ಉಪಗೃಹ ವಿಧಿಗಳ ಬಗ್ಗೆ ಮಾರ್ಗದರ್ಶನವಿದೆ.

ಮೊದಲ ಅಧ್ಯಾಯದಲ್ಲೇ ಗೃಹ ಸಮೀಪದಲ್ಲಿ ಯಾವ ದಿಕ್ಕಿನಲ್ಲಿ ಯಾವ ಯಾವ ವೃಕ್ಷಗಳಿರಬೇಕು? ಯಾವ ವೃಕ್ಷಗಳಿರಬಾರದು? ಎಂಬ ಬಗ್ಗೆ ನೀಡಿದ ಮಾಹಿತಿ ಗೃಹದ ವಾತಾವರಣವನ್ನು ಆತ್ಮಕಲ್ಯಾಣ ಹಾಗೂ ಇಂದ್ರಿಯ ಕಲ್ಯಾಣಕ್ಕೆ ಅನುಗುಣವಾಗಿ ರೂಪಿಸಲು ಅನುಗುಣವಾಗಿದೆ. ಹೀಗೆ ಈ ಗ್ರಂಥವು ವಾಮನನಂತೆ ಚಿಕ್ಕದಾಗಿ ಕಂಡರೂ ಜೀವನದ ಭೌತಿಕ, ದೈವಿಕ, ಆಧ್ಯಾತ್ಮಿಕವೆಂಬ ಮೂರು ಧಾಮಗಳನ್ನು ಉದ್ದೇಶವಾಗಿಟ್ಟುಕೊಂಡು ತ್ರಿವಿಕ್ರಮನಂತೆ ವ್ಯಾಪಕವಾಗಿ ಹಬ್ಬಿದೆ.

ಪ್ರಸ್ತುತ ಈ ಗ್ರಂಥಕ್ಕೆ ನಿವೃತ್ತ ಪ್ರಾಂಶುಪಾಲರಾದ ಸಿದ್ದಮೂಲೆ ಶಂಕರನಾರಾಯಣ ಭಟ್ಟರು ಉತ್ತಮವಾದ ಕನ್ನಡ ಅನುವಾದವನ್ನು ರಚಿಸಿ, ಕನ್ನಡಿಗರ ಮನೆ ಮನೆಗೂ ಒಂದು ಕನ್ನಡಿಯಂತಹ ಕೃತಿಯನ್ನು ಒದಗಿಸಿದ್ದಾರೆ. ಅನುವಾದವು ಮೂಲಕ್ಕೆ ವಿರೋಧವಿಲ್ಲದ ಭಾಷಾಂತರವಾಗಿದೆ. ಸರಳ ಭಾಷೆಯಲ್ಲಿ ಒಡಮೂಡಿದೆ. ಅಲ್ಲಲ್ಲಿ ತಕ್ಕ ವಿವರಣೆಗಳಿವೆ. ಗಣಿತಕ್ಕೆ ಸೂಕ್ತ ಮಾರ್ಗದರ್ಶನಗಳಿವೆ. ಅಲ್ಲಲ್ಲಿ ಉದಾಹರಣಾರ್ಥವಾದ ಚಿತ್ರಗಳಿಂದ ಬೋಧವು ಸುಲಭ ಸಾಧ್ಯವಾಗಿದೆ. ಮನೆಗಳ ಸುತ್ತಮುತ್ತಲೂ ನೆಡಬಹುದಾದ ವೃಕ್ಷಾದಿಗಳ ಪರಿಚಯ, ಸಂಜ್ಞಾಪದಗಳ ಕೋಶ, ಯೋನಿ ನಕ್ಷತ್ರಾದಿಗಳ ಲೆಕ್ಕಾಚಾರದ ಕೋಷ್ಟಕ ಮೊದಲಾದವುಗಳನ್ನು ಈ ಗ್ರಂಥದಲ್ಲಿ ಸೇರಿಸಿ ಗ್ರಂಥವನ್ನು ಬಹು ಉಪಯುಕ್ತವಾಗುವಂತೆ ಸಿದ್ಧಗೊಳಿಸಲಾಗಿದೆ. ಹೀಗೆ ಅನೇಕ ಗುಣ ಭಾಗಗಳಿಂದ ಕೂಡಿದ ಈ ಬರೆಹವು ಗುಣಗ್ರಾಹಿಗಳೆಲ್ಲರ ಚಿತ್ತಭಿತ್ತಿಯನ್ನು ಅಲಂಕರಿಸುವುದೆಂದು ಭಾವಿಸುತ್ತೇವೆ. ಈ ಶ್ರೀಮುಖವು ರೂಪುಗೊಳ್ಳುವ ಮುನ್ನ ಶ್ರೀಯುತ ಶಂಕರನಾರಾಯಣ ಭಟ್ಟರು ಮತ್ತು ಮುನಿಯಂಗಳದ ಶ್ರೀ ಕೃಷ್ಣ ಮಹಾಲಿಂಗ ಪ್ರಸಾದನು ನಮ್ಮೊಟ್ಟಿಗೆ ಗುರುಕುಲವಾಸದಂತೆ ಹಲವಾರು ಕಾಲ ಸಂಚರಿಸುತ್ತಾ ಗ್ರಂಥದ ಸುಲಭಾವಬೋಧಕ್ಕೆ ತಮ್ಮ ಸೇವೆಯನ್ನು ಸಲ್ಲಿಸಿದ್ದನ್ನು ಪ್ರಸನ್ನವಾದ ಅಂತಃಕರಣದಿಂದ ಸ್ಮರಿಸುತ್ತಾ ಅವರಿಗೆ ವಿದ್ಯೋನ್ನತಿ, ಆತ್ಮೋನ್ನತಿಗಳನ್ನು ಹಾರೈಸುತ್ತೇವೆ. ಗೃಹವಿಲ್ಲದೇ ಬದುಕಿಲ್ಲ ಎಂದ ಮೇಲೆ ಇದಾರಿಗೆ ಉಪಯೋಗವಾಗದೇ ಹೋದೀತು! ಮನೆ ಮನೆಗೂ ಕೈಪಿಡಿಯಾಗಿ ಗ್ರಂಥಕಾರರ ಪರಿಶ್ರಮ ಸಾರ್ಥಕವಾಗಲೆಂದು ಬಯಸುತ್ತೇವೆ. ಗೃಹಿಗಳೆಲ್ಲರಿಗೂ ತಂಪಿನಾಗರವನ್ನು ರಚಿಸಿಕೊಂಡು ಜೀವನದ ನಂದಾದೀಪವನ್ನು ಬೆಳಗಿಸಿಕೊಳ್ಳಲು ಸಹಕಾರಿಯಾಗಲಿ, ಸನಾತನಾರ್ಯ ಭಾರತ ಮಹರ್ಷಿಗಳ ವಿದ್ಯಾ ಸಂಪತ್ತು ಪ್ರಜೆಗಳ, ಕುಟುಂಬದ, ಗ್ರಾಮನಗರಗಳ, ರಾಷ್ಟ್ರದ ಹಿತಕ್ಕಾಗಿ ವಿನಿಯೋಗವಾಗಲಿ. "ಲೋಕಾ : ಸಮಸ್ತಾ ಸುಖಿನೋ ಭವಂತು" ಎಂದು ಆಶಿಸಿ ಆ ಲಕ್ಷ್ಮೀನಾರಾಯಣ ಸ್ಮರಣೆಯೊಂದಿಗೆ ಆ ಪಾವನ ಅಡಿದಾವರೆಗಳಲ್ಲಿ ಅವನ ನಡೆಗೆ ಮುನ್ನುಡಿಯಾಗಲೆಂದು ಅರ್ಪಿಸುತ್ತೇವೆ.

ಇತಿ ಶ್ರೀಮನ್ನಾರಾಯಣ ಸ್ಮೃತಯಃ

ಮಿತಿ: ವೃಷ ಸಂ||ದ ಆಷಾಢ ಶುದ್ಧ ತ್ರಯೋದಶಿಯು
ಮಂಗಳವಾರ. ತಾ 3.7.2001
ವಸತಿ : "ವಿರಾಜ"ಮನೆ ಮಂಗಳೂರು. ಭಟ್ಟರ ಕೋಡಿ.
ಡಾ|| ಅನಂತ ಲಕ್ಷ್ಮೀ ಗಣಪತಿ ಭಟ್ಟ ಖಂಡಿಗೆ
ಇವರ ಗೃಹೇ



ಕೆ. ಗೋಪಾಲಕೃಷ್ಣ ಭಟ್
ಸಂಚಾಲಕರು

ಸಂಚಾಲಕರ ಹೃದಯದಾಳದಿಂದ

ನಮೋ ಮಹದ್ಭ್ಯೋऽಸ್ತು ನಮೋ ಗುರುಭ್ಯಃ, ನಮ್ಮ ಗುರು ಸಮಾನರಾದ, ವಾಸ್ತು ಕ್ಷೇತ್ರದ ಮೇರುವ್ಯಕ್ತಿತ್ವದ, ವಾಸ್ತು ಶಿಲ್ಪ ಪ್ರವೀಣ, ಜ್ಯೋತಿಃ ಶಾಸ್ತ್ರ ಪಾರಂಗತ, ಅಸಾಮಾನ್ಯ ರಾಷ್ಟ್ರ ಚಿಂತಕ, ಅದ್ವಿತೀಯ ಮಾನವತಾವಾದಿ ಭೂತವರ್ತಮಾನಗಳ ಸಮನ್ವಯಾಚಾರ್ಯ, ವ್ಯಾಪಾರಿ ಮನೋವೃತ್ತಿಯ ಆಶಾಢ ಭೂತಿಗಳ ಆಹಾರವಾದ ವಾಸ್ತು ಶಿಲ್ಪ ಶಾಸ್ತ್ರವನ್ನು ಅದರ ಮೂಲಕ್ಕೆ ಭಾರತೀಯ ತತ್ವಕ್ಕೆ ಚ್ಯುತಿ ಬಾರದಂತೆ ಸಂಶೋಧಿಸಿ ಪರಿಸರಕ್ಕೆ ಹೊಂದಿಸಿ ಸಂಸ್ಕರಿಸಿದ ಮಹಾ ಮೇಧಾವಿ ಹಾಗೂ ಸಂಚರಿಸುವ ವಾಸ್ತು, ಜ್ಯೋತಿಷ್ಯ ಭಂಡಾರವೆಂದೇ ಖ್ಯಾತ ನಾಮರಾದ ವೇ। ಮೂ। ಮುನಿಯಂಗಳ ಕೃಷ್ಣ ಭಟ್ಟರು ಅನಿರೀಕ್ಷಿತವಾಗಿ ದೈಹಿಕವಾಗಿ ಇನ್ನಿಲ್ಲವಾದಾಗ ನಮಗೆಲ್ಲ ಆಘಾತ -ಅಭದ್ರತೆಯ ಶೂನ್ಯತೆಯ ಭಾವನೆ. ಅಂಧಕಾರ.

ಗಡಿಗೆ (ಮಣ್ಣಿನ ಮಡಕೆ)ಯೊಳಗಿನ ಹಣತೆ (ದೀಪ)ಯ ಪ್ರಜ್ವಲ ಶುಭ್ರ ಜ್ಯೋತಿಯನ್ನು ನೋಡಬೇಕಾದರೆ ಅದರ ಸಮೀಪವರ್ತಿಯಾಗಿ ಇಣುಕಿ ನೋಡಬಹುದು (ಕಾಣಬಹುದು) ಆ ಮಣ್ಣಿನ ಮಡಕೆ ಬಿದ್ದು ಒಡೆದು ಚೂರಾದಾಗ ಅದರಲ್ಲಿನ ಹಣತೆಯ ಜ್ಯೋತಿ ಒಮ್ಮೆಗೇ (ತಕ್ಷಣ) ಚಿಮ್ಮಿ ಮಿಂಚಿ ವಿಶ್ವದ ಬೆಳಕಿನಲ್ಲಿ ಲೀನವಾದಾಗ ಆ ಮಿಂಚಿನ ಪ್ರಕಾಶ ನೋಡುಗನ ಕಣ್ಣನ್ನು ಕೋರೈಸುತ್ತದೆ. ಕಣ್ಣು ಕಾಣದು. ಸುತ್ತಲೂ ಮತ್ತಷ್ಟು ಕತ್ತಲು - ಅಂಧಕಾರ. ಅಂತೆಯೇ ಜೀವಂತವಿದ್ದಾಗ ಅವರಿದ್ದಲ್ಲಿಗೆ ಹೋಗಿ ದರ್ಶನ ಪಡೆದು ನಮ್ಮ ಜ್ವಲಂತ ಸಮಸ್ಯೆಗಳಿಗೂ ಪರಿಹಾರದ ಬೆಳಕನ್ನು ಕಾಣಬಹುದಾಗಿತ್ತು. ಆದರೆ ಅನಿರೀಕ್ಷಿತವಾಗಿ ಮರಣದಿಂದ ಅನಾವರಣಗೊಂಡ ಅವರ ಆತ್ಮ ಜ್ಯೋತಿ ಮಿಂಚಿ ಮುಕ್ತ ನೀಲಾಕಾಶದ ವಾಸ್ತು ಜ್ಯೋತಿಶ್ಶಾಸ್ತ್ರ ದಿಗಂತದಲ್ಲಿ ಲೀನವಾಯಿತು. ಆ ಮಿಂಚಿದ ಬೆಳಕಿನ ಪ್ರಭೆ ನಮಗೆಲ್ಲ ಕತ್ತಲು ದುಃಖವನ್ನೇ ಉಂಟು ಮಾಡಿತು. ಆ ದುಃಖದ ಕತ್ತಲಿನಲ್ಲಿಯೂ ಅವರನ್ನು ನಾವು ಕಾಣಬೇಕಾದರೆ, ಅವರು ತನ್ನನ್ನು ತೊಡಗಿಸಿಕೊಂಡ ವಾಸ್ತು ಶಿಲ್ಪ ಮತ್ತು ಜ್ಯೋತಿಷ್ಯ ಕ್ಷೇತ್ರದತ್ತ ನೋಡಬೇಕು. ಅದನ್ನು ವಿಶೇಷವಾಗಿ ಕಾಣಬೇಕಾದರೆ ಕರ್ನಾಟಕದ ದಕ್ಷಿಣ, ಕೇರಳದ ಉತ್ತರ ಭಾಗದ ಮನೆ ಮಠಗಳಲ್ಲಿ, ಗುಡಿ ಗರಡಿಗಳಲ್ಲಿ ದೇವಾಲಯ ದೈವಾಲಯಗಳಲ್ಲಿ ಅವುಗಳಲ್ಲಿನ ಶಾಸ್ತ್ರ ಸಮ್ಮತ ತಾತ್ವಿಕ ವಾಸ್ತು ವಿನ್ಯಾಸಗಳಲ್ಲಿ.

ಅವರಿಲ್ಲದ ದುಃಖದ ಕತ್ತಲಿನಲ್ಲಿ ಅವರ ವ್ಯಕ್ತಿತ್ವದ ಹಿರಿಮೆಯ ರಸ ನಿಮಿಷಗಳ ಗುಣಗಾನ ಮಾಡಿದೆವು. ನುಡಿ ನಮನಗಳನ್ನು ಸಲ್ಲಿಸಿದೆವು. ದುಃಖದಲ್ಲಿ ಅವರಿಲ್ಲದ ಆ ಕತ್ತಲಲ್ಲಿ ದಿಕ್ಕು

ಕಾಣದ ನಾವು ನಮ್ಮ ಪ್ರೀತಿ, ಗೌರವ ಅಭಿಮಾನಗಳನ್ನು ಬಾಷ್ಪಾಂಜಲಿಗೇ ಸೀಮಿತಗೊಳಿಸಿದೆವು. ಆಗ, ಕೀರ್ತಿಶೇಷರ ಅಭಿಮಾನಿಗಳಲ್ಲೊಬ್ಬರಾದ ಶ್ರೀ ಸದಾಶಿವ ವೇದಪಾಠಶಾಲೆಯ ಸ್ಥಾಪಕಾಧ್ಯಕ್ಷರಾದ ಶ್ರೀ ಪಿ. ಎಸ್. ಚಿದಾನಂದರಾವ್ ಅವರು "ಕೇವಲ ಪ್ರೀತಿ, ಗೌರವ ಮೆಚ್ಚುಗೆ ಸ್ತುತಿಗಳ ನುಡಿ ನಮನಗಳು, ಕಣ್ಣೀರು, ಕ್ರಮಶಃ ಕ್ಷೀಣಿಸಿ ಇನ್ನಿಲ್ಲವಾಗುತ್ತವೆ. ಪ್ರೀತಿ, ಗೌರವ ಸ್ತುತಿ ನುಡಿ ನಮನಗಳಿಗೆ ಬೆಲೆ ಇದೆ. ಆಡಿದ ನುಡಿ ಮಡಿಯಬಾರದು ಅದು ಕ್ರಿಯೆಯಲ್ಲಿ ಕಾರ್ಯದಲ್ಲಿ ಕಾಣಬೇಕು. (Word said is not dead, it begins) ನಾವು ಪ್ರಾಮಾಣಿಕವಾಗಿ, ಅವರು ನಮಗಾಗಿ, ಮುಂದಿನ ಪೀಳಿಗೆಗಾಗಿ ಬಿಟ್ಟುಹೋದ, ಯಾ ಉಳಿಸಿ ಹೋದ ಹಜ್ಜೆಯ ಗುರುತಿನಲ್ಲಿ ಮುನ್ನಡೆಯಬೇಕು. ಹೃದಯ ದೌರ್ಬಲ್ಯದ ಪಲಾಯನವಾದವನ್ನು ಬಿಟ್ಟು ಗುರಿಯತ್ತ ಸಾಗಬೇಕು. ಅವರೇರಿದ ಎತ್ತರಕ್ಕೆ ಏರಬೇಕು ಮತ್ತು ಇತರರಿಗೆ ಏರುವುದಕ್ಕೆ ಅವಕಾಶ ಮಾಡಿಕೊಡಬೇಕು. ಒಂದಾಗಿ ಶ್ರಮಿಸೋಣ. ಅವರ ವ್ಯಕ್ತಿತ್ವದ ಬೆಳಕನ್ನು ಕಾಣುವ -ಕಾಣಿಸುವ ಅದಕ್ಕಾಗಿ ರಚನಾತ್ಮಕ ಯೋಜನೆಗಳನ್ನು ಯೋಜಿಸುವ"ಎಂದು ಹೇಳುತ್ತಾ ಜನಸ್ಪಂದನಕ್ಕಾಗಿ ಕೂಡಲೇ ಕಾರ್ಯ ಪ್ರವರ್ತನಾಗುವಂತೆ ಕಿರಿಯನಾದ ನನ್ನಲ್ಲಿ ಕರ್ತವ್ಯ ಪ್ರಜ್ಞೆ ಮೂಡಿಸಿದರು.

ಕೀರ್ತಿ ಶೇಷರ ಸಹೋದರರ ಜ್ಯೋತಿಷಿ ವಿಷ್ಣು ಭಟ್ಟರಲ್ಲಿ ಕುಟುಂಬದ ಸದಸ್ಯರಲ್ಲಿ ಊರ ಗಣ್ಯರಲ್ಲಿ ಅಭಿಮಾನಿವರ್ಗದಲ್ಲಿ ವಿಷಯ ಪ್ರಸ್ತಾಪಿಸಿದಾಗ ದೊರೆಯಿತು ಧನಾತ್ಮಕ ಪ್ರತಿಕ್ರಿಯೆ. ಅದು ಸ್ಫೂರ್ತಿದಾಯಕ.

ಜೀವನ ಯಜ್ಞವನ್ನು ಮುಗಿಸಿ ಮರಣದ ಮೂಲಕ ಅವಭೃಥಸ್ನಾನ ("ಯನ್ಮರಣಂ ತದವಭೃಥಃ") ಮಾಡಿದ ಕೀರ್ತಿಶೇಷರ, ವ್ಯಕ್ತಿತ್ವ ಸಾಧನೆ ಕೊಡುಗೆ ಪರಿಚಯವನ್ನು ಪಸರಿಸುವುದಕ್ಕೆ ಅವರ ಆಯ್ಕೆಯ ಕ್ಷೇತ್ರದ ವಿಸ್ತಾರ, ವೈಶಿಷ್ಟ್ಯಗಳನ್ನು ಉಳಿಸಿ, ಬೆಳೆಸಿ, ಬಳಸಿಕೊಳ್ಳುವುದಕ್ಕಾಗಿ ಅವರ ಹೆಸರಿನಲ್ಲಿ (ಸ್ಮರಣಾರ್ಥ) ಗ್ರಂಥ ಪ್ರಕಟಣೆ (ಪ್ರಸಾರ ಮಾಲಿಕೆ), ವಿದ್ಯಾಕೇಂದ್ರ, ದತ್ತಿನಿಧಿ ಮೊದಲಾದವುಗಳನ್ನು ಸ್ಥಾಪಿಸುವುದೆಂಬ ಅಭಿಪ್ರಾಯಕ್ಕೆ ಬಂದೆವು.

ಉತ್ಸಾಹವೇನೋ ಇದೆ. ಆದರೆ ವಿಷಯದ ಮೇಲಿನ ಜ್ಞಾನ, ಅನುಭವದ ಕೊರತೆ - ಅದಕ್ಕಾಗಿ ನಿವೇದಿಸಿಕೊಂಡೆವು. ಹಿರಿಯ ಜ್ಞಾನಿಗಳಲ್ಲಿ, ಅನುಭವಿಗಳಲ್ಲಿ. "ಯೋಗ್ಯವಾದ ಕಾರ್ಯ. ನಿಮ್ಮೊಂದಿಗೆ ನಾವಿದ್ದೇವೆ, ಮುನ್ನಡೆಯಿರಿ" ಎಂದು ಅನುಗ್ರಹಿಸಿದರು ಶ್ರೀ ಸುಬ್ರಹ್ಮಣ್ಯ ಮಠಾದೀಶರು. ಶ್ಲಾಘನೀಯವೆಂದರು ಪೇಜಾವರ ಶ್ರೀಗಳವರು. ವಂದನೀಯ ಯತಿದ್ವಯರು ಮಾರ್ಗದರ್ಶನದ ಭರವಸೆ ಇತ್ತರು. ಭಾರತೀಯ ವಾಸ್ತುಶಿಲ್ಪ ಮತ್ತು ಜ್ಯೋತಿ ಶ್ಯಾಸ್ತ್ರಗಳ ಆಳವನ್ನು ಯಾರೂ ಅರಿಯದಷ್ಟು ಅರಿತ ಕೀರ್ತಿಶೇಷ ಭಟ್ಟರ ಸ್ಮರಣಾರ್ಥ, ಲೋಕ ಕಲ್ಯಾಣಕ್ಕಾಗಿ "ವಾಸ್ತುಶಿಲ್ಪಪ್ರವೀಣ-ಜ್ಯೋತಿಷಿ ಮುನಿಯಂಗಳ ಕೃಷ್ಣ ಭಟ್ಟ ಸಂಸ್ಮರಣ ವೇದಿಕೆ"ಯನ್ನು ಸ್ಥಾಪಿಸುವಂತೆ ಮತ್ತು ನಮ್ಮೆಲ್ಲರ ಕೇಳಿಕೆಯಂತೆ ಸ್ವತಃ ತಾವೇ ಗೌರವಾಧ್ಯಕ್ಷರಾದರು ಅಭಿನವಜನಕಮಹಾರಾಜ, ರಾಜರ್ಷಿ, ಧರ್ಮಾಧಿಕಾರಿ, ಡಾ. ವೀರೇಂದ್ರ ಹೆಗ್ಗಡೆಯವರು. ಜ್ಞಾನಿಗಳಾದ ಯತಿದ್ವಯರ ಮಾರ್ಗದರ್ಶನದೊಂದಿಗೆ ವೇದಿಕೆ ಸ್ಥಾಪನೆಯಾಯಿತು. ನನ್ನನ್ನು ಸಂಚಾಲಕನನ್ನಾಗಿ ಆರಿಸಿ ಕ್ಷಿಪ್ರ ಸಂಚಾಲನೆಗೆ ಆದೇಶ ವಿತ್ತರು.

ಪ್ರಸಾರ ಮಾಲಿಕೆಯ ಪ್ರಥಮ ಪುಷ್ಪವಾಗಿ ಮಾಜಿ ಪ್ರಾಂಶುಪಾಲ ವಾಸ್ತು ಶಾಸ್ತ್ರಜ್ಞ ಶ್ರೀ

ಸಿದ್ಧಮೂಲೆ ಶಂಕರನಾರಾಯಣ ಭಟ್ಟರ ಸಂಪಾದಕತ್ವದಲ್ಲಿ ರೂಪುಗೊಂಡ "ವಾಸ್ತು ಶಿಲ್ಪ ಪ್ರವೀಣ, ಜ್ಯೋತಿಷಿ ಮುನಿಯಂಗಳ ಕೃಷ್ಣಭಟ್ಟ" ಎಂಬ ಆಕರಗ್ರಂಥವು ದಿನಾಂಕ 16.10.1997ರಂದು ಶ್ರೀ ಸುಬ್ರಹ್ಮಣ್ಯ ಮಧ್ವ ಮಂಟಪದಲ್ಲಿ ಉಭಯ ಶ್ರೀಗಳವರ ಆಶೀರ್ವಚನಗಳೊಂದಿಗೆ ಧರ್ಮಾಧಿಕಾರಿ ಡಾ. ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಸುಪ್ರೀಂ ಕೋರ್ಟಿನ ಮಾಜಿ ಮುಖ್ಯನ್ಯಾಯಾಧೀಶ ಮತ್ತು ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಜಸ್ಟಿಸ್ ಯಂ. ಯನ್. ವೆಂಕಟಾಚಲಯ್ಯನವರಿಂದ ಮೆಚ್ಚುಗೆ ಶುಭ ಹಾರೈಕೆಯೊಂದಿಗೆ ಬಿಡುಗಡೆ ಆಯಿತು.

ಈ ಆಕರ ಗ್ರಂಥದಲ್ಲಿ ದಿವಂಗತರ ವ್ಯಕ್ತಿತ್ವ ಮತ್ತು ವಾಸ್ತು - ಜ್ಯೋತಿಷ್ಯ ಕ್ಷೇತ್ರಕ್ಕೆ ಅವರಿತ್ತ ಕೊಡುಗೆಗಳ ಪರಿಚಯ, ಜನ ಸಾಮಾನ್ಯರಿಗೂ ಸುಲಭ ಗ್ರಾಹ್ಯವಾಗುವಂತೆ ವಾಸ್ತು ಕ್ಷೇತ್ರವನ್ನು ವಿವಿಧ ಕೋನಗಳಿಂದ ವಿಶ್ಲೇಷಿಸಿ ಪರಿಚಯಿಸಿದ ಮೌಲಿಕ ಲೇಖನಗಳು. ಈ ಗ್ರಂಥದಲ್ಲಿ ವಿಶ್ವವ್ಯಾಪಕವಾದ ವಾಸ್ತುವಿನ ತಾತ್ವಿಕ/ ದಾರ್ಶನಿಕ ರೂಪ, ವಾಸ್ತುಶಿಲ್ಪ, ಜ್ಯೋತಿಷಗಳ ವಿಶ್ವನಿಯಮ ವಿಶ್ಲೇಷಣೆ ಮೊದಲಾದವುಗಳು ಸಂಕ್ಷಿಪ್ತವಾಗಿವೆ. ಎಲ್ಲರಿಂದಲೂ ಮೆಚ್ಚುಗೆ (ಶ್ಲಾಘನೆ) ಗಳಿಸಿವೆ.

ಈ ಶ್ಲಾಘನೆ ಶಕ್ತಿಯನ್ನಿತ್ತಿತು. ವೇದಿಕೆಯ ಮುಂದಿನ ಚಟುವಟಿಕೆಗಳಿಗಾಗಿ ಹತ್ತು ಹಲವಾರು ಯೋಚನೆಗಳು, ಯೋಜನೆಗಳು ಮೂಡಿ ಬಂದವು. ಆದ್ಯತೆಯತ್ತ ಗಮನ ಹರಿಸಿದೆವು. ಪ್ರಥಮ ಆದ್ಯತೆ ಜನಪದದ ನಿತ್ಯ ಆವಶ್ಯಕತೆಯ, ಎಲ್ಲರಿಗೂ ಸುಖ ಶಾಂತಿ ಸಂಪತ್ತುಗಳನ್ನೀಯುವ, ಕಲಬೆರಕೆಯಾಗದ, ವ್ಯಾಪಾರೀಕರಣಕ್ಕೆ ತುತ್ತಾಗದ, "ಶುದ್ಧಗೃಹವಾಸ್ತು"ವಿನ ಜ್ಞಾನ ಎಲ್ಲರಿಗೂ ದೊರೆಯುವಂತೆ ಸುಲಭವಾಗಿ ಕಡಿಮೆ ಬೆಲೆಯಲ್ಲಿ ಶಾಸ್ತ್ರಗ್ರಂಥವನ್ನು ವೇದಿಕೆಯ ಪ್ರಸಾರ ಮಾಲಿಕೆಯ ದ್ವಿತೀಯ ಪುಷ್ಪವಾಗಿಸುವುದೆಂದು ನಿರ್ಣಯಿಸಿ ಈ ಬಗ್ಗೆ ಈ ಕ್ಷೇತ್ರದಲ್ಲಿ ಪರಿಣತರಾದ ಮಾಜೀ ಪ್ರಾಂಶುಪಾಲ ಸಿದ್ಧಮೂಲೆ ಶಂಕರನಾರಾಯಣ ಭಟ್ಟರನ್ನೇ ಕೇಳಿಕೊಂಡೆವು ವಿನಮ್ರವಾಗಿ. ಪ್ರಸ್ತುತ ವಾಸ್ತುವಿನ ಹೆಸರಲ್ಲಿ ಆಗುತ್ತಿರುವ ಶೋಷಣೆಯಿಂದ ನೊಂದಿದ್ದ ಈ ಶಾಸ್ತ್ರವೇತ್ತರು ಶುದ್ಧಗೃಹವಾಸ್ತುವಿನ ನಿಜ ಅರಿವನ್ನು ಅರುಹುವುದಕ್ಕಾಗಿ ಇನ್ನೊಮ್ಮೆ ವಿವಿಧ ಭಾಷೆಗಳಲ್ಲಿನ ವೇದಾಂಗ ವಾಸ್ತುಶಾಸ್ತ್ರದ ಆಧಾರ ಗ್ರಂಥಗಳನ್ನು ತಳ ಸ್ಪರ್ಷಿಯಾಗಿ ಅಭ್ಯಸಿಸಿದರು. ಅನೇಕ ಊರು ಕೇರಿಗಳನ್ನು ಸುತ್ತಾಡಿ ಭಗ್ನವಾಶೇಷಗಳನ್ನು ಶಿಲಾಶಾಸನಗಳನ್ನು ವೀಕ್ಷಿಸಿದರು. ಅನುಭವಿಗಳೊಂದಿಗೆ ವಿಮರ್ಶಿಸಿ ಸಂಶೋಧಿಸಿ ಸಂಸ್ಕರಿಸಿ ಸಂಪಾದಿಸಿದ ಕನ್ನಡದ ಅಪೂರ್ವ ಗ್ರಂಥ ಈ ಮನುಷ್ಯಾಲಯ ಚಂದ್ರಿಕಾ. ಅವರ ಸಾಹಸಕ್ಕೆ ಮೆಚ್ಚುಗೆ, ಶ್ರಮಕ್ಕೆ ಋಣ, ಅವರಿಗೆ ತುಂಬು ಹೃದಯದ ವಂದನೆಗಳು.

"ಜ್ಞಾನವೆಂಬುದು ಒಂದು ಸಂಕಲ್ಪಬಿಂದುವಲ್ಲ, ಕಾರ್ಯ ವಿಧಾನ - ಚುಕ್ಕೆಯಲ್ಲ, ಮುಂದುವರಿಯುವ ಗೆರೆ." ಯಾವುದೇ ಗ್ರಂಥವಾದರೂ ಅದು ದೇಶ,ಕಾಲ,ಪರಿಸ್ಥಿತಿಗಳಿಂದ ಪ್ರಭಾವಿತ "ಅಜ್ಞಾನೇನಾವೃತಂ ಜ್ಞಾನಂ" ಅಲ್ಲವೇ? ಆದುದರಿಂದ ಈ ಗ್ರಂಥವನ್ನು ಪರಿಶೀಲಿಸಿ ಅನುಗ್ರಹಿಸುವಂತೆ ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರ ಭಾರತೀ ಶ್ರೀ ಗಳವರಲ್ಲಿ ಕೇಳಿಕೊಂಡೆವು. ಈ ಗ್ರಂಥದಲ್ಲಿನ ಸೂತ್ರಗಳ ಶ್ಲೋಕಗಳ ಪ್ರತಿಪದ ಅರ್ಥ,

ಪ್ರವಾಹಾರ್ಥ, ಭಾವಾರ್ಥ, ಮಥಿತಾರ್ಥ ಮತ್ತು (ತತ್+ಪರವಾದ) ತಾತ್ಪರ್ಯಾರ್ಥಗಳನ್ನು "ಪರಿಪ್ರಶ್ನೆ" ಪದ್ಧತಿಯಲ್ಲಿ ವಿಮರ್ಶಿಸಿ ವಿಶ್ಲೇಷಿಸಿ ಸಂಸ್ಕರಿಸಿ, ಪ್ರಸನ್ನ ಚಿತ್ತರಾಗಿ ಶ್ರೀಮುಖದ ಮುನ್ನುಡಿಯನ್ನಿತ್ತು ಅನುಗ್ರಹಿಸಿದರು, ತತ್+ಪರಾಯಣ, ತತ್+ಆತ್ಮರಾದ ಶ್ರೀ ಗುರು ವರ್ಯರು. ಶ್ರೀ ಗುರುಚರಣಗಳಿಗೆ ಪ್ರಣಾಮಗಳು.

ಮಾರ್ಗದರ್ಶಕರಾದ, ಸದಾ ನಮ್ಮನ್ನು ಅನುಗ್ರಹಿಸುತ್ತಿರುವ ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮಹಾಸಂಸ್ಥಾನ ಪೇಜಾವರ ಶ್ರೀ ಅಧೋಕ್ಷಜ, ಮಠ ಶ್ರೀ ವಿಶ್ವೇಶ ತೀರ್ಥ ಶ್ರೀಪಾದರಿಗೆ ಶಿರಸಾಷ್ಟಾಂಗ ನಮಸ್ಕಾರಗಳು. ತಪ್ಪಿ ಬೀಳದಂತೆ ಮತ್ತು ಸರಿಯಾದ ದಾರಿಯಲ್ಲಿ ಮುಂದುವರಿಯುವಂತೆ ನಮ್ಮನ್ನು ಜಾಗ್ರತಗೊಳಿಸುತ್ತಿರುವ ನಮ್ಮ ನಿಮ್ಮೆಲ್ಲರ ಈ ವೇದಿಕೆಯ ಸದಾಶ್ರಯದಾತರಾದ ಶ್ರೀ ಸುಬ್ರಹ್ಮಣ್ಯ ಮಠಾಧೀಶ ಪೂಜ್ಯ ಶ್ರೀ ವಿದ್ಯಾಪ್ರಸನ್ನ ಶ್ರೀಗಳ ಶ್ರೀಪಾದಕ್ಕೆ ವಂದನೆಗಳು.

ಸದಾ ಸಲಹೆ ಸೂಚನೆ ದಿಗ್ದರ್ಶನ ಮಾಡುತ್ತಾ ವೇದಿಕೆಗೆ ಭದ್ರವಾದ ತಳಹದಿಯನ್ನಿತ್ತು ತಾವೇ (ನಮ್ಮೆಲ್ಲರ ಅಪೇಕ್ಷೆಯಂತೆ) ಗೌರವಾಧ್ಯಕ್ಷರಾಗಿ ನಮ್ಮನ್ನು ಮುನ್ನಡೆಸುತ್ತಿರುವ ಅಭಿನವ ಚಾವುಂಡರಾಯ, ಅಭಿನವ ಜನಕ ಮಹಾರಾಜ, ರಾಜರ್ಷಿ, ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರಿಗೆ ನಮನಗಳು.

ವೇದಿಕೆಗೆ ಶುಭಾಭಿವೃದ್ಧಿಗಳನ್ನು ಹಾರೈಸಿ ಸುವರ್ಣ ಮಂತ್ರಾಕ್ಷತೆಯೊಂದಿಗೆ ಅನುಗ್ರಹಿಸಿ ಪ್ರೋತ್ಸಾಹಿಸಿದ, ಈಗ ಬ್ರಹ್ಮೈಕ್ಯರಾಗಿರುವ ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಂದ್ರ ಭಾರತೀ ಶ್ರೀಗಳವರನ್ನು ಸ್ಮರಿಸುತ್ತಾ - ಶ್ರೀ ಗುರುಭ್ಯೋ ನಮಃ

ಸಂಸ್ಥೆಯ ಅಧ್ಯಕ್ಷ ಶ್ರೀ ಎನ್. ರಾಜ ಗೋಪಾಲ ಹೆಬ್ಬಾರರಿಗೆ ಪದಾಧಿಕಾರಿ ಹಾಗೂ ಸದಸ್ಯರಿಗೆ, ದಾನಿಗಳಿಗೆ ಓದುಗರಿಗೆ ಕೃತಜ್ಞತೆಗಳು. ಅಲ್ಲದೆ ಸಕಾಲದಲ್ಲಿ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಮಂಗಳೂರಿನ ಮನೋರಮಾ ಪ್ರಿಂಟರ್ಸ್‌ರವರಿಗೂ, ಅರ್ಥವತ್ತಾಗಿ ಮುಖ ಚಿತ್ರವನ್ನು ಬರೆದು ಕೊಟ್ಟ ಮಂಗಳೂರಿನ ಶ್ರೀ ಕೃಷ್ಣಕುಮಾರ್‌ರವರಿಗೂ ಹಾರ್ದಿಕ ಅಭಿನಂದನೆಗಳು.

ನಮ್ಮ ಮುಂದಿನ ಯೋಜನೆಗಳು ನಿಮ್ಮ ಹೃದಯಾಂತರಾಳದ ಆಯ್ಕೆಯನ್ನು ಆಧರಿಸಿದೆ, ಅವಲಂಬಿಸಿದೆ "ನಾವು ಜೀವಂತವಾಗಿದ್ದರೆ ನಾವು ತೊಡಗಿಸಿಕೊಂಡ ಸಂಸ್ಥೆ ಜ್ವಲಂತವಾಗಿ ಬೆಳೆಯುತ್ತದೆ. ಸಂಸ್ಥೆ ಜ್ವಲಂತವಾಗಿದ್ದರೆ ಮಾತ್ರ ಆಗ ನಾವು ಜೀವಂತವಾಗಿದ್ದೇವೆ." ಎಂಬ ಮಾತನ್ನು ಸತ್ಯವಾಗಿಸೋಣ ಬನ್ನಿ, ಸ್ನೇಹ ಹಸ್ತವನ್ನು ಚಾಚಿ ಸಹಕರಿಸುವಿರೆಂಬ ವಿಶ್ವಾಸ ನಮ್ಮದು. ವಿಶ್ವಾಸಃ ಫಲದಾಯಕಃ

ಇತಿ

ಕೆ. ಗೋಪಾಲಕೃಷ್ಣ ಭಟ್
ಸಂಚಾಲಕ



ಶ್ರೀ ರಾಜ ಗೋಪಾಲ ಹೆಬ್ಬಾರ, ನೆರಿಯ

ಅಧ್ಯಕ್ಷರ ನುಡಿ

ವಾಸ್ತುಶಿಲ್ಪ ಗೃಹವಾಸ್ತು ಮತ್ತು ದೇವಾಲಯ ವಾಸ್ತು ಎಂದು ಎರಡು ವಿಧ. ಅವುಗಳಲ್ಲಿ ಗೃಹವಾಸ್ತು ಎಂಬುದು ಒಂದು ಕಡೆ ನೆಲೆ ನಿಂತು ಮನೆಮಾರುಗಳನ್ನು ಕಟ್ಟಿ ವಾಸಿಸುವ ಪ್ರತಿಯೊಬ್ಬ ಮನುಷ್ಯನಿಗೆ ಅತ್ಯಗತ್ಯವಾಗಿ ಬೇಕಾದ ಹಾಗೆಯೇ ತಿಳಿದುಕೊಳ್ಳಬೇಕಾದ ವಿಷಯವಾಗಿದೆ. ಮನುಷ್ಯನ ಜೀವನಕ್ರಮದಲ್ಲಿ ಬಹಳ ಪ್ರಾಧಾನ್ಯವನ್ನು ಪಡೆದ ಈ ವಾಸ್ತು ಶಾಸ್ತ್ರದ ಬಗ್ಗೆ ಇಂದು ಸರಿಯಾದ ಪರಿಜ್ಞಾನವಿಲ್ಲದೆ ಅದನ್ನು ವಿಕೃತಗೊಳಿಸುವ ಕ್ರಮವೇ ಹೆಚ್ಚಾಗಿದೆ. ಈ ವಿಕೃತಿಯನ್ನು ಹೋಗಲಾಡಿಸಿ ವಾಸ್ತುವಿನ ಶಾಸ್ತ್ರೀಯ ಸ್ವರೂಪವನ್ನು ತೋರಿಸಿಕೊಡುವುದೇ ನಮ್ಮ "ಮುನಿಯಂಗಳ ಕೃಷ್ಣ ಭಟ್ಟ ಸಂಸ್ಮರಣ ವೇದಿಕೆ"ಯ ಉದ್ದೇಶಗಳಲ್ಲಿ ಒಂದಾಗಿದೆ. ಆ ಉದ್ದೇಶವನ್ನು ನೆರವೇರಿಸಲು ಈಗಾಗಲೇ ವಾಸ್ತುಶಿಲ್ಪದ ಒಂದು ಆಕರ ಗ್ರಂಥವನ್ನು ಕನ್ನಡಿಗರ ಕೈಯಲ್ಲಿ ಇಟ್ಟಿರುತ್ತೇವೆ. ಈಗ ಮನುಷ್ಯಾಲಯ ಚಂದ್ರಿಕಾ ಎಂಬ ಗೃಹವಾಸ್ತು ಶಾಸ್ತ್ರ ಗ್ರಂಥವನ್ನು ನಮ್ಮ ವೇದಿಕೆಯ ಎರಡನೆಯ ಪುಷ್ಪವನ್ನಾಗಿ ಹೊರತರುತ್ತಿದ್ದೇವೆ.

ಕೇರಳದ ತಿರುಮಂಗಲ ನೀಲಕಂಠನ್ ಎಂಬವರು ಸಂಸ್ಕೃತ ಶ್ಲೋಕ ರೂಪದಲ್ಲಿ ರಚಿಸಿದ ಮನುಷ್ಯಾಲಯ ಚಂದ್ರಿಕೆಗೆ ಕನ್ನಡದಲ್ಲಿ ಉತ್ತಮ ವ್ಯಾಖ್ಯಾನವನ್ನು ಬರೆದು ಗೃಹವಾಸ್ತುವಿಗೆ ವೈಜ್ಞಾನಿಕ ಹಾಗೂ ತಾಂತ್ರಿಕ ವಿವರಣೆಯನ್ನು ಕೊಟ್ಟು ಅದರ ತಾತ್ವಿಕ ದರ್ಶನವನ್ನು ಈ ಗ್ರಂಥದಲ್ಲಿ ಮಾಡಿಸಿದವರು ನಿವೃತ್ತ ಪ್ರಾಂಶುಪಾಲರೂ, ಸರ್ವಮಾನ್ಯರೂ ಆದ ಶ್ರೀ ಸಿದ್ದಮೂಲೆ ಶಂಕರನಾರಾಯಣ ಭಟ್ಟರು. ಅವರ ಪರಿಶ್ರಮದ ಮತ್ತು ವಾಸ್ತು ವಿಜ್ಞಾನದ ಪರಿಜ್ಞಾನದ ಕೊಡುಗೆಯಾದ ಈ ಗ್ರಂಥವನ್ನು ಪ್ರಕಟಿಸಲು ನಮಗೆ ಅಭಿಮಾನವೂ ಸಂತೋಷವೂ ಆಗುತ್ತದೆ. ಇಂತಹ ಅಮೂಲ್ಯವಾದ ಗ್ರಂಥವನ್ನು ಕನ್ನಡಕ್ಕೆ ಒದಗಿಸಿದ ಶ್ರೀ ಭಟ್ಟರ ಉಪಕಾರವನ್ನು ಸ್ಮರಿಸುತ್ತ ಅವರಿಗೆ ಇತೋಪ್ಯತಿಶಯ ಶ್ರೇಯಸ್ಸನ್ನು ಹಾರೈಸುತ್ತೇವೆ. ಹಾಗೂ ಈ ಗ್ರಂಥವನ್ನು ಹೊರತರಲು ನೆರವಾದವರೆಲ್ಲರಿಗೂ ಚಿರಕೃತಜ್ಞತೆಯನ್ನು ಅರ್ಪಿಸುತ್ತೇವೆ.


ಇತಿ,

ನೆರಿಯ,

ತಾ. 18-9-2001

ರಾಜ ಗೋಪಾಲ ಹೆಬ್ಬಾರ, ನೆರಿಯ

ಅಧ್ಯಕ್ಷರು.



ಸಿದ್ಧಮೂಲೆ ಶಂಕರನಾರಾಯಣ ಭಟ್ಟ

ಲೇಖಕನ ಮಾತುಗಳು

ತಿರುಮಂಗಲ ನೀಲಕಂಠನ್ ವಿರಚಿತ ಮನುಷ್ಯಾಲಯ ಚಂದ್ರಿಕೆಯೆಂಬುದು ಗೃಹವಾಸ್ತುಶಿಲ್ಪದ ಅತ್ಯಮೂಲ್ಯವಾದ ಒಂದು ಶಾಸ್ತ್ರ ಗ್ರಂಥ. ಬಹುಜನೋಪಯೋಗಿಯಾದ ಗ್ರಂಥ ಇದು. ಶಿಲ್ಪ ಶಾಸ್ತ್ರ ಗ್ರಂಥಗಳಲ್ಲಿ ಪ್ರಸಿದ್ಧವೆನಿಸಿದ ಮಯಮತ, ಪ್ರಯೋಗಮಂಜರಿ, ಭಾಸ್ಕರೀಯ ಮತ, ಮನುಮತ, ಈಶಾನಗುರುದೇವಪದ್ಧತಿ ಮೊದಲಾದ ಹತ್ತು-ಹನ್ನೆರಡು ಗ್ರಂಥಗಳಿಂದ ಗೃಹವಾಸ್ತುವಿಗೆ ಸಂಬಂಧಿಸಿದ ವಿಷಯಗಳನ್ನು ಕ್ರೋಢೀಕರಿಸಿ ಸಂಸ್ಕೃತ ಶ್ಲೋಕ ರೂಪದಲ್ಲಿ ಈ ಗ್ರಂಥ ರಚನೆಯನ್ನು ಮಾಡಿರುತ್ತಾರೆ. ಗೃಹವಾಸ್ತುಶಿಲ್ಪಕ್ಕೆ ಇದೊಂದು ಶಾಸ್ತ್ರೀಯ ಗ್ರಂಥ

ನಾನು ವಾಸ್ತುಶಾಸ್ತ್ರವನ್ನು ನನ್ನ ಅಧ್ಯಯನ ವಿಷಯವನ್ನಾಗಿ ಆರಿಸಿಕೊಂಡಾಗ ನನಗೆ ಕಂಡು ಬಂದ ಒಂದು ದೊಡ್ಡ ಕೊರತೆಯೆಂದರೆ ಕನ್ನಡದಲ್ಲಿ ಆ ಕುರಿತಾದ ಶಾಸ್ತ್ರೀಯ ಗ್ರಂಥ ದೊರಕದೆ ಇದ್ದುದು. ಸಂಸ್ಕೃತ ಸಾಹಿತ್ಯದಲ್ಲಿ ವಿಪುಲವಾಗಿ ದೊರಕುವ ವಾಸ್ತುಶಿಲ್ಪಗ್ರಂಥ ಕನ್ನಡದಲ್ಲಿ ಬೆರಳೆಣಿಕೆಯಲ್ಲಿಯೂ ಇಲ್ಲದಿರುವುದು ಶೋಚನೀಯವೇ ಆಗಿದೆ. ಆದುದರಿಂದ ಸಂಸ್ಕೃತ ಭಾಷೆಯಲ್ಲಿರುವ ಗೃಹವಾಸ್ತುಶಿಲ್ಪದ ಜನಪ್ರಿಯಶಾಸ್ತ್ರಗ್ರಂಥವಾದ ಈ ಮನುಷ್ಯಾಲಯ ಚಂದ್ರಿಕೆಯನ್ನು ಕನ್ನಡಭಾಷೆಗೆ ಅನುವಾದಮಾಡಿ ಕನ್ನಡಿಗರ ಕೈಯಲ್ಲಿ ಇಡುವುದು ನನ್ನ ಮೊದಲನೆಯ ಉದ್ದೇಶವಾಯಿತು. ಓದು-ಬರೆಹ ಬಲ್ಲ ಎಲ್ಲ ಜನಸಾಮಾನ್ಯರಿಗೂ ಈ ಗ್ರಂಥದಲ್ಲಿ ಹೇಳಿದ ವಿಷಯ ಸುಲಭವಾಗಿ ಅರ್ಥವಾಗಬೇಕೆಂಬುದು ಎರಡನೆಯ ಉದ್ದೇಶವಾಯಿತು. ಅದಕ್ಕಾಗಿ ಇದರಲ್ಲಿ ಶ್ಲೋಕಗಳ ಸರಳಾನುವಾದವನ್ನು ಕೊಡುವುದರ ಜತೆಯಲ್ಲಿ ಹೆಚ್ಚು ಕಡಿಮೆ ಅಗತ್ಯವೆನಿಸಿದ ಎಲ್ಲದಕ್ಕೂ ಚಿತ್ರ, ಟಿಪ್ಪಣಿ, ವೈಜ್ಞಾನಿಕ-ಭೌಗೋಳಿಕವಿಶ್ಲೇಷಣೆ, ತಾಂತ್ರಿಕವಿವರಣೆ, ಗಣಿತಪ್ರಕ್ರಿಯೆಗಳನ್ನು ಒಳಗೊಂಡ ವಿಶೇಷವಿವರಣೆ ಮೊದಲಾದವುಗಳನ್ನು ಯಥಾಮತಿ ಸೇರಿಸಲಾಗಿದೆ. ಅಲ್ಲದೆ, ಅನುಬಂಧದಲ್ಲಿ ಈ ಗ್ರಂಥದಲ್ಲಿ ಹೇಳಿದ ವೃಕ್ಷಾದಿಗಳ ಪರಿಚಯ, ಸಂಖ್ಯೆಗಳ ಸಂಜ್ಞಾಪದಕೋಶ, ಗೃಹನಿರ್ಮಾಣಕ್ಕೆ ಸಂಬಂಧಿಸಿದ ಗಣಿತ ಪ್ರಕ್ರಿಯೆಯ ಮಾದರಿ ಮತ್ತು ಪ್ರಮುಖ ಯೋನಿ ಮೊದಲಾದವುಗಳನ್ನು ಅಳವಡಿಸಲಾಗಿದೆ. ಇಂತಹ ವಿಸ್ತೃತ ವಿವರಣೆಯಿರುವ ಮನುಷ್ಯಾಲಯಚಂದ್ರಿಕೆಯು ಕನ್ನಡದಲ್ಲಿ ಪ್ರಪ್ರಥಮವಾಗಿ ಬೆಳಕಿಗೆ ಬಂದಿದೆಯೆಂದರೆ ಕಿಂಚಿತ್ತಾದರೂ ತಪ್ಪಾಗದು ಎಂದು ನನ್ನ ಭಾವನೆ. ಆದ ಕಾರಣ ಈ ಗ್ರಂಥ ಕನ್ನಡಕ್ಕೆ ಬೆಲೆಯುಳ್ಳ ಕೊಡುಗೆಯಾಗಬಹುದು ಅನ್ನಿಸುತ್ತದೆ. ಆದರೂ ಇದರಲ್ಲಿ ಕೊಟ್ಟ ವಿವರಣೆ ವಾಸ್ತುವಿಷಯ ನಿರೂಪಣೆಯಲ್ಲಿ ಆಮೂಲಾಗ್ರವಾಗಿದೆಯೆಂದು ಹೇಳಲು ಸಾಧ್ಯವಿಲ್ಲ. ವಾಸ್ತು ವಿಶ್ಲೇಷಣೆ ಆ ಕುರಿತು ಹಲವಾರು ದೃಷ್ಟಿಕೋನಗಳಿಂದ ವಿವರಿಸಬೇಕಾದ ವಿಷಯ ಹಾಗೂ ಮೂಲಲೇಖಕರ ಆಶಯದ ಸ್ಪಷ್ಟೀಕರಣಕ್ಕೆ ಇನ್ನು ಕೂಡ ಬಹಳಷ್ಟು ಅವಕಾಶವಿದೆ. ಆ ನಿಟ್ಟಿನಲ್ಲಿ ಇದೊಂದು ಮಾರ್ಗಸೂಚಿ ಅಥವಾ ಮೊದಲ ಹಜ್ಜೆ ಮಾತ್ರ ಎಂದೇ ನನ್ನ ಅನಿಸಿಕೆ.

ಗ್ರಂಥ ಸಂಪಾದನ

ಶ್ರೀ ಟಿ. ಗಣಪತಿ ಶಾಸ್ತ್ರಿಯವರು ಸಂಪಾದಿಸಿದ ಮನುಷ್ಯಾಲಯಚಂದ್ರಿಕಾದ ಪ್ರತಿಯನ್ನು (Trivendrum Sanskrit Series, Govt Press, Trivendrum) ಮುಖ್ಯ ಆಧಾರವಾಗಿ ತೆಗೆದುಕೊಂಡಿರುತ್ತೇನೆ. ಅಲ್ಲದೆ ಕಾಣಿಪ್ಪಯ್ಯೂರು ಶ್ರೀ ದಾಮೋದರನ್ ನಂಬೂದಿರೀಪ್ಪಾಡ್‌ರವರು ಸಂಪಾದಿಸಿದ ಪ್ರತಿಯನ್ನೂ (ಪಂಚಾಂಗಂ ಪುಸ್ತಕಶಾಲಾ, ಕುನ್ನಂಕುಳಂ, ಮುದ್ರಣ -1929) ಶ್ರೀ ನೀಲಕಂಠ ಆಚಾರಿಯವರು ಸಂಪಾದಿಸಿದ ಪ್ರತಿಯನ್ನೂ ಇಲ್ಲಿ ಅವಲೋಕಿಸಿರುತ್ತೇನೆ. ಕೆಲವು ಕಡೆ ಪಾಠಾಂತರ ಮೊದಲಾದವುಗಳು ಇರುವಲ್ಲಿ ನನಗೆ ಸೂಕ್ತವೆಂದು ಕಂಡು ಬಂದುದನ್ನು ಸ್ವೀಕರಿಸಿಕೊಂಡಿರುತ್ತೇನೆ. ಹಿರಿಯರಾದ ಅವರೆಲ್ಲರಿಗೆ ಮನಸಾ ವಂದನೆಗಳು.

ಗ್ರಂಥ ಕರ್ತೃವಿನ ಕುರಿತು :-

ಮನುಷ್ಯಾಲಯಚಂದ್ರಿಕೆಯ ಗ್ರಂಥದ ಮೂಲಕರ್ತೃ ತಿರುಮಂಗಲದ ನೀಲಕಂಠನ್ ಎಂಬವರು, ಇವರೇ 'ಮಾತಂಗಲೀಲಾ' ಎಂಬ ಹಸ್ತಿಶಾಸ್ತ್ರದ ಗ್ರಂಥರಚಕರೂ ಆಗಿದ್ದಾರೆ, ವಡಕ್ಕುಂಕೂರ್ ಶ್ರೀ ರಾಜ ರಾಜವರ್ಮಾ ರಾಜಾರವರು ಬರೆದ "ಕೇರಳೀಯ ಸಂಸ್ಕೃತ ಸಾಹಿತ್ಯ ಚರಿತ್ರಂ" ಎಂಬ ಗ್ರಂಥದಲ್ಲಿ "ಇತಿ ನೀಲ ಕಂಠರಚಿತ ಮಾತಂಗಲೀಲಾಸಮಾಪ್ತಾ" ಎಂದು ಮಾತಂಗಲೀಲಾಗ್ರಂಥದ ಭಾಗವನ್ನು ಉದ್ಧರಿಸಿರುವುದರಿಂದ ಗ್ರಂಥವನ್ನು ನೀಲಕಂಠನೆಂಬವರೇ ಬರೆದರೆಂದು ತಿಳಿದು ಬರುತ್ತದೆ. ಶ್ರೀ ಸುರೇಶಚಂದ್ರಬ್ಯಾನರ್ಜಿ ಎಂಬವರು ಬರೆದ "A Companion to Sanskrit Literature" ಎಂಬ ಗ್ರಂಥದಲ್ಲಿ "One Neelakantha was the author of Mathangaleela, a work on elephant lore" ಎಂದಿರುತ್ತಾರೆ. ಈ ಉದ್ಧರಣಗಳ ಪ್ರಕಾರ ಮಾತಂಗಲೀಲಾ ಗ್ರಂಥವನ್ನು ರಚಿಸಿದವರು ನೀಲಕಂಠನ್ ಎಂಬವರೆಂದು ಸಿದ್ಧವಾಗುತ್ತದೆ. ಮಾತಂಗಲೀಲಾ ಗ್ರಂಥವನ್ನು ಬರೆದವರೇ ಮನುಷ್ಯಾಲಯ ಚಂದ್ರಿಕಾ ಎಂಬ ಗ್ರಂಥವನ್ನೂ ಬರೆದಿರಬೇಕೆಂಬುದಕ್ಕೆ ಆಧಾರಸಿಗುತ್ತದೆ. ಮಾತಂಗಲೀಲೆಯಲ್ಲಿ "ಮಾತಂಗಲೀಲಾಂ ರಚಯಾಮಿ ತಾವತ್" ಎಂದು ಅದರ ಕರ್ತೃವೇ ಹೇಳಿಕೊಂಡಿದ್ದಾರೆ. ಅಲ್ಲದೆ ಅದರಲ್ಲಿ "ನೃಸಿಂಹಯಾದವೌ ದೈತ್ಯಸಮೂಹೋಗ್ರಾಟವೀದವೌ, ರಾಜಮಾನೌ ಭಜೇ ರಾಜರಾಜಮಂಗಲವಾಸಿನೌ' ಎಂಬ ಸ್ತುತಿ ಶ್ಲೋಕವಿದೆ. ಅದೇ ರೀತಿ ಮನುಷ್ಯಾಲಯಚಂದ್ರಿಕೆಯಲ್ಲಿ "ನೃಸಿಂಹ-ಯಾದವಾಕಾರಂ ತೇಜೋಽ ದ್ವಿತಯಮದ್ವಯಂ, ರಾಜತೇ ನಿತರಾಂ ರಾಜರಾಜಮಂಗಲಧಾಮನಿ" ಎಂಬ ಪ್ರಾರ್ಥನಾ ಶ್ಲೋಕವಿದೆ, ಈ ರೀತಿ ಎರಡು ಗ್ರಂಥಗಳಲ್ಲಿಯೂ ರಾಜರಾಜಮಂಗಲದ ನೃಸಿಂಹ ಮತ್ತು ಯಾದವ ದೇವರುಗಳನ್ನು ಸ್ತುತಿಸುವ ಶ್ಲೋಕಗಳಿರುವುದರಿಂದ ಆ ಎರಡು ಗ್ರಂಥಗಳ ಕರ್ತೃ ಒಬ್ಬನೇ ಇರಬೇಕೆಂದೂ, ಆ ಎರಡು ಗ್ರಂಥಗಳನ್ನು ನೃಸಿಂಹ-ಯಾದವ ಕ್ಷೇತ್ರವಿರುವ ರಾಜ ರಾಜಮಂಗಲದಲ್ಲಿದ್ದುಕೊಂಡೇ ರಚಿಸಿದರೆಂದೂ ಹೇಳಬಹುದಾಗಿದೆ.

ಮನುಷ್ಯಾಲಯಚಂದ್ರಿಕೆಯಲ್ಲಿ ಗ್ರಂಥ ಕರ್ತೃ ತನ್ನ ಹೆಸರನ್ನು ನೇರವಾಗಿ ಹೇಳದಿದ್ದರೂ ಗಣಪತಿಯ ಸ್ತುತಿಯನ್ನು ಮಾಡುವಾಗ "ಶ್ರೀಮಂಗಲಾಸ್ಪದ ಸದಾಶ್ರಯನೀಲಕಂಠ ಪ್ರೇಮ ಪ್ರಕರ್ಷನಿಲಯಃ "ಎಂಬುದಾಗಿ ಈಶ್ವರನನ್ನು ಹೆಸರಿಸುವ ಮೂಲಕ ತನ್ನ ಹುಟ್ಟೂರಿನ ಮತ್ತು ತನ್ನ ಹೆಸರನ್ನೇ ಸೂಚ್ಯವಾಗಿ ಸೂಚಿಸಿರುತ್ತಾರೆ. ಆದುದರಿಂದ ಗ್ರಂಥಕರ್ತೃ ನೀಲಕಂಠನ್ ಎಂಬವರು ಎಂದು ಹೇಳಬೇಕಾಗುತ್ತದೆ. ಅಲ್ಲದೆ 'ಶ್ರೀ ಮಂಗಲಾಸ್ಪದ' ಎಂದುದರಿಂದ ಗ್ರಂಥಕರ್ತೃವಿನ ಜನ್ಮಸ್ಥಳ ಶ್ರೀಮಂಗಲವೆಂಬ ಸಂಸ್ಕೃತ ಪದದ ಮಲೆಯಾಳ ಭಾಷೆಯ ರೂಪಾಂತರವಾದ ತಿರುಮಂಗಲವಾಗಿದೆ.

ಈ ಎಲ್ಲ ಆಧಾರಗಳಿಂದ ಮನುಷ್ಯಾಲಯ ಚಂದ್ರಿಕೆಯ ಗ್ರಂಥಕರ್ತೃ ರಾಜರಾಜಮಂಗಲ (ರಾಯಿರಿಮಂಗಲ) ಗ್ರಾಮದ ತಿರುಮಂಗಲ ನೀಲಕಂಠನ್ ಎಂಬವರೇ ಆಗಿದ್ದಾರೆಂದು ತೀರ್ಮಾನಿಸಬಹುದಾಗಿದೆ.

ತಿರುಮಂಗಲವೆಂಬುದು ಕೇರಳ ರಾಜ್ಯದ ಮಲಪ್ಪುರಂ ಜಿಲ್ಲೆಯ ತಿರೂರಿನಿಂದ ಸುಮಾರು ಹನ್ನೆರಡು ಕಿಲೋಮೀಟರ್ ದೂರದಲ್ಲಿರುವ ರಾಯಿರಿ ಮಂಗಲವೆಂಬ ಗ್ರಾಮದಲ್ಲಿರುವ ಒಂದು ಸ್ಥಳವೆಂದು ನಾನು ಸರ್ವೇಕ್ಷಣ ಕಾರ್ಯ ನಡೆಸಿದಾಗ ತಿಳಿದು ಬಂತು. ಗ್ರಂಥಕರ್ತೃವು ತನ್ನ ಪ್ರಾರ್ಥನಾಶ್ಲೋಕದಲ್ಲಿ ಸ್ತುತಿಸಿದ ನೃಸಿಂಹ ಮತ್ತು ಯಾದವ (ಶ್ರೀ ಕೃಷ್ಣ) ದೇವರುಗಳ ಎರಡು ಪ್ರತ್ಯೇಕ ಗುಡಿಗಳು ತಿರೂರಿನ ರಾಯಿರಿಮಂಗಲವೆಂಬ ಗ್ರಾಮದಲ್ಲಿವೆ. ಪ್ರಾಚೀನ ಕಾಲದ ರಾಜ ರಾಜಮಂಗಲವೇ ಇಂದು ರಾಯಿರಿ ಮಂಗಲವಾಗಿರಬೇಕೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆ ಗುಡಿಗಳಿರುವ ಸ್ಥಳದಿಂದ ಕೇವಲ ಇನ್ನೂರ ಐವತ್ತು ಮೀಟರ್ ಅಳತೆಯ ದೂರದಲ್ಲಿರುವ ಸ್ಥಳಕ್ಕೆ ತಿರುಮಂಗಲವೆಂಬ ಹೆಸರೆಂದು ಅಲ್ಲಿನ ಸ್ಥಳೀಯರು ಈಗಲೂ ಹೇಳುತ್ತಾರೆ. ತಾನು ಪ್ರಥಮವಾಗಿ ಸ್ತುತಿಸಿದ ದೇವರುಗಳ ಕ್ಷೇತ್ರ ಗ್ರಂಥಕರ್ತೃವಿನ ವಾಸಸ್ಥಳದ ಕಣ್ಣಳತೆಯ ಅತಿಸಮೀಪದಲ್ಲಿ ಇದ್ದುದರಿಂದ ಗ್ರಂಥಕರ್ತೃ ನೀಲಕಂಠನ್ ಎಂಬವರು ಸಾಧಾರಣ ನಾನ್ನೂರು ವರ್ಷಗಳ ಹಿಂದೆ ವಾಸಿಸುತ್ತಿದ್ದ ಸ್ಥಳ ಅದುವೇ ಆಗಿರಬೇಕೆಂದು ಹೇಳಬೇಕಾಗುತ್ತದೆ. ಇಂದು ನಾವು ಅಲ್ಲಿ ಹೋಗಿ ನೋಡಿದರೆ ತೆಂಗಿನ ತೋಟದ ಮಧ್ಯದಲ್ಲಿ ಒಂದೆಡೆ ಬನದಂತೆ ಮರಗಿಡಗಳು ಬೆಳೆದುದನ್ನು ಮತ್ತು ಅಲ್ಲಿಗೇ ತಾಗಿ ಇನ್ನೊಂದೆಡೆ ಬಾವಿಯ ಕುರುಹು ಇರುವ ಪುಟ್ಟ ಬನವನ್ನು ನೋಡಬಹುದಾಗಿದೆ. ಬನದಂತೆ ಮರಗಿಡಗಳು ಬೆಳೆದ ಸ್ಥಳವೇ ನೀಲಕಂಠನ್‌ರವರ ಮನೆಯಿದ್ದ ಸ್ಥಳವಾಗಿದೆ. ಆದುದರಿಂದ ಗ್ರಂಥಕರ್ತೃವನ್ನು ನಾವು ತಿರುಮಂಗಲ ನೀಲಕಂಠನ್ ಎಂದು ನಿರ್ಧರಿಸಿ ಹೆಸರಿಸ ಬೇಕಾಗುತ್ತದೆ.

ತಿರೂರಿನ ತೃಪ್ರಂಗೋಡಿನ ಉಮಾಮಹೇಶ್ವರ ಕ್ಷೇತ್ರದ ಸಮೀಪದಲ್ಲಿಯೂ ತಿರುಮಂಗಲ ವೆಂಬ ಸ್ಥಳವಿದೆ. ಆದರೆ ಅದು ಕಾಲಾಂತರದಲ್ಲಿ ತಿರುಮಂಗಲ ನೀಲಕಂಠನ್‌ರವರ ಸಂತತಿಯವರು ರಾಯಿರಿಮಂಗಲದ ತಿರುಮಂಗಲದಿಂದ ಬಂದು ನೆಲೆಸಿ ತಮ್ಮ ಮೂಲದ ಊರಿನ ಹೆಸರನ್ನು ಇಟ್ಟುಕೊಂಡುದಾಗಿರಬೇಕು. ತನ್ನ ವಾಸಸ್ಥಳದ ಅತಿ ಸಮೀಪದಲ್ಲಿರುವ ದೇವರನ್ನು ಯಾವನೇ ಲೇಖಕನು ಪ್ರಥಮವಾಗಿ ಸ್ಮರಿಸಿಯಾನೇ ಹೊರತು ಹತ್ತು, ಹನ್ನೆರಡು ಕಿಲೋಮೀಟರ್ ದೂರದಲ್ಲಿರುವ ದೇವರನ್ನು ಸ್ಮರಿಸಲಾರನು. ಲೇಖಕರು ತೃಪ್ರಂಗೋಡಿನ ತಿರುಮಂಗಲದವರೇ ಆಗಿದ್ದರೆ ಅಲ್ಲಿರುವ ಉಮಾಮಹೇಶ್ವರನನ್ನು ಮೊದಲಾಗಿ ಸ್ಮರಿಸಬೇಕಿತ್ತು. ದೇವಸ್ಥಾನಗಳ ಗಾತ್ರ-ವೈಭವಗಳನ್ನು ಗಮನಿಸಿದರೂ ರಾಯಿರಿಮಂಗಲದ ಗುಡಿಗಳ ರೂಪದಲ್ಲಿರುವ ದೇವಾಲಯಗಳಿಗಿಂತ ತೃಪ್ರಂಗೋಡಿನ ದೇವಾಲಯವೇ ಉತ್ತಮ ಮಟ್ಟದಲ್ಲಿದೆ, ಹೀಗಿದ್ದರೂ ಹತ್ತಿರದ ಉಮಾಮಹೇಶ್ವರನಿಗೆ ಎರಡನೆಯ ಸ್ಥಾನವನ್ನು ಕೊಟ್ಟು ರಾಯಿರಿಮಂಗಲದ ನೃಸಿಂಹ-ಯಾದವರನ್ನು ತನ್ನ ಎರಡೂ ಗ್ರಂಥಗಳಲ್ಲಿ ಮೊತ್ತಮೊದಲಿಗೆ ಸ್ಮರಿಸಿದ ಕಾರಣ ಮನುಷ್ಯಾಲಯಚಂದ್ರಿಕೆಯನ್ನು ರಚಿಸಿದ ನೀಲಕಂಠನ್‌ರವರ ಊರು ರಾಯಿರಿಮಂಗಲದ ನೃಸಿಂಹ-ಯಾದವ ಕ್ಷೇತ್ರದ ಸಮೀಪದಲ್ಲಿರುವ ತಿರುಮಂಗಲವೇ ಆಗಿರಬೇಕು ಎಂಬುದರಲ್ಲಿ ಸಂಶಯವಿಲ್ಲ.

ತಿರುಮಂಗಲದ ನೀಲಕಂಠನ್ ಎಂಬವರು ನಂಬೀಶನ್ ಮನೆತನದವರೇ? ಅಥವಾ ಮೂಸ್ಸದ್ ಕುಟುಂಬದವರೇ ಎಂಬ ಸಂದೇಹವಿದೆ. ಗ್ರಂಥಕರ್ತೃ ಉಲ್ಲೇಖಿಸಿದ ನೃಸಿಂಹ ಮತ್ತು ಯಾದವ ದೇವಸ್ಥಾನಗಳ ಆಡಳಿತವನ್ನು ನಡೆಸುವವರು ಇಂದಿನ ದಿನಗಳಲ್ಲಿ ನಂಬೀಶನ್ ಕುಟುಂಬಕ್ಕೆ ಸೇರಿದವರು.

ಆದರೆ ಈಗ ಆಡಳಿತ ನಡೆಸುತ್ತಿರುವ ಈ ನಂಬೀಶನ್ ಮನೆತನದವರು ಅಲ್ಲಿನ ಮೂಲನಿವಾಸಿಗಳಲ್ಲ. ಅವರು ಹೊರಗಿನಿಂದ ಬಂದು ಅಲ್ಲಿ ನೆಲೆಸಿದವರೆಂದು ಅವರೇ ಹೇಳಿಕೊಳ್ಳುತ್ತಾರೆ. ತೃಪ್ರಂಗೋಡಿನ ಆಸುಪಾಸಿನಲ್ಲಿ ಹಲವಾರು ಮೂಸ್ಸದ್ ಕುಟುಂಬದವರ ಮನೆಗಳಿವೆ. ಅವುಗಳಲ್ಲಿ ಒಂದು ಮನೆಯವರು ತಮ್ಮ ಮನೆಗೆ ತಿರುಮಂಗಲ ಎಂದು ಹೆಸರನ್ನು ಇಟ್ಟುಕೊಂಡಿರುತ್ತಾರೆ. ಪ್ರಾಯಶಃ ಮುನ್ನೂರು ನಾನ್ನೂರು ವರ್ಷಗಳ ಕಾಲಾವಧಿಯಲ್ಲಿ ಈ ಕುಟುಂಬದ ಹಿರಿಯರು ಅರ್ಥಾತ್ ಗ್ರಂಥಕರ್ತೃವಿನ ಪೀಳಿಗೆಯವರು ರಾಯಿರಿಮಂಗಲದ ತಿರುಮಂಗಲವನ್ನು ಬಿಟ್ಟು ತೃಪ್ರಂಗೋಡಿಗೆ ಬಂದು ನೆಲೆಸಿರಬೇಕು. ಬೇರೆ ಊರಿನಲ್ಲಿ ಹೋಗಿ ನೆಲೆಸಿದರೂ ತಮ್ಮ ಹಿರಿಯರ ಮೂಲಸ್ಥಳದ ಹೆಸರನ್ನು ಹೋದಲ್ಲಿಯೂ ಇಟ್ಟುಕೊಳ್ಳುವುದು ಸರ್ವೇಸಾಮಾನ್ಯ. ಇದನ್ನು ಪರಿಶೀಲಿಸುವಾಗ ಗ್ರಂಥಕರ್ತೃ ನಂಬೀಶನ್ ಮನೆತನದವರಾಗಿರದೆ ಮೂಸ್ಸದ್ ಮನೆತನದವರಾಗಿರಬೇಕೆಂದು ಹೇಳಬೇಕಾಗುತ್ತದೆ.

ಗ್ರಂಥ ಕರ್ತೃವಿನ ಕಾಲ

ತಿರುಮಂಗಲದ ನೀಲಕಂಠನ್‌ರವರು ಸಾಧಾರಣ ಹದಿನಾರನೇ ಶತಮಾನದಲ್ಲಿ ಇದ್ದಿರಬೇಕು. ಅವರು ತನ್ನ ಮನುಷ್ಯಾಲಯ ಚಂದ್ರಿಕೆಯಲ್ಲಿ ಹದಿನೈದನೇ ಶತಮಾನದಲ್ಲಿ (1426) ರಚಿತವಾದ ತಂತ್ರ ಸಮುಚ್ಚಯವನ್ನು ಉಲ್ಲೇಖಿಸುತ್ತಾರೆ. "ತಂತ್ರ ಸಮುಚ್ಚಯೋಕ್ತಮನುಸೃತ್ಯೈವಾತ್ರ ಸಂಕ್ಷಿಪ್ಯತೇ" ಎಂದು ಅದರಲ್ಲಿ ಹೇಳಿದುದರಿಂದ ತಂತ್ರಸಮುಚ್ಚಯದ ರಚನಾಕಾಲದ ಅನಂತರವೇ ಮನುಷ್ಯಾಲಯಚಂದ್ರಿಕೆಯ ಕರ್ತೃ ನೀಲಕಂಠನ್ ಇದ್ದಿರಬೇಕು ಎಂಬುದು ನಿಸ್ಸಂಶಯ. ಹಿಂದಿನ ಕಾಲದಲ್ಲಿ ಮುದ್ರಣ ಸೌಲಭ್ಯಗಳು ಇಲ್ಲದಿದ್ದುದರಿಂದ ಓಲೆ ಗ್ರಂಥಗಳ ಪ್ರತಿಗಳೇ ಮೂಲಾಧಾರವಾದ ಕಾರಣ ಒಂದು ಗ್ರಂಥ ರಚಿತವಾದ ಮೇಲೆ ಅಂಥದೊಂದು ಗ್ರಂಥವಿದೆಯೆಂದು ಇತರರಿಗೆ ಗೊತ್ತಾಗಬೇಕಾದರೆ ಹಲವಾರು ವರ್ಷಗಳ ಅವಧಿ ಬೇಕಾಗುತ್ತದೆ. ಈ ದೃಷ್ಟಿಯಿಂದ ನೀಲಕಂಠನ್‌ರವರ ಕಾಲ ಹದಿನಾರನೇ ಶತಮಾನಕ್ಕೆ ಬರುತ್ತದೆ ಶ್ರೀಮಾನ್ ನಾರಾಯಣ ಪಣಿಕ್ಕರ್‌ರವರು ತಮ್ಮ ಕೇರಳ ಭಾಷಾ ಚರಿತ್ರೆಯಲ್ಲಿ ತುಂಜತ್ತ್ ಎಳುತ್ತಚ್ಚನ್‌ರವರ ಗುರುಗಳಲ್ಲಿ ಒಬ್ಬರು ನೀಲಕಂಠನ್ ಆಗಿದ್ದರೆಂದು ಅವರ ಹರಿನಾಮಕೀರ್ತನೆಯಿಂದ ಗ್ರಹಿಸಬಹುದಾಗಿದೆ ಎಂದೂ, ಈ ನೀಲಕಂಠನ್‌ರವರು ಪೂಂತಾನಂ ನಂಬೂದಿರಿಯವರ ಗುರುವಾದ ನೀಲಕಂಠನ್‌ರು ಒಬ್ಬರೇ ಆಗಿರಬೇಕು" ಎಂದೂ ಉಲ್ಲೇಖಿಸುತ್ತಾರೆ. ಸಂಸ್ಕೃತ ನಾರಾಯಣೀಯಂ ಕಾವ್ಯವನ್ನು ಬರೆದ ಮೇಲ್ಪುತ್ತೂರು ನಾರಾಯಣ ಭಟ್ಟತಿರಿಯವರು ಕ್ರಿ. ಶ.1560ರಿಂದ 1646ರವರೆಗೂ ಜ್ಞಾನಪಾನಂ, ಸಂತಾನ ಗೋಪಾಲಂ ಮೊದಲಾದವುಗಳನ್ನು ರಚಿಸಿದ ಪೂಂತಾನಂ ನಂಬೂದಿರಿಯವರು ಕ್ರಿ. ಶ. 1547ರಿಂದ 1640ರ ವರೆಗೂ ಬದುಕಿ ಬಾಳಿದ್ದವರು. ತುಂಜತ್ತ್ ಎಳುತ್ತಚ್ಚನ್‌ರವರ ಮತ್ತು ಪೂಂತಾನಂ ನಂಬೂದಿರಿ ಎಂಬವರಿಬ್ಬರ ಗುರುಗಳು ನೀಲಕಂಠನ್ ಎಂಬವರಾಗಿದ್ದರೆಂದು ಉಲ್ಲೇಖವಿರುವುದರಿಂದ ತುಂಜತ್ತ್ ಎಳುತ್ತಚ್ಚನ್, ಪೂಂತಾನಂ ನಂಬೂದಿರಿ ಮತ್ತು ಮೇಲ್ಪುತ್ತೂರು ನಾರಾಯಣ ಭಟ್ಟತಿರಿ ಈ ಮೂವರೂ ಸಮ ಕಾಲೀನರೆಂದು ನಿರ್ಧರಿಸಬಹುದು. ಏನಿದ್ದರೂ ತಿರುಮಂಗಲದ ನೀಲಕಂಠನ್‌ರವರು ಪೂಂತಾನಂ ನಂಬೂದಿರಿಯವರ ಮತ್ತು ಎಳುತ್ತಚ್ಚನ್‌ರವರ ಗುರುಗಳಾಗಿದ್ದುದರಿಂದ ಶಿಷ್ಯರಿಗಿಂತ ಗುರುಗಳು 25-30 ವರ್ಷಗಳಷ್ಟು ಹಿರಿಯವರಾಗಿದ್ದಿರಬೇಕು. ಅಂದರೆ ನಮ್ಮ ಗ್ರಂಥಕರ್ತೃ ತಿರುಮಂಗಲ ನೀಲಕಂಠನ್ ಹದಿನಾರನೇ ಶತಮಾನದಲ್ಲಿ ಇದ್ದಿರಬೇಕೆಂದು ನಿರ್ಧರಿಸಬಹುದು.

ತಿರುಮಂಗಲ ನೀಲಕಂಠನ್‌ರವರು ಪ್ರಕಾಂಡ ಪಂಡಿತರೆಂಬುದರಲ್ಲಿ ಎರಡು ಮಾತೇ ಇಲ್ಲ. ಅವರು

ಸಂಸ್ಕೃತ ವಿದ್ವಾಂಸರೂ ಆಗಿದ್ದರು. ಶಿಲ್ಪ ಶಾಸ್ತ್ರದ ಕೆಲವು ಶಾಸ್ತ್ರಗಳ ಕುರಿತು ಇದಮಿತ್ಥಂ ಎಂದು ಹೇಳುವಷ್ಟು ಶಾಸ್ತ್ರಪರಿಣತಿಯನ್ನು ಪಡೆದವರೂ ಆಗಿದ್ದರು. ಅಲ್ಲದೆ ಆ ಶಾಸ್ತ್ರವಿಷಯವನ್ನು ಸಂಸ್ಕೃತ ಭಾಷೆಯಲ್ಲಿ ಛಂದೋಬದ್ಧಶೈಲಿಯಲ್ಲಿ ಸೂತ್ರರೂಪದಲ್ಲಿ ಹೇಳಬಲ್ಲ ವಿದ್ವತ್ಪ್ರತಿಭೆಯುಳ್ಳವರೂ ಆಗಿದ್ದರು. ಇದಕ್ಕೆ ಅವರ ಕೃತಿ ಮನುಷ್ಯಾಲಯಚಂದ್ರಿಕಾ ಮತ್ತು ಮಾತಂಗಲೀಲಾ ಎಂಬ ಗ್ರಂಥಗಳೇ ಸಾಕ್ಷಿ. ಮನುಷ್ಯಾಲಯಚಂದ್ರಿಕಾ ಎಂಬಗೃಹವಾಸ್ತುಶಿಲ್ಪದ ವಿವರಣೆಯನ್ನು ಒಳಗೊಂಡ ಗ್ರಂಥವನ್ನು ರಚಿಸುವ ಮೊದಲು ಮಯಮತಾದಿ ಹಲವಾರು ವಾಸ್ತುಶಿಲ್ಪಶಾಸ್ತ್ರಗ್ರಂಥಗಳನ್ನು ಓದಿ, ಮಥಿಸಿ ಅವುಗಳ ಸಾರಸಂಗ್ರಹವನ್ನು ಮಾಡಿರುತ್ತಾರೆ. ಮಾತಂಗಲೀಲೆಯು ಗಜಾಯುರ್ವೇದವನ್ನು ವಿವರಿಸುವಂಥಾದ್ದು. ಆ ವಿಷಯದ ಕುರಿತು ಶಾಸ್ತ್ರ ರೂಪದಲ್ಲಿ ಹೇಳುವ ಕಾರ್ಯ ಬಹಳ ಪರಿಶ್ರಮಯುಕ್ತವಾದುದಾಗಿದೆ. ಆದರೂ ಅದನ್ನು ಲಾಲಿತ್ಯಪೂರ್ಣಶೈಲಿಯಲ್ಲಿ ನಿರೂಪಿಸಿದ್ದು ಅವರ ಪಾಂಡಿತ್ಯ ಪ್ರಖರತೆಗೆ ಹಿಡಿದ ಕೈಗನ್ನಡಿಯಾಗಿದೆ ಇದಲ್ಲದೆ ಶ್ರೀಯುತ ಪಣಿಕ್ಕರ್‌ರವರು ತೃಪ್ಪೂಣಿತ್ತುರ ಸಂತಾನಗೋಪಾಲದೇವಾಲಯದ ಒಳಗಿನ ಗೋಪುರದ ಗರ್ಭಗುಡಿಗೆ ಅಭಿಮುಖವಾಗಿ ಕೆತ್ತಿರುವ ಒಂದು ಸಂಸ್ಕೃತ ಶ್ಲೋಕವನ್ನು ಉದ್ಧರಿಸಿ ಅದರಲ್ಲಿ "ಪೂರ್ಣತ್ರಯೀ ಮಂಗಲಕ್ಷೇತ್ರಂ ಕೃಷ್ಣ ಶಿಲಾನಿಬಂಧಮಕರೋತ್ ಶ್ರೀ ನೀಲಕಂಠಃ ಕೃತೀ" ಎಂದಿರುವುದರಿಂದ ನೀಲಕಂಠನ್‌ರವರು ಒಬ್ಬ ಸಂಸ್ಕೃತ ಕವಿಯಾಗಿದ್ದರೆಂದೂ ಮೇಲಾಗಿ ದೇವಾಲಯ ಶಿಲ್ಪಿಗಳೂ ಆಗಿದ್ದರೆಂಬ ತೀರ್ಮಾನಕ್ಕೆ ಬರುತ್ತಾರೆ.

ಮನುಷ್ಯಾಲಯ ಚಂದ್ರಿಕೆಯ ನಾಲ್ಕನೆಯ ಶ್ಲೋಕದಲ್ಲಿ ಕರ್ತೃವೇ

.... ಕೋಽ
ಪ್ಯುದ್ಯೋತಮಾನಗುರುವರ್ಯಕೃಪಾಭಿಯೋಗಾತ್
ವಿದ್ಯಾಪರಿಶ್ರಮಪರೋ ಬಹುಧಾತ್ಮಶುದ್ಧ್ಯೈ
ಮುದ್ಯೋಗವಾನ್ ಭವತಿ ಬಾಲವಿಬೋಧನೇ ಚ

ಎಂದು ಹೇಳಿಕೊಂಡಿರುವುದರಿಂದ ಅವರು ಸಮರ್ಥ ಗುರುವಿನ ಮಾರ್ಗದರ್ಶನವನ್ನು ಪಡೆದು ಶಾಸ್ತ್ರ ವಿದ್ಯಾಪಾರಂಗತರಾಗಿದ್ದರೆಂದೂ ತಾನು ಅಧ್ಯಯನ ಮಾಡಿದುದನ್ನು ಶಿಷ್ಯರಿಗೆ ಬೋಧಿಸುವ ಗುರುವಾಗಿದ್ದರೆಂದೂ ತಿಳಿದು ಬರುತ್ತದೆ.

ಗ್ರಂಥಗಳು

ಗೃಹವಾಸ್ತು ಶಿಲ್ಪದ ಮನುಷ್ಯಾಲಯ ಚಂದ್ರಿಕಾ ಮತ್ತು ಗಜಾಯುರ್ವೇದಕ್ಕೆ ಸಂಬಂಧಿಸಿದ ಮಾತಂಗಲೀಲಾ ಎಂಬ ಎರಡು ಶಾಸ್ತ್ರ ಗ್ರಂಥಗಳನ್ನು ತಿರುಮಂಗಲ ನೀಲಕಂಠನ್‌ರವರೇ ರಚಿಸಿದರೆಂಬುದನ್ನು ನಾವು ಈಗಾಗಲೇ ನೋಡಿರುತ್ತೇವೆ. ಈ ಎರಡು ಗ್ರಂಥಗಳಲ್ಲದೆ ಮಮ್ಮಟನ ಕಾವ್ಯಪ್ರಕಾಶವನ್ನು ಆಧರಿಸಿದ ಕಾವ್ಯೋಲ್ಲಾಸ ಮತ್ತು ಕೇರಳದಲ್ಲಿ ಪ್ರಸಿದ್ಧವಾಗಿರುವ ಸಿಡಿಮದ್ದಿನ ಕುರಿತಾದ ವೆಡಿಕಂಭವಿಧಿ ಎಂಬ ಗ್ರಂಥಗಳನ್ನೂ ರಚಿಸಿರುವರೆಂದು ಕೇರಳ ಸಾಹಿತ್ಯ ಚರಿತ್ರೆಯ II ಮತ್ತು III ಸಂಪುಟಗಳ ಇಪ್ಪತ್ತೇಳನೆಯ ಅಧ್ಯಾಯದಲ್ಲಿ ಉಲ್ಲೇಖವಿದೆ. ಅದರ ಪ್ರಕಾರ ತಿರುಮಂಗಲ ನೀಲಕಂಠನ್‌ರವರು ಮನುಷ್ಯಾಲಯ ಚಂದ್ರಿಕಾ, ಮಾತಂಗಲೀಲಾ, ಕಾವ್ಯೋಲ್ಲಾಸ ಮತ್ತು ವೆಡಿಕಂಭವಿಧಿ ಎಂಬ ನಾಲ್ಕು ಗ್ರಂಥಗಳನ್ನು ರಚಿಸಿದರೆಂದು ಗೊತ್ತಾಗುತ್ತದೆ.

ಕೃತಜ್ಞತೆಗಳು

ಕನ್ನಡ ಭಾಷೆಗೆ ಭಾಷಾಂತರಗೊಂಡ ಈ ಮನುಷ್ಯಾಲಯ ಚಂದ್ರಿಕೆಯನ್ನು ರಚಿಸುವ ವಿಷಯದಲ್ಲಿ ನನಗೆ ಹಲವಾರು ಮಂದಿ ನೆರವಾಗಿದ್ದಾರೆ. ಅವರನ್ನು ನಾನು ಮರೆಯುವಂತೆಯೇ ಇಲ್ಲ. ನಾನು ಕೇರಳ ರಾಜ್ಯದಲ್ಲಿ ಕ್ಷೇತ್ರಕಾರ್ಯ ನಡೆಸಿದಾಗ ತ್ರಿಕ್ಕಂಡಿಯೂರಿನ ಶ್ರೀ ಟಿ. ಪರಮೇಶ್ವರನ್ ಮೂಸ್ಸದ್, ಶ್ರೀ ನಾರಾಯಣನ್ ಮೂಸ್ಸದ್, ತೃಪ್ರಂಗೋಡಿನ ಶ್ರೀ ರಾಧಾಕೃಷ್ಣನ್ ಮೂಸ್ಸದ್, ರಾಯಿರಿಮಂಗಲದ ವಡಶೇರಿ ಪುರುಷೋತ್ತಮನ್ ನಂಬೀಶನ್ ಮೊದಲಾದವರು ಮಾಹಿತಿಯನ್ನು ಒದಗಿಸಿರುತ್ತಾರೆ. ಅವರೆಲ್ಲರಿಗೆ ನಾನು ಕೃತಜ್ಞನಾಗಿದ್ದೇನೆ. ಕೇರಳ ಪ್ರವಾಸದಲ್ಲಿ ನನ್ನ ಜತೆಗೆ ಇದ್ದುದು ಮಾತ್ರವಲ್ಲದೆ, ಈ ಗ್ರಂಥದ ಹಸ್ತಪ್ರತಿಯನ್ನು ಸಿದ್ಧಗೊಳಿಸಲು ನೆರವಾದ ನನ್ನ ತಮ್ಮನ ಮಗ ಚಿ. ರವಿರಾಮನ ಸಹಕಾರವನ್ನು ನಾನು ನೆನೆಯುತ್ತೇನೆ. ವೃಕ್ಷಾದಿಗಳ ಪರಿಚಯದ ವಿಷಯದಲ್ಲಿ ನೆರವು ನೀಡಿದ ನನ್ನ ಅಣ್ಣನ ಮಗ ಡಾ. ತಿರುಮಲೇಶ್ವರ ಭಟ್, ಶಾಂತಿಮೂಲೆ ಇವನ ಸಹಕಾರಕ್ಕೆ ಉಪಕೃತನಾಗಿದ್ದೇನೆ. ಈ ನನ್ನ ಗ್ರಂಥಕ್ಕೆ ಮುನ್ನುಡಿಯನ್ನು ಬರೆದು ಅನುಗ್ರಹಿಸಬೇಕೆಂದು ಪ್ರಾರ್ಥಿಸಿಕೊಂಡಾಗ ಬಹಳ ಸಂತೋಷ ಮತ್ತು ಆದರದಿಂದ ಒಪ್ಪಿಕೊಂಡು ಗ್ರಂಥದ ಹಿರಿಮೆ-ಗರಿಮೆಗಳನ್ನು ಹಿಗ್ಗಿಸುವಂತಹ ಅಧ್ಯಯನ ಶೀಲವೂ, ಬೋಧಪ್ರದವೂ ಆದ ಶ್ರೀಮುಖವನ್ನು ಆಶೀರ್ವಚನ-ಫಲ-ಮಂತ್ರಾಕ್ಷತೆಗಳೊಂದಿಗೆ ಅನುಗ್ರಹಿಸಿದ ನಮ್ಮ ಗುರುಪೀಠದ ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಮದ್ರಾಘವೇಶ್ವರ ಭಾರತೀ ಮಹಾಸ್ವಾಮಿಗಳವರ ಪಾದಪದ್ಮಪರಾಗವನ್ನು ಶಿರಸಾವಹಿಸಿ, ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಅತ್ಯುತ್ತಮವಾದ ಸಲಹೆ ಸೂಚನೆಗಳನ್ನಿತ್ತು ಮೇಲೆತ್ತುತ್ತಿರುವ ಶ್ರೀ ಪೇಜಾವರ ಅಧೋಕ್ಷಜಮಠದ ಪೀಠಾಧಿಪತಿಗಳಾದ ಯತಿವರೇಣ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರ ಅಡಿದಾವರೆಗಳಿಗೆ ಭಕ್ತಿಪೂರ್ವಕ ಪ್ರಣಾಮಗಳು. ಪ್ರಸನ್ನಚಿತ್ತದಿಂದ ಬರಮಾಡಿಕೊಂಡು ಗ್ರಂಥದ ವಿಷಯವನ್ನು ಆಲಿಸಿ, ಗ್ರಂಥ ಬಹಳ ಚೆನ್ನಾಗಿ ಮೂಡಿಬಂದಿದೆ, ಶ್ರೇಯಸ್ಕರವಾದ ಸುತ್ಯಕಾರ್ಯವೆಂದು ಹೇಳಿ ಬೆಳಕಿನ ದೀಪವನ್ನು ನನ್ನ ಮನಃ ಪಟಲದಲ್ಲಿ ಬೆಳಗಿದ ಶ್ರೀ ಸುಬ್ರಹ್ಮಣ್ಯ ಮಠಾಧೀಶರಾದ ಶ್ರೀ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದರನ್ನು ತಲೆಬಾಗಿ ವಂದಿಸುತ್ತೇನೆ. ಈ ಗ್ರಂಥದ ಕುರಿತು ಸದಭಿಪ್ರಾಯವನ್ನು ಸೂಚಿಸಿ, ಮೆಚ್ಚುಗೆ ವ್ಯಕ್ತಪಡಿಸಿ, ಪ್ರೋತ್ಸಾಹಿಸಿದ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ರಾಜರ್ಷಿ ಡಾ। ವೀರೇಂದ್ರ ಹೆಗ್ಗಡೆಯವರಿಗೆ ಗೌರವಾದರ ಪೂರ್ವಕ ನಮನಗಳು. ಸಂಸ್ಕೃತ ಮನುಷ್ಯಾಲಯಚಂದ್ರಿಕೆಯ ಕನ್ನಡಾನುವಾದ ಸಿದ್ಧವಾಗಿದೆಯೆಂದು ಗೊತ್ತಾದೊಡನೆಯೇ ಅದರ ಮುದ್ರಣದ ಭಾರವನ್ನು ಹೊತ್ತು ಪ್ರಕಟಿಸಲು ಸಂತೋಷದಿಂದ ಮುಂದೆ ಬಂದ "ವಾಸ್ತುಶಿಲ್ಪಿ-ಜ್ಯೋತಿಷಿ ಮುನಿಯಂಗಳ ಕೃಷ್ಣಭಟ್ಟ ಸಂಸ್ಮರಣ ವೇದಿಕೆ-ಸುಬ್ರಹ್ಮಣ್ಯ ಇದರ ಪದಾಧಿಕಾರಿಗಳೆಲ್ಲರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು. ಅರ್ಥಪೂರ್ಣವೂ, ಕಲಾತ್ಮಕವೂ ಆದ ಮುಖಚಿತ್ರವನ್ನು ಬರೆದುಕೊಟ್ಟ ಮಂಗಳೂರಿನ ಕಲಾವಿದ ಶ್ರೀ ಕೃಷ್ಣ ಕುಮಾರರಿಗೂ ಗ್ರಂಥದ ಹಿಂದಿನ ರಕ್ಷಾಪುಟದಲ್ಲಿ ನನ್ನ ಕುರಿತು ಸದಭಿಪ್ರಾಯವನ್ನು ರೇಖಿಸಿದ ಬೆಳ್ಳಾರೆಯ ಶ್ರೀ ಸದಾಶಿವ ವೇದಪಾಠಶಾಲೆಯ ಅಧ್ಯಕ್ಷರಾದ ಸಹೃದಯಿ ಶ್ರೀ ಪಾಟಾಜೆ ಪಿ. ಎಸ್. ಚಿದಾನಂದ ರಾವ್ ಅವರಿಗೂ, ಗ್ರಂಥದ ಮುದ್ರಣ ಕಾರ್ಯವನ್ನು ಅತ್ಯಂತ ಶ್ರದ್ಧೆಯಿಂದ ನಿರ್ವಹಿಸಿದ ಮಿತ್ರ ಶ್ರೀ ಎಂ. ಬಿ. ಶಶಿಕುಮಾರ್ ಮತ್ತು ಅವರ ಮನೋರಮಾ ಮುದ್ರಣಾಲಯದ ಸಹಾಯಕ ವರ್ಗದವರಿಗೂ ನಾನು ಆಭಾರಿಯಾಗಿದ್ದೇನೆ.

ಸಿದ್ಧಮೂಲೆ　　　　　　　　　　　　　　　　　　ಇತಿ ಶಮ್,

ದಿನಾಂಕ : 18-9-2001　　　　　　　　　ಸಿದ್ಧಮೂಲೆ ಶಂಕರನಾರಾಯಣ ಭಟ್ಟ



ವಾಸ್ತುಶಿಲ್ಪ ಶಾಸ್ತ್ರಜ್ಞ, ಜ್ಯೋತಿಷಿ ಮುನಿಯಂಗಳ ದಿ. ಕೃಷ್ಣ ಭಟ್ಟ ದಂಪತಿಗಳು.

ಮನುಷ್ಯಾಲಯಚಂದ್ರಿಕಾ

ವಿಷಯಾನುಕ್ರಮಣಿಕೆ

ಅಧ್ಯಾಯ ೫ ಗೃಹಾವಯವವಿಧಿಗಳು

ಅಧ್ಯಾಯ ೬ ಶಿಖರದ ನಿಯಮ

ಅಧ್ಯಾಯ ೭ ಕವಾಟ - ಬಾಹ್ಯಗೇಹ - ಕೂಪಾದಿಗಳ ವಿಧಿ

ಅನುಬಂಧ

"ಓಂ ಶ್ರೀ ಮಹಾಗಣಪತಯೇ ನಮಃ"

ಮನುಷ್ಯಾಲಯಚಂದ್ರಿಕಾ

ಪ್ರಥಮೋಽಧ್ಯಾಯಃ

ಮೊದಲನೆಯ ಅಧ್ಯಾಯ - ಭೂಪರೀಕ್ಷೆ

೧. ಮಂಗಲಾಚರಣೆ

ಶ್ಲೋಕ : ನೃಸಿಂಹ - ಯಾದವಾಕಾರಂ ತೇಜೋದ್ವಿತಯಮದ್ವಯಂ
ರಾಜತೇ ನಿತರಾಂ ರಾಜರಾಜಮಂಗಲಧಾಮನಿ ||೧||

ತಾತ್ಪರ್ಯ :

ನೃಸಿಂಹ ಮತ್ತು ಯಾದವ (ಶ್ರೀಕೃಷ್ಣ) ಎಂಬ ಇಬ್ಬರು ದೇವರುಗಳ ಅಭೇದರೂಪದ ಎರಡು ತೇಜಸ್ಸುಗಳು ರಾಜರಾಜಮಂಗಲವೆಂಬ ಕ್ಷೇತ್ರದಲ್ಲಿ ರಾರಾಜಿಸುತ್ತವೆ.

ವಿ.ವಿ. :

ರಾಜರಾಜಮಂಗಲವೆಂಬುದು ಕೇರಳ ರಾಜ್ಯದ ಮಲಪ್ಪುರಂಜಿಲ್ಲೆಯ ತಿರೂರಿನಿಂದ ಸಾಧಾರಣ 12 ಕಿ.ಮೀ. ದೂರದಲ್ಲಿರುವ ಒಂದು ಸ್ಥಳ. ಅದರ ಈಗಿನ ಹೆಸರು ರಾಯಿರಿಮಂಗಲವೆಂದು. ಅದು ಆ ಗ್ರಾಮದ ಹೆಸರೂ ಆಗಿದೆ. ಅಲ್ಲಿ ಪ್ರಾಚೀನ ಕಾಲದ ಶ್ರೀ ನರಸಿಂಹ ಮತ್ತು ಶ್ರೀಕೃಷ್ಣದೇವಾಲಯಗಳು ಅಕ್ಕ ಪಕ್ಕದಲ್ಲಿ ಇವೆ. ದೇವಾಲಯಗಳ ಸುತ್ತಲೂ ಇದ್ದ ಪೌಳಿಗಳ ಕುರುಹು ಮಾತ್ರ ಈಗ ಲಭ್ಯ ಅಲ್ಲದೆ ವಿಗ್ರಹಗಳೂ ತೀರ ಭಗ್ನಾವಸ್ಥೆಯಲ್ಲಿ ಇವೆ. ದೇವಾಲಯಗಳ ಪಶ್ಚಿಮ ಭಾಗದಲ್ಲಿ ದೊಡ್ಡದಾದ ಒಂದು ಕೆರೆಯೂ ಇದೆ. ಈ ದೇವಾಲಗಳು ಈಗ ನಂಬೀಶನ್ ಮನೆತನದವರ ಆಡಳಿತದಲ್ಲಿವೆ. ಈ ದೇವಾಲಯಗಳಲ್ಲಿರುವ ನೃಸಿಂಹ ಮತ್ತು ಶ್ರೀಕೃಷ್ಣರನ್ನು ನೆನೆದು ಲೇಖಕರು ಕಾವ್ಯಾರಂಭವನ್ನು ಮಾಡುತ್ತಾರೆ.

ಶ್ಲೋಕ : ಶ್ರೀಮತ್ಕುಂಡಪುರೇ ವಿರಾಜತಿ ಪರ -
ಕ್ರೋಡೇ ಚ ತೇಜಃ ಪರಮ್
ನಾವಾನಾಮ್ನಿ ಚ ಧಾಮ್ನಿ ಯಚ್ಚ ನಿತರಾಂ
ಮಲ್ಲೀವಿಹಾರಾಲಯೇ
ಅಶ್ವತ್ಥಾಖ್ಯನಿಕೇತನೇಽಪಿ ಚ ಪುರೇ
ಶ್ರೀಕೇರಲಾಧೀಶ್ವರೇ
ಸಂಭೂಯೈತದುರುಪ್ರಕಾಶವಿಷಯೇ
ಚಿತ್ತೇ ಮಮೋಜ್ಜೃಂಭತಾಮ್ ||೨||

ತಾತ್ಪರ್ಯ :

ಕುಂಡಪುರ (ತ್ರಿಕಂಡಿಯೂರು), ಪರಕ್ರೋಡ (ತೃಪ್ರಂಗೋಡು), ನಾವಾ (ತಿರುನವಯ), ಮಲ್ಲೀವಿಹಾರ (ಮುಳ್ಳಪಳ್ಳಿ), ಅಶ್ವತ್ಥಪುರ (ಆಲತ್ತೂರು) ಮತ್ತು ಕೇರಲಾಧೀಶ್ವರ ದೇವಾಲಯಗಳಲ್ಲಿ ಪರಮತೇಜೋಮೂರ್ತಿಗಳಾಗಿ ಕಂಗೊಳಿಸುವ ದೇವರುಗಳು ವಾಸ್ತುಶಿಲ್ಪಶಾಸ್ತ್ರವೆಂಬ ಉತ್ಕೃಷ್ಟವಾದ ಜ್ಞಾನದ ಕುರಿತು ಬರೆಯುವ ಕಾರ್ಯದಲ್ಲಿ ನನ್ನ ಮನಸ್ಸಿನಲ್ಲಿ ಜೃಂಭಿಸುತ್ತಿರಲಿ.

ವಿ.ವಿ. :

ಕುಂಡಪುರ :- ಕುಂಡಪುರದ ಈಗಿನ ಹೆಸರು ತ್ರಿಕಂಡಿಯೂರು ಎಂದು. ಇದು ತಿರೂರು ಪಟ್ಟಣದ ಒಂದು ಕೊನೆಯ ಭಾಗದಲ್ಲಿದೆ. ಇಲ್ಲಿ ಪ್ರಾಚೀನ ಕಾಲದ ಶಿವದೇವಾಲಯವಿದೆ. ದೇವಾಲಯದ ಮುಂಭಾಗದಲ್ಲಿ ವಿಶಾಲವಾದ ಕೆರೆಯಿದ್ದು ದೇವಾಲಯದ ಸುತ್ತಲೂ ಅಷ್ಟ ದಿಕ್ಕುಗಳಲ್ಲಿ ಅಶ್ವತ್ಥವೃಕ್ಷಗಳ ಕಟ್ಟೆಗಳಿವೆ. ಪರಶುರಾಮನು ತಿರುವನ್ನೂರು, ಮನ್ನೂರು ಮತ್ತು ತ್ರಿಕಂಡಿಯೂರು ಈ ಮೂರು ಸ್ಥಳಗಳಲ್ಲಿ ಕ್ರಮವಾಗಿ ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಕಾಲಗಳಲ್ಲಿ ದೇವಸ್ಥಾಪನೆ ಮಾಡಿದನೆಂಬ ಹೇಳಿಕೆಯಿದೆ. ಇಲ್ಲಿನ ದೇವ ವಿಗ್ರಹವು ಆನಂದಮೂರ್ತಿ ಶಿವ ಸ್ವರೂಪದ್ದಾಗಿದೆ.

ಪರಕ್ರೋಡ :- ಪರಕ್ರೋಡದ ಈಗಿನ ಹೆಸರು ತೃಪ್ರಂಗೋಡು ಎಂದು. ತಿರೂರಿನಿಂದ ಆರು ಕಿ.ಮೀ. ದೂರದಲ್ಲಿರುವ ಇದು ಒಂದು ಶೈವಕ್ಷೇತ್ರವಾಗಿದೆ. ಪಶ್ಚಿಮ ಮುಖದ ಈ ದೇವಾಲಯದ ಪ್ರಧಾನ ದೇವತೆ ಉಮಾಮಹೇಶ್ವರ. ದೇವಾಲಯದ ಉತ್ತರ ವಾಯುವ್ಯ ದಿಕ್ಕುಗಳಿಗೆ ಹೊಂದಿ ಇಲ್ಲಿ ಒಂದು ದೇವವಿನಿಯೋಗದ ಕೆರೆಯಿದೆ.

ನಾವಾ :- ನಾವಾ ಎಂಬ ಈ ಕ್ಷೇತ್ರದ ಈಗಿನ ಹೆಸರು ತಿರುನವಯ ಎಂದಾಗಿದೆ. ಇದು ತಿರೂರಿನಿಂದ ಆರು ಕಿ. ಮೀ. ದೂರದಲ್ಲಿರುವ ವಿಷ್ಣುಸಾನ್ನಿಧ್ಯದ ಕ್ಷೇತ್ರ ಈಶಾನ್ಯದಿಂದ ಪೂರ್ವ ದಕ್ಷಿಣಕ್ಕಾಗಿ ಪ್ರದಕ್ಷಿಣಾಕಾರದಲ್ಲಿ ಹರಿಯುತ್ತಿರುವ ಭಾರತಹೊಳೆಯ ದಡದಲ್ಲಿ ಈ ಕ್ಷೇತ್ರ ಮೆರೆಯುತ್ತಿದೆ. ಇಲ್ಲಿನ ಪ್ರಧಾನ ದೇವತೆ ಮುಕುಂದ ಪಕ್ಕದಲ್ಲಿ ಲಕ್ಷ್ಮಿಯ ಗುಡಿಯೂ ಇದೆ.

ಮಲ್ಲೀ ವಿಹಾರ :- ಮಲ್ಲೀ ವಿಹಾರವನ್ನು ಮುಳ್ಳುಪಳ್ಳಿ ಎಂದು ಕರೆಯುವುದು ವಾಡಿಕೆ. ಈ ಸ್ಥಳದ ಪ್ರಾಚೀನ ಕಾಲದ ಹೆಸರು ಮಲ್ಲೀವಿಹಾರವಾಗಿದ್ದು ಅನಂತರ ಮುಳ್ಳು ಪಳ್ಳಿ ಎಂದಾಗಿ ಈಗ ವೇಮನ್ನ ಎಂಬ ರೂಢಿಯ ಹೆಸರಿನಲ್ಲಿದೆ. ಈ ಕ್ಷೇತ್ರವು ತಿರೂರಿನಿಂದ ಸಾಧಾರಣ ನಾಲ್ಕು ಕಿ. ಮೀ. ದೂರದಲ್ಲಿದೆ. ಇಲ್ಲಿನ ದೇವಾಲಯದ ಆರಾಧ್ಯದೇವತೆ ನರಸಿಂಹ.

ಅಶ್ವತ್ಥಪುರ :- ಅಶ್ವತ್ಥಪುರದ ಈಗಿನ ಹೆಸರು ಆಲತ್ತೂರು ಎಂದು. ತಿರೂರಿನಿಂದ ಸಾಧಾರಣ ಏಳು ಕಿ. ಮೀ. ದೂರದಲ್ಲಿ ಈ ಕ್ಷೇತ್ರವಿದೆ. ಆಲತ್ತೂರು ಹನೂಮಾನ್ ದೇವಾಲಯವೆಂದೇ ಇಲ್ಲಿನ ದೇವಾಲಯದ ಪ್ರಸಿದ್ಧಿ. ಇದು ಆಲತ್ತೂರು ಪೇಟೆಯ ಸಂಧಿಸ್ಥಳದಿಂದ ತಿರೂರಿನ ಕಡೆಗೆ ಸುಮಾರು $2\frac{1}{2}$ ಕಿ. ಮೀ. ಉತ್ತರ ಈಶಾನ್ಯ ದಿಕ್ಕಿನಲ್ಲಿದೆ. ಈ ದೇವಾಲಯವಿರುವ ಸ್ಥಳವನ್ನು ಪೊಯಿಲಶ್ಶೇರಿ ಎನ್ನುತ್ತಾರೆ. ಈ ದೇವಾಲಯ ವಿಶೇಷತರವಾದುದು. ಸೀತಾನ್ವೇಷಣೆಗೆ

ಹೊರಟ ಶ್ರೀರಾಮನು ಹನುಮಂತನನ್ನು ಲಂಕೆಗೆ ಕಳುಹಿಸುವಾಗ ಸೀತೆಗೆ ಗುರುತು ಹಿಡಿಯಲು ಉಂಗುರವನ್ನು ಕೊಟ್ಟು ಗೋಪ್ಯ ವಿಷಯವನ್ನು ಹೇಳಿದ ರಾಮಾಯಣ ಕಥಾಸಂದರ್ಭವನ್ನು ಇದು ನೆನಪಿಸುತ್ತದೆ. ಅದಕ್ಕಾಗಿ ಈ ಹನೂಮಾನ್ ದೇವಾಲಯದಲ್ಲಿ ಶ್ರೀರಾಮನ ಮತ್ತು ಹನುಮಂತನ ಗುಡಿಗಳು ಜತೆಯಾಗಿದ್ದು ಲಕ್ಷ್ಮಣನ ಗುಡಿಯು ಸ್ವಲ್ಪ ದೂರದಲ್ಲಿದೆ.

ಕೇರಲಾಧೀಶ್ವರಪುರ :- ಈ ಕ್ಷೇತ್ರಕ್ಕೆ ಈಗಲೂ ಕೇರಲಾಧೀಶ್ವರಪುರವೆಂದೇ ಹೆಸರಿದೆ. ಆದರೆ ಇತ್ತೀಚೆಗೆ ಕೆ. ಪುರಂ ಎಂದು ಕರೆಯಲಾಗುತ್ತಿದ್ದು ಪ್ರಾಚೀನಕಾಲದ ಕೇರಲಾಧೀಶ್ವರಪುರವೆಂಬ ಹೆಸರು ಹೊಸಬರ ಬಾಯಿಯಲ್ಲಿ ಇಲ್ಲವಾಗುತ್ತಿದೆ. ಈ ಸ್ಥಳವು ತಿರೂರಿನಿಂದ ಸಾಧಾರಣ ಆರು ಕಿ.ಮೀ. ದೂರದಲ್ಲಿದೆ.ಇಲ್ಲಿನದು ಶ್ರೀಕೃಷ್ಣನ ದೇವಸ್ಥಾನ. ತನ್ನ ಎರಡೂ ಕೈಗಳಲ್ಲಿ ಬೆಣ್ಣೆಯ ಮುದ್ದೆಗಳನ್ನು ಹಿಡಿದುಕೊಂಡು ಇಲ್ಲಿನ ಶ್ರೀಕೃಷ್ಣ ಕಂಗೊಳಿಸುತ್ತಾನೆ. ಇಲ್ಲಿಯೇ ಸ್ವಲ್ಪ ದೂರದಲ್ಲಿ ಪ್ರಾಚೀನ ಕಾಲದ ಒಂದು ಚಿಕ್ಕ ಶಿವಮಂದಿರವೂ ಇದೆ.

ಶ್ಲೋಕ : ಶ್ರೀಮಂಗಲಾಸ್ಪದ, ಸದಾಶ್ರಯ ನೀಲಕಂಠ
ಪ್ರೇಮಪ್ರಕರ್ಷನಿಲಯಃ ಸಕಲಾಭಿವಂದ್ಯಃ
ಶ್ರೀಮದ್ಗಿರೀಂದ್ರತನಯಾತನಯೋಽಂಘ್ರಿಭಾಜಾಂ
ಕಾಮಪ್ರದೋ ಜಯತಿ ಮತ್ತಮತಂಗಜಾಸ್ಯಃ ॥೩॥

ತಾತ್ಪರ್ಯ :

ತಿರುಮಂಗಲ ಕ್ಷೇತ್ರದಲ್ಲಿ ಆಶ್ರಯವನ್ನು ಪಡೆದ, ಸಜ್ಜನರಿಗೆ ಆಶ್ರಯದಾತನಾದ, ಈಶ್ವರನ ಪ್ರೀತಿಪ್ರಕರ್ಷಕ್ಕೆ ಪಾತ್ರನಾದ, ಸರ್ವರಿಗೂ ವಂದ್ಯನಾದ, ಹಿಮವಂತನ ಪುತ್ರಿಯ ಮಗನಾದ, ಪಾದಗಳನ್ನು ಪೂಜಿಸುವವರ ಇಚ್ಛೆಯನ್ನು ನೆರವೇರಿಸುವ, ಮದಭರಿತವಾದ ಆನೆಯ ಮುಖವುಳ್ಳ ಗಣಪತಿಗೆ ಜಯವಾಗಲಿ.

ವಿ.ವಿ. :

ಈ ಶ್ಲೋಕದಲ್ಲಿ ಲೇಖಕರು ಗಣಪತಿಯ ಸ್ತುತಿಯನ್ನು ಮಾಡುತ್ತಾರೆ. ಶ್ರೀಮಂಗಲವೆಂಬುದು ತಿರುಮಂಗಲದ ಸಂಸ್ಕೃತ ರೂಪವಾಗಿದೆ. ಈ ಸ್ಥಳವು ರಾಯಿರಿಮಂಗಲದ ದೇವ ಕ್ಷೇತ್ರದ ಸಮೀಪವಿದೆ. ಇದೇ ಲೇಖಕರ ಜನ್ಮ ಸ್ಥಳವಿರಬೇಕು.

ಶ್ಲೋಕ : ತದ್ದೇವಪಾದಕಮಲೈಕಸಮಾಶ್ರಯಃ ಕೋಽ-
ಪ್ಯುದ್ದ್ಯೋತಮಾನಗುರುವರ್ಯಕೃಪಾಭಿಯೋಗಾತ್
ವಿದ್ಯಾಪರಿಶ್ರಮಪರೋ ಬಹುಧಾತ್ಮಶುದ್ಧ್ಯಾ -
ಮುದ್ಯೋಗವಾನ್ ಭವತಿ ಬಾಲವಿಬೋಧನೇ ಚ ॥೪॥

ತಾತ್ಪರ್ಯ :

ಆ ಭಗವಾನ್ ಗಣಪತಿಯ ಪಾದಕಮಲಗಳ ಆಶ್ರಯವನ್ನು ಪಡೆದ ಒಬ್ಬನು, ಒಳ್ಳೆಯ ನಿಪುಣನಾದ ಗುರುವರ್ಯನ ಕೃಪಾಭಿಯೋಗದಿಂದ ವಿದ್ಯಾಭ್ಯಾಸನಿರತನಾಗಿ ಹೆಚ್ಚಿನ ವಿದ್ಯಾಪರಿಣತಿಯನ್ನು ಪಡೆದು, ಮಕ್ಕಳಿಗೆ ತಾನು ಕಲಿತ ವಿದ್ಯೆಯನ್ನು ಬೋಧಿಸುವ ಉದ್ಯೋಗವಂತನು ಆಗುತ್ತಾನೆ.

ವಿ.ವಿ. :

ಈ ಶ್ಲೋಕದಲ್ಲಿ ಲೇಖಕರು ತನ್ನನ್ನೇ ಕುರಿತು ಹೇಳಿಕೊಂಡಿರುತ್ತಾರೆ.

ಶ್ಲೋಕ : ಯೇಷಾಂ ಶ್ರುತಿಪ್ರಣಯಿನೀ ಧಿಷಣಾ ಯದೀಯ
ಸಂಕಲ್ಪಕಲ್ಪಿತತನುಃ ಪರಮೇಶ್ವರೋಽಪಿ
ತೇಷಾಂ ಮಹೀಸುಮನಸಾಂ ಮಹನೀಯಭಾಸಾ
ಮುತ್ತಂಸಯೇ ಪರಮುದಾರಪದಾರವಿಂದಮ್ ||೫||

ತಾತ್ಪರ್ಯ :

ವೇದಾಧ್ಯಯನದಲ್ಲಿ ತಮ್ಮ ಬುದ್ಧಿಯನ್ನು ತೊಡಗಿಸಿದ, ಪರಶಿವನು ಕೂಡ ತಮ್ಮ ಸಂಕಲ್ಪಕಲ್ಪಿತ ತನುವಾಗಿರುವ, ತೇಜಸ್ವಿಗಳಾದ ಭೂಸುರಶ್ರೇಷ್ಠರ ಪಾದಕಮಲಗಳಿಗೆ ವಂದಿಸುತ್ತೇನೆ.

೨. ಗ್ರಂಥರಚನೆಯ ಉದ್ದೇಶ

ಶ್ಲೋಕ : ನಿಸರ್ಗಸಂಸಿದ್ಧಸಮಸ್ತಶಿಲ್ಪ
ಪ್ರಾವೀಣ್ಯಮಾದ್ಯಂ ದ್ರುಹಿಣಂ ಪ್ರಣಮ್ಯ
ಮಯಾ ಮನುಷ್ಯಾಲಯಚಂದ್ರಿಕೈಷಾ
ವಿಲಿಖ್ಯತೇ ಮಂದಧಿಯಾಂ ಹಿತಾಯ ||೬||

ತಾತ್ಪರ್ಯ :

ಪ್ರಕೃತಿಸಹಜವಾಗಿಯೇ ಸಕಲಶಿಲ್ಪಶಾಸ್ತ್ರಗಳಲ್ಲಿ ಪ್ರಾವೀಣ್ಯವನ್ನು ಪಡೆದ ಬ್ರಹ್ಮನಿಗೆ ಮೊತ್ತಮೊದಲು ವಂದಿಸಿ ಶಿಲ್ಪದ ಕುರಿತು ಹೆಚ್ಚು ತಿಳುವಳಿಕೆ ಇಲ್ಲದವರಿಗೋಸ್ಕರ ಈ ಮನುಷ್ಯಾಲಯಚಂದ್ರಿಕೆಯೆಂಬುದನ್ನು ಬರೆಯುತ್ತೇನೆ.

ವಿ.ವಿ. :

ಈ ಶ್ಲೋಕದಲ್ಲಿ ಲೇಖಕರು ಕಾವ್ಯೋದ್ದೇಶವನ್ನು ಹೇಳುತ್ತಾರೆ.

೩. ಪೂರ್ವಾಚಾರ್ಯರ ಸ್ಮರಣೆ

ಶ್ಲೋಕ : ಮಯಮತಯುಗಲಂ ಪ್ರಯೋಗಮಂಜ -
ರ್ಯಪಿ ಚ ನಿಬಂಧನ ಭಾಸ್ಕರೀಯಯುಗ್ಮಮ್
ಮನುಮತಗುರುದೇವ ಪದ್ಧತಿ ಶ್ರೀ -
ಹರಿಯಜನಾದಿಮಹಾಗಮಾ ಜಯಂತಿ ||೭||

ತಾತ್ಪರ್ಯ :

ಎರಡು ಮಯಮತ ಗ್ರಂಥಗಳು, ಪ್ರಯೋಗಮಂಜರಿ, ನಿಬಂಧನ, ಭಾಸ್ಕರನ ಎರಡು ಗ್ರಂಥಗಳು, ಮನುಮತ, ಈಶಾನಗುರುದೇವಪದ್ಧತಿ, ಶ್ರೀಹರಿಯಜನಾದಿಮಹಾಗಮಗಳು ಇಲ್ಲಿ ಉದ್ಧರಿಸುವ ಪ್ರಸಿದ್ಧ ವಾಸ್ತುಶಿಲ್ಪಗ್ರಂಥಗಳಾಗಿವೆ.

ಶ್ಲೋಕ : ಮಾರ್ಕಾಂಡೇಯಯುಗಂ ಪರಾಶರಮುರಾರಿಪ್ರೋಕ್ತ ರತ್ನಾವಲೀ
ಸಾರಾನ್ ಕಾಶ್ಯಪ ವಿಶ್ವಕರ್ಮಮತಯುಗ್ಮಾದ್ಯಂ ಕುಮಾರಾಗಮಮ್
ಸವ್ಯಾಖ್ಯಾಂ ಪರಿಸಂಹಿತಾಂ ವಿವರಣಾದ್ಯಂ ವಾಸ್ತುವಿದ್ಯಾದಿಕಾನ್
ದೃಷ್ಟ್ವಾ ತಂತ್ರಸಮುಚ್ಚಯೋಕ್ತಮನುಸೃತ್ಯೈವಾತ್ರ ಸಂಕ್ಷಿಪ್ಯತೇ ॥೮॥

ತಾತ್ಪರ್ಯ :

ಎರಡು ಮಾರ್ಕಾಂಡೇಯ ಪುರಾಣಗಳನ್ನೂ, ಪರಾಶರ ಮತ್ತು ಮುರಾರಿಯವರು ಹೇಳಿದ ರತ್ನಾವಳಿಗಳ ಸಾರವನ್ನೂ, ಕಾಶ್ಯಪ ಮತ್ತು ವಿಶ್ವಕರ್ಮಮತಗಳನ್ನೂ, ಕುಮಾರಾಗಮವನ್ನೂ, ಹರಿಸಂಹಿತೆಯನ್ನೂ, ಶಿಲ್ಪವಿವರಣಾದಿಗಳನ್ನೂ, ವಾಸ್ತುವಿದ್ಯಾದಿಗಳನ್ನೂ ನೋಡಿ ಪರೀಶೀಲಿಸಿ, ವಾಸ್ತುಶಿಲ್ಪದ ಎಲ್ಲ ಗ್ರಂಥಗಳ ಸಾರಸಂಗ್ರಹದಂತಿರುವ ತಂತ್ರಸಮುಚ್ಚಯದಲ್ಲಿ ಹೇಳಿದುದನ್ನು ಅನುಸರಿಸಿ ಈ ಗ್ರಂಥದಲ್ಲಿ ಅದನ್ನು ಸಂಗ್ರಹಿಸಿ ಕೊಡುತ್ತೇನೆ.

ವಿ.ವಿ. :

ಈ ಮೇಲಿನ ಏಳು ಮತ್ತು ಎಂಟನೇ ಶ್ಲೋಕಗಳಲ್ಲಿ ವಾಸ್ತುಶಿಲ್ಪಶಾಸ್ತ್ರ ನಿಪುಣರಾದ ಪೂರ್ವಾಚಾರ್ಯರನ್ನೂ, ಅವರು ರಚಿಸಿದ ಗ್ರಂಥಗಳನ್ನೂ ಉಲ್ಲೇಖಿಸಿ, ಆ ಗ್ರಂಥಗಳಲ್ಲಿ ನಿರೂಪಿಸಿದ ವಾಸ್ತುವಿಷಯದ ಸಾರವನ್ನು ತನ್ನ ಮನುಷ್ಯಾಲಯಚಂದ್ರಿಕಾ ಎಂಬ ಗ್ರಂಥದಲ್ಲಿ ಸಂಗ್ರಹಿಸಿ ಕೊಡುತ್ತೇನೆಂದು ಲೇಖಕರು ಗ್ರಂಥದ ವಸ್ತುವಿಷಯವನ್ನು ತಿಳಿಸುತ್ತಾರೆ.

ಶ್ಲೋಕ : ಮರ್ತ್ಯೋ ವಿಪ್ರಾದಿವರ್ಣೇಷ್ವಿಹ ಭವನವಿಧಾನೋತ್ಸುಕೋ ಯಃ ಸ ಪೂರ್ವಂ
ವಿಪ್ರಂ ತದ್ದೇಶಸಂಬಂಧಿನಮಖಿಲಗುಣೈರನ್ವಿತಂ ಸಂವೃಣೀತ ॥
ಸೋಽಯಂ ತದ್ವರ್ಣಯೋಗ್ಯಾಂ ಕ್ಷಿತಿಮಥ ಪರಿಕಲ್ಪ್ಯಾತ್ರ ಪೂಜಾದಿ ಕೃತ್ವಾ
ವಾಸ್ತೋಃ ಶಾಸ್ತ್ರೋಕ್ತರೀತ್ಯಾ ಗೃಹಮತಿನಿಪುಣೈಃ ಕಾರುಭಿಃ ಕಾರಯೇತ ॥೯॥

ತಾತ್ಪರ್ಯ :

ಬ್ರಾಹ್ಮಣಾದಿ ವರ್ಣಚತುಷ್ಟಯದವರ ಪೈಕಿ ಗೃಹ ನಿರ್ಮಾಣ ಮಾಡಲು ಉತ್ಸುಕನಾದವನು ಮೊತ್ತಮೊದಲು ಆ ಪ್ರದೇಶಕ್ಕೆ ಸಂಬಂಧಿಸಿದಂತಹ ಸಕಲ ಗುಣೋಪೇತನಾದ ಆಚಾರ್ಯನನ್ನು ಗೊತ್ತುಮಾಡಬೇಕು. ಅನಂತರ, ಅವನ ವರ್ಣಾಶ್ರಮಕ್ಕೆ ತಕ್ಕುದಾದ ಭೂಪ್ರದೇಶವನ್ನು ನಿಶ್ಚಯಿಸಿ, ಆ ನಿವೇಶನದಲ್ಲಿ ಪೂಜಾದಿಗಳನ್ನು ಮಾಡಿ, ವಾಸ್ತುಶಾಸ್ತ್ರದಲ್ಲಿ ಹೇಳಿದಂತೆ ನಿಪುಣರಾದ ಶಿಲ್ಪಿಗಳ ಮೂಲಕ ಗೃಹನಿರ್ಮಾಣವನ್ನು ಮಾಡಿಸಬೇಕು.

೪. ಆಚಾರ್ಯವರಣ

ಶ್ಲೋಕ : ವೇದಾಗಮಾದಿವಿಹಿತಾನ್ಯವಧಾರ್ಯ ವಿಪ್ರೈಃ
ಕಾರ್ಯೋ ವಿಧಿಃ ಸಕಲದೇವನರಾಲಯಾನಾಮ್
ತದ್ವಾಕ್ಯತಃ ಸಕಲಧಾಮಸು ಮೃಚ್ಛಿಲಾದೇ
ರನ್ಯೋನ್ಯಮೇಲನಮುಶಂತಿ ಹಿ ಕಾರುಕೃತ್ಯಮ್ ॥೧೦॥

ತಾತ್ಪರ್ಯ :

ವೇದ-ಶಾಸ್ತ್ರಾದಿಗಳಲ್ಲಿ ನಿರೂಪಿಸಿದುದನ್ನು ತಿಳಿದುಕೊಂಡು ಮಾಡಬೇಕಾದ ದೇವಾಲಯ ಅಥವಾ ಮನುಷ್ಯಾಲಯಗಳ ನಿರ್ಮಾಣ ಕಾರ್ಯವನ್ನು ಶಿಲ್ಪಶಾಸ್ತ್ರವನ್ನು ಬಲ್ಲವಿಪ್ರರ ಮಾರ್ಗದರ್ಶನಕ್ಕೆ ಅನುಗುಣವಾಗಿ ಮಾಡಬೇಕು. ಅಲ್ಲದೆ, ಎಲ್ಲ ಸ್ಥಳಗಳಲ್ಲಿಯೂ ಶಾಸ್ತ್ರೋಕ್ತವಾಗಿ ಮಣ್ಣು ಮತ್ತು ಶಿಲೆಗಳನ್ನು ಪರಸ್ಪರ ಬೆರೆಸಿ ಮಿಶ್ರ ಮಾಡಿ ಶಿಲ್ಪದ ಕಾರ್ಯವನ್ನು ಮಾಡಬೇಕು.

ವಿ.ವಿ. :

ಯಾವುದೇ ಕಾರ್ಯದಲ್ಲಿ ಆಚಾರ್ಯವರಣ ಬಹಳ ಮುಖ್ಯವಾದುದಾಗಿದೆ. ಗೃಹನಿರ್ಮಾಣದಲ್ಲಿಯಂತೂ ಅದು ಬಹಳ ಅಗತ್ಯ. ವಾಸ್ತುಶಿಲ್ಪ ಶಾಸ್ತ್ರಜ್ಞನಾದ ಆಚಾರ್ಯನನ್ನು ಮೊದಲಿಗೆ ಗೊತ್ತುಮಾಡಿ ಅವನ ಸಲಹೆಯಂತೆ ನಿರ್ಮಾಣಕಾರ್ಯವನ್ನು ಮಾಡಿದರೆ ಗೃಹರಚನೆಯಲ್ಲಿ ಯಾವ ವಿಧವಾದ ಲೋಪದೋಷ ಬರುವುದಿಲ್ಲ. ಲೋಪದೋಷ ಬರದಂತಾಗಲು ತಜ್ಞನಾದ ಆಚಾರ್ಯನ ಮಾರ್ಗದರ್ಶನ ಬೇಕೇ ಬೇಕು. ಆದುದರಿಂದ ಮೇಲಿನ ಒಂಬತ್ತು ಮತ್ತು ಹತ್ತನೇ ಶ್ಲೋಕಗಳಲ್ಲಿ ವಾಸ್ತುತಜ್ಞನಾದ ಆಚಾರ್ಯನ ಅಗತ್ಯವನ್ನು ವಿವರಿಸಲಾಗಿದೆ.

೫. ನಾಲ್ಕು ವಿಧದ ಶಿಲ್ಪಿಗಳು

ಶ್ಲೋಕ : ಸ್ಥಪತಿಃ ಸೂತ್ರಗ್ರಾಹೀ ತಕ್ಷಕಸಂಜ್ಞಶ್ಚ ವರ್ಧಕಿಃ ಕ್ರಮಶಃ
ಸ್ವೋಚಿತಕರ್ಮಣಿ ದಕ್ಷಾ ಗ್ರಾಹ್ಯಾಸ್ತೇ ಕಾರವಶ್ಚತುರ್ಧೇತಿ ॥೧೧॥

ತಾತ್ಪರ್ಯ :

ಶಿಲ್ಪಿಗಳು ಸ್ಥಪತಿ, ಸೂತ್ರಗ್ರಾಹಿ, ತಕ್ಷಕ ಮತ್ತು ವರ್ಧಕಿ ಎಂದು ನಾಲ್ಕು ವಿಧ. ಅವರವರು ಮಾಡುವ ಶಿಲ್ಪ ಕಾರ್ಯಗಳಲ್ಲಿ ದಕ್ಷರಾದ ಆ ನಾಲ್ಕು ವಿಧದ ಶಿಲ್ಪಿಗಳನ್ನು ಸ್ವೀಕರಿಸಿ ಗೃಹನಿರ್ಮಾಣ ಕಾರ್ಯವನ್ನು ನೆರವೇರಿಸಬೇಕು.

ಶ್ಲೋಕ : ಸರ್ವಶಾಸ್ತ್ರವಿಹಿತಕ್ರಿಯಾಪಟುಃ ಸರ್ವದಾವಹಿತಮಾನಸಃ ಶುಚಿಃ
ಧಾರ್ಮಿಕೋ ವಿಗತಮತ್ಸರಾದಿಕೋ ಯಃ ಸ ಚ ಸ್ಥಪತಿರಸ್ತು ಸತ್ಯವಾಕ್ ॥೧೨॥

ತಾತ್ಪರ್ಯ :

ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಆಯಾದಿಸದ್ವರ್ಗ, ಅದಕ್ಕೆ ಸಂಬಂಧಿಸಿದ ಗಣಿತಪ್ರಕ್ರಿಯೆ ಮೊದಲಾದ ಎಲ್ಲ ಶಿಲ್ಪಶಾಸ್ತ್ರೋಕ್ತವಾದ ಕಾರ್ಯಗಳಲ್ಲಿ ಸಮರ್ಥನೆನಿಸಿದವನೂ, ಯಾವಾಗಲೂ ಆ ಶಿಲ್ಪಕಾರ್ಯದಲ್ಲಿ ಲಕ್ಷ್ಯವನ್ನಿಟ್ಟು ಕೆಲಸ ಮಾಡುವ ಮನಸ್ಸುಳ್ಳವನೂ, ನಿರ್ಮಲನೂ, ಧಾರ್ಮಿಕನೂ, ಮತ್ಸರಾದಿಗಳಿಲ್ಲದವನೂ, ಯಾವಾಗಲೂ ಸತ್ಯವನ್ನೇ ನುಡಿಯುವವನೂ ಆದವನು ಸ್ಥಪತಿಯೆನಿಸುತ್ತಾನೆ.

ಶ್ಲೋಕ : ಜಾನೀಯಾತ್ ಸ್ಥಾಪನಾರ್ಹಂ ಸ್ಥಪತಿಮಥ ಗುಣೈಃ ಪ್ರಾಯಶಸ್ತೇನ ತುಲ್ಯಃ
ಸೂತ್ರಗ್ರಾಹೀ ಸುತೋ ವಾ ಸ್ಥಪತಿಮತಿಗತಿಪ್ರೇಕ್ಷಕಃ ಶಿಷ್ಯಕೋ ವಾ
ಸ್ಥೂಲಾನಾಂ ತಕ್ಷಣಾತ್ತಕ್ಷಕ ಇತಿ ಕಥಿತಸ್ಸಂತತಂ ಹೃಷ್ಟಚಿತ್ತೋ
ದಾರ್ವಾದ್ಯನ್ಯೋನ್ಯಸಂಮೇಲನಪಟುರುದಿತೋ ವರ್ಧಕಿಃ ಸಾವಧಾನಃ ||೧೩||

ತಾತ್ಪರ್ಯ :

ಮನುಷ್ಯಾಲಯ, ದೇವಾಲಯಾದಿಗಳನ್ನು ಶಾಸ್ತ್ರಕ್ಕೆ ಅನುಗುಣವಾಗಿ ಸ್ಥಾಪಿಸಬಲ್ಲವನೇ ಸ್ಥಪತಿ ಎನಿಸುತ್ತಾನೆ. ಸ್ಥಪತಿಯ ಗುಣವಿಶೇಷಗಳನ್ನು ಹೆಚ್ಚು ಕಮ್ಮಿ ಹೊಂದಿದ, ಅವನ ಪುತ್ರ ಅಥವಾ ಅವನನ್ನು ಅನುಸರಿಸುತ್ತಿದ್ದು ಅವನ ಕಾರ್ಯಗಳನ್ನು ನೋಡುತ್ತಿರುವ ಅವನ ಶಿಷ್ಯನು ಸೂತ್ರಗ್ರಾಹಿಯೆನಿಸುತ್ತಾನೆ. ಮರಮಟ್ಟು ಇತ್ಯಾದಿ ವಸ್ತುಗಳ ಸ್ಥೂಲತೆಯನ್ನು ಕಡಿದು ಕೆತ್ತಿ ಅವುಗಳನ್ನು ಉಪಯೋಗಕ್ಕೆ ತಕ್ಕವುಗಳನ್ನಾಗಿ ಮಾಡುವವನೇ ತಕ್ಷಕನೆನಿಸುತ್ತಾನೆ. ಅವನು ಯಾವಾಗಲೂ ಸಂತುಷ್ಟಚಿತ್ತದವನಾಗಿರುತ್ತಾನೆ (ಸಂತುಷ್ಟ ಚಿತ್ತದವನಾಗಿದ್ದರೆ ಶಿಲ್ಪದಂತಹ ಸೂಕ್ಷ್ಮವಾದ ಕೆಲಸಗಳು ಸಮರ್ಪಕವಾಗಿ ನೆರವೇರಬಲ್ಲವು). ಮರದ ಪಕಾಸು ಮೊದಲಾದವುಗಳನ್ನು ಸಮರ್ಪಕ ರೀತಿಯಲ್ಲಿ ಅನ್ಯೋನ್ಯವಾಗಿ ಜೋಡಿಸಿ ವೃದ್ಧಿಸಿ ಸಿದ್ಧರೂಪವನ್ನು ಕೊಡುವುದರಲ್ಲಿ ಸಮರ್ಥನಾದವನೇ ವರ್ಧಕಿಯೆನಿಸುತ್ತಾನೆ.

ವಿ.ವಿ. :

ಗೃಹ ಅಥವಾ ದೇವಾಲಯ ನಿರ್ಮಾಣದಲ್ಲಿ ಮಾರ್ಗದರ್ಶನ ಮಾಡಿ ಯೋಜನೆಯನ್ನು ತಯಾರಿಸಿ ಕೊಡುವುದು ಸ್ಥಪತಿಯ ಕೆಲಸ. ಕಟ್ಟಡಕೆಲಸದ ಮೇಲು ವಿಚಾರಣೆ ನಡೆಸಿ ಲೋಪದೋಷ ಬರದಂತೆ ಎಚ್ಚರ ವಹಿಸುವುದು ಸೂತ್ರಗ್ರಾಹಿಯ ಕೆಲಸ. ಮರ, ಕಲ್ಲು ಮೊದಲಾದವುಗಳನ್ನು ಕೆತ್ತಿ ಪಕಾಸು ಮೊದಲಾದವುಗಳನ್ನು ಮಾಡುವುದು ತಕ್ಷಕನ ಕೆಲಸ ಹಾಗೂ ಸಿದ್ಧಪಡಿಸಿದ ವಸ್ತುಗಳನ್ನು ಸರಿಯಾಗಿ ಶಾಸ್ತ್ರೋಕ್ತ ರೀತಿಯಲ್ಲಿ ಜೋಡಿಸಿ ಆಲಯದ ರೂಪಕೊಡುವುದು ವರ್ಧಕಿಯ ಕೆಲಸ. ಈ ನಾಲ್ಕು ಕಾರ್ಯಾಂಗಗಳ ಸಹಯೋಗದಿಂದ ಗೃಹ ಅಥವಾ ದೇವಾಲಯ ನಿರ್ಮಾಣವಾಗುತ್ತದೆ. ಸ್ಥಪತಿ ಮೊದಲಾದ ಹೆಸರುಗಳು ಅವರವರು ಮಾಡುವ ಕೆಲಸಕ್ಕೆ ಅನುಗುಣವಾಗಿ ಅನ್ವರ್ಥಕಗಳಾಗಿವೆ.

ಶ್ಲೋಕ : ವಿನಾ ಸ್ಥಪತ್ಯಾದಿಚತುಷ್ಟಯೇನ ಗೃಹಾದಿ ಕರ್ತುಂ ನ ಚ ಶಕ್ಯತೇಽಸ್ಮಾತ್
ಪ್ರಸಾದಿತೈಸ್ತೈರಥ ವಿಪ್ರವರ್ಯಾಃ ಸುಸೂಕ್ಷ್ಮಧೀಃ ಕಾರಯತಾಂ ಗೃಹಾಣಿ ||೧೪||

ತಾತ್ಪರ್ಯ :

ಸ್ಥಪತಿಯೇ ಮೊದಲಾದ ನಾಲ್ಕು ವಿಧದ ಗೃಹನಿರ್ಮಾಣ ತಜ್ಞರಿಲ್ಲದೆ ಗೃಹಾದಿಗಳನ್ನು ನಿರ್ಮಿಸಲು ಸಾಧ್ಯವೇ ಇಲ್ಲ. ಆದುದರಿಂದ ಸೂಕ್ಷ್ಮ ಬುದ್ಧಿಯ ಆಚಾರ್ಯನು ಅವರೆಲ್ಲರನ್ನು ಸಂತೋಷಗೊಳಿಸಿ ಗೃಹಾದಿಗಳ ನಿರ್ಮಾಣವನ್ನು ಮಾಡಬೇಕು.

೬. ಗೃಹ ನಿರ್ಮಾಣ ಮಾಡುವಾಗ ಪರಿಶೀಲಿಸಬೇಕಾದ ಅಂಶಗಳು

ಶ್ಲೋಕ : ಲಕ್ಷಣಹೀನೇ ಧಾಮನಿ ವಸತಾಮಶುಭಾನಿ ಸಂಭವಂತ್ಯೇವ
ಜನ್ಮಾದ್ಯವಸಾನಾಂತಂ ಮನಸಾ ನಿಶ್ಚಿತ್ಯ ಕಾರಯೇತ್ ತಸ್ಮಾತ್ ॥೧೫॥

ತಾತ್ಪರ್ಯ :

ವಾಸ್ತುಶಿಲ್ಪ ಶಾಸ್ತ್ರದಲ್ಲಿ ಹೇಳಿದ ಗೃಹನಿರ್ಮಾಣದ ಲಕ್ಷಣಗಳನ್ನು ಅನುಸರಿಸದೆ ಕಟ್ಟಿದ ಮನೆಗಳಲ್ಲಿ ವಾಸ ಮಾಡುವವರಿಗೆ ಅಶುಭಗಳೇ ಎದುರಾಗುತ್ತಿರುತ್ತವೆ. ಆದುದರಿಂದ ನಿರ್ಮಾಣದ ಮೊದಲ ಹಂತದಿಂದ ತೊಡಗಿ ಅಂತ್ಯದವರೆಗೆ ಸಂಬಂಧಿಸಿದ ಎಲ್ಲ ವಿಧಿವಿಧಾನಗಳನ್ನು ಮೊದಲೇ ನಿರ್ಧರಿಸಿ ಗೃಹನಿರ್ಮಾಣವನ್ನು ಮಾಡಿಸಬೇಕು.

ಶ್ಲೋಕ : ತತ್ರ ಕ್ರಮೇಣ ಬಹುಧಾ ಧರಣೀಪರೀಕ್ಷಾ
ದಿಕ್ ನಿರ್ಣಯಾದಿಶುಭವೀಥಿಪರಿಗ್ರಹಶ್ಚ
ಧಾಮ್ನಾಂ ಪ್ರಮಾಣವಿಧಿರಂಕಣ ಕುಟ್ಟಿಮಾದೀ -
ನ್ಯಂಗಾನಿ ಬಾಹ್ಯವಿಧಯಶ್ಚ ತಥಾ ವಿಧೇಯಾಃ ॥೧೬॥

ತಾತ್ಪರ್ಯ :

ಗೃಹನಿರ್ಮಾಣ ಮಾಡುವಾಗ ಕ್ರಮಾಗತವಾಗಿ (೧) ಭೂಪರೀಕ್ಷೆ (೨) ದಿಕ್‌ನಿರ್ಣಯ (೩) ಶುಭವೀಥಿನಿರ್ಣಯ (೪) ಸ್ಥಳದ ವಿಸ್ತೀರ್ಣ (೫) ಅಂಗಳ (೬) ಕಟ್ಟೆ ಮೊದಲಾದ ರಚನಾಂಗಗಳನ್ನು ಮತ್ತು ಕಟ್ಟಡದ ಹೊರಗಿನ ಪ್ರಾಕಾರವೇ ಮೊದಲಾದ ರಚನೆಗಳನ್ನು ನಿರ್ಣಯಿಸಿಕೊಳ್ಳಬೇಕು.

ವಿ.ವಿ. :

ಕಟ್ಟಡದ ನಿವೇಶನದ ಭೂಪರೀಕ್ಷೆ, ಪೂರ್ವಾದಿ ದಿಕ್ಕುಗಳನ್ನು ನಿಶ್ಚಯಿಸುವುದು, ಶುಭವೀಥಿ ನಿರ್ಣಯ ಮತ್ತು ಸ್ಥಳದ ವಿಸ್ತೀರ್ಣ - ಇವುಗಳ ಪರಿಶೀಲನೆಯೊಂದಿಗೆ ಕಟ್ಟಡದ ರಚನಾಂಗಗಳ ಯೋಜನೆಯನ್ನು ಮೊದಲೇ ಮಾಡಿಕೊಳ್ಳಬೇಕೆಂದು ಇಲ್ಲಿ ಸೂಚಿಸಲಾಗಿದೆ. ಸ್ಥಳ ಸರಿಯಿಲ್ಲದೆ ಹೋದರೆ, ದಿಕ್ಕು ಸರಿಯಿಲ್ಲದೆ ಹೋದರೆ ಅಂಥ ಕಡೆಗಳಲ್ಲಿ ಕಟ್ಟಿದ ಮನೆಯಲ್ಲಿ ಸುಖ ಸಿಗುವುದಿಲ್ಲ. ಆದುದರಿಂದ ಸ್ಥಳಾದಿಗಳ ಆಯ್ಕೆಯನ್ನು ಚೆನ್ನಾಗಿ ಪರಿಶೀಲಿಸಿಯೇ ಮಾಡಬೇಕಾಗಿದೆ. ಅಲ್ಲದೆ ಪ್ರಧಾನ ಕಟ್ಟಡವಲ್ಲದೆ, ಹಟ್ಟಿ, ಕೊಟ್ಟಿಗೆ, ಬಾವಿ, ಪ್ರಾಕಾರ ಮೊದಲಾದವುಗಳ ಯೋಜನೆಗಳನ್ನು ಕೂಡ ಮೊದಲೇ ತಯಾರಿಸಿಕೊಳ್ಳಬೇಕು.

೭. ಭೂಲಕ್ಷಣ - ಉತ್ತಮ - ಮಧ್ಯಮ - ಅಧಮ

ಶ್ಲೋಕ : ಗೋಮರ್ತ್ಯೈಃ ಫಲಪುಷ್ಪದುಗ್ಧತರುಭಿಶ್ಚಾಢ್ಯಾ ಸಮಾ ಪ್ರಾಕ್ಪ್ಲವಾ
ಸ್ನಿಗ್ಧಾ ಧೀರರವಾ ಪ್ರದಕ್ಷಿಣಜಲೋಪೇತಾಶುಬೀಜೋದ್ಗಮಾ
ಸಂಪ್ರೋಕ್ತಾ ಬಹುಪಾಂಸುರಕ್ಷಯಜಲಾ ತುಲ್ಯಾ ಚ ಶೀತೋಷ್ಣಯೋಃ
ಶ್ರೇಷ್ಠಾ ಭೂರಧಮಾ ಸಮುಕ್ತವಿಪರೀತಾ ಮಿಶ್ರಿತಾ ಮಧ್ಯಮಾ ॥೧೭॥

ತಾತ್ಪರ್ಯ :

ಮನೆಯ ನಿವೇಶನದ ಭೂಮಿಯು ಗೋವುಗಳು ಮತ್ತು ಮನುಷ್ಯರು ಸಂಚರಿಸುವಂಥದ್ದಾಗಿರಬೇಕು. ಫಲಕೊಡುವ, ಹೂ ಬಿಡುವ ಮತ್ತು ಹಾಲಿಳಿಸುವ ಮರಗಳಿಂದ ವ್ಯಾಪಿಸಿರಬೇಕು. ಏರುತಗ್ಗುಗಳಿರದೆ ಸಮಮಟ್ಟದ್ದಾಗಿರಬೇಕು. ಪೂರ್ವದಿಕ್ಕಿಗೆ ತಗ್ಗಾಗಿದ್ದು ಆ ದಿಕ್ಕಿಗೆ ನೀರು ಹರಿಯುವಂಥಾದ್ದಾಗಿರಬೇಕು. ನುಣುಪಾದ ಮಣ್ಣಿನಿಂದ ಕೂಡಿರಬೇಕು. ನಡೆಯುವಾಗ ಗಟ್ಟಿ ಸ್ವರವೇಳುವಂಥಾದ್ದಾಗಿರಬೇಕು. ನೀರು ಪ್ರದಕ್ಷಿಣಾಕಾರವಾಗಿ ಹರಿಯವಂತಿರಬೇಕು. ಬಿತ್ತಿದರೆ ಬೀಜವು ಬೇಗನೆ ಮೊಳಕೆ ಬರುವಂತಿರುವ ಮಣ್ಣಿನಿಂದ ಕೂಡಿರಬೇಕು. ಧೂಲೀಮಯವಾಗಿಯೂ, ತೆಗೆದಷ್ಟು ಮುಗಿಯದ ಜಲಸ್ಥಿತಿಯುಳ್ಳದ್ದಾಗಿಯೂ, ಶೀತೋಷ್ಣಕಾಲಗಳಲ್ಲಿ ಸಮಸ್ಥಿತಿಯುಳ್ಳದ್ದಾಗಿಯೂ ಇರಬೇಕು. ಇಂತಹ ಲಕ್ಷಣಗಳುಳ್ಳ ಭೂಮಿಯು ಅತ್ಯುತ್ತಮವಾದುದು. ಇದಕ್ಕಿಂತ ವಿಪರೀತ ಲಕ್ಷಣಗಳಿರುವುದು ಅಧಮ. ಮಿಶ್ರಗುಣವುಳ್ಳದ್ದು ಮಧ್ಯಮವಾದುದಾಗಿದೆ.

ವಿ.ವಿ. :

ಈ ಶ್ಲೋಕದಲ್ಲಿ ಮನೆಯ ಅಡಿಸ್ಥಳ ಹೇಗಿರಬೇಕೆಂದು ತಿಳಿಸಿರುತ್ತಾರೆ. ಮನೆಗೆ ಪಂಚಾಂಗವೇ ಆಧಾರ. ಆ ಪಂಚಾಂಗಕ್ಕೆ ಅದರ ಕೆಳಗಿರುವ ನೆಲವೇ ಆಧಾರ. ಹಾಗಿರುವಾಗ ವಾಸ್ತುವಿನ ಅಡಿಸ್ಥಳ ಬಹಳ ಮುಖ್ಯವೆಂದಂತಾಯಿತು. ಅಂತಹ ಅಡಿಸ್ಥಳದಲ್ಲಿ ಮನೆ ಭದ್ರವಾಗಿ ನೆಲೆಗೊಳ್ಳಬೇಕಾದರೆ ಆ ಭೂಮಿಯು ಅತ್ಯಂತ ಉತ್ತಮತರದ್ದಾಗಿರಬೇಕಾಗುತ್ತದೆ. ಆ ಉತ್ತಮತೆಗೆ ಬೇಕಾದ ಹತ್ತು, ಹನ್ನೊಂದು ಲಕ್ಷಣಗಳನ್ನು ಇಲ್ಲಿ ತಿಳಿಸಿರುತ್ತಾರೆ. ಇವುಗಳನ್ನು ಗಮನದಲ್ಲಿಟ್ಟುಕೊಂಡು ಭೂಪರೀಕ್ಷೆಯನ್ನು ಮಾಡಿ ಅಂತಹ ಉತ್ತಮಲಕ್ಷಣಗಳುಳ್ಳ ಭೂಮಿಯಲ್ಲಿ ಮನೆಯನ್ನು ಕಟ್ಟದರೆ ಅದು ಭದ್ರವಾಗಿರುತ್ತದೆ. ಇದು ತಾಂತ್ರಿಕತೆಗೆ ಬೆಲೆಯನ್ನು ಕೊಟ್ಟ ಅಂಶ. ಇಲ್ಲಿ ಹೇಳಿದ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ನಿವೇಶನದ ಆಯ್ಕೆಯನ್ನು ಮಾಡಬೇಕು.

೮. ವರ್ಜ್ಯ ಸ್ಥಳಗಳು

ಶ್ಲೋಕ : ವೃತ್ತಾರ್ಧೇಂದುನಿಭಾ ತ್ರಿಪಂಚರಸಕೋಣಾ ಶೂಲಶೂರ್ಪಾಕೃತಿ -
ರ್ಮತ್ಸ್ಯಾನೇಕಪಕೂರ್ಮಪೃಷ್ಠ ಕಪಿಲಾವಕ್ತ್ರೋಪಮಾ ಮೇದಿನೀ
ಭಸ್ಮಾಂಗಾರತುಷಾಸ್ಥಿಕೇಶಚಿತಿವಲ್ಮೀಕಾದಿಭಿಃ ಸಂಯುತಾ

ವರ್ಜ್ಯಾ ಮಧ್ಯನತಾ ಸಗರ್ಭಕುಹರಾ ವಿಸ್ರಾವಿದಿಕ್ ಸ್ಥಾಪಿ ಚ ||೧೮||

ತಾತ್ಪರ್ಯ :


(1) ವೃತ್ತಾಕಾರ (2) ವೃತ್ತಾರ್ಧ (3) ತ್ರಿಕೋಣ (4) ಪಂಚಕೋಣ (5) ಷಟ್ಕೋಣ (6) ತ್ರಿಶೂಲಾಕಾರ (7) ಗೆರಸೆಯ ಆಕಾರ (8) ಮೀನಿನ ಬೆನ್ನಿನಾಕಾರ (9) ಆನೆಯ ಬೆನ್ನಿನಾಕಾರ (10) ಆಮೆಯ ಬೆನ್ನಿನಾಕಾರ (11) ಗೋಮುಖಾಕಾರ ಅಲ್ಲದೆ(12) ಭಸ್ಮ, ಮಸಿಕೆಂಡ, ಬತ್ತದ ಹೊಟ್ಟು, ಎಲುಬು, ಕೂದಲು, ಶ್ಮಶಾನ, ಹುತ್ತ ಮೊದಲಾದವುಗಳಿರುವ ಸ್ಥಳ (13) ಮಧ್ಯದಲ್ಲಿ ತಗ್ಗಾದ ಸ್ಥಳ (14) ಒಳಗೆ ರಂದ್ರ ಅಥವಾ ಬಿಲವುಳ್ಳ ಸ್ಥಳ (15) ದುರ್ವಾಸನೆ ಬೀರುವ ಸ್ಥಳ ಮತ್ತು (16) ದಿಕ್ಕು ಸರಿಯಿಲ್ಲದ ಸ್ಥಳ - ಇಂಥವುಗಳು ವರ್ಜ್ಯಗಳಾಗಿವೆ. ಅಂಥ ಸ್ಥಳಗಳಲ್ಲಿ ಮನೆಗಳನ್ನು ಕಟ್ಟಲೇಬಾರದು.

ವಿ.ವಿ. :

ವಾಸ್ತುವಿನಲ್ಲಿ ಮನೆಯನ್ನು ಕಟ್ಟುವ ಸ್ಥಳದ ಆಕಾರ ಬಹಳ ಪ್ರಮುಖವಾಗಿರುತ್ತದೆ. ಈ ಶ್ಲೋಕದಲ್ಲಿ ಆಯ್ಕೆ ಮಾಡಲೇಬಾರದ ಅಥವಾ ಕೊಂಡುಕೊಳ್ಳಲೇ ಬಾರದ ಆಕಾರದ ಮತ್ತು ದೋಷದಿಂದ ಕೂಡಿದ ಸ್ಥಳವನ್ನು ನಿರ್ದೇಶಿಸಲಾಗಿದೆ.

ವರ್ಜ್ಯ ಸ್ಥಳಗಳು

೧. ವೃತ್ತಾಕಾರದ ನಿವೇಶನಗಳು




೨. ವೃತ್ತಾರ್ಧ




೩. ತ್ರಿಕೋಣಾಕಾರ



೪. ಪಂಚಕೋಣಾಕಾರ




೫. ಷಟ್ಕೋಣಾಕಾರ




೬. ತ್ರಿಶೂಲಾಕಾರ



೭. ಗೆರಸೆಯ ಆಕಾರ




೮. ಮೀನಿನ ಬೆನ್ನಿನಾಕಾರ



೯. ಆನೆಯ ಬೆನ್ನಿನಾಕಾರ





೧೦. ಆಮೆಯ ಬೆನ್ನಿನಾಕಾರ

೧೧. ಗೋಮುಖಾಕಾರ

೧೨. ಮಧ್ಯದಲ್ಲಿ ತಗ್ಗಾದ ಸ್ಥಳ

೧೩. ದಿಕ್ಕು ಸರಿಯಿಲ್ಲದ ಸ್ಥಳ

ಚಿತ್ರ ೧-೧೩. ಅ.೧. ಶ್ಲೋ. ೧೮


೧೪. ಭಸ್ಮ, ಮಸಿಕೆಂಡ, ಬತ್ತದ ಹೊಟ್ಟು, ಎಲುಬು, ಕೂದಲು, ಶ್ಮಶಾನ, ಹುತ್ತ ಮೊದಲಾದವುಗಳಿರುವ ಸ್ಥಳ

೧೫. ರಂಧ್ರ, ಬಿಲ ಇತ್ಯಾದಿ ಇರುವ ಸ್ಥಳ


೧೬. ದುರ್ವಾಸನೆ ಬೀರುವ ಸ್ಥಳ

ಪೂರ್ವ-ಪಶ್ಚಿಮ ದಿಕ್ಕು ಸರಿಯಾಗಿದ್ದು ಚೌಕಾಕಾರದ ನಿವೇಶನವು ಅತ್ಯಂತ ಪ್ರಶಸ್ತವಾಗಿದೆ. ಆಯತಾಕಾರವೂ ಪ್ರಶಸ್ತವೇ. ನಿವೇಶನವು ಸಣ್ಣದಾಗಿದ್ದರೆ ಮೇಲಿನ ಪಟ್ಟಿಯಲ್ಲಿ ಹೇಳಿದ ರೀತಿಯ ನಿವೇಶನಗಳನ್ನು ಆಯ್ಕೆ ಮಾಡಲೇಬಾರದು. ಅದರಿಂದ ಏಳಿಗೆಯಿಲ್ಲ. ನಿವೇಶನ ದೊಡ್ಡದಾಗಿದ್ದರೆ ಅದರ ಒಳಗೆ ಮನೆಗೆ ಬೇಕಾದ ಚೌಕಾಕಾರದ ಸ್ಥಳವನ್ನು ಗುರುತಿಸಿ ಉಳಿದುದನ್ನು ವಿಂಗಡಿಸಿ ಬೇರೆಯವರಿಗೆ ಮಾರಾಟ ಮಾಡುವುದು ಅಥವಾ ಅದನ್ನು ಕೃಷಿಭೂಮಿಯನ್ನಾಗಿ ಪರಿವರ್ತಿಸುವುದರಿಂದ ನಿವೇಶನ ದೋಷವನ್ನು ಸರಿಗೊಳಿಸಬಹುದು.

ಉದಾ : ೧ (ಅ)




ಸರಿಯಿಲ್ಲದ ಸ್ಥಳ, ತ್ಯಾಜ್ಯ
ಚಿತ್ರ ೧೪




1. ಬಿಟ್ಟ ಸ್ಥಳ
2. ಸರಿಗೊಳಿಸಿದ ಸ್ಥಳ, ಒಳ್ಳೆಯದು
ಚಿತ್ರ ೧೫

ಉದಾ : ೨ ದಿಕ್ಕು ಸರಿಯಿಲ್ಲದ ನಿವೇಶನ



ಆಗ್ನೇಯ ಮೀರಿದೆ,
ದಿಕ್ಕಿಗೆ ಸರಿಯಾಗಿಲ್ಲ. ತ್ಯಾಜ್ಯ.
ಚಿತ್ರ ೧೬



1. ಬಿಟ್ಟ ಅಥವಾ ಮಾರಿದ ಸ್ಥಳ
2. ದಿಕ್ಕಿಗೆ ಸರಿಮಾಡಿದ ನಿವೇಶನ, ಒಳ್ಳೆಯದು
ಚಿತ್ರ ೧೭

ಇದೇ ರೀತಿ ಇನ್ನುಳಿದ ಆಕಾರಗಳನ್ನೂ ಸರಿಗೊಳಿಸಬಹುದು. ಆದರೂ ಅಂಥವುಗಳನ್ನು ಅತ್ಯುತ್ತಮ ಎನ್ನಲು ಸಾಧ್ಯವಿಲ್ಲ. ಆದರೆ ವಿ.ವಿ.ಯಲ್ಲಿ ಕೊಟ್ಟ ಕ್ರ.ಸಂ.೧೪, ೧೫ ಮತ್ತು ೧೬ರ ರೀತಿಯ ಸ್ಥಳಗಳನ್ನು ಬಿಡಲೇಬೇಕು. ಅವುಗಳು ಎಂದೆಂದಿಗೂ ತ್ಯಾಜ್ಯ. ಚತುರಶ್ರದಲ್ಲಿ ಕೋನಗಳು 90°ಯಲ್ಲಿರುವುದರಿಂದ ಪಂಚ ಭೂತಾತ್ಮಕವಾದ ಶಕ್ತಿಯ ಪ್ರತಿಫಲನ ಅದರೊಳಗೇ ಇರುತ್ತದೆ. ಉದಾಹರಣೆಗೆ ಗಾಳಿಯನ್ನೇ ತೆಗೆದುಕೊಳ್ಳೋಣ. ತ್ರಿಕೋಣಾದಿಗಳಲ್ಲಿ ಅದರ ಚಲನವಲನ ಎಲ್ಲ ಕಡೆ ಒಂದೇ ರೀತಿಯಲ್ಲಿರದೆ ಅದರ ಚೈತನ್ಯ ಯದ್ವಾತದ್ವ ಸ್ಥಿತಿಯಲ್ಲಿರುತ್ತದೆ. ಅದೇ ರೀತಿ ಮೇಲೆ ಹೇಳಿದ ಬೇರೆ ಬೇರೆ ಆಕಾರದ ನಿವೇಶನಗಳ ಶಕ್ತಿ ಸ್ವರೂಪವೂ ಆಗಿರುತ್ತದೆ. ಆದುದರಿಂದ ಅವುಗಳು ಯೋಗ್ಯವಾದವುಗಳಲ್ಲ.

೯. ವೀಧಿ ನಿರ್ಣಯ

ಶ್ಲೋಕ : ಇಂದ್ರಾಶಾದಿನತಾವನಿಸ್ತದಿತರಾಶಾದ್ಯುನ್ನತಾಪ್ಸೌ ಕ್ರಮಾತ್
ಗೋವಹ್ನ್ಯಂತಕ ಭೂತವಾರಿಫಣಭೃನ್ಮಾತಂಗಧಾನ್ಯಾಹ್ವಯಾಃ
ವೀಥ್ಯೋऽತ್ರ ಕ್ರಮಶೋऽಭಿವೃದ್ಧಿಧನಹಾನ್ಯಾತ್ಮಾರ್ಥ ಹಾನಿಪ್ರದಾ
ದಾರಿದ್ರ್ಯಾತ್ಮಜಹಾನಿವಿತ್ತಶುಭದಾಸ್ತಾದೃಕ್ ಕ್ಷಿತೌ ತಸ್ಥುಷಾಮ್ ||೧೯||

ತಾತ್ಪರ್ಯ :

ಕ್ರಮವಾಗಿ ಪೂರ್ವಾದಿ ದಿಕ್ಕುಗಳ ಪ್ರದೇಶವು ತಗ್ಗಾಗಿದ್ದು ಅವುಗಳ ವಿರುದ್ಧ ದಿಕ್ಕುಗಳ ಪ್ರದೇಶವು ಉನ್ನತವಾಗಿದ್ದರೆ ಗೋವೀಥಿ, ಅಗ್ನಿವೀಥಿ, ಯಮವೀಥಿ, ಭೂತವೀಥಿ, ಜಲವೀಥಿ, ನಾಗವೀಥಿ, ಗಜವೀಥಿ ಮತ್ತು ಧಾನ್ಯವೀಥಿಗಳೆನಿಸುತ್ತವೆ. ಅಲ್ಲದೆ ಆ ವೀಥಿಗಳ ಫಲಗಳು ಅನುಕ್ರಮವಾಗಿ ಅಭಿವೃದ್ಧಿ, ಧನನಾಶ, ಆತ್ಮಾರ್ಥಹಾನಿ, ಅರ್ಥನಾಶ, ದಾರಿದ್ರ್ಯ, ಸಂತಾನಕ್ಷಯ, ಸಂಪತ್ಪ್ರದ ಮತ್ತು ಶುಭಪ್ರದಗಳಾಗುತ್ತವೆ.


ವಿ.ವಿ. :

ಮೇಲಿನ ಶ್ಲೋಕದ ತಾತ್ಪರ್ಯವನ್ನು ಸಂಕ್ಷಿಪ್ತವಾಗಿ ಈ ರೀತಿ ಕ್ರೋಢೀಕರಿಸಬಹುದು.

ಕ್ರ.ಸಂ.	ವೀಥಿಯ ಹೆಸರು	ವೀಥಿ ಲಕ್ಷಣ	ವೀಥಿ ಫಲ
೧.	ಗೋವೀಥಿ	ಪೂರ್ವಪ್ಲವ (ತಗ್ಗು) - ಪಶ್ಚಿಮ ಭಾಗ ಎತ್ತರ	ಅಭಿವೃದ್ಧಿ
೨.	ಅಗ್ನಿವೀಥಿ	ಆಗ್ನೇಯ ಪ್ಲವ - ವಾಯುವ್ಯ ಉನ್ನತ	ಧನನಾಶ
೩.	ಯಮವೀಥಿ	ದಕ್ಷಿಣ ಪ್ಲವ - ಉತ್ತರ ಉನ್ನತ	ಆತ್ಮಾರ್ಥಹಾನಿ
೪.	ಭೂತವೀಥಿ	ನೈಋತ್ಯ ಪ್ಲವ - ಈಶಾನ್ಯ ಉನ್ನತ	ಅರ್ಥನಾಶ
೫.	ಜಲವೀಥಿ	ಪಶ್ಚಿಮ ಪ್ಲವ - ಪೂರ್ವ ಉನ್ನತ	ದಾರಿದ್ರ್ಯ
೬.	ನಾಗವೀಥಿ	ವಾಯುವ್ಯ ಪ್ಲವ - ಆಗ್ನೇಯ ಉನ್ನತ	ಸಂತಾನಕ್ಷಯ
೭.	ಗಜವೀಥಿ	ಉತ್ತರ ಪ್ಲವ - ದಕ್ಷಿಣ ಉನ್ನತ	ಸಂಪತ್ಪ್ರದ
೮.	ಧಾನ್ಯವೀಥಿ	ಈಶಾನ್ಯಪ್ಲವ - ನೈಋತ್ಯ ಉನ್ನತ	ಶುಭಪ್ರದ

ಈ ಶ್ಲೋಕದಲ್ಲಿ ಹೇಳಿದ ನಿಯಮ ಪ್ರಕಾರ ಪಶ್ಚಿಮ ದಿಕ್ಕಿನ ಪ್ರದೇಶವು ಎತ್ತರವಾಗಿದ್ದು ಪೂರ್ವದಿಕ್ಕಿಗೆ ನೀರು ಹರಿದು ಹೋಗುವಂತೆ ತಗ್ಗಾಗಿದ್ದರೆ, ಅಂತಹ ಭೂಪ್ರದೇಶದ ನಿವೇಶನ ಗೃಹನಿರ್ಮಾಣಕ್ಕೆ ಬಹಳ ಒಳ್ಳೆಯದು. ಅದೇ ರೀತಿ, ದಕ್ಷಿಣ ದಿಕ್ಕಿನ ಪ್ರದೇಶ ಉನ್ನತವಾಗಿದ್ದು ಉತ್ತರ ದಿಕ್ಕಿಗೆ ನೀರು ಹರಿಯುವಂತೆ ತಗ್ಗಾಗಿದ್ದರೆ ಅದು ಕೂಡ ಬಹಳ ಒಳ್ಳೆಯ ಸ್ಥಳವಾಗಿದೆ. ಅಲ್ಲದೆ, ನೈಋತ್ಯ ಭಾಗ ಎತ್ತರವಾಗಿದ್ದು ಈಶಾನ್ಯ ಭಾಗ ತಗ್ಗಾಗಿದ್ದರೆ ಅದು ಸಹ ಆಲಯ ನಿರ್ಮಾಣಕ್ಕೆ ಅತ್ಯಂತ ಯೋಗ್ಯವಾದುದಾಗಿದೆ. ವೀಥಿ ನಿರ್ಣಯದ ಪ್ರಕಾರ ಈ ಮೂರು ಪ್ರದೇಶಗಳು ಕ್ರಮವಾಗಿ ಗೋವೀಥಿ, ಗಜವೀಥಿ ಮತ್ತು ಧಾನ್ಯವೀಥಿಗಳಾಗುತ್ತವೆ. ಗೋವೀಥಿಯು ಅಭಿವೃದ್ಧಿಕಾರಕವಾದರೆ ಗಜವೀಥಿಯು ಸಂಪತ್ಪ್ರದವಾಗಿದೆ ಮತ್ತು ಧಾನ್ಯವೀಥಿಯು ಶುಭಕರವಾಗಿದೆ.

ಅಷ್ಟ ದಿಕ್ಕುಗಳ ಸ್ಥಾನಗಳು



ಚಿತ್ರ ೧೮. ಅ. ೧. ಶ್ಲೋ.೧೯

ಶ್ಲೋಕ : ಪ್ರವಾಸದಾ ಮಧ್ಯನತಾ ಧರಿತ್ರೀ ಮಧ್ಯೋನ್ನತಾ ವಿತ್ತಸುಖಾದಿಹಂತ್ರೀ
ವಹ್ನ್ಯಾದಿವಾಯ್ವಂತನತಾ ಧರಿತ್ರೀ ಪ್ರಾಯೇಣ ದಾರಿದ್ರ್ಯಫಲಪ್ರದಾ ಸ್ಯಾತ್ ॥೨೦॥

ತಾತ್ಪರ್ಯ :

ಆಲಯ ನಿರ್ಮಾಣದ ಭೂಪ್ರದೇಶವು ಸುತ್ತಲೂ ಉನ್ನತವಾಗಿದ್ದು ಮಧ್ಯಭಾಗವು ತಗ್ಗಾಗಿದ್ದರೆ ಅಲ್ಲಿನ ಮನೆಯವರು ಆ ಮನೆಯಲ್ಲಿರದೆ ಪ್ರವಾಸ ಮಾಡುತ್ತಾ ಇರುತ್ತಾರೆ. ಒಂದು ವೇಳೆ ಸುತ್ತಲೂ ತಗ್ಗಾಗಿದ್ದು ಮಧ್ಯಭಾಗ ಉನ್ನತವಾಗಿದ್ದರೆ ಅಂತಹ ಸ್ಥಳದಲ್ಲಿ ಕಟ್ಟಿದ ಮನೆಯು ಅದರಲ್ಲಿ ವಾಸಿಸುವವರ ಧನ-ಸುಖಾದಿಗಳನ್ನು ನಾಶ ಮಾಡುತ್ತದೆ. ಆಗ್ನೇಯ ದಿಕ್ಕಿನ ಭಾಗದಿಂದ ತೊಡಗಿ ವಾಯುವ್ಯದವರೆಗೆ ಇರುವ ಸ್ಥಳವು ತಗ್ಗಾಗಿದ್ದು ಉಳಿದ ಭಾಗದ ಸ್ಥಳವು (ಉತ್ತರ, ಈಶಾನ್ಯ ಮತ್ತು ಪೂರ್ವಭಾಗ) ಉನ್ನತವಾಗಿದ್ದರೆ ಆ ಭೂಮಿಯೂ ಪ್ರಶಸ್ತವಲ್ಲ. ಅದು ದಾರಿದ್ರ್ಯದ ಫಲವನ್ನೇ ಕೊಡುತ್ತದೆ.

ವಿ.ವಿ. :

ಈ ಶ್ಲೋಕದಲ್ಲಿ ಅಯೋಗ್ಯವಾದ ಭೂಮಿಯ ಲಕ್ಷಣವನ್ನು ಹೇಳಲಾಗಿದೆ. ಅದನ್ನು ಈ ರೀತಿ ಸಂಕ್ಷಿಪ್ತವಾಗಿ ಹೇಳಬಹುದು.

	ಪ್ರದೇಶದ ವಿವರ	ಫಲ
೧.	ಮಧ್ಯಭಾಗ ತಗ್ಗಾಗಿರುವ ಸ್ಥಳ	ಪ್ರವಾಸ ಮಾಡುವಿಕೆ (ತಿರುಗಾಟ)
೨.	ಮಧ್ಯಭಾಗ ಎತ್ತರವಾಗಿರುವ ಸ್ಥಳ	ಧನ ಸುಖಾದಿಗಳ ನಾಶ
೩.	ಆಗ್ನೇಯದಿಂದ ತೊಡಗಿ ವಾಯುವ್ಯದವರೆಗೆ ತಗ್ಗಾಗಿರುವ ಸ್ಥಳ	ದಾರಿದ್ರ್ಯ

೧೦. ಮನೆಗಳ ಆಯುಸ್ಸು

ಶ್ಲೋಕ : ಮಧ್ಯೋಚ್ಚಾಯಾಂ ಧರಿತ್ರ್ಯಾಂ ಪ್ರಥಮಮಥ ಗೃಹೇ ಕಲ್ಪಿತೇ ಸ್ಯಾದ್ದಶಾಬ್ದಮ್
ವೃದ್ಧಿಃ ಪ್ರಾಗುನ್ನತಾಯಾಮಪಿ ಹುತವಹಯಾಮ್ಯೋನ್ನತಾಯಾಂ ಶತಾಬ್ದಮ್
ಸಾಹಸ್ರಾಬ್ದಂ ನಿರ್ಋತ್ಯುನ್ನತ ಧರಣಿತಲೇ ವಾರುಣೇ ಸ್ಯಾತ್ ತದರ್ಧಮ್
ಶೇಷಾಸ್ವರ್ಕಾಷ್ಟಷಟ್ಕಾಃ ಶರದ ಇಹ ತತಃ ಸ್ಪೋಕ್ತರೂಪಂ ಫಲಂ ಸ್ಯಾತ್ ॥೨೧॥

ತಾತ್ಪರ್ಯ :

ಮಧ್ಯಭಾಗ ಮತ್ತು ಪೂರ್ವಭಾಗ ಉನ್ನತವಾಗಿರುವ ಭೂಪ್ರದೇಶದಲ್ಲಿ ಗೃಹನಿರ್ಮಾಣ ಮಾಡಿದರೆ ಅಂತಹದರ ಆಯುಸ್ಸು ಹತ್ತು ವರ್ಷ. ಆಗ್ನೇಯ ಭಾಗ ಹಾಗೂ ದಕ್ಷಿಣ ದಿಕ್-ಭಾಗ ಎತ್ತರವಾಗಿದ್ದ ಸ್ಥಳದಲ್ಲಿ ಕಟ್ಟಿದ ಮನೆ ನೂರು ವರ್ಷ ಬಾಳಿಕೆಯುಳ್ಳದ್ದಾಗುತ್ತದೆ. ನೈಋತ್ಯ

ಭಾಗ ಎತ್ತರವಾಗಿರುವ ಭೂಮಿಯಲ್ಲಿ ನಿರ್ಮಿಸಿದ ಮನೆ ಒಂದು ಸಾವಿರ ವರ್ಷಗಳವರೆಗೆ ಬೆಳಗುತ್ತದೆ. ಪಶ್ಚಿಮೋನ್ನತವಾದುದರಲ್ಲಿ ಮಾಡಿದ ಮನೆಯು ಐನೂರು ವರ್ಷಗಳವರೆಗೆ ಅಭಿವೃದ್ಧಿಯಲ್ಲಿರುತ್ತದೆ. ಇನ್ನು ಉಳಿದ ವಾಯುವ್ಯ, ಉತ್ತರ ಮತ್ತು ಈಶಾನ್ಯ ಭಾಗಗಳು ಉನ್ನತವಾಗಿದ್ದ ಪ್ರದೇಶಗಳಲ್ಲಿ ಮನೆಗಳನ್ನು ರಚಿಸಿದರೆ ಅಂತಹ ಮನೆಗಳು ಕ್ರಮವಾಗಿ ಹನ್ನೆರಡು, ಎಂಟು ಮತ್ತು ಆರು ವರ್ಷಗಳಲ್ಲಿ ಬಾಳಿಕೆಯುಳ್ಳವುಗಳಾಗುತ್ತವೆ. ಈಗ ಹೇಳಿದ ಅವಧಿಗಿಂತ ಅನಂತರ ಈ ಮೊದಲು ಹೇಳಿದ ಆಯಾ ವೀಥಿಯ ಫಲವನ್ನು ಕೊಡುತ್ತವೆ.

ವಿ.ವಿ. :

ಭೂಪ್ರದೇಶಕ್ಕೆ ಸಂಬಂಧಿಸಿ ಆ ಪ್ರದೇಶದಲ್ಲಿ ಕಟ್ಟಿದ ಮನೆಗಳ ಅಭಿವೃದ್ಧಿಯ ಆಯುಃ ಪ್ರಮಾಣವನ್ನು ಈ ಶ್ಲೋಕದಲ್ಲಿ ಹೇಳಲಾಗಿದೆ. ಅದನ್ನು ಇಲ್ಲಿ ಸೂಕ್ಷ್ಮವಾಗಿ ಹೀಗೆ ಹೇಳಬಹುದು.

	ಸ್ಥಳದ ಉನ್ನತಿ	ಅಭಿವೃದ್ಧಿ ಸ್ಥಿತಿಯ ಆಯುಸ್ಸು
೧. ೨.	ಸ್ಥಳದ ಮಧ್ಯಭಾಗ ಉನ್ನತವಾಗಿದ್ದರೆ ಸ್ಥಳದ ಪೂರ್ವಭಾಗ ಉನ್ನತವಾಗಿದ್ದರೆ	ಹತ್ತು ವರ್ಷ
೩. ೪.	ಸ್ಥಳದ ಆಗ್ನೇಯಭಾಗ ಉನ್ನತವಾಗಿದ್ದರೆ ಸ್ಥಳದ ದಕ್ಷಿಣಭಾಗ ಉನ್ನತವಾಗಿದ್ದರೆ	ನೂರು ವರ್ಷ
೫.	ಸ್ಥಳದ ನೈಋತ್ಯಭಾಗ ಉನ್ನತವಾಗಿದ್ದರೆ	ಒಂದು ಸಾವಿರ ವರ್ಷ
೬.	ಸ್ಥಳದ ಪಶ್ಚಿಮಭಾಗ ಉನ್ನತವಾಗಿದ್ದರೆ	ಐದುನೂರು ವರ್ಷ
೭.	ಸ್ಥಳದ ವಾಯುವ್ಯಭಾಗ ಉನ್ನತವಾಗಿದ್ದರೆ	ಹನ್ನೆರಡು ವರ್ಷ
೮.	ಸ್ಥಳದ ಉತ್ತರದಿಕ್‌ಭಾಗ ಉನ್ನತವಾಗಿದ್ದರೆ	ಎಂಟು ವರ್ಷ
೯.	ಸ್ಥಳದ ಈಶಾನ್ಯಭಾಗ ಉನ್ನತವಾಗಿದ್ದರೆ	ಆರು ವರ್ಷ

ಶ್ಲೋಕ ೧೭ರಿಂದ ೨೧ರವರೆಗೆ ಐದು ಶ್ಲೋಕಗಳಲ್ಲಿ ಮನೆಯ ನಿವೇಶನದ ಆಯ್ಕೆಯನ್ನು ಬೇರೆ ಬೇರೆ ದೃಷ್ಟಿ ಕೋನಗಳಿಂದ ಪರೀಕ್ಷಿಸಿ ಮಾಡುವ ಕ್ರಮವನ್ನು ವಿವರಿಸಲಾಗಿದೆ. ಅಂದರೆ ನಿವೇಶನದ ಆಯ್ಕೆಯನ್ನು ಬೇರೆ ಬೇರೆ ದೃಷ್ಟಿ ಕೋನಗಳಿಂದ ಪರೀಕ್ಷಿಸಿ ಮಾಡಬೇಕೆಂದು ವಿವರಿಸಲಾಗಿದೆ. ಮುಖ್ಯವಾಗಿ ನಿವೇಶನದ ಆಯ್ಕೆಯಲ್ಲಿ ಭೂಪರೀಕ್ಷೆ, ಸ್ಥಳದ ಆಕಾರ, ದಿಕ್-ನಿರ್ಣಯ ಮತ್ತು ವೀಥಿನಿರ್ಣಯಗಳಿಗೆ ಶಿಲ್ಪಶಾಸ್ತ್ರಜ್ಞರು ಪ್ರಾಧಾನ್ಯವನ್ನು ಕೊಟ್ಟಿರುತ್ತಾರೆ. ಭಾರತೀಯರ ದೃಷ್ಟಿಯಿಂದ ಮನೆಯೆಂಬುದು ವಾಸ ಯೋಗ್ಯವಾಗಿ ದೈನಂದಿನ ಜೀವನವನ್ನು ಸುಖಶಾಂತಿಯಿಂದ ನೆರವೇರಿಸಲು ಮತ್ತು ಗೃಹಸ್ಥನಾದವನ ಆಧ್ಯಾತ್ಮಿಕವಿಧಿವಿಧಾನಗಳನ್ನು ನೆರವೇರಿಸಲು ಬೇಕಾದ ಕೇಂದ್ರಸ್ಥಳ. ಅಂತಹ ಮನೆಯು ಬರೇ ಮಣ್ಣಿನ, ಕಲ್ಲಿನ ಇಲ್ಲವೇ ಮರಮಟ್ಟುಗಳ, ಗೋಡೆ-ಮಾಡುಗಳ ರಚನೆಯಲ್ಲ. ಅದಕ್ಕೂ ಅದರ ಭೂಪ್ರದೇಶಕ್ಕೂ, ಹವಾಮಾನಾದಿ ಭೌಗೋಳಿಕತೆಗೂ, ಆಕಾಶಕಾಯದ ಗ್ರಹ-ನಕ್ಷತ್ರಾದಿಗಳ ಚಲನವಲನಗಳಿಗೂ, ಸೃಷ್ಟಿಯ ಮೂಲವಾದ ಪಂಚಭೂತಗಳಿಗೂ, ವಿಶೇಷತಃ ಆಧ್ಯಾತ್ಮಿಕತೆಗೂ, ಅತಿ ನಿಕಟವಾದ

ಸಂಬಂಧವಿದೆ. ಅವೆಲ್ಲವುಗಳ ಸಾಮೂಹಿಕ ಕ್ರಿಯೆಯ ಅಥವಾ ಶಕ್ತಿಪ್ರಭಾವದ ದಿವ್ಯ ಚೈತನ್ಯದ ಮೇಲೆ ವಾಸ್ತು ಬೆಳೆದು ನಿಂತಿದೆ. ಉದಾಹರಣೆಗೆ ಹವಾಮಾನದ ಪ್ರಭಾವ ಪ್ರಾಣಿ ಜಗತ್ತಿನ ಮೇಲೆ ಎಷ್ಟಿದೆ ಎಂದರೆ ಒಂದು ಪ್ರದೇಶದ ಹವಾಮಾನದಲ್ಲಿ ಹುಟ್ಟಿ ಬೆಳೆಯುವ ಸಸ್ಯಪ್ರಾಣಿಗಳು ಇನ್ನೊಂದು ಹವಾಮಾನದಲ್ಲಿ ಇಲ್ಲ. ಉಷ್ಣವಲಯದ ಸಸ್ಯ ಶೀತವಲಯದಲ್ಲಿ ಚೆನ್ನಾಗಿ ಬೆಳೆಯುವುದಿಲ್ಲ. ಹವಾಮಾನದ ಇಂತಹ ಶಕ್ತಿಪ್ರಭಾವವನ್ನು ವಾಸ್ತುಶಾಸ್ತ್ರ ಗಣನೆಗೆ ತೆಗೆದುಕೊಳ್ಳುತ್ತದೆ. ಆದ ಕಾರಣ ಭೂಪರೀಕ್ಷೆ ಮಾತ್ರವಲ್ಲದೆ, ದಿಕ್ಕು ಮೊದಲಾದವುಗಳಿಗೂ ಮಹತ್ವವಿದೆ. ದಿಕ್ಕು ಎಂದ ತಕ್ಷಣ ಅದರ ವ್ಯಾಪ್ತಿ ಅಲ್ಲಿಗೇ ಸೀಮಿತವಾಗಿಲ್ಲ. ಭೂಮಿಯ ಆಕಾರ, ಪ್ಲವ, ವೀಥಿನಿರ್ಣಯಾದಿಗಳೂ ಅದರೊಂದಿಗೆ ಸೇರುತ್ತವೆ. ದಿಕ್ಕುಗಳಿಗಿರುವ ಇಂತಹ ಪ್ರಾಧಾನ್ಯಕ್ಕೆ ಭೌಗೋಳಿಕತೆ ಹಾಗೂ ಗ್ರಹಾದಿಗಳ ಸಂಬಂಧವೇ ಕಾರಣವಾಗಿದೆ. ಪೂರ್ವ ಮತ್ತು ಉತ್ತರ ದಿಕ್ಕುಗಳು ವಾಸ್ತುವಿನ ದೃಷ್ಟಿಯಲ್ಲಿ ಅತ್ಯುತ್ತಮ. ಅವುಗಳ ಪೈಕಿ ಪೂರ್ವ ಅತಿ ಶ್ರೇಷ್ಠ. ಇದಕ್ಕೆ ವೈಜ್ಞಾನಿಕ ಕಾರಣದಂತೆ ಆಧ್ಯಾತ್ಮಿಕ ಕಾರಣವೂ ಇದೆ. ಆಧ್ಯಾತ್ಮಿಕವಾಗಿ ಸೂರ್ಯ ಪೂರ್ವದಿಕ್ಕಿನ ದೇವತೆ. ಬೆಳಿಗ್ಗೆ ಎದ್ದೊಡನೆ ಕಾಣುವುದು ಅವನನ್ನು. ಬೆಳಗ್ಗಿನ ಅರ್ಘ್ಯ, ಆರಾಧನೆ ಅವನಿಗೇ. ವಾಸ್ತುಮಂಡಲದಲ್ಲಿಯೂ ಅವನೇ ಪೂರ್ವದಿಕ್ಕಿನ ಅಧಿಪತಿ. ವೈಜ್ಞಾನಿಕವಾಗಿ ಅವನ ಬೆಳಗಿನ ಹೊತ್ತಿನ ಕಿರಣಗಳು ಮಾನವನ ಶರೀರದ ಮೇಲೆ ಬಿದ್ದಾಗ 'ಡಿ' ಜೀವಸತ್ವ ಒದಗುತ್ತದೆ. ಆತನ ಕಿರಣ ಆರೋಗ್ಯಕಾರಕ. ಅದೇ ಅಪರಾಹ್ನ ಕಾಲದ ಕಿರಣಗಳು ಹಿತಕರವಲ್ಲ. ಆದುದರಿಂದಲೇ ವಾಸ್ತುವಿನಲ್ಲಿ ಉತ್ತಮವಾದ ನಿವೇಶನಕ್ಕೆ ಪೂರ್ವ ತೆರೆದಿರುತ್ತದೆ. ಸೂರ್ಯನ ಬೆಳಗ್ಗಿನ ಕಿರಣಗಳು ಮನೆಯ ಒಳಗೆ ನಿರಾತಂಕವಾಗಿ ಪ್ರವೇಶಿಸಲು ಅನುಕೂಲವಾಗುತ್ತದೆ. ಪಶ್ಚಿಮದಿಕ್ಕು ಪೂರ್ವಕ್ಕಿಂತ ಹೆಚ್ಚು ಉನ್ನವಾಗಿರಬೇಕೆಂದು ನಿಯಮಿಸುತ್ತದೆ ವಾಸ್ತುಶಾಸ್ತ್ರ. ಅದರಿಂದಾಗಿ ಅಪರಾಹ್ನದ ಸೂರ್ಯನ ಅಹಿತಕರ ಕಿರಣಗಳು ಮನೆಯ ಒಳಗೆ ಪ್ರವೇಶಿಸಿದಂತೆ ತಡೆಯೊಡ್ಡಿದಂತಾಗುತ್ತದೆ.

ಭಾರತದ ದಕ್ಷಿಣದ ತುದಿ ಭೂಮಧ್ಯರೇಖೆಯಿಂದ 8° ಉತ್ತರಕ್ಕಿದೆ. 23½°ಯ ಕರ್ಕವೃತ್ತ ಉತ್ತರದಲ್ಲಿ ಅಲಹಾಬಾದಿನಲ್ಲಿ ಹಾದು ಹೋಗುತ್ತದೆ. ಆದುದರಿಂದ ನಮ್ಮ ದೇಶದ ಹೆಚ್ಚಿನ ಭಾಗ, ಅದರಲ್ಲಿಯೂ ದಕ್ಷಿಣಭಾರತ ಉಷ್ಣವಲಯದಲ್ಲಿಯೇ ಇದ್ದು ಸೂರ್ಯನ ಗತಿಗನುಸಾರವಾಗಿ ಉತ್ತರಾಯಣ - ದಕ್ಷಿಣಾಯನಗಳ ಪ್ರಭಾವವೂ ನಮ್ಮ ಪ್ರದೇಶದ ಮೇಲಿದೆ. ವಿಶೇಷವಾಗಿ ಉತ್ತರಾಯಣ ಕಾಲದ ಹೆಚ್ಚಿನ ಅವಧಿ ಭಾರತದ ಮೇಲೆಯೇ ಇರುವುದರಿಂದ ಇಲ್ಲಿನ ಗೃಹ ನಿವೇಶನಗಳಲ್ಲಿ ಉತ್ತರಾಯಣದ ಸೂರ್ಯನ ಕಿರಣಗಳ ಪ್ರಭಾವ ಹೆಚ್ಚಾಗಿದ್ದು ಗೃಹನಿರ್ಮಾಣದಲ್ಲಿ ಉತ್ತರದಿಕ್ಕು ಪ್ರಧಾನ್ಯವನ್ನು ಪಡೆದಿರುತ್ತದೆ. ದಕ್ಷಿಣ ಉನ್ನತವಾಗಿದ್ದು, ಉತ್ತರ ತಗ್ಗಾಗಿರಬೇಕೆಂಬುದು ಈ ಕಾರಣದಿಂದಲೇ. ದಕ್ಷಿಣಭಾಗ ಎತ್ತರವಾದೊಡನೆ ದಕ್ಷಿಣದ ಸೂರ್ಯನ ತಾಪದ ಪೆಟ್ಟಿಗೆ ತಡೆ ಸಿಗುತ್ತದೆ. ಅಲ್ಲದೆ ಮರಗಳನ್ನು ಮನೆಯ ಸುತ್ತಮುತ್ತ ನೆಡುವಾಗಲೂ ಶಾಸ್ತ್ರಕಾರರು ಉದ್ದವಾಗಿ ಮೇಲಕ್ಕೆ ಹೋಗುವ ಅಡಿಕೆಮರವನ್ನು ದಕ್ಷಿಣ ದಿಕ್ಕಿನಲ್ಲಿಯೂ, ತೆಂಗಿನ ಮರವನ್ನು ಪಶ್ಚಿಮ ದಿಕ್ಕಿನಲ್ಲಿಯೂ ನೆಡಬೇಕೆಂದು ವಿಧಿಸುತ್ತಾರೆ. ನಮ್ಮ ಭೌಗೋಳಿಕ ಪರಿಸರಕ್ಕೆ ಈ ನಿಯಮ ಅತ್ಯಂತ ಸ್ವಾಗತಾರ್ಹ.

ಪೂರ್ವಾದಿ ಚತುರ್ದಿಕ್ಕುಗಳು ಪ್ರಧಾನ ದಿಕ್ಕುಗಳಾದರೆ ಈಶಾನ್ಯಾದಿಗಳು ವಿದಿಕ್ಕುಗಳು. ಅವುಗಳು ಉತ್ತರ-ಪೂರ್ವ, ಪೂರ್ವ-ದಕ್ಷಿಣ ಇತ್ಯಾದಿ ಎರಡೆರಡು ಪ್ರಧಾನ ದಿಕ್ಕುಗಳ ಸಂಧಿ ಸ್ಥಳಗಳು. ಸಂಧಿ ಸ್ಥಳಗಳು ಎರಡರ ಶಕ್ತಿ ಕೇಂದ್ರಗಳಾದುದರಿಂದ ಅವುಗಳು ಶಕ್ತಿ ವಿಪರೀತತೆಯಿಂದ ಕೂಡಿದವುಗಳೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಆ ವೈಪರೀತ್ಯವನ್ನು ದೂರಮಾಡುವುದಕ್ಕಾಗಿಯೇ ಪ್ರಧಾನ ದಿಕ್ಕುಗಳ ನಿರ್ಣಯವನ್ನು ಖಚಿತಪಡಿಸಿಕೊಳ್ಳಬೇಕಾಗುತ್ತದೆ.

ವಾಸ್ತುವಿನ ದೃಷ್ಟಿಯಲ್ಲಿ ದಕ್ಷಿಣ, ನೈಋತ್ಯ ಮತ್ತು ಪಶ್ಚಿಮ ಭಾಗಗಳು ಉನ್ನತವಾಗಿರುವುದು ಶ್ರೇಯಸ್ಕರವಾದುದರಿಂದ ಅದರಲ್ಲಿಯೂ ನೈಋತ್ಯ ಅತಿ ಉನ್ನತವಾಗಿರಬೇಕಾದುದರಿಂದ ಮನೆಗೆ ಪಾಯ ತೆಗೆಯುವಾಗ ಮತ್ತು ಕಟ್ಟಡ ಕಟ್ಟುವಾಗಲೂ ಈ ಅಂಶವನ್ನು ಗಮನದಲ್ಲಿ ಇಟ್ಟು ಕೊಳ್ಳಬೇಕು. ಆದುದರಿಂದ ಪಾಯ ತೆಗೆಯುವ ಕಾರ್ಯ ಈಶಾನ್ಯದಿಂದ ಪ್ರಾರಂಭವಾಗಿ ಆಗ್ನೇಯಕ್ಕಾಗಿ ನೈಋತ್ಯಕ್ಕೂ ಅದೇ ರೀತಿ ಈಶಾನ್ಯದಿಂದ ತೊಡಗಿ ವಾಯುವ್ಯಕ್ಕಾಗಿ ನೈಋತ್ಯಕ್ಕೂ ತಂದು ನಿಲ್ಲಿಸಬೇಕು. ಅಲ್ಲದೆ ಕಟ್ಟಡ ಕಟ್ಟುವಾಗ ಮೊದಲು ನೈಋತ್ಯದಿಂದ ಪ್ರಾರಂಭಿಸಿ ಆಗ್ನೇಯಕ್ಕಾಗಿ ಈಶಾನ್ಯ ದಿಕ್ಕಿಗೂ ಅದೇ ರೀತಿ ನೈಋತ್ಯದಿಂದ ವಾಯುವ್ಯಕ್ಕಾಗಿ ಈಶಾನ್ಯ ದಿಕ್ಕಿಗೂ ಹೋಗುವಂತೆ ರಚಿಸಿ ಅಂತ್ಯಗೊಳಿಸಬೇಕು. ಅಲ್ಲದೆ ಮನೆಗೆ ಏಣಿ ಮೆಟ್ಟಿಲುಗಳನ್ನು ರಚಿಸುವಾಗ ಇದೇ ತತ್ತ್ವಕ್ಕೆ ಅನುಗುಣವಾಗಿ ಉತ್ತರದಿಂದ ದಕ್ಷಿಣ ದಿಕ್ಕಿಗೆ ಏರುವಂತೆ ಅಥವಾ ಪೂರ್ವದಿಂದ ಪಶ್ಚಿಮದಿಕ್ಕಿಗೆ ಏರುವಂತೆ ಇಲ್ಲವೇ ಉತ್ತರದಿಂದ ದಕ್ಷಿಣಕ್ಕಾಗಿ ಪಶ್ಚಿಮಕ್ಕೆ ತಿರುಗುವಂತೆ ಅಥವಾ ಪೂರ್ವದಿಂದ ಪಶ್ಚಿಮಕ್ಕೆ ಹೋಗಿ ದಕ್ಷಿಣಕ್ಕೆ ತಿರುಗುವಂತೆಯೂ ಮಾಡಬಹುದು.

೧೧. ಮನೆಯ ಸುತ್ತಮುತ್ತ ನೆಡಬಹುದಾದ ವೃಕ್ಷಗಳು

ಶ್ಲೋಕ : ಪೂರ್ವಸ್ಯಾಂ ಬಕುಲೋ ವಟಶ್ಚ ಶುಭದೋಽವಾಚ್ಯಾಂ ತಥೋದುಂಬರ-
ಶ್ಚಿಂಚಾ ಚಾಂಬುಪತೌ ತು ಪಿಪ್ಪಲತರುಃ ಸಪ್ತಚ್ಛದೋಽಪಿ ಸ್ಮೃತಃ
ಕೌಬೇರ್ಯಾಂ ದಿಶಿ ನಾಗಸಂಜ್ಞಿತತರುಃ ಪ್ಲಕ್ಷಶ್ಚ ಸಂಶೋಭನಾಃ
ಪ್ರಾಚ್ಯಾದೌ ತು ವಿಶೇಷತಃ ಪನಸಪೂಗೌ ಕೇರಚೂತೌ ಕ್ರಮಾತ್ ॥೨೩॥

ತಾತ್ಪರ್ಯ :

ಮನೆಯ ಪೂರ್ವದಿಕ್ಕಿನಲ್ಲಿ ಬಕುಲ ಮತ್ತು ಗೋಳಿಮರಗಳು ಶುಭಪ್ರದ. ದಕ್ಷಿಣದಲ್ಲಿ ಅತ್ತಿ ಮತ್ತು ಹುಣಿಸೇಮರಗಳು ಯೋಗ್ಯ. ಪಶ್ಚಿಮದಲ್ಲಿ ಅಶ್ವತ್ಥ ಮತ್ತು ಹಾಲೇಮರಗಳು ವಿಹಿತ. ಉತ್ತರದಲ್ಲಿ ನಾಗ ಸಂಪಿಗೆ ಮತ್ತು ಪ್ಲಕ್ಷ (ಇತ್ತಿ) ವೃಕ್ಷಗಳು ಶುಭದಾಯಕಗಳು.

ಇವುಗಳಲ್ಲದೆ, ವಿಶೇಷವಾಗಿ ಪೂರ್ವದಲ್ಲಿ ಹಲಸು, ದಕ್ಷಿಣದಲ್ಲಿ ಅಡಿಕೆ ಮರ, ಪಶ್ಚಿಮದಲ್ಲಿ ತೆಂಗಿನ ಮರ ಮತ್ತು ಉತ್ತರದಲ್ಲಿ ಮಾವಿನ ಮರಗಳನ್ನು ಬೆಳೆಸುವುದು ಒಳ್ಳೆಯದು.

ವಿ.ವಿ. :

ಮರಗಳ ಸ್ಥಾನಗಳು ಮತ್ತು ಫಲ

ದಿಕ್ಕು	ಮರ	ಫಲ
ಪೂರ್ವ	ಬಕುಲ (ರೆಂಜೆ), ಗೋಳಿ, ಹಲಸು	ಶುಭಪ್ರದ
ದಕ್ಷಿಣ	ಅತ್ತಿ, ಹುಣಸೆ, ಅಡಿಕೆ ಮರ	ಶುಭಪ್ರದ
ಪಶ್ಚಿಮ	ಅಶ್ವತ್ಥ, ಹಾಲೇಮರ, ತೆಂಗು	ಶುಭಪ್ರದ
ಉತ್ತರ	ನಾಗಸಂಪಿಗೆ, ಪ್ಲಕ್ಷ, ಮಾವು	ಶುಭಪ್ರದ

ಮನೆಯ ಸುತ್ತಮುತ್ತ ಒಳ್ಳೆಯ ವೃಕ್ಷಗಳಿದ್ದರೆ ವಾತಾವರಣ ತಂಪಾಗಿರುತ್ತದೆ. ಮರಗಳಿಂದ ಬಿಡುಗಡೆಯಾಗುವ ಆಮ್ಲಜನಕದಿಂದ ವಾತಾವರಣದ ಗಾಳಿ ಪರಿಶುದ್ಧವಾಗುತ್ತದೆ. ಅಲ್ಲದೆ ಮನುಷ್ಯನ ನಿಶ್ವಾಸದಲ್ಲಿರುವ ಅಂಗಾರಾಮ್ಲವನ್ನು ಅವುಗಳು ಹೀರಿ ಮನುಷ್ಯನಿಗೆ ಬೇಕಾದ ಆಮ್ಲಜನಕವನ್ನು ಒದಗಿಸುತ್ತವೆ.

ಭಾರತೀಯ ಧಾರ್ಮಿಕ ಸಂಸ್ಕೃತಿಗೂ ಮರಗಿಡಗಳಿಗೂ ಅವಿನಾ ಸಂಬಂಧವಿದೆ. ಅಶ್ವತ್ಥವೇ ಮೊದಲಾದ ಮರಗಳು ಮನುಷ್ಯನಿಗೆ ಧಾರ್ಮಿಕವಾಗಿ ಶಾಂತಿಯನ್ನು ನೀಡುವವುಗಳಾಗಿವೆ. ಮನುಷ್ಯನ ಬದುಕಿಗೆ ಆಮ್ಲಜನಕ ಎಷ್ಟು ಮುಖ್ಯವೋ ಅದೇ ರೀತಿ ಭಾರತೀಯ ಧಾರ್ಮಿಕ ಜೀವನದಲ್ಲಿ ಮರಗಿಡಗಳು ಅತ್ಯಂತ ಪ್ರಧಾನವಾದವುಗಳಾಗಿವೆ. ನಿತ್ಯನೈಮಿತ್ತಿಕ ಪೂಜೆ-ಪುರಸ್ಕಾರಗಳು, ಹೋಮ ಹವನ ಕಲಶಗಳು, ಶುಭಶೋಭನಗಳು ಮೊದಲಾದವುಗಳನ್ನು ನೆರವೇರಿಸಬೇಕಿದ್ದರೆ ಅವುಗಳು ಬೇಕೇ ಬೇಕು.

ಮನುಷ್ಯನ ಆರೋಗ್ಯವನ್ನು ಕಾಪಾಡುವ ಮಹತ್ವದ ಕಾರ್ಯದಲ್ಲಿ ಮರಗಿಡಗಳ ಕೊಡುಗೆ ಅಪಾರವಾಗಿದೆ. ಸಣ್ಣ ತುಳಸಿಯ ಗಿಡವೇ ಇದಕ್ಕೆ ಉದಾಹರಣೆಯಾಗಿದೆ. ಇದರಲ್ಲಿ ಔಷಧೀಯ ಗುಣ ಅಪಾರವಾದುದು. ನಿತ್ಯ ಹರಿತ್ತಿನಿಂದ ಮೆರೆಯುತ್ತಿರುವ ಪ್ರದೇಶದಲ್ಲಿ ವಾಸಿಸುವವರಿಗೆ ಕಣ್ಣಿಗೆ ಬರುವ ರೋಗಬಾಧೆ ಅತಿ ಕಡಿಮೆಯೆಂಬುದು ನಿತ್ಯಸತ್ಯ. ಆದುದರಿಂದ ಮರಗಿಡಗಳು ಮನುಷ್ಯನ ನಿತ್ಯಜೀವನಕ್ಕೆ ವೈಜ್ಞಾನಿಕವಾಗಿ, ಧಾರ್ಮಿಕವಾಗಿ ಹಾಗೂ ಔಷಧೀಯವಾಗಿ ಅಗತ್ಯವಾಗಿ ಬೇಕಾದವುಗಳಾಗಿವೆ. ಇಂತಹ ಗುಣಾಂಶಗಳನ್ನು ಮನಗಂಡು ವಾಸ್ತುಶಾಸ್ತ್ರಕಾರರು ಮನೆಗಳ ಸುತ್ತಮುತ್ತ ಉಪಯುಕ್ತವಾದ ಮರಗಿಡಗಳನ್ನು ನೆಡಲು ನಿರ್ದೇಶಿಸಿದರು. ಆ ವೃಕ್ಷಜಾತಿಗಳ ಆಯುರ್ವೇದೀಯ ಔಷಧ ಗುಣಗಳನ್ನು ಒಳಗೊಂಡ ವಿವರವನ್ನು ಮುಂದೆ ಪ್ರತ್ಯೇಕವಾಗಿ ಕೊಡಲಾಗಿದೆ.

ಶ್ಲೋಕ : ಅಶ್ವತ್ಥೋಽಗ್ನಿಭಯಂ ಕರೋತಿ ಬಹುಧಾ ಪ್ಲಕ್ಷಃ ಪ್ರಮಾದಪ್ರದೋ
ನ್ಯಗ್ರೋಧಃ ಪರಶಸ್ತ್ರಪಾತಮುದರವ್ಯಾಧಿಂ ತಥೋದುಂಬರಃ
ಸಂಪ್ರೋಕ್ತಪ್ರತಿದಿಕ್ ಸ್ಥಿತಾಸ್ತ್ವಪಿ ಚ ತೇ ಚಾನ್ಯೇ ಸುವರ್ಣಾತ್ಮಕಾ -
ಶ್ಛೇದ್ಯಾ ಮಂದಿರತಸ್ತ್ರರೂಚ್ಛ್ರಯುಗ ಸೀಮಾಭ್ಯಂತರಸ್ಥಾ ಯದಿ ॥೨೩॥

ತಾತ್ಪರ್ಯ :

ಈ ಮೊದಲು ಹೇಳಿದುದಕ್ಕೆ (ಇಪ್ಪತ್ತೆರಡನೆಯ ಶ್ಲೋಕ) ವಿರುದ್ಧ ದಿಕ್ಕಿನಲ್ಲಿ (ಪಶ್ಚಿಮದ ಬದಲು ಪೂರ್ವದಲ್ಲಿ) ಅಶ್ವತ್ಥವೃಕ್ಷ ಇದ್ದರೆ ಅಥವಾ ಅದನ್ನು ನೆಟ್ಟರೆ ಅದು ಅಗ್ನಿಭಯವನ್ನು ಉಂಟುಮಾಡುತ್ತದೆ. ಪ್ಲಕ್ಷವನ್ನು ದಕ್ಷಿಣದಲ್ಲಿ ನೆಟ್ಟರೆ ಪ್ರಮಾದವನ್ನು (ಮತಿವಿಕಲತೆ) ಉಂಟುಮಾಡುತ್ತದೆ. ನ್ಯಗ್ರೋಧವು (ಆಲ) ಪಶ್ಚಿಮದಲ್ಲಿದ್ದರೆ ಶತ್ರುಭಯ ಅಧಿಕವಾಗಿರುತ್ತದೆ. ಅತ್ತಿ ಮರವು ದಕ್ಷಿಣದ ಬದಲು ಉತ್ತರ ದಿಕ್ಕಿನಲ್ಲಿದ್ದರೆ ಉದರವ್ಯಾಧಿಯನ್ನು ಉಂಟು ಮಾಡುತ್ತದೆ. ಅಲ್ಲದೆ ಮನೆಯ ಸಮೀಪ ಅಂದರೆ ಮನೆಯಿಂದ ಮರದ ಎತ್ತರದ ಇಮ್ಮಡಿ ಪ್ರಮಾಣಕ್ಕಿಂತ ಕಡಿಮೆ ದೂರದಲ್ಲಿರುವ ಯಾವುದೇ ಮರವನ್ನಾದರೂ, ಅದು ಚಿನ್ನವನ್ನೇ ಕೊಡುತ್ತಿದ್ದರೂ ಕೂಡ ಅದನ್ನು ಕಡಿಯಬೇಕು.

ವಿ.ವಿ. :

ವಿರುದ್ಧ ದಿಕ್ಕಿನಲ್ಲಿರುವ ಮರಗಳಿಂದಾಗುವ ಪರಿಣಾಮ

	ವೃಕ್ಷದ ಹೆಸರು	ದಿಕ್ಕು	ಫಲ
೧.	ಅಶ್ವತ್ಥ	ಪೂರ್ವ	ಅಗ್ನಿಭಯ
೨.	ಪ್ಲಕ್ಷ (ಬಸರಿ)	ದಕ್ಷಿಣ	ಮತಿವಿಕಲತೆ
೩.	ಆಲ	ಪಶ್ಚಿಮ	ಶತ್ರುಭಯ
೪.	ಅತ್ತಿ	ಉತ್ತರ	ಉದರವ್ಯಾಧಿ

ಶ್ಲೋಕ : ಶಸ್ತಾ ಮಂದಿರಪಾರ್ಶ್ವಪೃಷ್ಠದಿಶಿ ತು ಶ್ರೀವೃಕ್ಷ ಬಿಲ್ವಾಭಯಾ
ವ್ಯಾಧಿಘ್ನಾಮಲಕೀಸುರದ್ರುಮಪಲಾಶಾಶೋಕ ಮಾಲೇಯಕಾಃ
ಪುನ್ನಾಗಾಸನ ಚಂಪಕಾಶ್ಚ ಖದಿರಸ್ತದ್ವತ್ ಕದಲ್ಯಾದಯೋ
ಜಾತೀ ನಾಗಲತಾದಯೋಽಪಿ ಸಕಲಾಃ ಸರ್ವತ್ರ ಸಂಶೋಭನಾಃ ॥೨೪॥

ತಾತ್ಪರ್ಯ :

ಮನೆಯ ಎಡ, ಬಲ ಮತ್ತು ಹಿಂದಿನ ಭಾಗಗಳಲ್ಲಿ ಚಂದನ, ಬಿಲ್ವ, ಅಭಯ, ವ್ಯಾಧಿಘ್ನ, ನೆಲ್ಲಿ, ದೇವದಾರು, ಪಲಾಶ, ಅಶೋಕ, ಮಾಲೇಯಕ, ಪುನ್ನಾಗ, ಆಸನ, ಸಂಪಿಗೆ, ಖದಿರಗಳನ್ನು ನೆಡಬೇಕು. ಅಲ್ಲದೆ ಬಾಳೆ, ಜಾಜಿ, ವೀಳ್ಯದೆಲೆ ಮೊದಲಾದವುಗಳನ್ನು ಅಂದವಾಗಿ ಕಾಣುವಂತೆ ಎಲ್ಲ ಕಡೆಗಳಲ್ಲಿಯೂ ನೆಡಬಹುದು. ಅದು ಪ್ರಶಸ್ತವಾದುದಾಗಿದೆ.


ಶ್ಲೋಕ : ಅಂತಸ್ಸಾರಾಸ್ತು ವೃಕ್ಷಾಃ ಪನಸತರುಮುಖಾಃ ಸರ್ವಸಾರಾಶ್ಚ ಶಾಕಾ -
ಶ್ಚಿಂಚಾದ್ಯಾಸ್ತಾಲಕೇರ ಕ್ರಮುಕಯವಫಲಾದ್ಯಾ ಬಹಿಸ್ಸಾರವೃಕ್ಷಾಃ
ನಿಸ್ಸಾರಾಃ ಶಿಗ್ರುಸಪ್ತಚ್ಛದಶುಕತರವಃ ಕಿಂಶುಕಾದ್ಯಾಶ್ಚ ಕಾರ್ಯಾ -
ಸ್ತ್ವೇಷ್ವಾದ್ಯಾ ಮಧ್ಯಭಾಗೇ ಬಹಿರಪಿ ಚ ತತಃ ಸರ್ವಸಾರಾಸ್ತತೋಽನ್ಯೇ ॥೨೫॥

ತಾತ್ಪರ್ಯ :

ಮರಗಳಲ್ಲಿ (1) ಅಂತಸ್ಸಾರವಿರುವವುಗಳು, (2) ಬಹಿಸ್ಸಾರವಿರುವವುಗಳು, (3) ಸರ್ವಸಾರವಿರುವವುಗಳು ಮತ್ತು (4) ನಿಸ್ಸಾರವಾದವುಗಳೆಂದು ನಾಲ್ಕು ವಿಧ. ತಿರುಳು ಗಟ್ಟಿಯಾಗಿರುವ ಹಲಸು ಮೊದಲಾದ ಮರಗಳು ಅಂತಸ್ಸಾರವಿರುವವುಗಳು. ಹೊರಗಿನ ಭಾಗ ಗಟ್ಟಿಯಾಗಿರುವ ತಾಳೆ, ತೆಂಗು, ಅಡಿಕೆ ಮೊದಲಾದ ಮರಗಳು ಬಹಿಸ್ಸಾರದವುಗಳು. ಕಾಂಡದ ಎಲ್ಲ ಭಾಗವು ಗಟ್ಟಿಯಾಗಿರುವ ಹುಣಿಸೆ, ಸಾಗುವಾನಿ ಮೊದಲಾದವುಗಳು ಸರ್ವಸಾರದವುಗಳು. ಯಾವ ಭಾಗವೂ ಗಟ್ಟಿಯಾಗಿರದ, ನುಗ್ಗೆ, ಸಪ್ತಚ್ಛದ, ಶುಕತರು, ಕಿಂಶುಕ ಮೊದಲಾದವುಗಳು ನಿಸ್ಸಾರವಾದ ಮೆದುಮರಗಳು. ಅವುಗಳಲ್ಲಿ ಅಂತಸ್ಸಾರದ ಹಲಸು ಮೊದಲಾದವುಗಳನ್ನು ಮಧ್ಯದ ಆವರಣದಲ್ಲಿಯೂ, ಅದಕ್ಕಿಂತ ಹೊರಗೆ ಸರ್ವಸಾರದ ಸಾಗುವಾನಿ ಮೊದಲಾದವುಗಳನ್ನೂ ಅನಂತರದಲ್ಲಿ ಬಹಿಸ್ಸಾರದ ಅಡಿಕೆ, ತೆಂಗು ಮೊದಲಾದವುಗಳನ್ನೂ ಅವೆಲ್ಲವುಗಳ ಹೊರಗೆ ನಿಸ್ಸಾರದ ಸಪ್ತಚ್ಛದ ಮೊದಲಾದವುಗಳನ್ನೂ ನೆಡಬೇಕು. (ಹೀಗೆ ನೆಟ್ಟರೆ ಅಪಾಯದ ಸಂಭವನೀಯತೆ ಇರುವುದಿಲ್ಲ).

ವಿ.ವಿ. :

ನೆಡುವ ಕ್ರಮವನ್ನು ಈ ಕೆಳಗಿನಂತೆ ಚಿತ್ರಿಸಬಹುದು.



ಚಿ.೧೯, ಅ. ೧, ಶ್ಲೋ ೨೫

1. ಅಂತಸ್ಸಾರದ ಮರಗಳು	ಹಲಸು ಇತ್ಯಾದಿ
2. ಸರ್ವಸಾರದ ಮರಗಳು	ಹುಣಿಸೆ ಇತ್ಯಾದಿ
3. ಬಹಿಸ್ಸಾರದ ಮರಗಳು	ತೆಂಗು, ಅಡಿಕೆ ಇತ್ಯಾದಿ
4. ನಿಸ್ಸಾರದ ಮರಗಳು	ಸಪ್ತಚ್ಛದ ಇತ್ಯಾದಿ

೧೨. ಮನೆಯ ಸುತ್ತ ಇರಬಾರದ ಮರಗಳು

ಶ್ಲೋಕ : ಕಾರಸ್ಕರಾರುಷ್ಕರ ಕಂಟಕಿದ್ರು ಶ್ಲೇಷ್ಮಾತಕಾಕ್ಷದ್ರುಮಪೀಲು ನಿಂಬಾಃ
ಸ್ನುಹಿ ಪಿಶಾಚದ್ರುಮಹೇಮದುಗ್ಧಾಃ ಸರ್ವತ್ರ ನೇಷ್ಟಾ ಅಪಿ ಶಿಗ್ರುರಂತಃ ||೨೬||

ತಾತ್ಪರ್ಯ :

ಕಾಸರಕ, ಕಳ್ಳಿ, ಮುಳ್ಳಿರುವ ಮರ, ಶ್ಲೇಷ್ಮಾತಕ, ಅಕ್ಷ, ಪೀಲು, ಕಹಿಬೇವು, ಪಿಶಾಚದ್ರುಮ, ಹೇಮದುಗ್ಧ, ನುಗ್ಗೆ ಮೊದಲಾದ ಮರಗಳನ್ನು ಎಲ್ಲಿಯೂ ನೆಡಬಾರದು. (ಅವುಗಳು ಮನೆಯ ಹತ್ತಿರ ಇರಲೇಬಾರದು)

೧೩. ದೇವಾಲಯದ ಸಮೀಪದಲ್ಲಿ ಮನೆಯ ಸ್ಥಾನಗಳು

ಶ್ಲೋಕ : ವಿಷ್ಣೋಃ ಪೃಷ್ಠೇ ಚ ವಾಮೇ ನರಭವನಮನರ್ಥಪ್ರದಂ ದಕ್ಷಿಣೇ ಚಾ-
ಪ್ಯಗ್ರೇ ಭಾಗೇ ಚ ಕಾಲೀ ನರಹರಿಶಿವ ತದ್ಭಿನ್ನ ಸರ್ವೋಗ್ರಮೂರ್ತೇಃ
ಆಯೋರ್ಣ ನಿಮ್ನಸ್ಥಲಸ್ಥೋ ಯದಿ ಮನುಜಗೃಹಂ ದಕ್ಷಿಣೇಽಗ್ರೇಽಸ್ಯ ತಸ್ಮಾ -
ದುಚ್ಚತ್ವಂ ನೇಷ್ಟಮಿಷ್ಟಂ ನಿಕಟಮಪಿ ತದನ್ಯತ್ರ ತತ್ಪಾದಭಾಜಾಮ್ ||೨೭||

ತಾತ್ಪರ್ಯ :

ವಿಷ್ಣುದೇವಾಲಯದ ಹಿಂಭಾಗ ಮತ್ತು ಎಡದ ಭಾಗದಲ್ಲಿ ಮನುಷ್ಯನ ವಾಸಗೃಹವನ್ನು ನಿರ್ಮಿಸಿದರೆ ಆ ಮನೆಯಲ್ಲಿ ವಾಸಮಾಡುವವನು ಅನರ್ಥಗಳನ್ನು ಎದುರಿಸಬೇಕಾಗುತ್ತದೆ. ಕಾಳಿ (ದುರ್ಗಾದೇವತೆ), ನರಸಿಂಹ, ಶಿವ ಮೊದಲಾದ ಉಗ್ರದೇವತೆಗಳ ದೇವಾಲಯದ ದಕ್ಷಿಣ ಭಾಗದಲ್ಲಿ (ಬಲ) ಮತ್ತು ಅಗ್ರಭಾಗ (ಮುಂದೆ)ದಲ್ಲಿರುವ ಮನೆಗಳಿಗೆ ದುರದೃಷ್ಟಗಳು ಬಂದೊದಗುತ್ತವೆ. ಒಂದು ವೇಳೆ ದೇವಾಲಯವು ನಿಮ್ನಸ್ಥಳ (ತಗ್ಗು ಪ್ರದೇಶ)ದಲ್ಲಿ ಇದ್ದರೆ ಅಂತಹ ದೇವಾಲಯದ ಬಲದ ಪಾರ್ಶ್ವ ಮತ್ತು ಎದುರು ಭಾಗದ ಸ್ಥಳದಲ್ಲಿ ಮನುಷ್ಯಾಲಯವನ್ನು ರಚಿಸಬಾರದು. ದೇವಾಲಯಕ್ಕಿಂತ ಎತ್ತರದ ಸ್ಥಳದಲ್ಲಿಯೂ ಮನುಷ್ಯಾಲಯಗಳನ್ನು ಕಟ್ಟಬಾರದು. ದೇವತೆಯ ಆಶ್ರಯದಲ್ಲಿ ಇರುವವರು ಕೂಡ (ಅರ್ಚಕರು ಮೊದಲಾದವರು) ಮೇಲೆ ತಿಳಿಸಿದ ಅಯೋಗ್ಯಸ್ಥಳಗಳಲ್ಲಿ ವಾಸಗೃಹವನ್ನು ನಿರ್ಮಿಸಬಾರದು. ಅವರು ತದ್ಭಿನ್ನವಾದ ಬೇರೆ ಸ್ಥಳದಲ್ಲಿ, ಹತ್ತಿರದಲ್ಲಾದರೂ ಕಟ್ಟಬಹುದು.

ವಿ.ವಿ. :

ದೇವಾಲಯದ ಸುತ್ತಮುತ್ತ ಮನುಷ್ಯಾಲಯಗಳನ್ನು ಕಟ್ಟುವಾಗ ಜಾಗ್ರತೆ ವಹಿಸಬೇಕಾಗುತ್ತದೆ. ನಗರ ಪ್ರದೇಶಗಳಲ್ಲಂತೂ ಸ್ಥಳಾಭಾವದಿಂದಾಗಿ ದೇವಾಲಯಗಳ ಒತ್ತಿನಲ್ಲಿ ಮನೆಗಳನ್ನು ಕಟ್ಟುತ್ತಾರೆ. ದೇವಸ್ಥಾನವಿರುವಾಗ ಅಲ್ಲಿ ಹತ್ತಿರದಲ್ಲಿ ಮನೆಗಳಿಗೆ ಯಾವ ಸ್ಥಳವು ಯೋಗ್ಯ? ಯಾವುದು ಅಯೋಗ್ಯ? ಎಂಬುದನ್ನು ತಿಳಿದೇ ಶಾಸ್ತ್ರವಿಧಿಯನ್ನು ಅನುಸರಿಸಿ ವಾಸಗೃಹಗಳನ್ನು ಕಟ್ಟಬೇಕು. ಇಲ್ಲದೇ ಹೋದರೆ ಅನರ್ಥಗಳಿಗೆ ಒಳಗಾಗಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಮೇಲಿನ ಶ್ಲೋಕದ

ತಾತ್ಪರ್ಯ ದೇವಾಲಯಗಳ ಸಮೀಪ ಮನೆಗಳನ್ನು ಕಟ್ಟುವವರಿಗೆ ಒಂದು ಮಾರ್ಗದರ್ಶಕ ಸೂತ್ರವಾಗಿದೆ. ಇಲ್ಲಿ ಸೂಚಿಸಿದ ಅಯೋಗ್ಯ ಸ್ಥಳಗಳನ್ನು ಬಿಟ್ಟು ಬೇರೆ ಕಡೆ ಮನೆಗಳನ್ನು ರಚಿಸಬಹುದು. ಅದು ಕ್ಷೇಮಕರ.

	ದೇವರು	ಗುಣ	ಸ್ಥಳ	ಫಲ
೧.	ವಿಷ್ಣು	ಸೌಮ್ಯಮೂರ್ತಿ	ಹಿಂಭಾಗ ಮತ್ತು ಎಡಭಾಗ	ಅಯೋಗ್ಯ
೨.	ಕಾಳಿ, ರುದ್ರ, ನರಸಿಂಹ	ಉಗ್ರಮೂರ್ತಿ	ಮುಂಭಾಗ ಮತ್ತು ಬಲಭಾಗ	ಅಯೋಗ್ಯ
೩.	ನಿಮ್ನ ಸ್ಥಳದ ದೇವರು		ಮುಂಭಾಗ ಮತ್ತು ಬಲಭಾಗ	ಅಯೋಗ್ಯ
೪.	ನಿಮ್ನ ಸ್ಥಳದ ದೇವರು		ಉಚ್ಚಸ್ಥಳ	ಅಯೋಗ್ಯ

ಶ್ಲೋಕ : ವ್ರೀಹಿಕ್ಷೇತ್ರಾದಿ ದೇವಾಲಯ ಜಲಧಿನದೀ ತಾಪಸಾಗಾರಗೋಷ್ಠ
ಗ್ರಾಮಾದೀನಾಮತೀವಾಂತಿಕಮಪಕುರುತೇ ನೈಕಧಾ ಮಂದಿರೇಷು
ದೇವಾಗಾರಾನ್ನರಾಣಾಮತಿಶುಭದಮಿದಂ ಕಿಂಚಿದೂನಂ ಸಮಂ ವಾ
ತಸ್ಮಾದಭ್ಯುನ್ನತಂ ಚ ದ್ವಿತಲವಿಧಿರಯಂ ನೇಷ್ಯತೇ ತತ್ಸಮೀಪೇ ॥೨೪॥

ತಾತ್ಪರ್ಯ :

ಬತ್ತದ ಗದ್ದೆ, ದೇವಾಲಯ, ಸಮುದ್ರ, ನದಿ, ಋಷ್ಯಾಶ್ರಮ, ಗೋಶಾಲೆ ಮೊದಲಾದವುಗಳ ಅತಿ ಸಮೀಪದಲ್ಲಿ ಮನೆಗಳನ್ನು ಕಟ್ಟಬಾರದು. ಕಟ್ಟಿದರೆ ಅದರಿಂದ ಕೆಟ್ಟದು ಅಥವಾ ಅಪಾಯ ಸಂಭವಿಸುತ್ತದೆ. ದೇವಾಲಯದ ಸ್ಥಳದ ಮಟ್ಟಕ್ಕೆ ಸಮವಾಗಿ ಅಥವಾ ಆ ಮಟ್ಟದಿಂದ ತಗ್ಗಿನಲ್ಲಿ ಕಟ್ಟಿದ ಮನೆ ಅತ್ಯಂತ ಮಂಗಳಕರವಾದುದು. ದೇವಾಲಯಕ್ಕಿಂತ ಉನ್ನತವಾದ ಮತ್ತು ಎರಡು ತಲದ ಮಾಳಿಗೆಯ ಮನೆಯನ್ನು ದೇವಾಲಯದ ಸಮೀಪದಲ್ಲಿ ಕಟ್ಟಲೇಬಾರದು.

ವಿ.ವಿ. :

ಬತ್ತದ ಗದ್ದೆಯಲ್ಲಿ ಸದಾಕಾಲ ನೀರು ನಿಲ್ಲಬೇಕಾಗುತ್ತದೆ. ಅದರ ಸಮೀಪದಲ್ಲಿ ಮನೆಯನ್ನು ಕಟ್ಟಿದರೆ ಮನೆಯ ಸುತ್ತಮುತ್ತ ನೀರು ಇದ್ದು ಆರೋಗ್ಯದ ರಕ್ಷಣೆ ಕಷ್ಟಸಾಧ್ಯವಾಗುತ್ತದೆ. ಮನುಷ್ಯಾಲಯವು ಹತ್ತಿರದಲ್ಲಿದ್ದರೆ ದೇವಾಲಯ ಹಾಗೂ ಋಷ್ಯಾಶ್ರಮಗಳ ಪಾವಿತ್ರ್ಯ ಮತ್ತು ಪರಿಸರ ಶುದ್ಧತೆಯನ್ನು ಇಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಸಮುದ್ರ ಮತ್ತು ನದೀ ಸಮೀಪದ ಮನೆಗಳು ಪ್ರಕೃತಿ ವಿಕೋಪಗಳ ತುತ್ತಿಗೆ ಬಲಿಯಾಗುತ್ತವೆ. ಗೋಶಾಲೆಯ ಸಾಮೀಪ್ಯವು ಕೊಚ್ಚೆ ಕೆಸರುಗಳಿಂದ ಆರೋಗ್ಯ ಹಾನಿಗೆ ಕಾರಣವಾಗುತ್ತದೆ. ಆದುದರಿಂದ ಗದ್ದೆ ಮೊದಲಾದವುಗಳ ಸಮೀಪದಲ್ಲಿ ಮನೆಗಳನ್ನು ಕಟ್ಟಬಾರದೆಂದು ಶಾಸ್ತ್ರಕಾರರು ಹೇಳುತ್ತಾರೆ.

ದೇವರು ಮತ್ತು ನರರಲ್ಲಿ ದೇವರೇ ಶ್ರೇಷ್ಠ. ಮಾನವನು ನೀಚ. ಹಾಗೆಯೇ ದೇವಾಲಯವು ಉಚ್ಚ. ನರಾಲಯವು ನೀಚ. ದೇವರ ಪಾರಮ್ಯ ಅಥವಾ ಶ್ರೇಷ್ಠತ್ವವನ್ನು ಗೌರವಿಸುವುದು ಶ್ರೇಯಸ್ಕರವಾದುದರಿಂದ ದೇವಾಲಯಕ್ಕಿಂತ ಉನ್ನತವಾದ ಮತ್ತು ಮಾಳಿಗೆಯ ಮನೆಯನ್ನು ದೇವಾಲಯದ ಸಮೀಪದಲ್ಲಿ ನಿರ್ಮಿಸಬಾರದು.

೧೪. ವರ್ಣಕ್ಕೆ ಅನುಗುಣವಾದ ಭೂಲಕ್ಷಣ

ಶ್ಲೋಕ : ವಿಪ್ರಾದಿಕ್ರಮತಃ ಕುಶೇಷುವನ ದೂರ್ವಾಕಾಶಯುಕ್ತಾ ಭುವ
ಸ್ತುಲ್ಯಾತಾನವಿತಾನಸಿಂಧುರರಸಾಬ್ದ್ಯಂಶಾಧಿದೀರ್ಘಾ ಅಪಿ
ಶ್ವೇತಾ ಪಾಟಲ ಪೀತಮೇಚಕರುಚಶ್ಚಾಜ್ಯಾಸೃಗನ್ನಾಸವಾ
ಮೋದಾಃ ಸ್ವಾದುಕಷಾಯತಿಕ್ತಕಟುಕಾಸ್ವಾದಾನ್ವಿತಾಶ್ಚ ಸ್ಮೃತಾಃ ॥೨೯॥

ತಾತ್ಪರ್ಯ :

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರವರ್ಣದವರಿಗೆ ಸಂಖ್ಯಾನುಕ್ರಮವಾಗಿ (1) ದರ್ಭೆ, (2) ಜೊಂಡುಹುಲ್ಲು, (3) ಗರಿಕೆ ಮತ್ತು (4) ಚಾಪೆ ಮೊದಲಾದವುಗಳಿಗೆ ಉಪಯೋಗಿಸುವ ಹುಲ್ಲಿನಿಂದ ಕೂಡಿದ, (1) ಉದ್ದ ಮತ್ತು ಅಗಲ ಸರಿಸಮವಾಗಿರುವ ಸಮಚತುರಶ್ರವ, (2) ಅಗಲಕ್ಕಿಂತ 1/8 ಅಂಶ ಉದ್ದ ಹೆಚ್ಚಾಗಿರುವ (3) ಅಗಲಕ್ಕಿಂತ 1/6 ಅಂಶ ಉದ್ದ ಹೆಚ್ಚಾಗಿರುವ ಮತ್ತು ಅಗಲಕ್ಕಿಂತ 1/4 ಅಂಶ ಉದ್ದ ಹೆಚ್ಚಾಗಿರುವ, (1) ಬಿಳಿ (2) ನಸುಗೆಂಪು (3) ಹಳದಿ ಮತ್ತು (4) ಕಪ್ಪು ಬಣ್ಣದ ಮಣ್ಣಿರುವ, (1) ತುಪ್ಪ, (2) ರಕ್ತ (3) ಅನ್ನ ಮತ್ತು (4) ಆಸವದ ಪರಿಮಳವಿರುವ, (1) ಮಧುರ, (2) ಒಗರು, (3) ತಿಕ್ತ ಮತ್ತು (4) ಕಟುರುಚಿಯಿಂದ ಕೂಡಿದ ಮಣ್ಣಿರುವ ಪ್ರದೇಶವು ಗೃಹನಿರ್ಮಾಣಕ್ಕೆ ಯೋಗ್ಯವಾದುದಾಗಿದೆ.

ಶ್ಲೋಕ : ವಿಪ್ರಾಣಾಂ ಭೂರವಾಗುನ್ನತಧನದನತೋದುಂಬರಾಢ್ಯಾ ಶುಭಾ ಸ್ಯಾತ್
ಪ್ರಾಕ್ ನಿಮ್ನಾ ವಾರುಣೋಚ್ಚಾ ಚಲದಲಸಹಿತಾ ಭೂಃ ಶುಭಾ ಬಾಹುಜಾನಾಮ್
ಪ್ರಾಗುಚ್ಚಾಬ್ಧೀಶನಿಮ್ನಾ ವಟತರುಸಹಿತಾ ಭೂರ್ವಿಶಾಂ ಪಾದಜಾನಾಮ್
ಸಾ ಸಪ್ಲಕ್ಷಾ ತಥಾ ಚೇತ್ ಯಮನತಧರಣೀ ಚಾನ್ಯಥಾ ಸರ್ವವರ್ಜ್ಯಾ ॥೩೦॥

ತಾತ್ಪರ್ಯ :

ಬ್ರಾಹ್ಮಣರಿಗೆ ಯೋಗ್ಯವಾದ ಭೂಮಿಯು ದಕ್ಷಿಣ ಉನ್ನತವಾಗಿದ್ದು ಉತ್ತರ ತಗ್ಗಾಗಿರುತ್ತದೆ. ಅಲ್ಲಿ ಅತ್ತಿ ಮರವಿದ್ದರೆ ಶುಭಪ್ರದ. ಪೂರ್ವಭಾಗ ತಗ್ಗಾಗಿ ಪಶ್ಚಿಮ ಉನ್ನತವಾಗಿದ್ದು ಅಲ್ಲಿ ಅಶ್ವತ್ಥ ಮರವಿದ್ದರೆ ಕ್ಷತ್ರಿಯರಿಗೆ ಶುಭ. ಪೂರ್ವ ಉನ್ನತವಾಗಿ, ಪಶ್ಚಿಮ ತಗ್ಗಾಗಿದ್ದು ವಟ ವೃಕ್ಷವಿದ್ದರೆ ಅದು ವೈಶ್ಯ ಭೂಮಿ. ಅಂತಹ ಭೂಮಿ ವೈಶ್ಯರಿಗೆ ಯೋಗ್ಯವಾದುದು. ಉತ್ತರ ಭಾಗ ಉನ್ನತವಾಗಿ ದಕ್ಷಿಣದ ಭಾಗ ತಗ್ಗಾಗಿದ್ದು ಅಲ್ಲಿ ಪ್ಲಕ್ಷವೃಕ್ಷವಿದ್ದರೆ ಅಂತಹ ಭೂಮಿಯು ಶೂದ್ರರಿಗೆ ಒಳ್ಳೆಯದು. ಈ ಮೇಲೆ ಹೇಳಿದ ಲಕ್ಷಣಕ್ಕೆ ವ್ಯತಿರಿಕ್ತವಾಗಿರುವ ಭೂಮಿ ಸರ್ವರಿಗೂ ತ್ಯಾಜ್ಯ.

ವಿ.ವಿ. :


ಇಲ್ಲಿ ಬ್ರಾಹ್ಮಣಾದಿ ಚತುರ್ವರ್ಣದವರಿಗೆ ಯೋಗ್ಯವಾದ ಭೂಮಿಯ ಲಕ್ಷಣವನ್ನು ವಿವರಿಸಲಾಗಿದೆ.

ಶ್ಲೋಕ ೨೯ ಮತ್ತು ೩೦ರಲ್ಲಿ ಹೇಳಿದುದನ್ನು ಈ ರೀತಿ ಕ್ರೋಡೀಕರಿಸಿದರೆ ಸ್ಪಷ್ಟತೆ ಅಧಿಕವಾಗುತ್ತದೆ.


ವರ್ಣಕ್ಕೆ ಅನುಗುಣವಾಗಿ ಭೂಲಕ್ಷಣ

ಗುಣ	ಬ್ರಾಹ್ಮಣ	ಕ್ಷತ್ರಿಯ	ವೈಶ್ಯ	ಶೂದ್ರ
ಪ್ರದೇಶದಲ್ಲಿರುವ ಹುಲ್ಲು	ಕುಶ (ದರ್ಭೆ)	ಜೊಂಡುಹುಲ್ಲು	ಗರಿಕೆ	ಕಾಶತೃಣ
ಭೂಪ್ರಮಾಣ (ಅಗಲ ನಾಲ್ಕು ಕೋಲು ಎಂದು ತೆಗೆದುಕೊಂಡಾಗ)	ಚತುರಶ್ರ ಅಗಲ 4 ಕೋ ಉದ್ದ 4 ಕೋ	ಅಗಲಕ್ಕಿಂತ 1/8 ಅಂಶ ಉದ್ದ ಅಧಿಕ ಅಗಲ 4 ಕೋಲು ಉದ್ದ 4 ಕೋ 12 ಅಂ.	ಅಗಲಕ್ಕಿಂತ ಉದ್ದ 1/6 ಅಧಿಕ ಅಗಲ 4 ಕೋ. ಉದ್ದ 4 ಕೋ 16 ಅಂ.	ಅಗಲಕ್ಕಿಂತ ಉದ್ದ ¼ ಅಧಿಕ ಅಗಲ 4 ಕೋ. ಉದ್ದ 5 ಕೋ.
ಮಣ್ಣಿನ ಬಣ್ಣ	ಬಿಳಿ	ನಸುಗೆಂಪು	ಹಳದಿ	ಕಪ್ಪು
ಮಣ್ಣಿನ ಪರಿಮಳ	ತುಪ್ಪ	ರಕ್ತ	ಅನ್ನ	ಆಸವ
ಮಣ್ಣಿನ ರುಚಿ	ಮಧುರ	ಒಗರು	ತಿಕ್ತ	ಕಟು
ಭೂಪ್ರದೇಶದ ಪ್ಲವ	ಉತ್ತರ ಪ್ಲವ	ಪೂರ್ವ ಪ್ಲವ	ಪಶ್ಚಿಮ ಪ್ಲವ	ದಕ್ಷಿಣ ಪ್ಲವ
ಪ್ರದೇಶದಲ್ಲಿರುವ ಮರ	ಅತ್ತಿ	ಅಶ್ವತ್ಥ	ವಟ	ಪ್ಲಕ್ಷ


ವರ್ಣಕ್ಕೆ ಅನುಗುಣವಾಗಿ ನಿವೇಶನದ ಪ್ರಮಾಣ




(1:1)
ಬ್ರಾಹ್ಮಣ
ಚಿ. ೨೦



(9:8)
ಕ್ಷತ್ರಿಯ
ಚಿ. ೨೧



(7:6)
ವೈಶ್ಯ
ಚಿ. ೨೨



(5:4)
ಶೂದ್ರ
ಚಿ. ೨೩

ಶ್ಲೋಕ : ಸಂಕೀರ್ಣರೂಪಾ ವಸುಧಾತ್ರ ವರ್ಣೈರ್ಗಂಧೈ ರಸೈಶ್ಚಾಖಿಲವರ್ಜನೀಯಾ
ಏನಾಮನಾಲಕ್ಷಿತ ವರ್ಣಚಿಹ್ನಾಂ ನಕ್ತಂ ಪರೀಕ್ಷೇತ ನಿಮಿತ್ತತಶ್ಚ ॥೩೧॥

ತಾತ್ಪರ್ಯ :

ಭೂಮಿಯು ಬಣ್ಣ, ವಾಸನೆ ಮತ್ತು ರುಚಿಗಳಲ್ಲಿ ಸಂಕೀರ್ಣವಾಗಿದ್ದು ಗುರುತಿಸಲಾಗದೆ ಹೋದರೆ ಅದು ಎಲ್ಲ ವರ್ಗದವರಿಗೂ ವರ್ಜ್ಯ. ಅಂತಹ ವರ್ಣಾದಿ ಚಿಹ್ನೆಗಳು ಅನಾಲಕ್ಷಿತವಾದರೆ ಆಗ ರಾತ್ರಿ ಹೊತ್ತಿನಲ್ಲಿ ಶಕುನಗಳ ಮೂಲಕ ಭೂಪರೀಕ್ಷೆಯನ್ನು ಮಾಡಬೇಕು.

೧೫. ಭೂಮಿಯ ಶುಭಾಶುಭವನ್ನು ಕಂಡುಹಿಡಿಯುವ ವಿಧಾನ

ಶ್ಲೋಕ : ಕ್ಷ್ಮಾಂ ಖಾತ್ವಾಽಽಮಘಟಂ ನಿಧಾಯ ಭೃತಧಾನ್ಯಂ ವರ್ಧಮಾನಂ ಮುಖೇ
ಕೃತ್ವಾಽಽಸಿಚ್ಯ ಘೃತಂ ದಿಶಾಸು ಸಿತರಕ್ತಾಪೀತ ಕೃಷ್ಣಾದಶಾಃ
ವಿಪ್ರಾದಿ ಕ್ರಮತಃ ಪ್ರದೀಪ್ಯ ವಿಧಿವನ್ನೀತೇ ಮುಹೂರ್ತೇ ಜ್ವಲೇತ್
ವರ್ತಿರ್ಯಸ್ಯ ಧರಾಸ್ಯ ತಾಸು ಸಕಲಾಸ್ವಿದ್ಧಾಸು ಸರ್ವೋಚಿತಾಃ ॥೩೨॥

ತಾತ್ಪರ್ಯ :

ಭೂಮಿಯನ್ನು ಅಗೆದು ಗುಂಡಿಮಾಡಿ ಆ ಗುಂಡಿಯಲ್ಲಿ ಧಾನ್ಯ ತುಂಬಿದ ಹಸಿಗಡಿಗೆಯನ್ನು (ಬೇಯಿಸದ ಮಣ್ಣಿನ ಗಡಿಗೆ) ಇಟ್ಟು ಅದರ ಬಾಯಿಯನ್ನು ಮಣ್ಣಿನ ಮುಚ್ಚಳದಿಂದ ಮುಚ್ಚಬೇಕು. ಆ ಮುಚ್ಚಳದಲ್ಲಿ ತುಪ್ಪವನ್ನು ಎರೆದು ಅದರ ಪೂರ್ವಾದಿಯಾಗಿ ನಾಲ್ಕು ದಿಕ್ಕುಗಳಲ್ಲಿ ಕ್ರಮವಾಗಿ ಬಿಳಿ, ಕೆಂಪು, ಹಳದಿ ಮತ್ತು ಕಪ್ಪು ಬಣ್ಣದ ಅರಿವೆಯ ಬತ್ತಿಗಳನ್ನು ಇಟ್ಟು ಉರಿಸಬೇಕು. ಮುಹೂರ್ತ ಕಾಲ ಕಳೆದಾಗ ಯಾವ ಬಣ್ಣದ ಬತ್ತಿ ಉರಿಯುತ್ತಿರುವುದೋ ಅದೇ ವರ್ಣದವರಿಗೆ ಆ ಸ್ಥಳ ಯೋಗ್ಯವಾದುದಾಗಿದೆ. ಒಂದು ವೇಳೆ ಎಲ್ಲ ಬತ್ತಿಗಳು ಉರಿಯುತ್ತಿದ್ದರೆ ಆ ಸ್ಥಳ ಎಲ್ಲ ವರ್ಣದವರಿಗೂ ತಕ್ಕುದೆಂದು ಭಾವಿಸಬೇಕು.

ಶ್ಲೋಕ : ಭೂಗರ್ತೇ ಜಲಪೂರಿತೇಽತ್ರ ವಿಧಿವತ್ ದ್ರೋಣಾದಿಪುಷ್ಪಂ ನ್ಯಸೇತ್
ಪ್ರಾದಕ್ಷಿಣ್ಯಗತಿಃ ಶುಭಂ ಸುಮನಸಾಂ ಯದ್ಯನ್ಯಥಾ ನಿಂದಿತಮ್
ಪುಷ್ಪೇ ದಿಕ್ಷ್ವಥ ಸಂಸ್ಥಿತೇ ಸತಿ ಶುಭಂ ಕೋಣೇಷು ಚೇನ್ನಿಂದಿತಮ್
ಜ್ಞಾತ್ವೇತ್ಯಾದಿ ಶುಭಾಶುಭಾನ್ಯಥ ಸಮೀಕುರ್ಯಾತ್ ಕ್ಷಮಾಂ ಸೂಕ್ಷ್ಮಧೀಃ ॥೩೩॥

ತಾತ್ಪರ್ಯ :

ಭೂಮಿಯನ್ನು ಅಗೆದು ಒಂದು ಹೊಂಡ ಮಾಡಿ ಅದರಲ್ಲಿ ನೀರನ್ನು ತುಂಬಿಸಿ ವಿಧಿಪ್ರಕಾರ ದ್ರೋಣಾದಿಪುಷ್ಪಗಳನ್ನು (ದ್ರೋಣಪುಷ್ಪ - ತುಂಬೆ ಹೂ) ಅದರಲ್ಲಿ ಇಡಬೇಕು. ಆ ಹೂಗಳು ಪ್ರದಕ್ಷಿಣಾಕಾರವಾಗಿ ಚಲಿಸಿದರೆ ಶುಭ. ಪ್ರದಕ್ಷಿಣ ಗತಿಯಲ್ಲದೆ ಹೋದರೆ ಆ ಸ್ಥಳವು ಅಶುಭ,

ಅಯೋಗ್ಯ. ಪುಷ್ಪವು ಚಲಿಸಿ ಯಾವ ದಿಕ್ಕಿನಲ್ಲಿ ನಿಲ್ಲುತ್ತದೋ ಆ ದಿಕ್ಕು ಶುಭವಾಗಿದೆ. ಆದರೆ ಕೋಣಗಳಲ್ಲಿ (ವಿದಿಕ್ಕುಗಳಲ್ಲಿ) ನಿಂತರೆ ಅದು ತ್ಯಾಜ್ಯವಾಗಿದೆ. ಈ ರೀತಿ ಸೂಕ್ಷ್ಮಮತಿಯಾದ ಸ್ಥಪತಿಯು ಭೂಪರೀಕ್ಷೆಯನ್ನು ಸರಿಯಾಗಿ ಮಾಡಿ ಶುಭಾಶುಭಗಳನ್ನು ತಿಳಿದು ನಿಶ್ಚೈಸಬೇಕು.

ವಿ.ವಿ. :

ಶ್ಲೋಕ ೧೭ರಿಂದ ೩೩ರವರೆಗಿನ ಹದಿನೇಳು ಶ್ಲೋಕಗಳಲ್ಲಿ ಗೃಹನಿರ್ಮಾಣದ ಸ್ಥಳದ ಪರೀಕ್ಷೆ, ಅದರ ಆಯ್ಕೆ ಮೊದಲಾದ ವಿಷಯಗಳ ವಿವರಣೆಯನ್ನು ಕೊಡಲಾಗಿದೆ. ಇಷ್ಟೊಂದು ವಿಸ್ತೃತವಾದ ವಿವರಣೆ ಕೊಟ್ಟುದರಿಂದ ಮನೆಯ ನಿವೇಶನದ ಆಯ್ಕೆ, ಗೃಹನಿರ್ಮಾಣದ ವಾಸ್ತು ವಿಷಯದಲ್ಲಿ ಅತ್ಯಂತ ಪ್ರಧಾನವಾದುದೆಂದು ಗೊತ್ತಾಗುತ್ತದೆ. ಮನೆಯನ್ನು ಕಟ್ಟುವ ಕೆಲಸ ಪ್ರಾರಂಭವಾದ ಮೇಲೆ ಆ ನಿವೇಶನದಲ್ಲಿ ದೋಷಾದಿಗಳು ಕಂಡು ಬಂದರೆ ಅದನ್ನು ಬದಲಾವಣೆ ಮಾಡುವುದು ಕಷ್ಟದ ಮತ್ತು ನಷ್ಟದ ಕೆಲಸ. ಆದುದರಿಂದ ತಾನಾಗಲೀ ತಿಳಿದವರ ಮೂಲಕವಾಗಿಯಾಗಲೀ ಮನೆಗೆ ಮೂಲಭೂತವಾದ ಭೂಮಿಯ ಪರೀಕ್ಷೆಯನ್ನು ಸರಿಯಾಗಿ ಮಾಡಿ ಅದರ ಸಾಧುತ್ವ-ನಿರ್ದೋಷತ್ವವನ್ನು ಖಚಿತಪಡಿಸಿಕೊಳ್ಳುವುದು ಮನೆಯನ್ನು ಕಟ್ಟಿಸುವವನ ಆದ್ಯ ಕರ್ತವ್ಯವಾಗಿದೆ.

ಇತಿ ಮನುಷ್ಯಾಲಯಚಂದ್ರಿಕಾಯಾಂ ಭೂಪರೀಕ್ಷಾ ಪರಿಗ್ರಹೋನಾಮ ಪ್ರಥಮೋಧ್ಯಾಯಃ

ತಾತ್ಪರ್ಯ :

ಇಲ್ಲಿಗೆ ಮನುಷ್ಯಾಲಯ ಚಂದ್ರಿಕೆಯಲ್ಲಿ ಭೂಪರೀಕ್ಷಾ ಪರಿಗ್ರಹವೆಂಬ ಒಂದನೇ ಅಧ್ಯಾಯವು ಮುಗಿದುದು.


ಅಥ ದ್ವಿತೀಯೋಽಧ್ಯಾಯಃ
ಎರಡನೆಯ ಅಧ್ಯಾಯ
ದಿಕ್ ನಿರ್ಣಯಾದಿ ಶುಭವೀಥಿಪರಿಗ್ರಹ

೧. ದಿಕ್ ನಿರ್ಣಯ ಮಾಡುವ ವಿಧಾನ

ಶ್ಲೋಕ : ಯಂತ್ರೇಣಾವನತಾದಿನಾ ಚ ನಿಪುಣೋ ಯದ್ವಾಂಬುಸಂಪೂರಣೇ
ನೋರ್ವೀಂ ಚಾರು ಸಮೀಕರೋತ್ವಥ ದೃಢಂ ಶಂಕುಂ ಕರಾರ್ಧಾಯತಮ್
ಮೂಲೇ ದ್ವ್ಯಂಗುಲವಿಸ್ತೃತಂ ಕ್ರಮವಶಾದಗ್ರೇ ತದರ್ಧೋನ್ಮಿತ -
ವ್ಯಾಸಂ ವೃತ್ತತರಂ ಸರೋಜಮುಕುಲಾಕಾರಾಗ್ರಮಾಕಲ್ಪಯೇತ್ ||೧||

ತಾತ್ಪರ್ಯ :

ವಾಸ್ತುಶಿಲ್ಪದಲ್ಲಿ ನಿಪುಣನಾದವನು ಮೊತ್ತಮೊದಲು ನಿವೇಶನದ ಸ್ಥಳವನ್ನು ಅಗೆದು ಯಂತ್ರದ ಮೂಲಕ ಅಥವಾ ಮಟ್ಟವನ್ನು ಉಪಯೋಗಿಸಿ, ಇಲ್ಲವೇ ನೀರು ತುಂಬಿಸಿ ಜಲಮಟ್ಟ ಮಾಡಿ ಸಮತಟ್ಟು ಮಾಡಬೇಕು. ಅನಂತರ ಗಟ್ಟಿ ಮರದಿಂದ ಶಂಕುವನ್ನು ತಯಾರಿಸಬೇಕು. ಆ ಶಂಕುವು ಯಜಮಾನನ ಅರ್ಧ ಕೈಯಷ್ಟು (ಸಾಧಾರಣ ಒಂದು ಮೊಳ) ಉದ್ದವಿರಬೇಕು. ಅದರ ಮೂಲವು (ಕೆಳತುದಿ) ಎರಡು ಅಂಗುಲ ವ್ಯಾಸವಿದ್ದು ವೃತ್ತಾಕಾರದಲ್ಲಿರಬೇಕು. ವೃತ್ತಾಕಾರದಲ್ಲಿ ಮೇಲೆ ಹೋದಂತೆ ಅಗ್ರ ಭಾಗದಲ್ಲಿ ಒಂದು ಅಂಗುಲದಷ್ಟು ವ್ಯಾಸವಿದ್ದು ಅದರ ತುದಿಯು ತಾವರೆಯ ಮೊಗ್ಗಿನ ಆಕಾರದಲ್ಲಿರಬೇಕು.



ಮಟ್ಟ (ಅವನತ)

ಚಿತ್ರ ೨ಅ. ಅ.೨. ಶ್ಲೋ.೧



(ಶಂಕು)

ಚಿತ್ರ ೨ಆ. ಅ.೨. ಶ್ಲೋ.೧

ಶ್ಲೋಕ : ಶಂಕುದೀರ್ಘಯುಗಸಮ್ಮಿತಸೂತ್ರೇಣಾಕಲಯ್ಯ ಪರಿವೃತ್ಯ ಸುವೃತ್ತಮ್
ವೃತ್ತಮಧ್ಯಮವಧಾರ್ಯ ಸುಸೂಕ್ಷ್ಮಂ ಶಂಕುಮತ್ರ ಸುದೃಢಂ ನಿವೇಶಯೇತ್ ||೨||


ತಾತ್ಪರ್ಯ :

ಶಂಕುವಿನ ಉದ್ದಕ್ಕಿಂತ ಇಮ್ಮಡಿಯಾದ ಸೂತ್ರದಿಂದ ಒಂದು ವೃತ್ತವನ್ನು ಎಳೆದು ಆ ವೃತ್ತದ ಮಧ್ಯದಲ್ಲಿ ಶಂಕುವಿನ ಮಧ್ಯವು ಸ್ವಲ್ಪವೂ ವ್ಯತ್ಯಾಸಗೊಳ್ಳದಂತೆ ಶಂಕುವನ್ನು ಸುದೃಢವಾಗಿ ಸ್ಥಾಪಿಸಬೇಕು.

ಶ್ಲೋಕ : ಶಂಕುಚ್ಛಾಯಾಗ್ರಭಾಗೇ ತ್ವಪಹಿತಹೃದಯೋ ವೃತ್ತಲಗ್ನೇಽಂಕಯಿತ್ವಾ
ಪ್ರಾಹ್ಣಾಂತೇ ಪಶ್ಚಿಮಸ್ಯಾಂ ದಿಶಿ ತದಿತರದಿಶ್ಯೇವಮೇವಾಪರಾಹ್ನೇ
ಪಾಶ್ಚಾತ್ಯೇಽನ್ಯೇದ್ಯುರಪ್ಯಂಕನಮಪಿ ಚ ವಿಧಾಯಾಂಕಯೋರೇತಯೋರ -
ಪ್ಯಂತರ್ಭಾಗತ್ರಿಭಾಗಂ ನಯತು ಗತದಿನಾಂಕಂ ತದೇವೇಹ ಸೂಕ್ಷ್ಮಮ್ ॥೩॥

ತಾತ್ಪರ್ಯ :

ಬೆಳಗಿನ ಹೊತ್ತು ಶಂಕುವಿನ ಅಗ್ರಭಾಗದ ನೆರಳು ಅದರ ಸುತ್ತಲಿರುವ ವೃತ್ತದ ರೇಖೆಯನ್ನು ಪಶ್ಚಿಮದ ಕಡೆ ಮುಟ್ಟುವಲ್ಲಿ ಗುರುತು ಮಾಡಬೇಕು. ಅದೇ ರೀತಿ ಅದೇ ದಿನ ಸಂಜೆಯ ಹೊತ್ತು ಶಂಕುವಿನ ತುದಿಯ ನೆರಳು ಪೂರ್ವದ ಕಡೆ ವೃತ್ತರೇಖೆಯನ್ನು ಮುಟ್ಟುವಲ್ಲಿ ಗುರುತು ಮಾಡಬೇಕು. ಮರುದಿನ ಬೆಳಿಗ್ಗೆ ಶಂಕುವಿನ ತುದಿಯ ನೆರಳು ಪಶ್ಚಿಮದ ಕಡೆ ವೃತ್ತರೇಖೆಯನ್ನು ತಗಲಿದಲ್ಲಿ ಇನ್ನೊಂದು ಗುರುತು ಮಾಡಬೇಕು. ಅನಂತರ ಪಶ್ಚಿಮದ ಕಡೆ ಮಾಡಿದ ಎರಡೂ ದಿನಗಳ ಗುರುತುಗಳ ಮಧ್ಯಭಾಗವನ್ನು ಮೂರು ಸಮಭಾಗ ಮಾಡಿ ಮೊದಲ ದಿನದ ಗುರುತಿಗೆ ಸಮೀಪದ ಒಂದು ಭಾಗವನ್ನು (1/3 ಭಾಗ) ತೆಗೆದುಕೊಂಡು ಅಲ್ಲಿ ಗುರುತು ಮಾಡಬೇಕು.



ಚಿತ್ರ ೨೬. ಅ.೨. ಶ್ಲೋ.೩

1. ಮೊದಲ ದಿನ ಬೆಳಗ್ಗೆ ಮಾಡಿದ ಗುರುತು
2. ಮೊದಲ ದಿನ ಸಂಜೆ ಮಾಡಿದ ಗುರುತು
3. ಎರಡನೇ ದಿನ ಬೆಳಗ್ಗೆ ಮಾಡಿದ ಗುರುತು
4. ಮೊದಲನೇ ಮತ್ತು ಎರಡನೇ ದಿನ ಬೆಳಗ್ಗೆ ಮಾಡಿದ ಗುರುತುಗಳ ಮಧ್ಯವನ್ನು ಮೂರು ಭಾಗ ಮಾಡಿ ಮೊದಲ ದಿನದ ಹತ್ತಿರದ ಭಾಗ
5. ಶಂಕುವಿನ ಸ್ಥಾನ
6. ಪೂರ್ವ-ಪಶ್ಚಿಮ ರೇಖೆ

ಶ್ಲೋಕ : ಪೂರ್ವಾಪರೇದ್ಯುಃ ಪ್ರಭವಾಂಕಯುಗ್ಮಮೇವಂ ಸುಸೂಕ್ಷ್ಮಂ ಪರಿಕಲ್ಪಿತಂ ಯತ್
ತದಂಕಯುಗ್ಮಾಹಿತಸೂತ್ರಮೇವ ಪೂರ್ವಾಪರಾಶಾಪ್ರಭವಂ ಸುಸೂಕ್ಷ್ಮಮ್ ||೪||

ತಾತ್ಪರ್ಯ :

ಮೊದಲಿನ ದಿನದಲ್ಲಿ ಮತ್ತು ಎರಡನೆಯ ದಿನದಲ್ಲಿ ಗೊತ್ತು ಮಾಡಿದ ಎರಡು ಗುರುತುಗಳ ಬಿಂದುಗಳನ್ನು ಗೆರೆ ಎಳೆದು ಜೋಡಿಸಿದಾಗ ಸಿಗುವ ರೇಖೆಯೇ ಸರಿಯಾದ ಪೂರ್ವಪಶ್ಚಿಮ ರೇಖೆಯಾಗುತ್ತದೆ.

ವಿ.ವಿ. :


ಈ ಮೇಲಿನ ಎರಡು ಮೂರು ಮತ್ತು ನಾಲ್ಕನೆಯ ಶ್ಲೋಕಗಳಲ್ಲಿ ಪೂರ್ವ ಮತ್ತು ಪಶ್ಚಿಮದಿಕ್ಕುಗಳನ್ನು ಕಂಡುಹಿಡಿಯುವ ಕ್ರಮವನ್ನು ಹೇಳಲಾಗಿದೆ. ಇದು ದಿಕ್ ನಿರ್ಣಯದಲ್ಲಿ ಕಟ್ಟಡ ನಿರ್ಮಾಣದ ಪ್ರಾರಂಭದ ಹಂತ ಅಥವಾ ಮೊದಲ ಕಾರ್ಯವಾಗಿದೆ.

೨. ಬ್ರಹ್ಮಸೂತ್ರ ಮತ್ತು ಯಮಸೂತ್ರ


ಶ್ಲೋಕ : ಏವಂ ಕ್ಷೇತ್ರಸ್ಯ ಮಧ್ಯೇ ಸುವಿಹಿತಮಿಹ ಯತ್ ಬ್ರಹ್ಮಸೂತ್ರಂ ತದಾಹು
ಸ್ತನ್ಮಧ್ಯೇಽನ್ಯೋನ್ಯಮಂತರ್ಗತಮಪಿ ರಚಯೇತ್ ವೃತ್ತಯುಗ್ಮಂಚ ಧೀಮಾನ್
ತದ್ಯೋಗಾತ್ ತಿರ್ಯಗುದ್ಯಜ್ಝಷಜಠರ ಸುಷುಮ್ನಾಧ್ವನಾ ಸೂತ್ರಮೇಕಂ
ಯಾಮ್ಯೋದಗ್ಗಾಮಿ ಸೂಕ್ಷ್ಮಂ ರಚಯತು ಯಮಸೂತ್ರಂ ತದಿತ್ಯಾಮನಂತಿ ||೫||

ತಾತ್ಪರ್ಯ :

ನಿವೇಶನದ ಮಧ್ಯದಲ್ಲಿ ಪೂರ್ವ-ಪಶ್ಚಿಮವಾಗಿ ಗೊತ್ತುಮಾಡಿದ ಸೂತ್ರವೇ ಬ್ರಹ್ಮಸೂತ್ರ. ಆ ಬ್ರಹ್ಮಸೂತ್ರದ ಪೂರ್ವ ಮತ್ತು ಪಶ್ಚಿಮದ ತುದಿಗಳನ್ನು ಕೇಂದ್ರವನ್ನಾಗಿ ಮಾಡಿಕೊಂಡು ಎರಡು ವೃತ್ತಗಳನ್ನು ರಚಿಸಬೇಕು. ಆ ಎರಡು ವೃತ್ತಗಳು ದಕ್ಷಿಣೋತ್ತರಗಳಲ್ಲಿ ಪರಸ್ಪರ ಕಡಿಯುವ ಎರಡು ಬಿಂದುಗಳಿಗೆ, ಮೀನಿನ ಜಠರಾಕಾರದ ತುದಿಗಳಲ್ಲಿ ದಕ್ಷಿಣೋತ್ತರವಾಗಿ ಎಳೆದ ರೇಖೆಯೇ ಯಮಸೂತ್ರವೆನಿಸುತ್ತದೆ.



ಚಿತ್ರ ೨೭. ಅ.೨. ಶ್ಲೋ.೫




ಚಿತ್ರ ೨೮. ಅ.೨. ಶ್ಲೋ.೫

ಶ್ಲೋಕ : ತತ್ಸೂತ್ರದ್ವಿತಯೇಽಥ ದಿಕ್ಷು ಚತಸೃಷ್ವಂಕಾನ್ ಸಮಂ ಕಲ್ಪಯೇ -
ದಂಕಾರೋಪಿತಮಧ್ಯಕಾನಿ ಸುಸಮಂ ಚತ್ವಾರಿ ವೃತ್ತಾನಿ ಚ
ಸಿದ್ಧ್ಯಂತ್ಯತ್ರ ವಿದಿಕ್ಷು ವೃತ್ತಯುಗಲೀಯೋಗೇನ ಮತ್ಸ್ಯಾಃ ಶಿವಾ -
ಗ್ನ್ಯಗ್ರಾಸ್ತದ್ಗತಸೂತ್ರಯುಗ್ಮಮಪಿ ಚಾತ್ರಾಬ್ಧ್ಯಶ್ರಮಾ ಕಲ್ಪಯೇತ್ ॥೬॥

ತಾತ್ಪರ್ಯ :

ಬ್ರಹ್ಮಸೂತ್ರ ಮತ್ತು ಯಮಸೂತ್ರಗಳು ಕಡಿಯುವ ಮಧ್ಯಬಿಂದುವಿನಿಂದ ಸಮಾನಾಂತರ ದೂರದಲ್ಲಿ ನಾಲ್ಕು ಕಡೆ ಗುರುತು ಮಾಡಬೇಕು. ಆ ನಾಲ್ಕು ಕಡೆಯ ಗುರುತುಗಳನ್ನು ಕೇಂದ್ರ ಬಿಂದುಗಳನ್ನಾಗಿ ಮಾಡಿಕೊಂಡು ಪುನಃ ನಾಲ್ಕು ವೃತ್ತಗಳನ್ನು ರಚಿಸಿದಾಗ ವೃತ್ತದ್ವಯದಲ್ಲಿ ಉಂಟಾಗುವ ಮೀನಿನ ಜಠರಾಕಾರದ ಕೊನೆಯ ಬಿಂದುಗಳನ್ನು (ವೃತ್ತರೇಖೆಗಳು ಕಡಿಯುವ ಸ್ಥಳ) ರೇಖೆಗಳ ಮೂಲಕ ಜೋಡಿಸಬೇಕು. ಆಗ ನಿರ್ಮಾಣವಾಗುವ ನಾಲ್ಕು ರೇಖೆಗಳ ತುದಿಯ ಭಾಗಗಳೇ ವಿದಿಕ್ಕುಗಳು.



ಚಿತ್ರ ೨೯. ಅ.೨. ಶ್ಲೋ.೬

೩. ಈಶಾದಿ ಖಂಡಗಳು


ಶ್ಲೋಕ : ಸೂತ್ರೇ ಪ್ರಾಗುದಗಗ್ರಕೇ ಕ್ಷಿತಿತಲೇ ಕೃತ್ವಾ ಚತುಃಖಂಡಿತೇ
ಖಂಡೇ ಕಲ್ಪಯತು ದ್ವಿಜಾದಿವಸತಿಂ ಶಾರ್ವೇಽಥವಾ ನೈರ್ಋತೇ
ಕ್ಷೇತ್ರೇ ವಿಸ್ತೃತಿರಸ್ತಿ ಚೇತ್ ಪುನರಪಿ ಶ್ರುತ್ಯಂಶಿತೇ ಗೃಹ್ಯತೇ
ಶೈವೇ ನೈರ್ಋತಖಂಡಮೇವ ನಿರ್ಋತೌ ಶೈವಂ ಶುಭಂ ಚೋಭಯೋಃ ॥೭॥

ತಾತ್ಪರ್ಯ :

ಲಭ್ಯವಿರುವ ಇಡೀ ಕ್ಷೇತ್ರವನ್ನು ಹಿಂದೆ ಹೇಳಿದ ರೀತಿಯಲ್ಲಿ, ಬ್ರಹ್ಮಸೂತ್ರ ಮತ್ತು ಯಮಸೂತ್ರವನ್ನು ರೇಖಿಸಿ ನಾಲ್ಕು ಖಂಡಗಳನ್ನಾಗಿ ಮಾಡಬೇಕು. ಆ ನಾಲ್ಕು ಖಂಡಗಳಲ್ಲಿ ಈಶಾನ್ಯ ಅಥವಾ ನೈಋತ್ಯ ಖಂಡದಲ್ಲಿ ದ್ವಿಜಾದಿಗಳ ವಸತಿ ಸಮುಚ್ಚಯವನ್ನು ಮಾಡಬೇಕು. ಕ್ಷೇತ್ರವು ಬಹಳ ವಿಸ್ತಾರವುಳ್ಳದ್ದಾಗಿದ್ದರೆ ಪ್ರತಿಯೊಂದು ಖಂಡದಲ್ಲಿ ಪುನಃ ನಾಲ್ಕು ನಾಲ್ಕು ಖಂಡಗಳನ್ನು ಮಾಡಬೇಕು. ಆ ನಾಲ್ಕು ಖಂಡಗಳಲ್ಲಿ ಈಶಾನ್ಯ ಖಂಡದ ನೈಋತ್ಯ ಉಪಖಂಡವೂ ನೈಋತ್ಯ ಖಂಡದಲ್ಲಿ ಈಶಾನ್ಯ ಉಪಖಂಡವೂ ವಸತಿ ಗೃಹನಿರ್ಮಾಣಕ್ಕೆ ಶುಭಪ್ರದಗಳಾಗಿವೆ.

ವಿ.ವಿ. :

ಈ ಶ್ಲೋಕದಲ್ಲಿ ನಗರ ನಿರ್ಮಾಣ ಕ್ರಮವನ್ನು ತಿಳಿಸಲಾಗಿದೆ. ವಸತಿ ಗೃಹಗಳಿಗೆ ಸೂಚಿತವಲ್ಲದ ಕ್ಷೇತ್ರದಲ್ಲಿ ವಾಣಿಜ್ಯ ಸಂಕೀರ್ಣಾದಿಗಳನ್ನು ಮಾಡಬಹುದು.



ಉಪಖಂಡಗಳು


ಚಿತ್ರ. ೩೦, ಅ. ೨, ಶ್ಲೋ.೭

1 ಮತ್ತು 2 ವಸತಿ ಗೃಹ ಸ್ಥಾನಗಳು

ಶ್ಲೋಕ : ಧಾತ್ರೀತಲೇಽಬ್ಧ್ಯಂಶಿನಿ ಮಾನುಷಾಖ್ಯಂ ಗೃಹಾಭಿವೃದ್ಧಿಪ್ರದಮೈಶಖಂಡಮ್
ದೇವಾಹ್ವಯಂ ನೈಋತಮಿಷ್ಟದಂ ಸ್ಯಾದುಭೇ ಶುಭೇ ಗೇಹವಿಧೌ ನರಾಣಾಮ್ ||೮||

ತಾತ್ಪರ್ಯ :

ಕ್ಷೇತ್ರವನ್ನು (ಬ್ರಹ್ಮಸೂತ್ರ - ಯಮಸೂತ್ರಕ್ಕೆ ಅನುಗುಣವಾಗಿ) ನಾಲ್ಕು ಖಂಡಗಳನ್ನಾಗಿ ವಿಭಾಗಿಸಿದಾಗ ಸಿಗುವ ಉತ್ತರದಿಕ್ಕು ಮತ್ತು ಪೂರ್ವದಿಕ್ಕುಗಳ ಮಧ್ಯದಲ್ಲಿರುವ ಈಶಖಂಡಕ್ಕೆ ಮಾನುಷಖಂಡವೆಂದು ಹೆಸರು. ಇಲ್ಲಿ ಕಟ್ಟಿದ ಮನೆಗಳು ಅಭಿವೃದ್ಧಿಪಥದಲ್ಲಿರುತ್ತವೆ. ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳ ಮಧ್ಯದಲ್ಲಿರುವ ನೈಋತ್ಯಖಂಡಕ್ಕೆ ದೇವಖಂಡವೆಂದು ಹೆಸರು. ಆ ಸ್ಥಳವು ಮನುಷ್ಯಾಲಯಕ್ಕೆ ಯೋಗ್ಯ. ಅದು ಇಷ್ಟ ಪ್ರಾಪ್ತಿಯನ್ನು ಉಂಟುಮಾಡುತ್ತದೆ. ಈ ರೀತಿ ಎರಡೂ ಖಂಡಭಾಗಗಳು ಮನುಷ್ಯಾಲಯಗಳಿಗೆ ಶುಭ



1. ಈಶಖಂಡ-ಮಾನುಷಖಂಡ-ವಸತಿ ಸಮುಚ್ಚಯ-ಅಭಿವೃದ್ಧಿ
2. ನೈಋತ್ಯಖಂಡ-ದೇವಖಂಡ -ಮನುಷ್ಯಾಲಯಗಳು-ಇಷ್ಟಪ್ರಾಪ್ತಿ (1 ಮತ್ತು 2 ದ್ವಿಜಾದಿಗಳ ವಸತಿ ಸ್ಥಳ)
3. ಯಮಖಂಡ-ಮರಣ ಪ್ರಾಪ್ತಿ
4. ಅಸುರಖಂಡ-ದೂಷಿತ

ನಾಲ್ಕು ಖಂಡಗಳು

ಚಿ.೩೧, ಅ.೨, ಶ್ಲೋ. ೭ ಮತ್ತು ೮

ಶ್ಲೋಕ : ಆಗ್ನೇಯಖಂಡಂ ಯಮಸಂಜ್ಞಿತಂ ಸ್ಯಾನ್ಮೃತಿಪ್ರದಂ ಚಾಖಿಲವರ್ಜ್ಯಮೇತತ್
ವಾಯವ್ಯಮಪ್ಯಾಸುರಸಂಜ್ಞಿತತ್ವಾನ್ನಿಂದ್ಯಂ ವಿಶಾಂ ಕ್ವಾಪಿ ಚ ಗೃಹ್ಯತೇ ತತ್ ॥೯॥

ತಾತ್ಪರ್ಯ :

ಪೂರ್ವ ಮತ್ತು ದಕ್ಷಿಣದ ಮಧ್ಯಭಾಗವು ಆಗ್ನೇಯ ದಿಕ್ಕಾಗಿದ್ದು ಯಮಖಂಡವೆನಿಸಿದೆ. ಇಲ್ಲಿ ಕಟ್ಟಿದ ಮನೆಯು ಮರಣವನ್ನು ತಂದೊಡ್ಡುತ್ತದೆ. ಆದುದರಿಂದ ಅದನ್ನು ಎಲ್ಲರೂ ಬಿಡಬೇಕು. ಪಶ್ಚಿಮ ಮತ್ತು ಉತ್ತರದ ಮಧ್ಯಭಾಗವು ವಾಯುವ್ಯ ಭಾಗವಾಗಿದೆ. ಅದಕ್ಕೆ ಅಸುರಖಂಡ ಅಥವಾ ರಾಕ್ಷಸಖಂಡವೆಂದು ಹೆಸರು. ಆ ಖಂಡವೂ ದೂಷಿತವಾದುದರಿಂದ ತ್ಯಾಜ್ಯ. ಆದರೆ ವೈಶ್ಯರ ಮನೆಗಳಿಗೆ ಎಲ್ಲೋ ಕೆಲವು ಕಡೆ ಅದನ್ನು ಸ್ವೀಕರಿಸಲಾಗುತ್ತದೆ.

ವಿ.ವಿ. :

ಚಿತ್ರ ವಿವರ : ಅಧ್ಯಾಯ ೨, ಶ್ಲೋಕ ಸಂಖ್ಯೆ ೮ರಲ್ಲಿದೆ.

೪. ರಜ್ಜುಸೂತ್ರಗಳು


ಶ್ಲೋಕ : ಭೂಪಾದಿವರ್ಣನಿಯಮೇನ ಯಮೋದಗಾಯಾ -
ಮಾಪೇತ ಮಧ್ಯಚತುರಶ್ರ ಮಹೀತಲೇ ತು
ಕರ್ಣಾಧ್ವನಾ ನಿರ್ಋತಿ ಮಾರುತಕೋಣಮೂಲ -
ಶೈವಾನಲಾಗ್ರಭವಸೂತ್ರಯುಗಂ ಹಿ ರಜ್ಜುಃ ॥೧೦॥

ತಾತ್ಪರ್ಯ :

ಕ್ಷತ್ರಿಯಾದಿ ವರ್ಣಗಳಿಗೆ ಹೇಳಿದ ನಿಯಮಕ್ಕೆ ಅನುಗುಣವಾಗಿ (ಅ.೧, ಶ್ಲೋಕ ೨೯) ದಕ್ಷಿಣೋತ್ತರಗಳ ಉದ್ದವನ್ನು ಕಳೆದು ನಿವೇಶನವನ್ನು ಸಮಚತುರಶ್ರವನ್ನಾಗಿ ಗುರುತಿಸಬೇಕು. ಆ ಸ್ಥಳದಲ್ಲಿ ನೈಋತ್ಯ ಮತ್ತು ವಾಯುವ್ಯ ಕೋಣಗಳನ್ನು ಮೂಲಗಳನ್ನಾಗಿಯೂ (ಅವುಗಳಿಗೆ ವಿರುದ್ಧ ದಿಕ್ಕಿನ) ಈಶಾನ್ಯ ಮತ್ತು ಆಗ್ನೇಯ ಕೋಣಗಳನ್ನು ಅಗ್ರವನ್ನಾಗಿಯೂ ಇಟ್ಟು ಗೆರೆಯೆಳೆಯಬೇಕು. ಆ ಸೂತ್ರದ್ವಯವೇ (ನೈಋತ್ಯ-ಈಶಾನ್ಯ ಮತ್ತು ವಾಯುವ್ಯ-ಆಗ್ನೇಯ) 'ರಜ್ಜು' ಎನಿಸುತ್ತದೆ.

ವಿ.ವಿ. :

ಸಮಚತುರಶ್ರಕ್ಕೆ ಕರ್ಣರೇಖೆಯಾಗಿ ಎಳೆದ ಸೂತ್ರವೇ ರಜ್ಜುಸೂತ್ರ.



ರಜ್ಜು ಸೂತ್ರ

ಚಿತ್ರ. ೩೨. ಅ. ೨, ಶ್ಲೋ.೧೦


ಶ್ಲೋಕ : ಸೂತ್ರಸ್ಯ ರಜ್ಜ್ವೋರಪಿ ಚಾಗ್ರಮೂಲೈರ್ವಿದ್ಧೇ ಗೃಹಾದಿಸ್ಥಿತಮಧ್ಯಸೂತ್ರೇ
ಹೀನಾಯತಿ ಪ್ರಾಂಗಣತಶ್ಚತುಃ ಶಾಲಾಗಾರತೋಽನ್ಯತ್ರ ಭವಂತಿ ದೋಷಾಃ ॥೧೧॥

ತಾತ್ಪರ್ಯ :

ಮನೆ ಮೊದಲಾದವುಗಳ ಮಧ್ಯದ ಸೂತ್ರದಲ್ಲಿ ಸೂತ್ರ ಅಥವಾ ರಜ್ಜುವಿನ ಮೂಲ ಮತ್ತು ಅಗ್ರಭಾಗವು ಕಡಿಯುವಂತೆ ಇರಬಾರದು. ಕಡಿಯುವಂತೆ ಇದ್ದರೆ ದೋಷಗಳು ಸಂಭವಿಸುತ್ತವೆ. ಆದರೆ ಆ ನಿಯಮ ಪ್ರಾಂಗಣವಿರುವ ಚತುಶ್ಶಾಲೆಗೆ ಅನ್ವಯಿಸುವುದಿಲ್ಲ. ಅಂದರೆ ಅಲ್ಲಿ ಸೂತ್ರವೇಧ ಮತ್ತು ರಜ್ಜುವೇಧದ ದೋಷವಿಲ್ಲ.

ವಿ.ವಿ. :

ಇಲ್ಲಿ ಸೂತ್ರ ಎಂದರೆ ಬ್ರಹ್ಮಸೂತ್ರ ಮತ್ತು ಯಮಸೂತ್ರ.



ಚಿತ್ರ. ೩೩, ಅ.೨. ಶ್ಲೋಕ ೧೧.

1. ಪೂರ್ವ - ಪಶ್ಚಿಮ ರೇಖೆಯು ಬ್ರಹ್ಮಸೂತ್ರ
2. ದಕ್ಷಿಣ - ಉತ್ತರ ರೇಖೆಯು ಯಮಸೂತ್ರ

3 ಮತ್ತು 4. ಎರಡು ಕರ್ಣರೇಖೆಗಳು ರಜ್ಜುಸೂತ್ರಗಳು

೫. ಸೂತ್ರವೇಧ ಫಲ

ಶ್ಲೋಕ : ಪ್ರಾಗಾದಿ ಕ್ರಮಶಃ ಸ್ಯಾತ್ ವೇಧಫಲಂ ಪತಿವಿಯೋಗಕುಷ್ಠರುಜೌ
ರಿಪುಪೀಡಾತ್ಮಜಧನಹಾನ್ಯನಿಲರುಜಃ ಸ್ವಕುಲಧಾನ್ಯಹಾನ್ಯಾದ್ಯಾಃ ॥೧೨॥

ತಾತ್ಪರ್ಯ :

ಪೂರ್ವಾದಿ ದಿಕ್ಕುಗಳಲ್ಲಿ ಸೂತ್ರವೇಧವಾದರೆ ಕ್ರಮವಾಗಿ ಪತಿವಿಯೋಗ, ಕುಷ್ಠರೋಗ, ಶತ್ರುಪೀಡೆ, ಪುತ್ರನಾಶ, ಧನಹಾನಿ, ಸಂಧಿವಾತ, ಕುಲನಾಶ ಮತ್ತು ಧಾನ್ಯಹಾನಿ ದೋಷಗಳು ಸಂಭವಿಸುತ್ತವೆ.

ವಿ.ವಿ. :

ಈ ಶ್ಲೋಕದಲ್ಲಿ ಸೂತ್ರವೇಧಗಳ ಫಲವನ್ನು ಹೇಳಲಾಗಿದೆ. ಅದನ್ನು ಈ ಕೆಳಗಿನಂತೆ ಸಂಕ್ಷಿಪ್ತ ರೂಪದಲ್ಲಿ ಕೊಡಬಹುದಾಗಿದೆ.

	ಸೂತ್ರವೇಧದ ದಿಕ್ಕು	ಸೂತ್ರವೇಧ ಫಲ
೧.	ಪೂರ್ವ	ಪತಿವಿಯೋಗ
೨.	ಆಗ್ನೇಯ	ಕುಷ್ಠರೋಗ
೩.	ದಕ್ಷಿಣ	ಶತ್ರುಪೀಡೆ
೪.	ನೈಋತ್ಯ	ಪುತ್ರನಾಶ
೫.	ಪಶ್ಚಿಮ	ಧನಹಾನಿ
೬.	ವಾಯುವ್ಯ	ಸಂಧಿವಾತ
೭.	ಉತ್ತರ	ಕುಲನಾಶ
೮.	ಈಶಾನ್ಯ	ಧಾನ್ಯಹಾನಿ

ಶ್ಲೋಕ : ಕ್ಷೇತ್ರಸ್ಯೇಶಾದಿಖಂಡೇ ನವಕೃತಿಪದಸಂಭಿನ್ನವಾಸ್ತ್ವಂಗ ಕೋಷ್ಠೇ -
ಷ್ವೇಕಸ್ಯಾರ್ಕಾಂಶತಃ ಸ್ಯಾದ್ವಿತತಿರಿಹ ಮಹಾಸೂತ್ರರಜ್ವೋಃ ಪ್ರಸಿದ್ಧಾ
ತದ್ವದ್ದಿಗ್ವರ್ಗಕೋಷ್ಠೈರ್ವಿಹಿತ ಶತಪದೇಷ್ವೇಕಕೋಷ್ಠೇ ಭಭಾಗೋ
ವಿಸ್ತಾರಃ ಸೂತ್ರರಜ್ವೋರಹಿಕೃತಿಪದಭಿನ್ನೇಷ್ವಥೈಕಾಷ್ಟಿಭಾಗಃ ॥೧೩॥

ತಾತ್ಪರ್ಯ :

ಭೂಮಿಯ ಈಶಾನಖಂಡ ಮತ್ತು ನಿಋತಿ ಖಂಡಗಳನ್ನು (ಪ್ರತ್ಯೇಕವಾಗಿ) 9x9=81 ಪದಗಳನ್ನಾಗಿ ವಿಂಗಡಿಸಿದಾಗ ಆ ಪದದ 1/12 ಭಾಗವು ಸೂತ್ರ ಮತ್ತು ರಜ್ಜುವಿನ ಅಗಲವಾಗುತ್ತದೆ. ಖಂಡವನ್ನು 10x10=100 ಪದಗಳನ್ನಾಗಿ ವಿಂಗಡಿಸಿದಾಗ ಆ ಒಂದು ಪದದ 1/8 ಭಾಗವು ಸೂತ್ರ ಮತ್ತು ರಜ್ಜುವಿನ ಅಗಲವಾಗುತ್ತದೆ ಮತ್ತು ಖಂಡವನ್ನು 8x8=64 ಪದಗಳನ್ನಾಗಿ ವಿಭಜಿಸಿದಾಗ ಆ ಒಂದು ಪದದ 1/16 ಅಂಶವು ಸೂತ್ರ ಅಥವಾ ರಜ್ಜುವಿನ ಅಗಲವಾಗುತ್ತದೆ.

ವಿ.ವಿ. :

ಸೂತ್ರ ಮತ್ತು ರಜ್ಜುವಿನ ಅಗಲದ ಪ್ರಮಾಣವನ್ನು ಗೊತ್ತು ಮಾಡಿಕೊಂಡರೆ ವೇಧದೋಷ ಬರದಂತೆ ಗೃಹನಿರ್ಮಾಣ ಮಾಡಬಹುದು. ಈ ಮೇಲಿನ ಶ್ಲೋಕದಲ್ಲಿ 8x8=64 ಪದಗಳ (ಮಂಡೂಕಪದ) 9x9=81 ಪದಗಳ (ಪರಮಶಾಯಿಕ ಪದ) ಮತ್ತು 10x10=100 ಪದಗಳ (ಆಸನಪದ) ವಿನ್ಯಾಸಗಳನ್ನು ಮಾತ್ರ ತಿಳಿಸಲಾಗಿದೆ. ಕಾರಣ ಗೃಹಾದಿಗಳಿಗೆ ಈ ಮೂರು ಪದ ವಿನ್ಯಾಸಗಳನ್ನು ಸರ್ವೇ ಸಾಮಾನ್ಯವಾಗಿ ಸ್ವೀಕರಿಸುತ್ತಾರೆ.

ಶ್ಲೋಕ : ಸಮಸ್ತಗೇಹಾಂಕಣ ಕೂಪವಾಪೀ ದ್ವಾರಾದಿಮಧ್ಯಸ್ಥಿತ ಸೂತ್ರವೇಧಃ
ಮಿಥಃ ಸಮಸ್ತೇಷ್ವಪಿ ವರ್ಜನೀಯೋ ರಜ್ಜ್ವೋಶ್ಚ ಕೋಣಾಲಯ ಕರ್ಣಯೋಶ್ಚ ॥೧೪॥

ತಾತ್ಪರ್ಯ :

ಎಲ್ಲ ಮನೆ, ಅಂಗಳ, ಬಾವಿ, ಕೆರೆ, ದ್ವಾರಗಳ ಮಧ್ಯದಲ್ಲಿರುವ ಸೂತ್ರವೇಧ ಮತ್ತು ಕೋಣಾಲಯಗಳ ಕರ್ಣಸೂತ್ರ ಹಾಗೂ ರಜ್ಜುವೇಧವನ್ನು ವರ್ಜಿಸಬೇಕು. (ವೇಧಶೂಲೆ ಬರದಂತೆ ಸೂತ್ರಗಳನ್ನು ತಪ್ಪಿಸಿ ಮನೆ ಮೊದಲಾದವುಗಳನ್ನು ನಿರ್ಮಿಸಬೇಕು).

೬. ವೀಥಿಯ ಅಗಲ

ಶ್ಲೋಕ : ವೀಥೀವಿಸ್ತೃತಿಕಲ್ಪನಾಸು ಬಹುಧಾ ದಂಡೋ ಭವೇನ್ಮೇದಿನೀ
ವಿಸ್ತಾರಾತ್ ಗೃಹಕರ್ತೃ ಪೂರುಷಸಮೋತ್ಸೇಧೋಽತ್ರ ತಾಲೋಮತಃ
ತಾಲೈಸ್ತೈರ್ದಶನಂದವಾರಣಮಿತೈರ್ದಂಡಸ್ತ್ರಿಧಾ ತೇಷು ತ -
ದ್ವೀಥೀವಿಸ್ತೃತಿಮೇಕತೋ ವಿತನುಯಾದ್ಯದ್ಯಸ್ತಿಭೂವಿಸ್ತೃತಿಃ ॥೧೫॥

ತಾತ್ಪರ್ಯ :

ಸ್ಥಳದ ವಿಸ್ತಾರಕ್ಕೆ ಅನುಗುಣವಾಗಿ ವೀಥಿಯ ಅಗಲವನ್ನು ನಿಶ್ಚಯಿಸಲು ಹಲವು ವಿಧದ ದಂಡಗಳು (ಅಳತೆಯ ಪ್ರಮಾಣಗಳು) ಇವೆ. ಈ ವಿಷಯದಲ್ಲಿ ಮನೆಯನ್ನು ಕಟ್ಟಿಸುವವನ ಎತ್ತರವು ಒಂದು ಅಳತೆಯ ಪ್ರಮಾಣವಾಗಿದೆ. ಅದಕ್ಕೆ "ತಾಲ" ಎಂದು ಹೆಸರು, ಆ ತಾಲವು ಹತ್ತು, ಒಂಭತ್ತು ಮತ್ತು ಎಂಟು ಪಾಲುಗಳ ಮಿತಿಯುಳ್ಳದಾದುದರಿಂದ ಅವುಗಳನ್ನು ಅನುಸರಿಸಿ ದಂಡವೂ ಮೂರು ವಿಧವಾಗುತ್ತದೆ. ಭೂಮಿ ತುಂಬ ವಿಸ್ತತವಾಗಿದ್ದರೆ ವೀಥಿಯ ಅಗಲವು ಒಂದು ದಂಡದಿಂದ ಆಗುತ್ತದೆ.

೭. ವಾಸ್ತುವಿನ ಒಂಬತ್ತು ವೀಥಿಗಳು

ಶ್ಲೋಕ : ನಂದದ್ವಂದ್ವಪುಟೇನ ವಾವೃತಿತಯಾ ಬಾಹ್ಯಾದಿಮಧ್ಯಾಂತಿಮಾ
ವೀಥ್ಯಃ ಸ್ಯುಃ ಪರಿತಃ ಪಿಶಾಚದಿವಿಷದ್ವಿತ್ತಾಧಿಭೂದಂಡಿನಾಮ್
ನಾಗಾಮ್ಬ್ವಗ್ನಿ ವಿನಾಯಕ ದ್ರುಹಿಣನಾಮ್ನಾಂ ಚಾಸು ನಿಂದ್ಯಾಃ ಸ್ಮೃತಾಃ
ಪೈಶಾಚಾಗ್ನ್ಯಹಿ ದಂಡಿನಾಂ ಗೃಹವಿಧೌ ವೀಥ್ಯಶ್ಚತುರ್ದಿಕ್ಷ್ವಪಿ ॥೧೬॥


ತಾತ್ಪರ್ಯ :

ಭೂಕ್ಷೇತ್ರವನ್ನು 18 ಪದಗಳ ಆವೃತಿಯನ್ನಾಗಿ ವಿಂಗಡಿಸಿದಾಗ ಹೊರಗಿನಿಂದ ಮಧ್ಯಬಿಂದುವಿನ ವರೆಗೆ ಒಂಬತ್ತು ವೀಥಿಗಳು ಆಗುತ್ತವೆ. ಅವುಗಳಿಗೆ ಹೊರಗಿನಿಂದ ಮಧ್ಯದವರೆಗೆ ಕ್ರಮವಾಗಿ (1) ಪಿಶಾಚವೀಥಿ (2) ದೇವವೀಥಿ (3) ಕುಬೇರವೀಥಿ (4) ಯಮವೀಥಿ (5) ನಾಗವೀಥಿ (6) ಜಲವೀಥಿ (7) ಅಗ್ನಿವೀಥಿ (8) ವಿನಾಯಕವೀಥಿ ಮತ್ತು (9) ಬ್ರಹ್ಮವೀಥಿ ಎಂದು ಹೆಸರು. ಅವುಗಳಲ್ಲಿ (1) ಪಿಶಾಚವೀಥಿ (2) ಅಗ್ನಿವೀಥಿ (3) ನಾಗವೀಥಿ ಮತ್ತು (4) ಯಮವೀಥಿ ಈ ನಾಲ್ಕು ವೀಥಿಗಳಲ್ಲಿ, ಚತುರ್ದಿಕ್ಕುಗಳಲ್ಲಿಯೂ ಗೃಹನಿರ್ಮಾಣ ಒಳ್ಳೆಯದಲ್ಲ.

ವಿ.ವಿ. :

1. ಪಿಶಾಚ ವೀಥಿ - ತ್ಯಾಜ್ಯ
2. ದೇವವೀಥಿ - ಯೋಗ್ಯ
3. ಕುಬೇರವೀಥಿ - ಯೋಗ್ಯ
4. ಯಮವೀಥಿ - ತ್ಯಾಜ್ಯ
5. ನಾಗವೀಥಿ - ತ್ಯಾಜ್ಯ
6. ಜಲವೀಥಿ - ಯೋಗ್ಯ
7. ಅಗ್ನಿವೀಥಿ - ತ್ಯಾಜ್ಯ
8. ವಿನಾಯಕವೀಥಿ - ಯೋಗ್ಯ
9. ಬ್ರಹ್ಮವೀಥಿ - ಯೋಗ್ಯ

ವಾಸ್ತುವಿನ ಒಂಬತ್ತು ವೀಥಿಗಳು



ಚಿತ್ರ. ೩೪, ಅ.೨, ಶ್ಲೋ. ೧೬.

ಶ್ಲೋಕ : ಯಾವತ್ ಕಲ್ಪಿತಮಂಗಣಂ ಗೃಹವಿಧೌ ಸ್ಯಾರ್ಧಾನ್ವಿತಾ ತಾವತೀ
ವೀಥೀ ವಿಸ್ತೃತಿರುತ್ತಮಾಂಗಣಸಮಾ ಮಧ್ಯಾ ತದಲ್ಪಾಧಮಾ
ಕ್ಷೇತ್ರೇಽಲ್ಪೇ ಪುನರಂಗಣಾರ್ಧವಿತತಾಂ ವೀಥೀಂ ಪ್ರಕುರ್ಯಾತ್ ತದಾ
ಪ್ರಾಚ್ಯೋದೀಚ್ಯಗೃಹಂ ಭವೇತ್ ಸಲಿಲವೀಥ್ಯಾರೂಢಮೇವಂ ಚ ವಾ ॥೧೭॥

ತಾತ್ಪರ್ಯ :

ಗೃಹನಿರ್ಮಾಣದಲ್ಲಿ ವೀಥಿಯ ಅಗಲವು ಅಂಗಳದ ಒಂದೂವರೆ ಪಾಲಿನಷ್ಟು ಇದ್ದರೆ ಅತ್ಯುತ್ತಮ. ಅಂಗಳದ ಉದ್ದದಷ್ಟೆ ಇದ್ದರೆ ಮಧ್ಯಮ. ಅಲ್ಲದೆ ಅಂಗಳದ ಉದ್ದಕ್ಕಿಂತ ಕಡಿಮೆಯಿದ್ದರೆ ಅಧಮ. ಕ್ಷೇತ್ರವಿಸ್ತಾರವು ಕಡಿಮೆಯಿರುವ ತುಂಡುನೆಲದಲ್ಲಿ ಅಂಗಣದ ಉದ್ದದ ಅರ್ಧದಷ್ಟು ವೀಥಿಯಿರಬಹುದು. ಆಗ ಪೂರ್ವದ ಮತ್ತು ಉತ್ತರದ ಭಾಗಗಳು ಜಲವೀಥಿಯಲ್ಲಿರುತ್ತವೆ. ಅಲ್ಲಿ ಗೃಹನಿರ್ಮಾಣ ಮಾಡಬಹುದು.

ಶ್ಲೋಕ : ಕ್ಷೇತ್ರೇಽತ್ಯಲ್ಪೇ ತು ಮಧ್ಯೇಽಂಗಣಮಪಿ ಚ ಕೃತಾಂತಾತ್ಮಭೂಸೂತ್ರಯೋಗಾತ್
ಕಿಂಚನ್ನೀತ್ವಾ ಸ್ವಗತ್ಯಾಪಿ ಚ ಭವನಚತುಷ್ಕಂ ಕೃತಂ ದೃಶ್ಯತೇ ಚ
ಅತ್ಯಲ್ಪಾ ಏವ ವೀಥ್ಯೋ ಹ್ಯಶುಭಶುಭಫಲಾನ್ಯೇವಮೇವಾಲ್ಪರೂಪಾ -
ಣ್ಯಸ್ಮಾದೀಶಾದಿಖಂಡಾದ್ಯಧಿಗತನವವೀಥೀ ವಿಧಿರ್ನೇಷ್ಯತೇಽತ್ರ ॥೧೮॥

ತಾತ್ಪರ್ಯ :

ಸ್ಥಳವು ಅತ್ಯಲ್ಪವಾಗಿದ್ದರೆ (ಕಿರಿದಾಗಿದ್ದರೆ) ಅಂಗಳವು ಮಧ್ಯದಲ್ಲಿದ್ದು ಬ್ರಹ್ಮಸೂತ್ರ ಮತ್ತು ಯಮಸೂತ್ರವು ಪರಸ್ಪರ ಸಂಧಿಸುವಲ್ಲಿಂದ ಸ್ಥಳಾಂತರಿಸಲ್ಪಡುತ್ತದೆ. ಅಂತಹ ಕಡೆ ವೀಥಿಗಳು ಬಹಳ ಕಿರಿದಾಗಿರುತ್ತವೆ. ಅದಕ್ಕೆ ಅನುಗುಣವಾಗಿ ಅವುಗಳಿಂದಾಗುವ ಶುಭಾಶುಭಫಲಗಳು ಅಲ್ಪಪ್ರಮಾಣದವುಗಳಾಗುತ್ತವೆ. ಅಂತಹ ಸ್ಥಳಗಳಲ್ಲಿ ಈಶಾನಖಂಡಾದಿ ವಿಭಾಗಗಳನ್ನು ಹಾಗೂ ಪಿಶಾಚವೀಥಿ ಮೊದಲಾದವುಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗಿಲ್ಲ.

ಶ್ಲೋಕ : ಯಾವತ್ ಪ್ರಾಂಗಣದೈರ್ಘ್ಯಮಾನಮಮುನೈಕಾಧ್ಯರ್ಧವೀಥೀ ತತಂ
ತೇನಾಷ್ಟಾದಶ ಭೂಮಿಮಾನಮಿತಿ ವಾ ಕ್ಷೇತ್ರಾಪ್ತಿರಂತಃ ಕ್ರಮಾತ್
ಮರ್ಯಾದಾನಿಯಮಪ್ರಹೀಣ ಮನುಜಾಗಾರೇಽಪಿ ತತ್ಪ್ರಾಂಗಣಾ
ದೇವಂ ಕ್ಷೇತ್ರಮಿತಂ ಕರೋತು ಚ ಪುನರ್ವಪ್ರಾಂತಮೌಚಿತ್ಯತಃ ॥೧೯॥

ತಾತ್ಪರ್ಯ :

ಅಂಗಳದ ಉದ್ದದ ಒಂದೂವರೆ ಪಾಲಿನಷ್ಟು ವೀಥಿಯ ಅಗಲವಿದ್ದು ಕ್ಷೇತ್ರದ ಅಗಲವು ವೀಥಿಯ ಅಗಲಕ್ಕಿಂತ ಹದಿನೆಂಟು ಪಾಲಿನಷ್ಟು ಇರಬೇಕು. ಅದರ ಒಳಗಡೆಯ ವಿಸ್ತಾರವೇ ಕ್ಷೇತ್ರವಿಸ್ತಾರವಾಗುತ್ತದೆ. ಹೀಗೆ ಅಂಗಳದ ಉದ್ದವನ್ನು ಆಧರಿಸಿ ಬೇಕಾದಷ್ಟು ಗೃಹನಿವೇಶನಗಳನ್ನೂ,

ನಿವೇಶನಗಳ ಬಡಾವಣೆಗಳನ್ನೂ ಮಾಡಬೇಕು. ಅವುಗಳಿಗೆ ಉಚಿತವಾದ ರೀತಿಯಲ್ಲಿ ಪ್ರಾಕಾರವನ್ನೂ ರಚಿಸಬೇಕು.

೮. ಮರ್ಮರಚನೆ ಮತ್ತು ನಾಡಿಗಳು

ಶ್ಲೋಕ : ಏಕೀಕೃತ್ಯ ಗಣೇಶಪಂಕಜಭುವೋರ್ವೀಥೀ ಮಥೈಶೇऽಥವಾ
ಖಂಡೇ ನೈರ್ಋತಕೇऽತ್ರ ವಾಸ್ತುಪದಮೇಕಾಶೀತಿಖಂಡಾತ್ಮಕಮ್
ಯದ್ವಾ ನಾಗಕೃತಿ ಪ್ರಭಿನ್ನಮಥವಾ ದಿಗ್ವರ್ಗಖಂಡೋದಿತಮ್
ಕುರ್ಯಾದೇಕಮಿಹಾಂಗ ಮರ್ಮರಚನಾಂ ವಾಸ್ತೋಶ್ಚ ತದ್ದೇವತಾಃ ॥೨೦॥

ತಾತ್ಪರ್ಯ :

ಈಶಾನ ಖಂಡ ಅಥವಾ ನೈಋತ್ಯಖಂಡಗಳ ಬ್ರಹ್ಮ ಮತ್ತು ವಿನಾಯಕ ವೀಥಿಗಳನ್ನು ಒಟ್ಟು ಸೇರಿಸಿ ಅಲ್ಲಿ ವಾಸ್ತುಪದ ವಿನ್ಯಾಸಗಳನ್ನು 81 ಅಥವಾ 64 ಅಥವಾ 100 ಸಂಖ್ಯೆಗಳಲ್ಲಿ ಮಾಡಬೇಕು. ಈ ರೀತಿ ಪದ ವಿನ್ಯಾಸ ಮಾಡಿ ಅವಯವಗಳನ್ನೂ, ಮರ್ಮರಚನೆಗಳನ್ನೂ ಮಾಡಿ ವಾಸ್ತುವಿನ ದೇವತೆಗಳನ್ನು ಇರಗೊಳಿಸಬೇಕು.

ಶ್ಲೋಕ : ನಾಡ್ಯಃ ಪ್ರಾಗುದಗ್ರಗಾ ದಶದಶೈಕಾಶೀತಿಕೋಷ್ಠೇ ಶಿವಾ -
ಗ್ನ್ಯಗ್ರಾಃ ಪಂಚಪೃಥಙ್ನವೋರ್ಮಿಗುಣಕೋಷ್ಠಸ್ಥಾಸ್ತಥಾ ರಜ್ಜವಃ
ಮರ್ಮಾಣ್ಯಷ್ಟರಸಾಶುಗಾಬ್ಧಿಗುಣಸಂಖ್ಯಾನೈರಕೋಷ್ಠಸ್ಥಿತೈಃ
ಸೂತ್ರೈರ್ಯೋಗಸಮುದ್ಭವಾನಿ ತು ಶತಂ ವರ್ಜ್ಯಾನಿ ಕುಡ್ಯಾದಿಷು ॥೨೧॥

ತಾತ್ಪರ್ಯ :

ಎಂಬತ್ತೊಂದು ಪದಗಳ ವಾಸ್ತುವಿನಲ್ಲಿ ಪೂರ್ವಕ್ಕೆ ತುದಿಯಾಗಿ ಹತ್ತು ಮತ್ತು ಉತ್ತರಕ್ಕೆ ತುದಿಯಾಗಿ ಹತ್ತು ನಾಡಿಗಳು ಇರುತ್ತವೆ. ಅದೇ ರೀತಿ ಈಶಾನ್ಯ ಮತ್ತು ಆಗ್ನೇಯ ಕೋನಗಳಿಗೆ ಅಗ್ರವಾಗಿ ಐದು ರಜ್ಜುಗಳು ಪ್ರತ್ಯೇಕ ಇರುತ್ತವೆ. ಅವು 9, 6 ಮತ್ತು 3 ಕೋಷ್ಠಗಳಲ್ಲಿ ಹಾದು ಹೋಗುತ್ತವೆ. ಪದಮಧ್ಯವನ್ನು ಬಿಟ್ಟು 8, 6, 5 ಅಥವಾ 4 ಸೂತ್ರಗಳು ಸಂಧಿಸುವಾಗ ನೂರು ಮರ್ಮಗಳಾಗುತ್ತವೆ. ಅವುಗಳು ಗೋಡೆ ಮೊದಲಾದವುಗಳನ್ನು ರಚಿಸುವಾಗ ವರ್ಜ್ಯ.


ವಿ.ವಿ. :

ನಾಡಿ : ಸಮತಳ ಹಾಗೂ ಲಂಬ ರೇಖೆಗಳು


ರಜ್ಜು : ಓರೆ ಗೆರೆಗಳು

ಮರ್ಮ : ಎರಡು ಯಾ ಹೆಚ್ಚು ರೇಖೆಗಳ ಸಂಧಿ ಸ್ಥಳ


ವಿವಿಧ ಪದಗಳಲ್ಲಿ ಮರ್ಮರಚನೆ



(ಅ) ನೂರು ಪದಗಳ
ವಾಸ್ತುಮಂಡಲ
(10x10=100)



(ಆ) ಎಂಬತ್ತೊಂದು
ಪದಗಳ ವಾಸ್ತುಮಂಡಲ
(9x9=81)



(ಇ) ಅರುವತ್ತನಾಲ್ಕು
ಪದಗಳ ವಾಸ್ತುಮಂಡಲ
(8x8=64)

ಚಿತ್ರ. ೩೫, ೩೬, ೩೭, ಅ.೨, ಶ್ಲೋ.೨೦, ೨೧.

ಶ್ಲೋಕ : ಪ್ರಾಗ್ವೋದಕ್ಪದ ಭಾಸ್ಕರಾಂಶದಲಮಾತ್ರಂ ಮರ್ಮಸೂತ್ರಸ್ಥಿತ್ಯೈ -
ರ್ನೀತ್ವಾ ವಿನ್ಯಸನಾನ್ನಮರ್ಮಪರಿಪೀಡಾ ಸ್ತಂಭಕುಡ್ಯಾದಿಷು
ವಾಸ್ತುನ್ಯತ್ರ ನಿಪೀಡಿತೇ ಮಹಿಷಸಿಂಹಾನೇಕಪಾನಾಂ ಶಿರೋ
ಹೈಮಂ ಕೂರ್ಮವರಾಹಯೋಶ್ಚ ನಿಖನೇತ್ ತಚ್ಛಾಂತಯೇ ಶಾಂತಿಕೃತ್ ॥೨೨॥

ತಾತ್ಪರ್ಯ :

ಮರ್ಮಸಂಧಿಯಿಂದ ಪೂರ್ವೋತ್ತರಕ್ಕಿರುವ ಪದವನ್ನು ಹನ್ನೆರಡು ಭಾಗಮಾಡಿ ಅದರ ಒಂದು ಭಾಗದ ಅರ್ಧಾಂಶವನ್ನು (ಪದದ $\frac{1}{24}$ ಭಾಗ) ಆ ಮರ್ಮಸೂತ್ರದಿಂದ ಬಿಟ್ಟರೆ ಕಂಭ, ಗೋಡೆ ಮುಂತಾದವುಗಳಲ್ಲಿ ಮರ್ಮವೇಧದೋಷ ಬರುವುದಿಲ್ಲ. ಇದರಲ್ಲಿ ಮರ್ಮಪೀಡೆ ಬಂದರೆ ಅದರ ನಿವಾರಣೆಗಾಗಿ ಶಾಂತಿಕರ್ಮಗಳನ್ನು ಮಾಡಿಸಿ ಕೋಣ, ಸಿಂಹ, ಆನೆ, ಕೂರ್ಮ, ವರಾಹ ಇವುಗಳ ಚಿನ್ನದ ತಲೆಗಳನ್ನು ಮಾಡಿಸಿ ಸ್ಥಾಪಿಸಬೇಕು.

ವಿ.ವಿ. :

ಮರ್ಮವೇಧ ನಿವಾರಣೆಯ ಕ್ರಮವನ್ನು ಇಲ್ಲಿ ಹೇಳಲಾಗಿದೆ. ಮರ್ಮಸಂಧಿಯಿಂದ ಪೂರ್ವ ಮತ್ತು ಉತ್ತರಕ್ಕಿರುವ ಒಂದು ಪದದ $\frac{1}{24}$ ಭಾಗವನ್ನು ಬಿಟ್ಟು ಗೃಹನಿರ್ಮಾಣ ಮಾಡಿದರೆ ಮರ್ಮವೇಧದೋಷ ಬರುವುದಿಲ್ಲ. ಇದು ಒಂದು ವಿಧಾನ. ಇನ್ನೊಂದು ವಿಧಾನದಂತೆ, ಮರ್ಮಪೀಡೆ ಬಂದರೆ ಆ ಮರ್ಮಸಂಧಿಸ್ಥಳದಲ್ಲಿ ಕೋಣ, ಸಿಂಹ, ಆನೆ, ಕೂರ್ಮ ಮತ್ತು ವರಾಹ ಈ ಪ್ರಾಣಿಗಳ ಚಿನ್ನದ ತಲೆಗಳನ್ನು ಮಾಡಿಸಿ ಸ್ಥಾಪಿಸಿದರೆ ವೇಧದೋಷದ ನಿವಾರಣೆಯಾಗುತ್ತದೆ.

೯. ವಾಸ್ತುದೇವತೆಗಳ ಪದಗಳು

ಶ್ಲೋಕ : ಏಕಾಶೀತಿಪದೇ ಪ್ರಕಲ್ಪ್ಯ ನವಕಂ ಮಧ್ಯೇಽಸ್ಯ ಬಾಹ್ಯಾವೃತೌ
ಷಟ್ಕಂ ದಿಕ್ಷು ವಿದಿಕ್ಷು ಯುಗ್ಮಯುಗಲಂ ಚೈಕೈಕಶಸ್ತದ್ಬಹಿಃ
ಚತ್ವಾರಿಂಶದಥೈಷು ಪಂಚ ಚ ವಿರಿಂಚಾದ್ಯಾಃ ಪದೇಷು ಸ್ಥಿತಾ
ಬಾಹ್ಯೇಽಷ್ಟಾವ ಪದಸ್ಥಿತಾಸ್ತ್ರ್ಯಧಿಕಪಂಚಾಶತ್ ಸ್ಯುರೇವಂ ಸುರಾಃ ॥೨೩॥

ತಾತ್ಪರ್ಯ :

ವಾಸ್ತುಮಂಡಲದಲ್ಲಿ ಎಂಬತ್ತೊಂದು ಪದಸ್ಥಾನಗಳನ್ನು ಗೊತ್ತು ಮಾಡಬೇಕು. ಅವುಗಳ ಮಧ್ಯದಲ್ಲಿರುವ ಒಂಬತ್ತು ಪದಗಳದ್ದು ಒಂದು ಪದಸ್ಥಾನ (ಬ್ರಹ್ಮಪದ). ಆ ಪದಗಳ (ಒಂಬತ್ತು ಪದಗಳ) ಹೊರಭಾಗದ ದಿಕ್ಕುಗಳಲ್ಲಿ ಆರಾರು ಪದಗಳು. ವಿದಿಕ್ಕುಗಳಲ್ಲಿ ಎರಡೆರಡು ಪದಗಳು. ಅದರ ಹೊರಗಿನ ಆವರಣದಲ್ಲಿ ಒಂದೊಂದು ಪದ. ಹೀಗೆ ಒಟ್ಟು ನಲುವತ್ತೈದು ಪದಗಳು ಬ್ರಹ್ಮಾದಿದೇವತೆಗಳ ಸ್ಥಾನಗಳು. ಇದಲ್ಲದೆ, ಎಂಟು ದೇವತೆಗಳು ಆ ವಾಸ್ತುಮಂಡಲದ ಹೊರಗೆ ಸ್ಥಾನ ಪಡೆಯುತ್ತವೆ. ಆಗ ಆಗುವ ಒಟ್ಟು ದೇವತೆಗಳ ಸಂಖ್ಯೆ ಐವತ್ತಮೂರು.

ವಿ.ವಿ. :

(ಅ) ೧. ವಾಸ್ತುಮಂಡಲದಲ್ಲಿರುವ ಪದಸ್ಥಾನಗಳು 81

೨. ಮಧ್ಯದ ಬ್ರಹ್ಮಪದ ಸ್ಥಾನ 9

೩. ದಿಕ್ ಪದಗಳು 6x4 24

೪. ವಿದಿಕ್ ಪದಗಳು 2x8 16

೫. ಹೊರಗಿನ ಆವರಣದ ಒಂದೊಂದು ಪದ 32

ಒಟ್ಟು ಪದಗಳು 81

(ಆ) ೧. ಎಂಬತ್ತೊಂದು ಪದಗಳಲ್ಲಿರುವ ದೇವತೆಗಳ ಸ್ಥಾನ 45

೨. ವಾಸ್ತುಮಂಡಲದ ಹೊರಗೆ ಸ್ಥಾನ ಪಡೆದ ದೇವತೆಗಳ ಸ್ಥಾನ 8

ಒಟ್ಟು ದೇವತೆಗಳು 53

(ಇ) ನಲುವತ್ತೈದು ದೇವತೆಗಳ ಸ್ಥಾನ

೧. ಮಧ್ಯದ ಬ್ರಹ್ಮಪದ ಸ್ಥಾನ 1


೨. ದಿಕ್ ಪದಸ್ಥಾನ 4

೩. ವಿದಿಕ್ ಪದಸ್ಥಾನ 8

೪. ಹೊರಗಿನ ಆವರಣದ ಒಂದೊಂದು ಪದಸ್ಥಾನ 32

೫. ಒಟ್ಟು ದೇವತೆಗಳ ಪದಸ್ಥಾನ 45

ಚಿತ್ರ : ವಾಸ್ತುಮಂಡಲದ ಎಂಬತ್ತೊಂದು ಪದಗಳಲ್ಲಿ ನಲುವತ್ತೈದು ದೇವತೆಗಳ ಪದಸ್ಥಾನ ಮತ್ತು ಪದವಿಲ್ಲದ ಎಂಟು ದೇವತೆಗಳ ಸ್ಥಾನ



ಚಿತ್ರ.೩೮, ಅ.೨, ಶ್ಲೋ.೨೩.

೧೦. ವಾಸ್ತುಪದ ದೇವತೆಗಳು

ಶ್ಲೋಕ : ಈಶಾದ್ಯಂ ಬಹಿರಾವೃತಿಷ್ಠಪದಕೇಷ್ವೀಶಾನ ಪರ್ಜನ್ಯಕಾ
ವೈಂದ್ರೀಂದ್ರೌ ರವಿಸತ್ಯಕೌ ಭೃಶಖಗವ್ಯಾದಾಂಸ್ತಥಾ ಪೂಷಣಃ
ಭೂಯೋ ವೈ ವಿತಥಂ ಗೃಹಕ್ಷತಯಮೌ ಗಂಧರ್ವಭೃಂಗೌ ಮೃಗಂ
ಪಿತ್ರಾಖ್ಯಾನ್ ಪ್ರತಿಹಾರಪಾಲಮಪಿ ಸುಗ್ರೀವಂ ಕ್ರಮಾತ್ ಕಲ್ಪಯೇತ್ ||೨೪||

ತಾತ್ಪರ್ಯ :

ವಾಸ್ತುಪದ ವಿನ್ಯಾಸದಲ್ಲಿ ಹೊರಗಿನ ಸುತ್ತಿನ ಈಶಾನ್ಯ ಕೋನದಿಂದ ಆರಂಭಿಸಿ ಹತ್ತೊಂಬತ್ತು ಪದಗಳವರೆಗೆ ಕ್ರಮವಾಗಿ ಈಶಾನ, ಪರ್ಜನ್ಯ, ಜಯಂತ, ಇಂದ್ರ, ರವಿ, ಸತ್ಯಕ, ಭೃಶ, ಅಂತರಿಕ್ಷ, ಅಗ್ನಿ, ಪೂಷನ್, ವಿತಥ, ಗೃಹಕ್ಷತ, ಯಮ, ಗಂಧರ್ವ, ಭೃಂಗ, ಮೃಗ, ನಿರ್ಋತಿ, ದ್ವಾರಪಾಲಕ ಮತ್ತು ಸುಗ್ರೀವ ಈ ದೇವತೆಗಳ ಸ್ಥಾನಗಳಾಗಿವೆ.

ಶ್ಲೋಕ : ಭೂಯಃ ಪುಷ್ಪಾದಿದಂತಂ ವರುಣಮಸುರಶೋಷಾಖ್ಯರೋಗಾನಿಲಾಹೀನ್
ಮುಖ್ಯಂ ಭಲ್ಲಾಟಮಿಂದ್ವರ್ಗಲಮದಿತಿದಿತೀ ಚೇತಿ ಬಾಹ್ಯಾವೃತೌ ಸ್ಯುಃ
ಈಶಾದ್ಯಾವಾಪವತ್ಸಾರ್ಯಕಸವಿತೃಕಸಾವಿತ್ರಸಂಜ್ಞಾವಿವಸ್ವಾ
ನಿಂದ್ರಾಖ್ಯಶ್ಚೇಂದ್ರಜಿನ್ಮಿತ್ರಕ ಶಿವಶಿವಜಿದ್ ಭೂಭೃತೋಽಂತವೃತೌ ಸ್ಯುಃ ||೨೫||

ತಾತ್ಪರ್ಯ :

ಪುನಃ ಹೊರಗಿನ ಸುತ್ತಿನಲ್ಲಿ (ಇಪ್ಪತ್ತನೇ ಪದದಿಂದ ಮೂವತ್ತ ಎರಡನೇ ಪದದವರೆಗೆ) ಪುಷ್ಪದಂತ, ವರುಣ, ಅಸುರ, ಶೋಷ, ರೋಗ, ವಾಯು, ಅಹಿ, ಮುಖ್ಯ, ಭಲ್ಲಾಟ, ಇಂದು, ಅರ್ಗಲ, ಅದಿತಿ ಮತ್ತು ದಿತಿ ಈ ದೇವತೆಗಳನ್ನು ಕಲ್ಪಿಸಬೇಕು. (ಇಲ್ಲಿಗೆ ಹೊರಗಿನ ಸುತ್ತಿನ ಮೂವತ್ತೆರಡು ಪದಸ್ಥಾನಗಳು ಮುಗಿಯುತ್ತವೆ). ಒಳಗಿನ ಸುತ್ತಿನಲ್ಲಿ ಈಶಾನ್ಯದಿಂದ ಆರಂಭಿಸಿ ಕ್ರಮವಾಗಿ ಆಪ, ಆಪವತ್ಸ, ಆರ್ಯಕ, ಸವಿತೃ, ಸಾವಿತ್ರ, ವಿವಸ್ವಾನ್, ಇಂದ್ರ, ಇಂದ್ರಜಿತ್, ಮಿತ್ರಕ, ಶಿವ, ಶಿವಜಿತ್ ಮತ್ತು ಭೂಭೃತ್ ಎಂಬ ಹನ್ನೆರಡು ದೇವತೆಗಳು ಸ್ಥಾನಗಳನ್ನು ಪಡೆಯುತ್ತವೆ.

ಶ್ಲೋಕ : ಬ್ರಹ್ಮಾ ಮಧ್ಯಪದೇಽಥ ಶರ್ವಸಹಿತಃ ಸ್ಕಂದೋಽರ್ಯಮಾ ಜೃಂಭಕಃ
ಪ್ರಾಗಾದೌ ಪಿಲಿಪಿಂಛಕಶ್ಚ ಚರಕೀಶಾದೌ ವಿದಾರ್ಯಾಹ್ವಯಾ
ಭೂಯಃ ಪೂತನಿಕಾ ಚ ಪಾಪಪದಪೂರ್ವಾ ರಾಕ್ಷಸೀ ಬಾಹ್ಯತ -
ಶ್ಚೈತೇಽಷ್ಟಾವಪದಸ್ಥಿತಾಶ್ಚ ಪರಿತೋ ದೇವಗ್ರಹಾಸ್ತದ್ಬಹಿಃ ||೨೬||

ತಾತ್ಪರ್ಯ :

ಅನಂತರ ಮಧ್ಯಪದದಲ್ಲಿ ಬ್ರಹ್ಮನೂ, ಮಂಡಲದ ಹೊರಗೆ ಪೂರ್ವದಿಕ್ಕಿನಿಂದ

ಮೊದಲ್ಗೊಂಡು ಉತ್ತರದಿಕ್ಕಿನವರೆಗೆ ನಾಲ್ಕು ದಿಕ್ಕುಗಳಲ್ಲಿ ಕ್ರಮವಾಗಿ ಶರ್ವಸ್ಕಂದ, ಆರ್ಯಮಾ, ಜೃಂಭಕ ಮತ್ತು ಪಿಲಿಪಿಂಛಕ ಎಂಬ ದೇವತೆಗಳೂ ಸ್ಥಾನಗಳನ್ನು ಪಡೆಯುತ್ತವೆ. ಈಶಾನ್ಯದಿಂದ ಆರಂಭಿಸಿ ವಿದಿಕ್ಕುಗಳಾದ ಈಶಾನ್ಯ, ಆಗ್ನೇಯ, ನೈಋತ್ಯ ಮತ್ತು ವಾಯುವ್ಯಗಳಲ್ಲಿ ಕ್ರಮವಾಗಿ ಚರಕೀ, ವಿದಾರೀ, ಪೂತನಿಕಾ ಮತ್ತು ಪಾಪರಾಕ್ಷಸಿ ಎಂಬ ದೇವತೆಗಳೂ ಪದಗಳಿಲ್ಲದೆ ಇರುತ್ತವೆ. ಅದರ ಹೊರಗೆ ದೇವಗ್ರಹಗಳ ಸ್ಥಾನಗಳಾಗುತ್ತವೆ.

ವಿ.ವಿ. :

ಶ್ಲೋಕ ೨೪, ೨೫ ಮತ್ತು ೨೬ ಇವುಗಳು ಒಂದು ಘಟಕಕ್ಕೆ ಒಳಗಾಗುತ್ತವೆ. ಈ ಮೂರು ಶ್ಲೋಕಗಳಲ್ಲಿ ವಾಸ್ತುಮಂಡಲದಲ್ಲಿ ಸ್ಥಳವನ್ನು ಪಡೆದ ದೇವತೆಗಳ ಹೆಸರುಗಳನ್ನು ಹೇಳಿರುತ್ತಾರೆ. ಆ ದೇವತೆಗಳ ಹೆಸರುಗಳನ್ನು ಪದಸಂಖ್ಯೆಯೊಂದಿಗೆ ಕೆಳಗೆ ಕೊಡಲಾಗಿದೆ.

೧. ಈಶಾನ
೨. ಪರ್ಜನ್ಯ
೩. ಜಯಂತ (ಐಂದ್ರ)
೪. ಇಂದ್ರ
೫. ರವಿ
೬. ಸತ್ಯಕ
೭. ಭೃಶ
೮. ಅಂತರಿಕ್ಷ
೯. ಅಗ್ನಿ
೧೦. ಪೂಷನ್
೧೧. ವಿತಥ
೧೨. ಗೃಹಕ್ಷತ
೧೩. ಯಮ
೧೪. ಗಂಧರ್ವ
೧೫. ಭೃಂಗ
೧೬. ಮೃಗ
೧೭. ನಿಋತಿ (ಪಿತೃ)
೧೮. ದ್ವಾರಪಾಲಕ
೧೯. ಸುಗ್ರೀವ
೨೦. ಪುಷ್ಪದಂತ
೨೧. ವರುಣ
೨೨. ಅಸುರ
೨೩. ಶೋಷ
೨೪. ರೋಗ
೨೫. ವಾಯು
೨೬. ಅಹಿ (ನಾಗ)
೨೭. ಮುಖ್ಯ
೨೮. ಭಲ್ಲಾಟ
೨೯. ಇಂದು (ಚಂದ್ರ)
೩೦. ಅರ್ಗಲ
೩೧. ಅದಿತಿ
೩೨. ದಿತಿ
೩೩. ಆಪ
೩೪. ಆಪವತ್ಸ
೩೫. ಆರ್ಯಕ
೩೬. ಸವಿತೃ
೩೭. ಸಾವಿತ್ರ
೩೮. ವಿವಸ್ವಾನ್
೩೯. ಇಂದ್ರ
೪೦. ಇಂದ್ರಜಿತ್
೪೧. ಮಿತ್ರಕ
೪೨. ಶಿವ
೪೩. ಶಿವಜಿತ್
೪೪. ಭೂಭೃತ್
೪೫. ಬ್ರಹ್ಮ
೪೬. ಶರ್ವಸ್ಕಂದ
೪೭. ಆರ್ಯಮಾ
೪೮. ಜೃಂಭಕ
೪೯. ಪಿಲಿಪಿಂಛಕ
೫೦. ಚರಕೀ
೫೧. ವಿದಾರಿ
೫೨. ಪೂತನಿಕಾ
೫೩. ಪಾಪರಾಕ್ಷಸಿ

ದೇವತೆಗಳ ಪದಸ್ಥಾನಗಳು ಮತ್ತು ಇತರ ವಿಷಯಗಳ ವಿವರ

(೯x೯=೮೧ ಪದಗಳು)

೧. ಒಂದು ಪದವಿರುವ ದೇವತೆಗಳು - ಪದ ಒಂದರಿಂದ ಮೂವತ್ತೆರಡು ಪದಗಳ ವರೆಗಿನ ದೇವತೆಗಳು

೨. ಎರಡು ಪದಗಳಿರುವ ದೇವತೆಗಳು - ಈಶಾನ್ಯಾದಿ ವಿದಿಕ್ಕುಗಳಲ್ಲಿರುವ ಎಂಟು ದೇವತೆಗಳು

೩. ಆರು ಪದಗಳಿರುವ ದೇವತೆಗಳು - ಬ್ರಹ್ಮಪದದ ಹೊರಗೆ ಪೂರ್ವಾದಿ ನಾಲ್ಕು ದಿಕ್ಕುಗಳಲ್ಲಿರುವ ದೇವತೆಗಳು


೪. ಒಂಬತ್ತು ಪದಗಳಿರುವ ದೇವತೆ - ಬ್ರಹ್ಮ

೫. ಪದವಿಲ್ಲದ ದೇವತೆಗಳು - ವಾಸ್ತುಮಂಡಲದ ಹೊರಗೆ ಅಷ್ಟ ದಿಕ್ಕುಗಳಲ್ಲಿರುವ ದೇವತೆಗಳು

೬. ಬಾಹ್ಯ ದೇವತೆಗಳು - ವಾಸ್ತು ಮಂಡಲದ ಕೊನೆಯ ಸುತ್ತಿನಲ್ಲಿರುವ ದೇವತೆಗಳು


೭. ಸ್ತ್ರೀ ದೇವತೆಗಳು - ವಿದಿಕ್ಕುಗಳಲ್ಲಿರುವ ಪದವಿಲ್ಲದ ದೇವತೆಗಳು

ವಾಸ್ತುಪದಗಳಲ್ಲಿ ದೇವತೆಗಳ ಸ್ಥಾನ 10x10=100 ಪದಗಳು




ಚಿತ್ರ.೩೯, ಅ.೨, ಶ್ಲೋ.೨೪, ೨೫, ೨೬.

ವಾಸ್ತುಪದಗಳಲ್ಲಿ ದೇವತೆಗಳ ಸ್ಥಾನ 9x9=81 ಪದಗಳು



ಚಿತ್ರ ೧೦, ಅ.೩, ಶ್ಲೋ.೨೪, ೨೫, ೨೬.

ವಾಸ್ತುಪದಗಳಲ್ಲಿ ದೇವತೆಗಳ ಸ್ಥಾನ 8x8=64 ಪದಗಳು



ಚಿತ್ರ ೧೧, ಅ.೩, ಶ್ಲೋ.೨೪, ೨೫, ೨೬.

೧೧. ವಾಸ್ತುಪುರುಷನ ಐತಿಹ್ಯ

ಶ್ಲೋಕ : ಆಸೀತ್ ದೈತ್ಯಃ ಪ್ರದೃಪ್ತೋ ನಿಜಭುಜಬಲವೀರ್ಯಾದಿನಾಕ್ರಾಂತ ಕಾಷ್ಠಾ -
ನಿಷ್ಠೋ ದ್ವೇಷ್ಟಾ ಸುರಾಣಾಂ ಸ ತು ಯುಧಿ ಪತಿತೋ ವಿದ್ಧಗಾತ್ರೋ ಧರಿತ್ರ್ಯಾಂ
ವ್ಯಾಪ್ತಃ ಸರ್ವತ್ರ ಪಶ್ಚಾತ್ ಬಹುತರ ಪರಿವೃತ್ತ್ಯೈವ ಪೃಥ್ವೀಂ ವಿಮಥ್ನನ್
ಮರ್ತ್ಯಾದುಃಸ್ಥಾ ಮುನೀಂದ್ರಾಸ್ತ್ವಪಿ ಚ ಮಖಭುಜಸ್ತಾವದೇವಂ ಬಭೂವುಃ ॥೨೭॥

ತಾತ್ಪರ್ಯ :

ದೇವತೆಗಳ ಶತ್ರುವಾದ ಒಬ್ಬ ರಾಕ್ಷಸನು ಗರ್ವಿಷ್ಠನಾಗಿ ತನ್ನ ಭುಜಬಲ ಪರಾಕ್ರಮದಿಂದ ಇಡೀ ಪ್ರಪಂಚವನ್ನೇ ಆಕ್ರಮಿಸಿದನು. ಯುದ್ಧದಲ್ಲಿ ಬಳಲಿ ವಿದ್ಧಗಾತ್ರನಾಗಿ ಅವನು ಭೂಮಿಯ ಮೇಲೆ ಬಿದ್ದನು. ಬಿದ್ದಲ್ಲಿಂದಲೇ ಅವನು ಸರ್ವತ್ರ ವ್ಯಾಪಿಸುತ್ತ ಹೊರಳಾಡಿ ಭೂಮಿಯನ್ನು ಪೀಡಿಸಿದನು. ಅವನ ಉಪಟಳದಿಂದಾಗಿ ಮನುಷ್ಯರೂ, ಮುನಿಗಳೂ, ದೇವತೆಗಳೂ ದುಃಖಿತರಾದರು.

ಶ್ಲೋಕ : ಸರ್ವವ್ಯಾಪ್ತೇಽಪ್ಯಮುಷ್ಮಿನ್ನತನು ತನುಘಟಾಭ್ಯಂತರೇ ವ್ಯೋಮ ಯದ್ವತ್
ತದ್ವನ್ನಿತ್ಯಂ ವಿಶೇಷಾನ್ನಗರ ಪುರಮಹೀಕ್ಷೇತ್ರ ಖಂಡಾಂಗಣಾದೌ
ಉತ್ತಾನೇ ನೈರ್ಋತಾಶಾವಿನಿಹಿತಚರಣೇ ಯಾವದೀಶಾಂತಶೀರ್ಷೇ
ಜಾತೇ ತಾವನ್ನಿಷೇದುಃ ಸ್ಥಿರಮಿಹ ವಿಬುಧಾಸ್ತಸ್ಯ ದೇಹೇ ಕ್ಷಣೇನ ॥೨೮॥

ತಾತ್ಪರ್ಯ :

ಆಕಾಶವು ದೊಡ್ಡ ಹಾಗೂ ಸಣ್ಣ ಗಾತ್ರದ ಪಾತ್ರಗಳಲ್ಲಿ ತುಂಬಿ ವ್ಯಾಪಿಸುವಂತೆ ಆ ವಾಸ್ತು ಪುರುಷನೂ (ನೆಲದ ಮೇಲೆ ಬಿದ್ದವನು) ವಿಶೇಷತಃ ನಗರ, ಪುರ, ಭೂಮಿ, ಅಂಗಳ ಮೊದಲಾದ ಕಡೆಗಳಲ್ಲಿ ನಿತ್ಯ ವ್ಯಾಪಿಸುತ್ತ ನೈಋತ್ಯ ದಿಕ್ಕಿನಲ್ಲಿ ಕಾಲುಗಳನ್ನೂ, ಈಶಾನ್ಯ ದಿಕ್ ಭಾಗದಲ್ಲಿ ತಲೆಯನ್ನೂ ಇಟ್ಟು ಮೇಲ್ಮುಖನಾಗಿ ಮಲಗಿದನು. ಮಲಗಿದ್ದೇ ತಡ, ಕೂಡಲೇ ದೇವತೆಗಳು ಅವನ ಶರೀರದ ಮೇಲೆ ಸ್ಥಿರವಾಗಿ ಕುಳಿತುಬಿಟ್ಟರು.

೧೨. ವಾಸ್ತುಪುರುಷನ ಮೇಲೆ ಕುಳಿತ ದೇವತೆಗಳ ಸ್ಥಾನ

ಶ್ಲೋಕ : ಮೂರ್ಧ್ನೀಶೋಽಸ್ಯ ತು ಸಂಸ್ಥಿತೋ ನಯನಯೋಃ ಪರ್ಜನ್ಯಕಾಖ್ಯೋ ದಿತಿ -
ಶ್ಚಾಪಸ್ತದ್ವದನೇ ತಥಾ ಗಲತಲೇ ತಸ್ಯಾಪವತ್ಸಾಹ್ವಯಃ
ವಾಮಶ್ರೋತ್ರಗತೋ ಜಯಂತ ಇತರತ್ರಾಸ್ಯಾದಿತಿಃ ಸಂಸ್ಥಿತಾ
ವಾಮಾಂಸೇ ಸ್ಥಿತವಾನಮರ್ತ್ಯಪತಿರಪ್ಯಂ ಸೇಽರ್ಗಲೋ ದಕ್ಷಿಣೇ ॥೨೯॥

ತಾತ್ಪರ್ಯ :

ವಾಸ್ತು ಪುರುಷನ ಮಸ್ತಕದ ಮೇಲೆ ಈಶನು ಕುಳಿತನು. ಅವನ ಎರಡೂ ಕಣ್ಣುಗಳ ಮೇಲೆ ಪರ್ಜನ್ಯ ಮತ್ತು ದಿತಿಯೂ, ಮುಖದಲ್ಲಿ ಆಪನೂ, ಕಂಠದಲ್ಲಿ ಆಪವತ್ಸನೂ, ಎಡಗಿವಿಯಲ್ಲಿ ಜಯಂತನೂ, ಬಲಗಿವಿಯಲ್ಲಿ ಅದಿತಿಯೂ ಕುಳಿತರು. ಅಲ್ಲದೆ ಎಡ ಹೆಗಲಿನ ಮೇಲೆ ಇಂದ್ರನೂ, ಬಲಹೆಗಲಿನ ಮೇಲೆ ಅರ್ಗಲನೂ ಕುಳಿತರು.

ಶ್ಲೋಕ : ಅರ್ಕಾದಯೋ ವಾಮಭುಜಸ್ಥಿತಾಃ ಸ್ಯುಶ್ಚಂದ್ರಾದಯೋ·ದಕ್ಷಿಣಹಸ್ತಗಾಶ್ಚ
ವಾಮಪ್ರಕೋಷ್ಠೇ ಸವಿತಾ ಚ ಸಾವಿತ್ರೋಽನ್ಯತ್ರ ರುದ್ರಃ ಶಿವಜಿತ್ ಪ್ರಕೋಷ್ಠೇ ॥೩೦॥


ತಾತ್ಪರ್ಯ :

ರವಿ ಮೊದಲಾದವರು ವಾಸ್ತು ಪುರುಷನ ಎಡತೋಳಿನ ಮೇಲೆಯೂ, ಚಂದ್ರಾದಿಗಳು ಬಲತೋಳಿನ ಮೇಲೆಯೂ, ಎಡಮುಂಗೈಯಲ್ಲಿ ಸವಿತಾ ಮತ್ತು ಸಾವಿತ್ರನೂ, ಬಲ ಮುಂಗೈಯ ಮೇಲೆ ಶಿವ ಮತ್ತು ಶಿವಜಿತ್ ಕುಳಿತರು.

ಶ್ಲೋಕ : ಮಹೀಧರಾರ್ಯೌ ಕುಚಯೋರ್ವಿವಸ್ವಾನ್
ಮಿತ್ರಶ್ಚ ಕುಕ್ಷೌ ದ್ರುಹಿಣೋಽಥ ನಾಭೌ
ಇಂದ್ರೋಽಸ್ಯ ಮೇಢ್ರೇಽಂಡಯುಗೇ ತು ತಜ್ಜಿತ್
ಪಾದದ್ವಯೇ ತಸ್ಯ ಪರೇ ಪ್ರವಿಷ್ಟಾಃ ॥೩೧॥

ತಾತ್ಪರ್ಯ :

ವಾಸ್ತುಪುರುಷನ ಎರಡು ಸ್ತನಗಳ ಮೇಲೆ ಮಹೀಧರ ಮತ್ತು ಆರ್ಯರೂ, ಹೊಟ್ಟೆಯ ಮೇಲೆ ವಿವಸ್ವಾನ್ ಮತ್ತು ಮಿತ್ರರೂ. ಹೊಕ್ಕುಳಲ್ಲಿ ಬ್ರಹ್ಮನೂ, ಜನನೇಂದ್ರಿಯದ ಮೇಲೆ ಇಂದ್ರನೂ, ಎರಡು ಅಂಡಗಳ ಮೇಲೆ ಇಂದ್ರಜಿತುವೂ, ಅವನ ಎರಡು ಪಾದಗಳ ಮೇಲೆ ಬೇರೆ ಇತರ ದೇವತೆಗಳೂ ಕುಳಿತರು.



ವಾಸ್ತುವಿನ ಎಂಬತ್ತೊಂದು ಪದಗಳಲ್ಲಿ ಮಲಗಿದ ವಾಸ್ತು ಪುರುಷ.
ಚಿತ್ರ.೪೨, ಅ.೨, ಶ್ಲೋ.೨೯, ೩೦, ೩೧.

ಶ್ಲೋಕ : ತಾ ದೇವತಾ ವಾಸ್ತುಶರೀರಸಂಸ್ಥಾ: ಸಂತರ್ಪಿತಾಸ್ತ್ವಿಷ್ಟಫಲಪ್ರದಾಃ ಸ್ಯುಃ
ತಾಶ್ಚೇದನಿಷ್ಟಾ ವಿಪರೀತದಾಃ ಸ್ಯುಃ ತಸ್ಮಾತ್ ವಿದಧ್ಯಾದಿಹ ವಾಸ್ತುಪೂಜಾಮ್ ॥೩೨॥

ತಾತ್ಪರ್ಯ :

ವಾಸ್ತುಪುರುಷನ ಶರೀರದ ಮೇಲೆ ಕುಳಿತ ದೇವತೆಗಳನ್ನು ಪೂಜಾದಿಗಳಿಂದ ಸಂತೃಪ್ತಿಗೊಳಿಸಿದರೆ ಅವರು ಇಷ್ಟಫಲವನ್ನು ಕೊಡುವವರಾಗುತ್ತಾರೆ. ಅವರನ್ನು ಸಂತೋಷಗೊಳಿಸದೇ ಹೋದರೆ ಅವರು ಅನಿಷ್ಟವನ್ನೇ ತಂದೊಡ್ಡುತ್ತಾರೆ. ಆದುದರಿಂದ ವಾಸ್ತುಪೂಜೆಯನ್ನು ಅಗತ್ಯವಾಗಿ ಮಾಡಬೇಕು.

ಇತಿ ಮನುಷ್ಯಾಲಯ ಚಂದ್ರಿಕಾಯಾಂ ದಿಕ್‌ನಿರ್ಣಯಾದಿ ಶುಭವೀಥೀಪರಿಗ್ರಹ ವಾಸ್ತುದೇವತಾನಿರ್ಣಯೋ ನಾಮ ದ್ವಿತೀಯೋऽಧ್ಯಾಯಃ

ತಾತ್ಪರ್ಯ :

ಈ ರೀತಿ ಮನುಷ್ಯಾಲಯ ಚಂದ್ರಿಕೆಯಲ್ಲಿ ದಿಕ್‌ನಿರ್ಣಯಾದಿ ಶುಭವೀಥಿಪರಿಗ್ರಹ ವಾಸ್ತುದೇವತಾನಿರ್ಣಯವೆಂಬ ದ್ವಿತೀಯಾಧ್ಯಾಯವು ಸಮಾಪ್ತಿ ಹೊಂದುತ್ತದೆ.

ಅಥ ತೃತೀಯೋಽಧ್ಯಾಯಃ
ಮೂರನೆಯ ಅಧ್ಯಾಯ
ಮಾನಭೇದಯೋನ್ಯಾಯವ್ಯಯಾದಿ ನಿರ್ಣಯ

೧. ಮಾನ ಪ್ರಭೇದಗಳು

ಶ್ಲೋಕ : ಶಿಂಬಿಸ್ಥಾಷ್ಟತಿಲೈರ್ಯವೋದರಮಿತಿ ಪ್ರಾಹುಸ್ತದಷ್ಟೋನ್ಮಿತೈ
ರ್ಮಾತ್ರಾಖ್ಯಾಂಗುಲಮಂಗುಲೈರಿನಮಿತೈಃ ಪ್ರೋಕ್ತಾ ವಿತಸ್ತಿಸ್ತಥಾ
ತದ್ವಂದ್ವಂ ಕರಕಿಷ್ಕ್ವರತ್ನಿಭುಜದೋರ್ಮುಷ್ಟ್ಯಾದಿಸಂಜ್ಞಂ ತತ -
ಸ್ತ್ವೇಕೈಕಾಂಗುಲವೃದ್ಧಿತೋಽಂಗುಲ ವಿಶೇಷಾದಪ್ಯಥೋ ಭಿದ್ಯತೇ ॥೧॥

ತಾತ್ಪರ್ಯ :

ಬೀಜಕೋಶವಿರುವ ಎಂಟು ಎಳ್ಳುಗಳ ಗಾತ್ರ ಪ್ರಮಾಣಕ್ಕೆ 'ಯವೋದರ'ವೆಂದು ಹೆಸರು. ಎಂಟು ಯವೋದರಗಳ ಪ್ರಮಾಣವು ಮಾತ್ರಾಂಗುಲವೆನಿಸುತ್ತದೆ. ಹನ್ನೆರಡು ಮಾತ್ರಾಂಗುಲಗಳು ಸೇರಿದಾಗ ವಿತಸ್ತಿಯಾಗುತ್ತದೆ. ಎರಡು ವಿತಸ್ತಿಗಳ ಪ್ರಮಾಣಕ್ಕೆ ಕರ, ಕಿಷ್ಕು, ಅರತ್ನಿ, ಭುಜ, ದೋಸ್, ಮುಷ್ಟಿ ಮುಂತಾದ ಹೆಸರುಗಳು ಬರುತ್ತವೆ. ಕರವು (ಕೋಲು) ಒಂದೊಂದು ಅಂಗುಲ ಸೇರಿ ವೃದ್ಧಿಸುತ್ತ ಹೋಗಿ ಅಂಗುಲವಿಶೇಷವಶಾತ್ ಒಂದಕ್ಕಿಂತ ಒಂದು ಭಿನ್ನವಾಗಿರುತ್ತದೆ.

ವಿ.ವಿ. :

ಒಂದು ಕರ ಎಂದರೆ ಒಂದು ಹಸ್ತ ಅಥವಾ ಒಂದು ಕೋಲು ಅಳತೆಯ ಪ್ರಮಾಣವುಳ್ಳದ್ದು ಎಂದು ಅರ್ಥ. ಇಲ್ಲಿ ಈ (ಗ್ರಂಥದಲ್ಲಿ) ಅಳತೆಯ ಪ್ರಮಾಣವು ತಿಲೋದರದಿಂದ ಪ್ರಾರಂಭವಾಗುತ್ತದೆ. ಬೀಜಕೋಶವಿರುವ ತಿಲೋದರವೇ ಅಳತೆಯ ಮೂಲವಾಗಿದೆ.

ಪ್ರಮಾಣ	ಅಳತೆಯ ಹೆಸರು
ಎಂಟು ತಿಲೋದರ	೧ ಯವೋದರ
ಎಂಟು ಯವೋದರ	೧ ಮಾತ್ರಾಂಗುಲ
ಹನ್ನೆರಡು ಮಾತ್ರಾಂಗುಲ	೧ ವಿತಸ್ತಿ
ಎರಡು ವಿತಸ್ತಿ (ಇಪ್ಪತ್ತನಾಲ್ಕು ಅಂಗುಲ)	೧ ಕರ, ಕಿಷ್ಕು, ಅರತ್ನಿ, ಭುಜ, ದೋಸ್ ಅಥವಾ ಕೋಲು

ಶ್ಲೋಕ : ಮಾತ್ರಾಖ್ಯಾಂಗುಲಪಂಚವಿಂಶತಿಮಿತಂ ಮಾನಂ ವಿಮಾನೇ ಸ್ಮೃತಮ್
ಪ್ರಾಜಾಪತ್ಯಕಸಂಜ್ಞಿತಂ ಸುರಗೃಹೇ ತೇನಾಪಿ ಮೇಯಂ ಕ್ವಚಿತ್
ಏತೈರೇವ ವರಾಂಗುಲೈಃ ಪರಿಮಿತಂ ಷಡ್ವಿಂಶತಿಪ್ರೋನ್ಮಿತೈ -

ರ್ಮಾನಂ ಕ್ವಾಪಿ ಸಮಸ್ತಧಾಮ್ನಿ ವಿಹಿತಂ ನಾಮ್ನಾ ಧನುರ್ಮುಷ್ಟಿಕಮ್ ॥೨॥

ತಾತ್ಪರ್ಯ :

ಇಪ್ಪತ್ತೈದು ಮಾತ್ರಾಂಗುಲದ ಪರಿಮಿತಿಯಿರುವ ಅಳತೆಗೆ ಪ್ರಾಜಾಪತ್ಯವೆಂದು ಹೆಸರು. ಇದನ್ನು ಸಭಾಭವನ, ಅರಮನೆ ಮೊದಲಾದವುಗಳ ನಿರ್ಮಾಣದಲ್ಲಿ ಮತ್ತು ಕೆಲವೊಮ್ಮೆ ದೇವಾಲಯ ನಿರ್ಮಾಣದಲ್ಲಿ ಉಪಯೋಗಿಸಲಾಗುತ್ತದೆ. ಇಪ್ಪತ್ತಾರು ಅಂಗುಲದ ಅಳತೆಯು ಧನುರ್ಮುಷ್ಟಿ ಎನಿಸುತ್ತದೆ. ಇದನ್ನು ಕೆಲವು ಕಡೆ ಎಲ್ಲ ತರಹದ ಕಟ್ಟಡಕ್ಕೂ ಉಪಯೋಗಿಸುತ್ತಾರೆ.

ಶ್ಲೋಕ : ಸಂಪ್ರೋಕ್ತಾಂಗುಲಸಪ್ತವಿಂಶತಿಮಿತಂ ಮಾನಂ ಯದುಕ್ತಂ ಬುಧೈ -
ರ್ನಾಮ್ನಾ ತತ್ತು ಧನುರ್ಗ್ರಹಂ ಯದಮುನಾ ಗ್ರಾಮಾದಿಕಂ ಮೀಯತೇ
ರಥ್ಯಾದ್ಯೋಪವನಾದಿಸಮ್ಮಿತಿವಿಧೌ ವಾಪೀ ತಟಾಕಾದಿಕೇ
ಚೇಷ್ಟಂ ತತ್ರ ಧನುರ್ಗ್ರಹಂ ತ್ವಥ ಧನುರ್ಮುಷ್ಟಿಶ್ಚ ತತ್ರೇಷ್ಯತೇ ॥೩॥

ತಾತ್ಪರ್ಯ :

ಮಾನೋಪಕರಣದ ತಜ್ಞರ ಅಭಿಪ್ರಾಯದಂತೆ ಇಪ್ಪತ್ತೇಳು ಮಾತ್ರಾಂಗುಲದ ಮಾನಕ್ಕೆ ಧನುರ್ಗ್ರಹವೆಂಬ ಹೆಸರು. ಆ ಅಳತೆಯ ಕೋಲಿನಿಂದ ಗ್ರಾಮಾದಿಗಳನ್ನು ಅಳೆಯಬಹುದಾಗಿದೆ. ಅಲ್ಲದೆ, ಅದನ್ನು ರಾಜಮಾರ್ಗ, ಉಪವನ, ಬಾವಿ, ಕೆರೆ ಮೊದಲಾದವುಗಳನ್ನು ಅಳೆಯಲು ಉಪಯೋಗಿಸುತ್ತಾರೆ. ಮೇಲೆ ಹೇಳಿದ ಕಡೆಗಳಲ್ಲಿ ಧನುರ್ಮುಷ್ಟಿಯೂ ಬಳಕೆಗೆ ಬರುತ್ತದೆ.

ಶ್ಲೋಕ : ಅಷ್ಟಾವಿಂಶತಿಸಂಮಿತಾಂಗುಲಮಿತಂ ಪ್ರಾಚ್ಯಾಖ್ಯಮಾನಂ ಭವೇ
ದ್ವೈದೇಹಂ ನವವಿಂಶತಿ ಪ್ರತಿಮಿತೈರ್ಮಾತ್ರಾಂಗುಲೈಃ ಸಂಮಿತಮ್
ಸ್ಯಾತ್ ತ್ರಿಂಶತ್ ಪ್ರವರಾಂಗುಲೀಪರಿಮಿತಂ ವೈಪುಲ್ಯಮೇಕಾಂಗುಲೀ
ಯುಕ್ತಂ ತತ್ತು ಭವೇತ್ ಪ್ರಕೀರ್ಣಮಿತಿ ದೋರ್ಮಾನಪ್ರಭೇದೋಽಷ್ಟಧಾ ॥೪॥

ತಾತ್ಪರ್ಯ :

ಇಪ್ಪತ್ತೆಂಟು ಅಂಗುಲದ ಕೋಲಿಗೆ ಪ್ರಾಚ್ಯ ಎಂದು ಹೆಸರು. ಇಪ್ಪತ್ತೊಂಬತ್ತು ಮಾತ್ರಾಂಗುಲದ ಕೋಲಿನ ಹೆಸರು ವೈದೇಹ ಎಂದು. ಮೂವತ್ತು ಅಂಗುಲದ ಕೋಲಾದರೆ ಅದು ವೈಪುಲ್ಯವೆನಿಸುತ್ತದೆ. ವೈಪುಲ್ಯಕ್ಕೆ ಒಂದು ಅಂಗುಲ ಸೇರಿಸಿದರೆ (ಮೂವತ್ತೊಂದು ಅಂಗುಲ) ಆ ಕೋಲಿಗೆ ಪ್ರಕೀರ್ಣ ಎಂದು ಹೆಸರಾಗುತ್ತದೆ. ಹೀಗೆ ಕೋಲಿನ (ಹಸ್ತದ) ಮಾನಪ್ರಭೇದ ಎಂಟು ವಿಧವಾಗಿರುತ್ತದೆ (ಎಂಟು ವಿಧದ ಕೋಲು ಇರುತ್ತದೆ).

ಶ್ಲೋಕ : ಭೂಸುರಕಾರ್ಯೇ ನಿಲಯೇ ಧನುರ್ಗ್ರಹಂ ಚ ಪ್ರಕೀರ್ಣಂ ಚ
ವೈಪುಲ್ಯ ಧನುರ್ಮುಷ್ಟೀ ಭೂಪಾನಾಂ ಮಾನಸಾಧನೇ ಯೋಜ್ಯೇ ॥೫॥

ತಾತ್ಪರ್ಯ :

ಧನುರ್ಗ್ರಹ ಮತ್ತು ಪ್ರಕೀರ್ಣ ಎಂಬ ಕೋಲುಗಳನ್ನು ಬ್ರಾಹ್ಮಣರ ಗೃಹನಿರ್ಮಾಣದಲ್ಲಿ ಬಳಸಬೇಕು. ವೈಪುಲ್ಯ ಮತ್ತು ಧನುರ್ಮುಷ್ಟಿ - ಇವುಗಳನ್ನು ರಾಜರುಗಳ ಅರಮನೆ

ಮೊದಲಾದವುಗಳಿಗೆ ಮಾನಸಾಧನ (ಅಳತೆಕೋಲು)ವಾಗಿ ಉಪಯೋಗಿಸಬೇಕು.

ಶ್ಲೋಕ : ಪ್ರಾಜಾಪತ್ಯಂ ಚ ವೈದೇಹಂ ವೈಶ್ಯಾನಾಂ ಸಮ್ಮತಂ ಭವೇತ್
ಕಿಷ್ಕು: ಪ್ರಾಚ್ಯಂ ಚ ಶೂದ್ರಾಣಾಂ ಕಿಷ್ಕು: ಸರ್ವತ್ರ ಸಮ್ಮತ: ॥೬॥

ತಾತ್ಪರ್ಯ :

ಪ್ರಾಜಾಪತ್ಯ ಮತ್ತು ವೈದೇಹಗಳು ವೈಶ್ಯರಿಗೆ ಕಟ್ಟುವ ಮನೆಗಳ ನಿರ್ಮಾಣಕ್ಕೆ ಸಮ್ಮತಗಳಾಗಿವೆ. ಕಿಷ್ಕು ಮತ್ತು ಪ್ರಾಚ್ಯಗಳು ಶೂದ್ರರ ಗೃಹನಿರ್ಮಾಣಕ್ಕೆ ಯೋಗ್ಯವಾದವುಗಳಾಗಿವೆ. ಕಿಷ್ಕು ಎಂಬ (ಇಪ್ಪತ್ತನಾಲ್ಕು ಅಂಗುಲದ್ದು) ಅಳತೆ ಕೋಲು ಮಾತ್ರ ಸರ್ವತ್ರ ಸಮ್ಮತವಾದುದಾಗಿದೆ.

ವಿ.ವಿ. :

ಮಾನೋಪಕರಣ

1. ಎಂಟು ತಿಲೋದರ - ಒಂದು ಯವೋದರ
2. ಎಂಟು ಯವೋದರ - ಒಂದು ಮಾತ್ರಾಂಗುಲ
3. ಹನ್ನೆರಡು ಮಾತ್ರಾಂಗುಲ - ಒಂದು ವಿತಸ್ತಿ
4. ಎರಡು ವಿತಸ್ತಿ - ಒಂದು ಕಿಷ್ಕು, ಹಸ್ತ ಅಥವಾ ಕೋಲು

ಎಂಟು ವಿಧದ ಕೋಲುಗಳು ಮತ್ತು ಅವುಗಳ ಉಪಯೋಗ ಸ್ಥಾನಗಳು

ಕ್ರ.ಸಂ.	ಕೋಲಿನ ಹೆಸರು	ಪ್ರಮಾಣ	ಉಪಯೋಗ ಸ್ಥಾನ
1.	ಕಿಷ್ಕು	24 ಅಂಗುಲ	ಶೂದ್ರರ ಮತ್ತು ಎಲ್ಲ ವರ್ಗದವರ ಮನೆ
2.	ಪ್ರಜಾಪತ್ಯ	25 ಅಂಗುಲ	ದೇವಾಲಯ, ಸಭಾಭವನ, ಅರಮನೆ ಮತ್ತು ವೈಶ್ಯರ ಮನೆಗಳು
3.	ಧನುರ್ಮುಷ್ಟಿ	26 ಅಂಗುಲ	ರಾಜಮಾರ್ಗ, ಉದ್ಯಾನ, ಬಾವಿ, ಕೆರೆ, ರಾಜರುಗಳ ಅರಮನೆ ಮತ್ತು ಇತರ ಎಲ್ಲ ತರಹದ ಮನೆಗಳು
4.	ಧನುರ್ಗ್ರಹ	27 ಅಂಗುಲ	ಗ್ರಾಮ, ರಾಜಮಾರ್ಗ, ಉಪವನ, ಬಾವಿ, ಕೆರೆ, ಬ್ರಾಹ್ಮಣರ ಮನೆಗಳು
5.	ಪ್ರಾಚ್ಯ	28 ಅಂಗುಲ	ಶೂದ್ರರ ಮನೆಗಳು
6.	ವೈದೇಹ	29 ಅಂಗುಲ	ವೈಶ್ಯರ ಮನೆಗಳು
7.	ವೈಪುಲ್ಯ	30 ಅಂಗುಲ	ರಾಜರ ಅರಮನೆ, ಕ್ಷತ್ರಿಯರ ಮನೆಗಳು
8.	ಪ್ರಕೀರ್ಣ	31 ಅಂಗುಲ	ಬ್ರಾಹ್ಮಣರ ಮನೆಗಳು

ಶ್ಲೋಕ : ಸ್ವಸ್ವೋಕ್ತಮಾನಾದುಪರಿ ಪ್ರದಿಷ್ಟಂ ಸರ್ವಂ ನ ಚೇಷ್ಟಂ ಕ್ಷಿತಿಪಾದಿಕಾನಾಮ್
ಅಧಃಸ್ಥಮಾನಂ ಸಕಲಂ ಕ್ರಮೇಣ ವೈಶ್ಯಕ್ಷಿತೀಶದ್ವಿಜವರ್ಣಯೋಗ್ಯಮ್ ॥೭॥

ತಾತ್ಪರ್ಯ :

ಆಯಾಯ ವರ್ಗಕ್ಕೆ ಯೋಗ್ಯವೆಂದು ಹೇಳಿದ ಕೋಲುಗಳು ಕ್ಷತ್ರಿಯಾದಿ ವರ್ಗದವರಿಗೆ (ಕ್ಷತ್ರಿಯ, ವೈಶ್ಯ ಮತ್ತು ಶೂದ್ರವರ್ಗ) ಉಚಿತವೆನಿಸುವುದಿಲ್ಲ. ಕೆಳಗಿನ ವರ್ಗದವರಿಗೆ ಯೋಗ್ಯವೆಂದು ಹೇಳಿದ ಕೋಲುಗಳು ವೈಶ್ಯ, ಕ್ಷತ್ರಿಯ, ಬ್ರಾಹ್ಮಣ ವರ್ಗದವರಿಗೆ ಯೋಗ್ಯವೆನಿಸುತ್ತವೆ.

ವಿ.ವಿ. :

ಮೂರನೇ ಅಧ್ಯಾಯದ ಐದು ಮತ್ತು ಆರನೇ ಶ್ಲೋಕಗಳಲ್ಲಿ ಬ್ರಾಹ್ಮಣಾದಿ ವರ್ಗದವರಿಗೆ ಗೃಹನಿರ್ಮಾಣದಲ್ಲಿ ಎಂಟು ವಿಧವಾದ ಕೋಲುಗಳ ಪೈಕಿ ಯೋಗ್ಯವಾದುದನ್ನು ಸೂಚಿಸಲಾಗಿದೆ. ಆ ಪ್ರಕಾರ ಬ್ರಾಹ್ಮಣರಿಗೆ ಧನುಗ್ರಹ ಮತ್ತು ಪ್ರಕೀರ್ಣಗಳೂ, ಕ್ಷತ್ರಿಯರಿಗೆ ವೈಪುಲ್ಯ ಮತ್ತು ಧನುರ್ಮುಷ್ಟಿಗಳೂ, ವೈಶ್ಯರಿಗೆ ಪ್ರಾಜಾಪತ್ಯ ಮತ್ತು ವೈದೇಹಗಳೂ, ಶೂದ್ರರಿಗೆ ಕಿಷ್ಕು ಮತ್ತು ಪ್ರಾಚ್ಯ ಎಂಬವುಗಳೂ ಯೋಗ್ಯವಾದ ಮಾನಸಾಧನಗಳಾಗಿವೆ. ಈಗ ಈ ಏಳನೇ ಶ್ಲೋಕದಲ್ಲಿ ಆ ಮಾನಸಾಧನಗಳ ಉಪಯೋಗದ ಕ್ಷೇತ್ರ ವಿಸ್ತಾರವನ್ನೂ ಪರಿಮಿತಿಯನ್ನೂ ತಿಳಿಸಲಾಗಿದೆ. ಅದರ ಪ್ರಕಾರ ಒಂದು ವರ್ಗಕ್ಕೆ ಯೋಗ್ಯವಾದ ಕೋಲು ಆ ವರ್ಗಕ್ಕಿಂತ ಕೆಳಗಿನ ವರ್ಗದವರಿಗೆ ಯೋಗ್ಯವಾಗುವುದಿಲ್ಲ. ಅಂದರೆ ಬ್ರಾಹ್ಮಣ ವರ್ಗಕ್ಕೆ ನಿಗದಿತವಾದ ಮಾನಸಾಧನ ಧರ್ನುಗ್ರಹ ಮತ್ತು ಪ್ರಕೀರ್ಣವೆಂಬವುಗಳು. ಅವುಗಳು ಆ ವರ್ಗಕ್ಕಿಂತ ಕೆಳಗಿನ ವರ್ಗದವರಾದ ಕ್ಷತ್ರಿಯ, ವೈಶ್ಯ ಮತ್ತು ಶೂದ್ರರಿಗೆ ಯೋಗ್ಯವಾಗುವುದಿಲ್ಲ. ಅದೇ ರೀತಿ ಕ್ಷತ್ರಿಯ ವರ್ಗಕ್ಕೆ ಸೂಚಿಸಿದ ಮಾನಸಾಧನಗಳು ವೈಪುಲ್ಯ ಮತ್ತು ಧನುರ್ಮುಷ್ಟಿ ಎಂಬವುಗಳು. ಅವುಗಳು ವೈಶ್ಯ ಮತ್ತು ಶೂದ್ರರಿಗೆ ಉಚಿತವಲ್ಲ. ಕ್ಷತ್ರಿಯರು ಮತ್ತು ಬ್ರಾಹ್ಮಣರಿಗೆ ಅವುಗಳು ಉಚಿತವೆನಿಸುತ್ತವೆ. ಹಾಗೆಯೇ ವೈಶ್ಯರ ಕೋಲು ಪ್ರಾಜಾಪತ್ಯ ಮತ್ತು ವೈದೇಹಗಳು. ಅವುಗಳು ಬ್ರಾಹ್ಮಣರು ಮತ್ತು ಕ್ಷತ್ರಿಯ ವರ್ಗಕ್ಕೆ ಉಚಿತ. ಶೂದ್ರವರ್ಗಕ್ಕೆ ಉಚಿತವಲ್ಲ. ಅದೇ ರೀತಿ ಶೂದ್ರವರ್ಗಕ್ಕೆ ಮೀಸಲಾದ ಕಿಷ್ಕುವೆಂಬ ಮಾನಸಾಧನವನ್ನು ಆ ವರ್ಗದವರು ಮಾತ್ರವಲ್ಲದೆ ವೈಶ್ಯ, ಕ್ಷತ್ರಿಯ ಮತ್ತು ಬ್ರಾಹ್ಮಣ ವರ್ಗದವರು ಉಪಯೋಗಿಸಬಹುದು.

ಶ್ಲೋಕ : ಸುರಾಲಯೇ ಸಮಸ್ತಾನ್ಯಪ್ಯಭೀಷ್ಟಾನಿ ಯಥೋಚಿತಮ್
ಮಾನಾನಿ ಶ್ರೇಷ್ಠ ಮಧ್ಯಾಧಮಾಂಗುಲೋತ್ಥಾನಿ ಚ ಕ್ವಚಿತ್ ॥೮॥

ತಾತ್ಪರ್ಯ :

ದೇವಾಲಯ ನಿರ್ಮಾಣದಲ್ಲಿ ಅಂಗುಲ ವ್ಯತ್ಯಾಸದ ಎಲ್ಲ ಕೋಲುಗಳೂ ಉಚಿತವೆನಿಸುತ್ತವೆ ಕೆಲವು ಕಡೆ ಅಂಗುಲ ವ್ಯತ್ಯಾಸದಿಂದಾಗುವ ಉತ್ತಮ, ಮಧ್ಯಮ ಮತ್ತು ಅಧಮ (ಸಣ್ಣ) ಕೋಲುಗಳು ಉಪಯೋಗವಾಗುತ್ತವೆ.

ವಿ.ವಿ. :

ಕೋಲಿನ ಅಂಗುಲ ವ್ಯತ್ಯಾಸವಾದರೂ ಇಡೀ ದೇವಸ್ಥಾನದಲ್ಲಿ ಒಂದು ಕೋಲನ್ನು ಹೊರತು ಬೇರೆ ಬೇರೆ ಕೋಲುಗಳನ್ನು ಬಳಸಬಾರದು. ಅದಕ್ಕಾಗಿ ಶಿಲ್ಪಿಗಳು ತಾವು ಉಪಯೋಗಿಸಿದ ಕೋಲನ್ನು ದೇವಾಲಯಗಳಲ್ಲಿ ಕೆತ್ತುವ ಕ್ರಮವಿದೆ. ಭಾಗಮಂಡಲದ ಭಗಂಡೇಶ್ವರ ದೇವಾಲಯವನ್ನು ಇದಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

೨. ಉತ್ತಮ, ಮಧ್ಯಮ ಮತ್ತು ಅಧಮ ಕೋಲುಗಳ ಲಕ್ಷಣ

ಶ್ಲೋಕ : ಯವೋದರೈರಷ್ಟಭಿರುನ್ಮಿತಂ ಯನ್ಮಾತ್ರಾಂಗುಲಂ ತತ್ ಕಥಿತಂ ವರಿಷ್ಠಮ್
ಕ್ರಮೇಣ ಸಪ್ತಾಂಗ ಯವೋದರೈರ್ಯತ್ ತನ್ಮಧ್ಯಮಂ ಚಾಧಮಸಂಜ್ಞಿತಂ ಚ ॥೯॥

ತಾತ್ಪರ್ಯ :

ಎಂಟು ಯವೋದರಗಳ ಅಗಲವನ್ನು ಸೇರಿಸಿ ಮಾಡಿದ ಮಾತ್ರಾಂಗುಲವು ಶ್ರೇಷ್ಠ. ಏಳು ಯವೋದರಗಳ ಅಂಗುಲವು ಮಧ್ಯಮ. ಮತ್ತು ಆರು ಯವೋದರಗಳ ಅಂಗುಲವು ಅಧಮವೆಂದು ತಿಳಿಯಲ್ಪಟ್ಟಿದೆ.

ಶ್ಲೋಕ : ಷಾಷ್ಟಿಕಶಾಲ್ಯುದರೈರಷ್ಟಷ್ಟಾದ್ಯಂಗೈರ್ವರಾಂಗುಲಂ ತ್ರಿವಿಧಮ್
ತಚ್ಛಾಲ್ಯಾಯತಜಲನಿಧಿ ಸಾರ್ಧತ್ರಿತಯ ತ್ರಿಸಂಮಿತೈರ್ವಾಪಿ ॥೧೦॥

ತಾತ್ಪರ್ಯ :

ಎಂಟು, ಏಳು ಮತ್ತು ಆರು ಶಾಲ್ಯುದರಗಳ (ಬತ್ತದ ಮಧ್ಯದ ದಪ್ಪ) ಅಂಗುಲಗಳು ಕ್ರಮವಾಗಿ ಉತ್ತಮ, ಮಧ್ಯಮ ಮತ್ತು ಅಧಮಗಳೆನಿಸುತ್ತವೆ. ಅಲ್ಲದೆ ನಾಲ್ಕು, ಮೂರೂವರೆ ಮತ್ತು ಮೂರು ಬತ್ತಗಳ ಉದ್ದದ ಅಂಗುಲಗಳೂ ಕ್ರಮವಾಗಿ ಉತ್ತಮ, ಮಧ್ಯಮ ಮತ್ತು ಅಧಮಗಳೆನಿಸುತ್ತವೆ.

ಶ್ಲೋಕ : ನವಧೇತ್ಯುದಿತಾಂಗುಲಿಪ್ರಭೇದಾಃ ನವಧಾ ತತ್ರ ಕರಾಃ ಸ್ಯುರುತ್ತಮಾದ್ಯಾಃ
ಅಥ ತೇಽಂಗುಲ ವೃದ್ಧಿತೋಽಷ್ಟಧೋಕ್ತೈಃ ಕರಭೇದೈಃ ಸಹಿತಾ ದ್ವಿಸಪ್ತತಿ ಸ್ಯುಃ ॥೧೧॥

ತಾತ್ಪರ್ಯ :

ಈ ರೀತಿ ಒಂಭತ್ತು ವಿಧದ ಅಂಗುಲಭೇದದಿಂದ ಉತ್ತಮ, ಮಧ್ಯಮ ಮತ್ತು ಅಧಮವೆಂದು ಉಂಟಾಗುವ ಕೋಲುಗಳು ಒಂಬತ್ತು. 24, 25, 26 ಎಂದು ಮೊದಲಾದ ಒಂದೊಂದೇ ಅಂಗುಲಗಳ ವೃದ್ಧಿಯಿಂದುಂಟಾಗುವ ಕೋಲುಗಳು ಎಂಟು ವಿಧ. ಅದರಿಂದಾಗಿ ಒಟ್ಟು ಕೋಲುಗಳು ಎಪ್ಪತ್ತೆರಡು ವಿಧ.

ವಿ.ವಿ. :

	ಉತ್ತಮ	ಮಧ್ಯಮ	ಅಧಮ			
1. ಯವೋದರದ ಮಾತ್ರಾಂಗುಲ	8	7	6	=	3	ವಿಧ
2. ಶಾಲ್ಯುದರದ ಮಾತ್ರಾಂಗುಲ	8	7	6	=	3	ವಿಧ
3. ಶಾಲಿಯ ಉದ್ದದ ಮಾತ್ರಾಂಗುಲ	4	3½	3	=	3	ವಿಧ
		ಒಟ್ಟು ವಿಧ			9	

ಇಪ್ಪತ್ತನಾಲ್ಕು ಮಾತ್ರಾಂಗುಲಗಳಿಂದಾಗುವ ಕಿಷ್ಕುವಿನಿಂದ ತೊಡಗಿ ಒಂದೊಂದೇ ಅಂಗುಲ ವೃದ್ಧಿಸಿ ಮೂವತ್ತೊಂದು ಅಂಗುಲದ ಪ್ರಕೀರ್ಣದವರೆಗೆ ಇರುವ ಕೋಲುಗಳು 8 ವಿಧ. ಆ ಎಂಟು ವಿಧಗಳ ಪ್ರತಿಯೊಂದರಲ್ಲಿಯೂ ಉತ್ತಮ, ಮಧ್ಯಮ ಮತ್ತು ಅದಮ ಎಂಬ ಮೂರು ಮೂರು ಪ್ರಕಾರಗಳು ಇರುವುದರಿದ ಒಟ್ಟು 8x9=72 ವಿಧದ ಕೋಲುಗಳಾಗುತ್ತವೆ.

೩. ಕೋಲುಗಳ ಉಪಯೋಗ

ಶ್ಲೋಕ : ಆದೌ ಚತುರ್ವಿಂಶತಿ ಸಂಮಿತೈರ್ಯೋ
ಮಾತ್ರಾಂಗುಲೈರೇವ ಕರಃ ಪ್ರದಿಷ್ಟಃ
ಸರ್ವತ್ರ ಪೂಜ್ಯೋ ಮತಭೇದತೋಽನ್ಯೇ
ಸರ್ವೇಽಪಿ ಚ ಕ್ವಾಪಿ ಯಥಾರ್ಹಮಿಷ್ಟಾಃ ||೧೨||

ತಾತ್ಪರ್ಯ :

(ಕೋಲುಗಳ ಪೈಕಿ) ಮೊದಲು ಹೇಳಿದ ಇಪ್ಪತ್ತನಾಲ್ಕು ಮಾತ್ರಾಂಗುಲಗಳುಳ್ಳ (ಕಿಷ್ಕು) ಕೋಲೇ (24 ಉತ್ತಮಾಂಗದ ಮಾನದಂಡ) ಎಲ್ಲ ಕಡೆಗಳಲ್ಲಿ ಸ್ವೀಕಾರಾರ್ಹವಾಗಿದೆ. ಉಳಿದ ಕೋಲುಗಳೆಲ್ಲ ಮತಭೇದದಿಂದ ಕೂಡಿವೆ. ಮಾತ್ರವಲ್ಲ, ಅವುಗಳು ಕೆಲವು ಕಡೆಗಳಲ್ಲಿ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಲ್ಪಡುತ್ತವೆ.

ಶ್ಲೋಕ : ಹಸ್ತೈರೇವ ಗೃಹಾದ್ಯಮುಕ್ತಮುದಿತಂ ಕುತ್ರಾಪಿ ಮಾತ್ರಾಂಗುಲೈ -
ರತ್ಯಾವಶ್ಯಕತೋ ಯವೈರಪಿ ಪರೀಣಾಹಂ ಚ ಗತ್ಯಾದಿ ಚ
ಮಾನುಷ್ಯೇಷು ತು ಬಾಹ್ಯಗೇಹಗತಿನಿಷ್ಕ್ರಾದೌ ಚತುರ್ಹಸ್ತಕೋ
ದಂಡೋ ಯಷ್ಟಿರಿತಿ ಸ್ಮೃತೋಽಷ್ಟಗುಣತೋ ದಂಡೋಽತ್ರ ರಜ್ಜುರ್ಭವೇತ್ ||೧೩||

ತಾತ್ಪರ್ಯ :

ಮನೆ ಮೊದಲಾದವುಗಳನ್ನು ಕೋಲಿನಿಂದಲೇ ಅಳೆಯಬೇಕು. ಕೆಲವು ಕಡೆ ಮಾತ್ರಾಂಗುಲಗಳಿಂದ ಅಳತೆ ಮಾಡಬೇಕು. ಅತ್ಯಂತ ಆವಶ್ಯಕತೆ ಇದ್ದಲ್ಲಿ ಸುತ್ತಳತೆ ಮತ್ತು ಗತಿಯನ್ನು ಅಳೆಯಲು ಯವವನ್ನು ಉಪಯೋಗಿಸಬೇಕು. ಮನುಷ್ಯಾಲಯಗಳ ಹೊರಗಿರುವ ಉಪಕಟ್ಟಡಗಳು ಮತ್ತು ಅವುಗಳ ಗತಿಗಳ ದೂರವನ್ನು ನಿಶ್ಚಯಿಸಲು ನಾಲ್ಕು ಕೋಲುಗಳ ಅಳತೆಯನ್ನು ಉಪಯೋಗಿಸಬೇಕು. ಆ ನಾಲ್ಕು ಕೋಲುಗಳ ಅಳತೆಯ ಪ್ರಮಾಣಕ್ಕೆ 'ದಂಡ'ಎಂದು ಹೆಸರು. ಆ ದಂಡಕ್ಕೆ 'ಯಷ್ಟಿ' ಎಂಬ

ಇನ್ನೊಂದು ಹೆಸರಿದೆ. ಎಂಟು ದಂಡ ಅಥವಾ ಯಷ್ಟಿಗಳ ಪ್ರಮಾಣವು 'ರಜ್ಜು' ಎನಿಸುತ್ತದೆ.

ವಿ.ವಿ. :

(1) ಕೋಲಿನ ಉಪಯೋಗ - ಮನೆ ಮೊದಲಾದವುಗಳಲ್ಲಿ

(2) ಯವೋದರದ ಉಪಯೋಗ - ಸುತ್ತಳತೆ - ಗತಿ ಮೊದಲಾದವುಗಳಲ್ಲಿ (ಅಗತ್ಯ ಬಿದ್ದರೆ ಮಾತ್ರ)

(3) ದಂಡ, ಯಷ್ಟಿಯ ಉಪಯೋಗ (ನಾಲ್ಕು ಕೋಲುಗಳ ಅಳತೆ) - ಮನೆಗಳ ಉಪಕಟ್ಟಡ - ಅವುಗಳ ಗತಿಗಳ ದೂರದಲ್ಲಿ

(4) ಎಂಟು ದಂಡ - ರಜ್ಜು

೪. ಪ್ರತಿಮಾದಿಗಳ ಅಳತೆ

ಶ್ಲೋಕ : ತಾಲಾದ್ಯೈಃ ಪ್ರತಿಮಾದಿಕಂ ಖಲು ಯವೈರ್ಮೇಯಂ ಚ ಭೂಷಾದಿಕಮ್
ಕ್ಷೌಮ ಪ್ರಾವರಣಾಂಶುಕಾದಿ ಪರಿಮೇಯಂ ಸ್ಯಾದ್ವಿತಸ್ತ್ಯಾ ತಥಾ
ಶಸ್ತ್ರಾದ್ಯಂ ತದನಾಮಿಕಾಂಗುಲಿಯುಗೇನೈವಂ ಚ ತದ್ವ್ಯಾಸತೋ
ಮುಷ್ಟ್ಯಾಯಾಜ್ಞಿಕಭಾಜನಾದಿ ಯಜಮಾನಸ್ಯಾನ್ಯದಂಘ್ರ್ಯಾದಿನಾ ||೧೪||

ತಾತ್ಪರ್ಯ :

ಪ್ರತಿಮೆ (ವಿಗ್ರಹ) ಮೊದಲಾದವುಗಳನ್ನು ತಾಲ (ಅಂಗೈಯ ಅಗಲ) ಮೊದಲಾದವುಗಳಿಂದಲೂ ಆಭರಣಾದಿಗಳನ್ನು ಯವಗಳಿಂದಲೂ, ಪಟ್ಟೆವಸ್ತ್ರ, ಶಾಲು ಮೊದಲಾದವುಗಳನ್ನು ವಿತಸ್ತಿಯಿಂದಲೂ ಅಳೆಯಬೇಕು. ಶಸ್ತ್ರಾದಿಗಳನ್ನು, ಅವುಗಳನ್ನು ಉಪಯೋಗಿಸುವವನ ಉಂಗುರ ಬೆರಳಿನ ಅಗಲದ ಇಮ್ಮಡಿಯ ಪ್ರಮಾಣದಿಂದಾಗಲೀ, ಅದರ ವ್ಯಾಸದ ಪ್ರಮಾಣದಿಂದಾಗಲೀ ಅಳೆಯಬೇಕು. ಯಜ್ಞಕ್ಕೆ ಸಂಬಂಧಿಸಿದ ಪಾತ್ರೆ ಮೊದಲಾದವುಗಳಿಗೆ ಯಜಮಾನನ ಮುಷ್ಟಿಯ ಅಳತೆಯನ್ನೂ ಬೇರೆಯವುಗಳಿಗೆ ಯಜಮಾನನ ಪಾದದ ಅಳತೆಯನ್ನೂ ಸ್ವೀಕರಿಸಬೇಕು.

ವಿ.ವಿ. :

ಮಾನ ಪ್ರಮಾಣ	ಉಪಯೋಗ
1. ತಾಲಮಾನ	ಪ್ರತಿಮೆ ಇತ್ಯಾದಿ
2. ಯವ	ಆಭರಣಾದಿಗಳು
3. ವಿತಸ್ತಿ (೧೨ ಮಾತ್ರಾಂಗುಲ)	ಪಟ್ಟೆವಸ್ತ್ರ, ಶಾಲು ಮೊದಲಾದ ದೇವವಿಗ್ರಹಕ್ಕೆ ಹೊದಿಸುವ ಉಡುಪುಗಳು
4. ಉಪಯೋಗಿಸುವವನ ಉಂಗುರ ಬೆರಳಿನ ಇಮ್ಮಡಿಯ ದಪ್ಪ ಅಥವಾ ಅದರ ವ್ಯಾಸ	ಶಸ್ತ್ರಾಸ್ತ್ರಗಳು
5. ಯಜಮಾನನ ಮುಷ್ಟಿಯ ಗಾತ್ರ	ಯಜ್ಞದಲ್ಲಿ ಉಪಯೋಗಿಸುವ ಪಾತ್ರೆಗಳು
6. ಯಜಮಾನನ ಪಾದದ ಅಳತೆ	ಇತರ

ಶ್ಲೋಕ : ದ್ವಿಜಭವನಾದಿ ಬಹುತ್ವಾದ್ ಗ್ರಾಮಾದ್ಯಾಃ ಸಂಭವಂತಿ ಬಹುಭೇದಾಃ
ಉತ್ತಮ ಮಧ್ಯಮಾಧಮತೋ ಮಾನವಿಶೇಷೈಶ್ಚ ಸಂಭವೇದೇಷಾಮ್ ||೧೫||

ತಾತ್ಪರ್ಯ :

ಬ್ರಾಹ್ಮಣಾದಿ ವರ್ಣಗಳ ಮನೆಗಳ ಸಂಖ್ಯೆಯ ಬಾಹುಳ್ಯದಿಂದಾಗಿ ಗ್ರಾಮಾದಿಗಳಲ್ಲಿಯೂ ಅನೇಕ ವಿಧಗಳಾಗುತ್ತವೆ. ಬೇರೆ ಬೇರೆ ವಿಧದ ಗ್ರಾಮಗಳಲ್ಲಿ ಉಪಯೋಗಿಸುವ ಮಾನವಿಶೇಷತೆಯಿಂದ ಉತ್ತಮ, ಮಧ್ಯಮ ಮತ್ತು ಅಧಮ ಎಂಬ ಭೇದಗಳು ಉಂಟಾಗುತ್ತವೆ.

ಶ್ಲೋಕ : ಯೋಜನಮಿತಚತುರಶ್ರಂ ಭೂಭಾಗಂ ಗ್ರಾಮಮುತ್ತಮಂ ಪ್ರಾಹುಃ
ಮಧ್ಯಮಮರ್ಧಪ್ರಮಿತಂ ಪಾದಮಿತಂ ಪ್ರಾಯಶೋಽಧಮಂ ಗ್ರಾಮಮ್ ||೧೬||

ತಾತ್ಪರ್ಯ :

ಒಂದು ಯೋಜನ ಚತುರಶ್ರದ ಭೂಭಾಗವುಳ್ಳ ಗ್ರಾಮವನ್ನು ಉತ್ತಮವೆಂದೂ ಅರ್ಧಯೋಜನ ವಿಸ್ತಾರವಿರುವುದನ್ನು ಮಧ್ಯಮವೆಂದೂ, ಕಾಲು ಯೋಜನ ವಿಸ್ತಾರವುಳ್ಳುದನ್ನು ಅಧಮಗ್ರಾಮವೆಂದೂ ಕರೆಯುತ್ತಾರೆ.

ಶ್ಲೋಕ : ನಗರಸ್ಯ ಸಹಸ್ರಾದಿ ದ್ವಿಸಹಸ್ರಾಂತಂ ಚ ದಂಡಮಾನಂ ಸ್ಯಾತ್
ಪತ್ತನಸಂಜ್ಞಂ ತದ್ವತ್ ಪೋತಾನ್ವಿತವಾರಿಧಿತಟೋಪೇತಮ್ ||೧೭||

ತಾತ್ಪರ್ಯ :

ಒಂದು ಸಾವಿರದಿಂದ ಎರಡು ಸಾವಿರ ದಂಡಗಳ ವಿಸ್ತಾರವುಳ್ಳ ಭೂಪ್ರದೇಶಕ್ಕೆ ನಗರವೆಂದೂ, ಹಡಗುಗಳು ಬಂದು ತಂಗುವ ಸಮುದ್ರತೀರದ ಇಂತಹ ಪ್ರದೇಶಕ್ಕೆ 'ಪತ್ತನ'ವೆಂದೂ ಹೆಸರು.

ಶ್ಲೋಕ : ಪುರಮಿತಿ ನರವರಭವನಪ್ರಧಾನಮಾಹುರ್ವಣಿಗ್ಗೃಹಾದಿಯುತಮ್
ನಗರಂ ರಾಜವರಾಲಯಸಕಲಜನಾಗಾರಮಂಡಿತಂ ವಿದಿತಮ್ ||೧೮||

ತಾತ್ಪರ್ಯ :

ಅರಮನೆ ಹಾಗೂ ವ್ಯಾಪಾರಿಗಳೇ ಮೊದಲಾದವರಿಂದ ಕೂಡಿದ ಪ್ರದೇಶವನ್ನು 'ಪುರ' ಎನ್ನುತ್ತಾರೆ. ರಾಜರ ಅರಮನೆಗಳು ಮತ್ತು ಬೇರೆ ಎಲ್ಲ ಜನರ ಮನೆಗಳು ಇರುವ ಪ್ರದೇಶವು 'ನಗರ'ವೆಂದು ಪ್ರಸಿದ್ಧವಾಗುತ್ತದೆ.

ಶ್ಲೋಕ : ಏಕಮೇವ ದ್ವಿಜಾಗಾರಂ ತತ್ಕುಟುಂಬಸಮನ್ವಿತಮ್
ಏಕಭೋಗಂ ಭವೇತ್ ಗ್ರಾಮಂ ತದ್ಭೃತ್ಯಾಯತನಾವೃತಮ್ ||೧೯||

ತಾತ್ಪರ್ಯ :

ತನ್ನ ಕುಟುಂಬದಿಂದ ಕೂಡಿ, ತನ್ನ ಸೇವಕರ ಮನೆಗಳಿಂದ ಆವೃತವಾಗಿರುವ ಉತ್ತಮ ಬ್ರಾಹ್ಮಣನೊಬ್ಬನ ಮನೆಯಿರುವ ಗ್ರಾಮವು 'ಏಕಭೋಗ'ವೆನಿಸುತ್ತದೆ.

ಶ್ಲೋಕ : ಉತ್ತರಯುಗಬಾಹ್ಯಾಂತೋ ಮಂದಿರವಿಸ್ತಾರ ಏವ ದೇವಗೃಹೇ
ಶ್ರೇಷ್ಠೋ ದಂಡಸ್ತದ್ವಜ್ಜಗತಿಪ್ರಾಂತಾವಸಾನಿಕೋ ಮಧ್ಯ: ॥೨೦॥

ತಾತ್ಪರ್ಯ :

ದೇವಾಲಯಗಳಲ್ಲಿ ಎರಡು ಉತ್ತರಗಳ ಹೊರಗಿನಿಂದ ಹೊರಗಿನ ವರೆಗೆ ಇರುವ ಗರ್ಭಗೃಹದ ಅಗಲದ ಅಳತೆಯು ಉತ್ತಮದಂಡವಾಗಿದೆ. ಜಗತಿಯ ಹೊರಗಿನಿಂದ ಹೊರಗಿನ ವರೆಗೆ ಇರುವ ಅಗಲದ ಪ್ರಮಾಣವು ಮಧ್ಯಮ ದಂಡವಾಗಿದೆ.

ಶ್ಲೋಕ : ಪಾದುಕಯುಗಲಾವಧಿಕೋ ದಂಡ: ಪ್ರೋಕ್ತೋಽಧಮ: ಸುರಾಗಾರೇ
ಪ್ರಾಸಾದತ್ ಬಹಿರೇತೈರ್ಮರ್ಯಾದಾ: ಪಂಚ ತತ್ರ ಕಲ್ಪ್ಯಾ: ಸ್ಯು: ॥೨೧॥


ತಾತ್ಪರ್ಯ :

ಎರಡು ಪಾದುಕೆಗಳ ಹೊರಗಿನಿಂದ ಹೊರಗಿನ ವರೆಗಿನ ಅಗಲದ ಪ್ರಮಾಣವು ಅಧಮ ದಂಡವೆನಿಸುತ್ತದೆ. ದೇವಾಲಯಗಳಲ್ಲಿ ಪ್ರಾಸಾದದಿಂದ (ಗರ್ಭಗೃಹ) ಹೊರಗೆ ಐದು ಸುತ್ತುಗಳನ್ನು ಈ ದಂಡಮಾನದಿಂದ ನಿಶ್ಚಯಿಸಬೇಕು.

ವಿ.ವಿ. :

ಗರ್ಭಗೃಹದ ಹೊರಗಿನ ಪ್ರಾಕಾರಗಳಲ್ಲಿ ಐದು ವಿಧವೆಂದು ಈ ಶ್ಲೋಕದಲ್ಲಿ ಹೇಳಿದೆ. ಆ ಪಂಚಪ್ರಾಕಾರಗಳು ಇಂತಿವೆ. (೧) ಅಂತರ್ಮಂಡಲ (೨) ಅಂತಹಾರ (೩) ಮಧ್ಯಹಾರ (೪) ಬಾಹ್ಯಹಾರ ಮತ್ತು (೫) ಮರ್ಯಾದಾ. ಈ ಪ್ರಾಕಾರಗಳು ಗರ್ಭಗೃಹದಿಂದ ಹೊರಗೆ ಕ್ರಮವಾಗಿ ಇರುವವುಗಳು.

ಪಂಚ ಪ್ರಾಕಾರಗಳು



1. ಅಂತರ್ಮಂಡಲ
2. ಅಂತಹಾರ
3. ಮಧ್ಯಹಾರ
4. ಬಾಹ್ಯಹಾರ
5. ಮರ್ಯಾದಾ

ಚಿತ್ರ. ೪೩, ಅ.೩, ಶ್ಲೋ.೨೧.

೫. ಯಾನ ಸಾಧನಾದಿಗಳ ಯೋನಿಗಳು

ಶ್ಲೋಕ : ಯಾನಾಂಗಾದಿಷು ಕೇತುರೇವ ವಿಹಿತಃ ಸರ್ವತ್ರ ಶಸ್ತೋ ಹ್ಯಯಮ್
ಪರ್ಯಂಕಾದಿಷು ಕುಂಜರೋ ಮೃಗಪತಿಃ ಪೀಠಾಸನಾದೌ ಹಿತಃ
ಭಾಂಡೇ ಕೂಪತಟಾಕಪಂಜರವಿಧೌ ಯೋನಿರ್ವೃಷೋ ವಾ ಧ್ವಜೋಽ -
ಥಾಶ್ವತ್ಥಾದಿ ಸಮಸ್ತಕುಟ್ಟಿಮವಿಧೌ ಕೇತುರ್ವಿಧೇಯಃ ಸದಾ ॥೨೨॥

ತಾತ್ಪರ್ಯ :

ಪ್ರಯಾಣ ಸಾಧನಗಳಾದ ಪಲ್ಲಕಿ, ರಥ, ದೋಣಿ, ಗಾಡಿ ಮೊದಲಾದವುಗಳಿಗೆ ಧ್ವಜಯೋನಿಯು ವಿಹಿತವಾಗಿದೆ. ಇದು ಸರ್ವತ್ರ ಪ್ರಶಸ್ತವಾದುದು. ಮಂಚ, ತೊಟ್ಟಿಲು ಮೊದಲಾದವುಗಳಿಗೆ ಗಜಾಯವೂ, ಕುಳಿತುಕೊಳ್ಳುವ ಪೀಠ, ಮಣೆ ಮೊದಲಾದವುಗಳಿಗೆ ಸಿಂಹಯೋನಿಯೂ ಹಿತಕರ. ಪೆಟ್ಟಿಗೆ ಮೊದಲಾದವುಗಳಿಗೆ ಹಾಗೂ ಬಾವಿ, ಕೆರೆ, ಪಂಜರ ಮೊದಲಾದವುಗಳಿಗೆ ವೃಷಭಯೋನಿ ಅಥವಾ ಧ್ವಜಯೋನಿಯು ಯೋಗ್ಯವಾಗಿದೆ. ಅಶ್ವತ್ಥದ ಕಟ್ಟೆ ಮುಂತಾದ ಎಲ್ಲ ವಿಧವಾದ ಕಟ್ಟೆಗಳ ನಿರ್ಮಾಣದಲ್ಲಿ ಧ್ವಜಯೋನಿಯು ವಿಹಿತವಾಗಿದೆ.

ವಿ.ವಿ. :

ಮೇಲೆ ನಿರ್ದಿಷ್ಟ ಪಡಿಸಿದುದನ್ನು ಈ ರೀತಿ ಕ್ರೋಡೀಕರಿಸಬಹುದು.

	ಸಾಧನಗಳು	ನಿಗದಿತ ಯೋನಿಗಳು
1.	ಯಾನ ಸಾಧನಗಳಾದ ಪಲ್ಲಕಿ, ರಥ, ದೋಣಿ	ಧ್ವಜ ಯೋನಿ
2.	ಮಂಚ, ತೊಟ್ಟಿಲು ಇತ್ಯಾದಿ ಶಯನ ಸಾಧನಗಳಿಗೆ	ಗಜಯೋನಿ
3.	ಪೀಠ, ಮಣೆ, ಕುರ್ಚಿ, ಬೆಂಚು ಮೊದಲಾದ ಪೀಠ ಸಾಧನಗಳಿಗೆ	ಸಿಂಹಯೋನಿ
4.	ಪಾತ್ರೆ, ಪೆಟ್ಟಿಗೆ, ಪಂಜರ, ಕೆರೆ, ಬಾವಿ ಮೊದಲಾದವುಗಳಿಗೆ	ವೃಷಭ/ಧ್ವಜಯೋನಿ
5.	ಅಶ್ವತ್ಥದ ಕಟ್ಟೆ, ನಾಗನ ಕಟ್ಟೆ, ತುಳಸಿಕಟ್ಟೆ ಮೊದಲಾದ ಎಲ್ಲ ವಿಧದ ಕಟ್ಟೆಗಳ ನಿರ್ಮಾಣಕ್ಕೆ	ಧ್ವಜಯೋನಿ

ಶ್ಲೋಕ : ಅಂತರ್ಯೋನಿರ್ಮಾನ ಪಾತ್ರಾದಿ ವಾಪೀ
ಕೂಪಾದೀನಾಮಂಕಣೇ ಗರ್ಭಗೇಹೇ
ತುರ್ಯಶ್ಚಾಗಾರೋತ್ತರ ವ್ಯಾಸ ಮಧ್ಯೇ
ಕುತ್ರಾಪ್ಯುಕ್ತೋಽನ್ಯತ್ರ ಸರ್ವತ್ರ ಬಾಹ್ಯೇ ॥೨೩॥

ತಾತ್ಪರ್ಯ :

ಅಳತೆ ಮಾಡುವ ಪಾತ್ರೆ ಮೊದಲಾದವುಗಳಿಗೆ, ಕೆರೆ, ಬಾವಿ ಮುಂತಾದವುಗಳಿಗೆ ಅಂಗಳ, ಗರ್ಭಗೃಹಗಳಿಗೆ ಯೋನಿಯ (ಆಯ) ಲೆಕ್ಕಾಚಾರವನ್ನು ಅವುಗಳ ಒಳಗಿನಿಂದ (ಅಂತರ್ಯೋನಿ)

ಮಾಡಬೇಕು. ಚತುರಶ್ರಾಕಾರದ ಚತುಶ್ಶಾಲೆಗಳಿಗೆ ಕೆಲವು ಕಡೆ ಉತ್ತರದ ವ್ಯಾಸಮಧ್ಯವನ್ನು ಯೋನಿ ಗಣನೆಗೆ ತೆಗೆದುಕೊಳ್ಳಬೇಕು. ಬೇರೆ ಎಲ್ಲ ಕಡೆಗಳಲ್ಲಿ ಅವುಗಳ ಹೊರಗಿನ ಸುತ್ತಳತೆಯನ್ನು ಯೋನಿಯ ಲೆಕ್ಕಾಚಾರಕ್ಕೆ ಸ್ವೀಕರಿಸಬೇಕು.

ವಿ.ವಿ. :

ವಾಸ್ತುವಿಗೆ ಸಂಬಂಧಿಸಿದ ಪ್ರತಿಯೊಂದು ವಸ್ತುವಿಗೆ ನಿರ್ದಿಷ್ಟವಾದ ಆಯ (ಯೋನಿ)ವು ಬೇಕಾಗುತ್ತದೆ. ಯೋನಿಯನ್ನು ನಿಶ್ಚಯಿಸಲು ಸುತ್ತಳತೆಯ ಲೆಕ್ಕ ಬೇಕಾಗಿದೆ. ಈ ಶ್ಲೋಕದಲ್ಲಿ ಮೂರು ವಿಧದ ಸುತ್ತಳತೆಯನ್ನು ತಿಳಿಸಿರುತ್ತಾರೆ. ಒಂದನೆಯದು ವಸ್ತುವಿನ ಒಳಗಿನ ಸುತ್ತಳತೆ. ಎರಡನೆಯದು ಉತ್ತರದ ವ್ಯಾಸಮಧ್ಯದ ಸುತ್ತಳತೆ ಮತ್ತು ಮೂರನೆಯದು ಉತ್ತರದ ಹೊರಗಿನ ಸುತ್ತಳತೆ. ಇದಲ್ಲದೆ ಆ ಮೂರು ವಿಧದ ಸುತ್ತಳತೆಯನ್ನು ಯೋನಿ ನಿರ್ಣಯಕ್ಕೆ ಸ್ವೀಕರಿಸಬೇಕಾದ ವಸ್ತುಗಳನ್ನೂ ಇಲ್ಲಿ ನಿರ್ದೇಶಿಸಲಾಗಿದೆ. ಅದರ ವಿವರ ಈ ಕೆಳಗಿನಂತಿದೆ.

೧. ಒಳಗಿನ ಸುತ್ತಳತೆ :	ಆಳತೆಯ ಪಾತ್ರ, ಕೆರೆ, ಬಾವಿ, ಅಂಗಳ, ಗರ್ಭಗೃಹ ಇತ್ಯಾದಿ
೨. ಉತ್ತರದ ವ್ಯಾಸಮಧ್ಯದ ಸುತ್ತಳತೆ :	ಚತುರಶ್ರಾಕಾರದ ಚತುಶ್ಶಾಲೆಗಳು
೩. ಉತ್ತರದ ಹೊರಗಿನ ಸುತ್ತಳತೆ :	ಮನೆ ಮೊದಲಾದ ಇತರ ಎಲ್ಲ ಕಡೆಗಳು

೬. ಯೋನ್ಯಾದಿಗಳನ್ನು ಕಂಡು ಹಿಡಿಯುವ ವಿಧಾನ

ಶ್ಲೋಕ : ಇಷ್ಟಾತಾನ ವಿತಾನಮಾನನಿಚಯೇ ತ್ರಿಘ್ನೇಽಷ್ಟಭಿರ್ಭಾಜಿತೇ
ಶೇಷೋ ಯೋನಿರಿಹ ವ್ಯಯೋ ಮುನಿಯುಜಾಥಾಯೋಽಷ್ಟನಿಘ್ನೇಽರುಷ್ಕೈ:
ಋಕ್ಷೈರೃಕ್ಷಮವಾಪ್ತಿರತ್ರ ತು ವಯೋ ಜ್ಞೇಯಂ ತಿಥಿಸ್ತ್ರಿಂಶತಾ
ವಾರೋ ಭೂಮಿಧರೈರ್ನಿಧಿಪ್ರಗುಣಿತೇ ಧರ್ಮಾಹೃತೇ ವಾ ವ್ಯಯ: ॥೨೪॥

ತಾತ್ಪರ್ಯ :

ನಾವು ಬಯಸಿದ ಸುತ್ತಳತೆಯನ್ನು (ಉದ್ದ+ಅಗಲx2) ಮೂರರಿಂದ ಗುಣಿಸಿ ಎಂಟರಿಂದ ಭಾಗಿಸಿದಾಗ ಉಳಿಯುವ ಶೇಷ ಸಂಖ್ಯೆಯೇ ಯೋನಿಸಂಖ್ಯೆ. ಸುತ್ತಳತೆಯನ್ನು ಮೂರರಿಂದ ಗುಣಿಸಿ ಹದಿನಾಲ್ಕರಿಂದ ಭಾಗಿಸಿದಾಗ ಉಳಿಯುವ ಶೇಷವೇ ವ್ಯಯ (ಖರ್ಚು). ಸುತ್ತಳತೆಯನ್ನು ಎಂಟರಿಂದ ಗುಣಿಸಿ ಹನ್ನೆರಡರಿಂದ ಭಾಗಿಸಿದಾಗ ಉಳಿಯುವ ಶೇಷವೇ ಆದಾಯ. ಸುತ್ತಳತೆಯನ್ನು ಎಂಟರಿಂದ ಗುಣಿಸಿ ಇಪ್ಪತ್ತೇಳರಿಂದ ಭಾಗಿಸಿದಾಗ ಉಳಿಯುವುದೇ ನಕ್ಷತ್ರ ಸಂಖ್ಯೆ. ಸುತ್ತಳತೆಯನ್ನು ಎಂಟರಿಂದ ಗುಣಿಸಿ ಇಪ್ಪತ್ತೇಳರಿಂದ ಭಾಗಿಸಿದಾಗ ಸಿಗುವ ಭಾಗಲಬ್ಧವೇ ವಯಸ್ಸು. ಸುತ್ತಳತೆಯನ್ನು ಎಂಟರಿಂದ ಗುಣಿಸಿ ಮೂವತ್ತರಿಂದ ಭಾಗಿಸಿದಾಗ ಉಳಿದ ಶೇಷವೇ ತಿಥಿ. ಸುತ್ತಳತೆಯನ್ನು ಎಂಟರಿಂದ ಗುಣಿಸಿ ಏಳರಿಂದ ಭಾಗಿಸಿದಾಗ ಉಳಿಯುವ ಶೇಷವೇ ವಾರಸಂಖ್ಯೆ. ಸುತ್ತಳತೆಯನ್ನು ಒಂಬತ್ತರಿಂದ ಗುಣಿಸಿ ಹತ್ತರಿಂದ ಭಾಗಿಸಿದಾಗ ಉಳಿಯುವುದೇ ಬೇರೆ ವಿಧವಾದ ಖರ್ಚು.

ವಿ.ವಿ. :

ಮನೆ ಅಥವಾ ಸಾಧನ ಮೊದಲಾದವುಗಳಿಗೆ ವಿಧಿಸಿದ ಹೊರಗಿನ ಅಥವಾ ಒಳಗಿನ ಸುತ್ತಳತೆಯನ್ನು ಆಧಾರವಾಗಿಟ್ಟುಕೊಂಡು ಆಯಾ ವಸ್ತುವಿನ ಯೋನಿ, ವ್ಯಯ, ಆದಾಯ, ನಕ್ಷತ್ರ, ತಿಥಿ, ವಾರ, ವಯಸ್ಸು ಮತ್ತು ಖರ್ಚುಗಳನ್ನು ಕಂಡುಹಿಡಿಯಬಹುದಾಗಿದೆ. ಈ ಲೆಕ್ಕಾಚಾರದಲ್ಲಿ ಶೇಷ ಸಂಖ್ಯೆಯೇ (ವಯಸ್ಸಿಗೆ ಮಾತ್ರ ಭಾಗಲಬ್ಧ) ಯೋನ್ಯಾದಿಗಳ ಸಂಖ್ಯೆಯಾದುದರಿಂದ ಯೋನ್ಯಾದಿಗಳ ಸಂಖ್ಯೆಯನ್ನು ತಿಳಿದುಕೊಳ್ಳಬೇಕಾಗುತ್ತದೆ. ಕೆಳಗೆ ಯೋನ್ಯಾದಿಗಳನ್ನು ಕಂಡುಹಿಡಿಯುವ ಕ್ರಮವನ್ನೂ ಸಂಖ್ಯಾಸಹಿತ ಯೋನ್ಯಾದಿಗಳನ್ನೂ ಸಂಗ್ರಹವಾಗಿ ಕೊಡಲಾಗಿದೆ.

1. ಯೋನಿ = (ಸುತ್ತಳತೆ x 3) + 8 .... ಶೇಷಸಂಖ್ಯೆಯೇ ಯೋನಿ ಸಂಖ್ಯೆ
2. ವ್ಯಯ = (ಸುತ್ತಳತೆ x 3) + 14 .... ಶೇಷಸಂಖ್ಯೆಯೇ ವ್ಯಯ ಸಂಖ್ಯೆ
3. ಆದಾಯ = (ಸುತ್ತಳತೆ x 8) + 12 .... ಶೇಷಸಂಖ್ಯೆಯೇ ಆದಾಯ ಸಂಖ್ಯೆ
4. ನಕ್ಷತ್ರ = (ಸುತ್ತಳತೆ x 8) + 27 .... ಶೇಷಸಂಖ್ಯೆಯೇ ನಕ್ಷತ್ರ ಸಂಖ್ಯೆ
5. ತಿಥಿ = (ಸುತ್ತಳತೆ x 8) + 30 .... ಶೇಷಸಂಖ್ಯೆಯೇ ತಿಥಿ ಸಂಖ್ಯೆ
6. ವಾರ = (ಸುತ್ತಳತೆ x 8) + 7 .... ಶೇಷಸಂಖ್ಯೆಯೇ ವಾರ ಸಂಖ್ಯೆ
7. ವಯಸ್ಸು = (ಸುತ್ತಳತೆ x 8) + 27 .... ಭಾಗಲಬ್ಧ + 5 = ಶೇಷಸಂಖ್ಯೆಯೇ ವಯೋ ಸಂಖ್ಯೆ
8. ಖರ್ಚು = (ಸುತ್ತಳತೆ x 9) + 10 .... ಶೇಷಸಂಖ್ಯೆಯೇ ಖರ್ಚಿನ ಸಂಖ್ಯೆ

(ಅ) ಯೋನಿಯನ್ನು ಕಂಡುಹಿಡಿಯುವ ಲೆಕ್ಕಾಚಾರಕ್ಕೆ ಒಂದು ಉದಾಹರಣೆ.

ಸೂತ್ರ : (ಸುತ್ತಳತೆ x 3) + 8 = ಶೇಷಸಂಖ್ಯೆಯೇ ಯೋನಿ ಸಂಖ್ಯೆ

ಸುತ್ತಳತೆ 63 ಕೋಲು ಎಂದಿರಲಿ = 63 ಕೋಲು x 3 = 189
= 189 + 8
= 23 - ಶೇಷ 5. ಇಲ್ಲಿ ಶೇಷಸಂಖ್ಯೆ 5.

(ಅ) (೧) ಧ್ವಜ, (೨) ಧೂಮ, (೩) ಸಿಂಹ, (೪) ಕುಕ್ಕುರ, (೫) ವೃಷಭ, (೬) ಖರ, (೭) ಗಜ ಮತ್ತು (೮) ವಾಯಸ ಎಂಬ ಯೋನಿಗಳಲ್ಲಿ ವೃಷಭ ಯೋನಿಯ ಸಂಖ್ಯೆ ಐದು ಆಗಿದೆ. ಶೇಷ ಸಂಖ್ಯೆ ಐದು ಎಂದಿರುವುದರಿಂದ 63 ಕೋಲಿನ ಸುತ್ತಳತೆಯು ವೃಷಭ ಯೋನಿಯಲ್ಲಿದೆ.

(ಆ) (೧) ನಕ್ಷತ್ರಗಳು :

(1) ಅಶ್ವಿನಿ (2) ಭರಣಿ (3) ಕೃತ್ತಿಕಾ (4) ರೋಹಿಣಿ (5) ಮೃಗಶಿರಾ (6) ಆರ್ದ್ರಾ (7) ಪುನರ್ವಸು (8) ಪುಷ್ಯ (9) ಆಶ್ಲೇಷ (10) ಮಘ (11) ಹುಬ್ಬಾ (12) ಉತ್ತರ (13) ಹಸ್ತ (14) ಚಿತ್ರ (15) ಸ್ವಾತಿ (16) ವಿಶಾಖಾ (17) ಅನುರಾಧ (18) ಜ್ಯೇಷ್ಠ (19) ಮೂಲ

(20) ಪೂರ್ವಾಷಾಢ (21) ಉತ್ತರಾಷಾಢ (22) ಶ್ರವಣ (23) ಧನಿಷ್ಠ (24) ಶತಭಿಷ (25) ಪೂರ್ವಾಭಾದ್ರ (26) ಉತ್ತರಾಭಾದ್ರ (27) ರೇವತಿ.

(೨) ನಕ್ಷತ್ರಗಳ ಪ್ರಾಧಾನ್ಯ :

1. ತಾರಾಬಲವನ್ನು ಕಂಡುಹಿಡಿಯಲು ನಕ್ಷತ್ರ ಬೇಕಾಗುತ್ತದೆ.

2. ನಕ್ಷತ್ರಗಳಲ್ಲಿ ಅಶುಭ ನಕ್ಷತ್ರಗಳು ತ್ಯಾಜ್ಯ.

ನಕ್ಷತ್ರವನ್ನು ಕಂಡು ಹುಡುಕುವುದಕ್ಕೆ ಉದಾಹರಣೆ

ಸೂತ್ರ :(ಸುತ್ತಳತೆ x 8) + 27 - ಶೇಷ ಸಂಖ್ಯೆಯೇ ನಕ್ಷತ್ರ ಸಂಖ್ಯೆ.

= 63 ಕೋ. x 8 = $\frac{504}{27}$

= 504+ 27 = ಪೂರ್ಣಾಂಕ 18

ಶೇಷ <u>18</u>

ಶೇಷ ಸಂಖ್ಯೆ 18 ಆದುದರಿಂದ 18ನೆಯ ನಕ್ಷತ್ರವು ಜ್ಯೇಷ್ಠವಾಗಿದೆ.

ತಾರಾಬಲದ ಪಟ್ಟಿ

ಜನ್ಮ	ಸಂಪತ್ತು	ವಿಪತ್ತು	ಕ್ಷೇಮ	ಪ್ರತ್ಯರ	ಸಾಧಕ	ವಧ	ಮೈತ್ರ	ಪರಮಮೈತ್ರ

ಮನೆಯ ಯೋನಿ ನಕ್ಷತ್ರದಿಂದ - ಯಜಮಾನನ ನಕ್ಷತ್ರಕ್ಕೆ ತಾರಾನುಕೂಲ ನೋಡಬೇಕೆಂದು ಶಾಸ್ತ್ರ ನಿಯಮವಾಗಿರುತ್ತದೆ. ತಾರಾಬಲವನ್ನು ಜನ್ಮದಿಂದ ಪ್ರಾರಂಭಿಸಬೇಕು.

(೩) (೧) ತಿಥಿಗಳು :

(1) ಪಾಡ್ಯ (2) ಬಿದಿಗೆ (3) ತದಿಗೆ (4) ಚೌತಿ (5) ಪಂಚಮಿ (6) ಷಷ್ಠಿ (7) ಸಪ್ತಮಿ (8) ಅಷ್ಟಮಿ (9) ನವಮಿ (10) ದಶಮಿ (11) ಏಕಾದಶಿ (12) ದ್ವಾದಶಿ (13) ತ್ರಯೋದಶಿ (14) ಚತುರ್ದಶಿ (15) ಹುಣ್ಣಿಮೆ. ಇವುಗಳು ಶುಕ್ಲಪಕ್ಷದ ತಿಥಿನಾಮಗಳಾದರೆ ಇದೇ ರೀತಿ ಕೃಷ್ಣಪಕ್ಷದ ಹೆಸರುಗಳೂ ಇವೆ. ಆ ಪ್ರಕಾರ ಅಮಾವಾಸ್ಯೆಯು 30ನೆಯ ತಿಥಿಯಾಗುತ್ತದೆ.

(೨) ತಿಥಿಗಳ ಪ್ರಾಧಾನ್ಯ - ಶುಭ ತಿಥಿಗಳು ಗ್ರಾಹ್ಯ

ತಿಥಿಯನ್ನು ಗೊತ್ತು ಮಾಡುವ ಕ್ರಮ

ಸೂತ್ರ : (ಸುತ್ತಳತೆ x 8) + 30 = ಶೇಷ ಸಂಖ್ಯೆಯೇ ತಿಥಿ ಸಂಖ್ಯೆ

= 63 ಕೋ. x 8 = 504

= 504 + 30 = 16 - ಶೇಷ <u>24</u>

ಶೇಷ ಸಂಖ್ಯೆ 24 ಆದುದರಿಂದ ತಿಥಿ ಸಂಖ್ಯೆಯು 24 ಆಗುತ್ತದೆ. 24ನೆಯ ತಿಥಿಯು ಕೃಷ್ಣ ಪಕ್ಷದ ನವಮಿಯಾಗುತ್ತದೆ. (ತಿಥಿಯ ಗಣನೆ ಶುಕ್ಲಪಕ್ಷದ ಪ್ರತಿಪದೆಯಿಂದ ಪ್ರಾರಂಭವಾಗುತ್ತದೆ.)

(ಈ) (೧) ವಾರಗಳು :

(1) ಆದಿತ್ಯವಾರ (2) ಸೋಮವಾರ (3) ಮಂಗಳವಾರ (4) ಬುಧವಾರ (5) ಗುರುವಾರ (6) ಶುಕ್ರವಾರ ಮತ್ತು (7) ಶನಿವಾರ

(೨) ವಾರಗಳ ಪ್ರಾಧಾನ್ಯ - ಶುಭ ವಾರಗಳು ಗ್ರಾಹ್ಯ

ವಾರವನ್ನು ಗೊತ್ತುಮಾಡುವ ಕ್ರಮ

ಸೂತ್ರ : (ಸುತ್ತಳತೆ x 8) + 7 = ಶೇಷಸಂಖ್ಯೆಯೇ ವಾರ ಸಂಖ್ಯೆ

= 63 ಕೋ. x 8 = 504

= $\frac{504}{7}$ = 72 - ಶೇಷ ಇಲ್ಲ

ಇಲ್ಲಿ ಶೇಷ ಶೂನ್ಯವಾದುದರಿಂದ ವಾರಗಳಲ್ಲಿ ಗರಿಷ್ಠ ಸಂಖ್ಯೆ 7 ಆದುದರಿಂದ ಶನಿವಾರವಾಗಿದೆ. (ವಾರದ ಗಣನೆಯನ್ನು ಆದಿತ್ಯವಾರದಿಂದ ಪ್ರಾರಂಭಿಸಬೇಕು)

(ಉ) ವ್ಯಯ ಮತ್ತು (ಊ) ಆದಾಯ :

ವ್ಯಯ ಸಂಖ್ಯೆಗಿಂತ ಆದಾಯ ಸಂಖ್ಯೆ ಅಧಿಕವಾಗಿರಬೇಕು. ಅವುಗಳ ಅಂತರ ಅಧಿಕವಿದ್ದಷ್ಟೂ ಒಳ್ಳೆಯದೇ. ವ್ಯಯ ಸಂಖ್ಯೆ ಆದಾಯ ಸಂಖ್ಯೆಗಿಂತ ಕಡಿಮೆಯಾಗದೆ ಹೋದರೆ ಅದರಿಂದ ನಷ್ಟ ಪರಂಪರೆಯೇ ಬಂದೊದಗುತ್ತದೆ. ಈ ವಿಷಯದ ಕುರಿತು ಅಧ್ಯಾಯ ೩ ಶ್ಲೋಕ ೩೨ರಲ್ಲಿ ವಿವರವನ್ನು ಶಾಸ್ತ್ರಕಾರರು ಕೊಟ್ಟಿರುತ್ತಾರೆ. ವ್ಯಯ ಮತ್ತು ಆದಾಯದ ಸೂಕ್ತತೆಯನ್ನು ಈ ಕೆಳಗಿನಂತೆ ಪರಿಶೀಲಿಸಿ ಸ್ವೀಕರಿಸಬಹುದು.

ವ್ಯಯ : ಸೂತ್ರ : (ಸುತ್ತಳತೆ x 3) + 14= ಶೇಷಸಂಖ್ಯೆಯೇ ವ್ಯಯ ಸಂಖ್ಯೆ

= 63 ಕೋ x 3 = $\frac{189}{14}$ = 13 - ಶೇಷ 7 ಆದುದರಿಂದ ವ್ಯಯ 7.

ಆದಾಯ : ಸೂತ್ರ : (ಸುತ್ತಳತೆ x 8) + 12 = ಶೇಷಸಂಖ್ಯೆಯೇ ಆದಾಯ ಸಂಖ್ಯೆ

= 63 ಕೋ x 8 = $\frac{504}{12}$ = 42 - ಶೇಷ ಇಲ್ಲ. ಆದುದರಿಂದ ಆದಾಯ 12.

ಇಲ್ಲಿ ವ್ಯಯದ ಶೇಷ ಸಂಖ್ಯೆ 7, ಆದಾಯದ ಗಣನೆಯಲ್ಲಿ ಶೇಷ ಶೂನ್ಯವಾದುದರಿಂದ ಆದಾಯ ಸಂಖ್ಯೆ 12. ವ್ಯಯಕ್ಕಿಂತ ಆದಾಯ ಇಲ್ಲಿ ಹೆಚ್ಚಾಗಿರುವುದರಿಂದ ಇದು ಪ್ರಶಸ್ತ.

(ಋ) ವಯಸ್ಸು :

ವಾಸ್ತುಶಿಲ್ಪಶಾಸ್ತ್ರದಲ್ಲಿ ಐದು ಆಯುಃ ಪ್ರಮಾಣಗಳನ್ನು ಹೇಳಿರುತ್ತಾರೆ. ಅವುಗಳು ಬಾಲ್ಯ, ಕೌಮಾರ್ಯ, ಯೌವನ, ವಾರ್ಧಕ ಮತ್ತು ನಿಧನ. (ಅ.೩, ಶ್ಲೋಕ ೩೨) ಎಂಬವುಗಳಾಗಿವೆ. ಈ ಐದರ ಪೈಕಿ ಯೌವನ ಅತ್ಯುತ್ತಮವಾದುದು. ನಿಧನ ತೀರ ವರ್ಜ್ಯ. ವಯಸ್ಸನ್ನು ಈ ಕೆಳಗಿನಂತೆ ಕಂಡುಹಿಡಿಯಬಹುದು.

ಸೂತ್ರ : (ಸುತ್ತಳತೆ x 8) + 27 - ಭಾಗಲಬ್ಧ

(63 ಕೋ. x 8) ÷ 27 = ಭಾಗಲಬ್ಧ

63 x 8 = 504

$\frac{504}{27}$ = 18 ಭಾಗಲಬ್ಧ

= 18 ÷ 5 = 3 ಶೇಷಸಂಖ್ಯೆ

ಆಯುಃ ಪ್ರಮಾಣ 5 ಇರುವುದರಿಂದ 18ನ್ನು 5ರಿಂದ ಭಾಗಿಸಿದಾಗ 3 ಶೇಷ ಉಳಿಯುತ್ತದೆ. ಆ ಸಂಖ್ಯೆ ಬಾಲ್ಯ ಮೊದಲಾದ ಐದರಲ್ಲಿ ಯೌವನದ ಸಂಖ್ಯೆಯಾಗಿದೆ. ಆದುದರಿಂದ ಈ 63 ಕೋಲಿನ ಸುತ್ತಳತೆಗೆ ವಯಸ್ಸು ಯೌವನವಾಗಿದೆ. ಆಯಸ್ಸನ್ನು ಕಂಡುಹಿಡಿಯಲು 27ರಿಂದ ಭಾಗಿಸಬೇಕಾದುದರಿಂದ 27 ಸಂಖ್ಯೆಗಳಲ್ಲಿ ಬಾಲ್ಯಾದಿಗಳು ಆವರ್ತನಗೊಳ್ಳುವ ಸಂಖ್ಯೆಯನ್ನು ಈ ಕೆಳಗಿನ ತಖ್ತೆಯಿಂದ ತಿಳಿದುಕೊಳ್ಳಬಹುದು.

ಕ್ರ.ಸಂ.	ವಯೋಮಾನಗಳು	ಭಾಗಲಬ್ಧ
1.	ಬಾಲ್ಯ	1, 6, 11, 16, 21, 26
2.	ಕೌಮಾರ್ಯ	2, 7, 12, 17, 22, 27
3.	ಯೌವನ	3, 8, 13, 18, 23
4.	ವಾರ್ಧಕ	4, 9, 14, 19, 24
5.	ನಿಧನ	5, 10, 15, 20, 25

ಈ ತಖ್ತೆಯಲ್ಲಿ ನಮೂದಿಸಿದ ಭಾಗಲಬ್ಧ ಸಂಖ್ಯೆಗಳು ಆಯಾಯ ಕ್ರಮಸಂಖ್ಯೆಯ ವಯೋಮಾನವನ್ನು ಹೆಸರಿಸುತ್ತದೆ.

(೫೦) ಖರ್ಚು :

ಇದು ಇತರ ಖರ್ಚುಗಳ ಗಣನೆಗೆ ಬರುತ್ತದೆ. 1ರಿಂದ 10 ಸಂಖ್ಯೆಗಳ ಪೈಕಿ ಕಡಿಮೆ ಸಂಖ್ಯೆ ಇದ್ದಷ್ಟು ಆ ಮನೆಯಲ್ಲಿ ಖರ್ಚಿನ ಅಂಶ ಕಡಿಮೆಯೆಂದು ತಿಳಿಯಬೇಕಾಗುತ್ತದೆ.

ಖರ್ಚನ್ನು ಕಂಡುಹಿಡಿಯುವ ಕ್ರಮ :

ಸೂತ್ರ : (ಸುತ್ತಳತೆ x 9) ÷ 10 = ಶೇಷಸಂಖ್ಯೆಯೇ ಖರ್ಚಿನ ಸಂಖ್ಯೆ

(63 ಕೋ. x 9) ÷ 10 = ಶೇಷ

63 x 9 = 567

= 567 ÷ 10 = 56 - ಶೇಷ 7.

ಆದುದರಿಂದ ಖರ್ಚಿನ ಸಂಖ್ಯೆ - 7

೭. ಯೋನಿಗಳು

ಶ್ಲೋಕ : ಧ್ವಜ ಧೂಮ ಸಿಂಹ ಕುಕ್ಕುರ ವೃಷ
ಖರ ಗಜ ವಾಯಸಾಃ ಕ್ರಮೇಣ ಸ್ಯುಃ
ಪ್ರಾಗಾದಿ ಯೋನಯೋಽಷ್ಟೌ ತೇಷ್ವಯುಜಃ
ಸಂಪದೇ ಯುಜೋ ವಿಪದೇ ॥೨೫॥


ತಾತ್ಪರ್ಯ :

ಯೋನಿಗಳು (1) ಧ್ವಜ (2) ಧೂಮ (3) ಸಿಂಹ (4) ಕುಕ್ಕುರ (5) ವೃಷಭ (6) ಖರ (7) ಗಜ ಮತ್ತು (8) ವಾಯಸ ಎಂಬುದಾಗಿ ಪೂರ್ವದಿಕ್ಕಿನಿಂದ ಆರಂಭಿಸಿ ಕ್ರಮವಾಗಿ ಎಂಟು ವಿಧ. ಅವುಗಳಲ್ಲಿ ವಿಷಮ ಸಂಖ್ಯೆಯ (1, 3, 5 ಮತ್ತು 7) ಯೋನಿಗಳು ಸಂಪತ್ಕಾರಕಗಳು. ಆದುದರಿಂದ ಅವುಗಳು ಯೋಗ್ಯ. ಸಮಸಂಖ್ಯೆಯ (2, 4, 6 ಮತ್ತು 8) ಯೋನಿಗಳು ವಿಪತ್ಕಾರಕಗಳು. ಆದುದರಿಂದ ಅವುಗಳು ತ್ಯಾಜ್ಯ

ವಿ.ವಿ. :

ಯೋನಿಯನ್ನು ಆಯ ಎಂಬ ಹೆಸರಿನಿಂದ ರೂಢಿಯಲ್ಲಿ ಕರೆಯುತ್ತಾರೆ. ಆದರೆ ವಾಸ್ತು ಪರಿಭಾಷೆಯ ಪ್ರಕಾರ ಯೋನಿ ಎಂಬುದು ಸರಿಯಾದ ಪದ.

೮. ಯೋನಿಗಳ ದಿಕ್ಕುಗಳು



ಚಿತ್ರ. ೪೪, ಅ. ೩, ಶ್ಲೋ. ೨೫.

ಶ್ಲೋಕ : ಕೇತುಯೋನಿರಭಿವಾಂಛಿತಾರ್ಥದಃ
ಸಾತ್ವಿಕೋಽಮರಗುರುರ್ದ್ವಿಜೋ ಭವೇತ್
ಪೂರ್ವದಿಕ್ಷ್ವಭಿಹಿತೋಽಪಿ ಸರ್ವತಃ
ಸರ್ವದಿಕ್ಷ್ವಭಿಹಿತೋ ವಿಶೇಷತಃ ॥೨೬॥

ತಾತ್ಪರ್ಯ :

ಧ್ವಜಯೋನಿಯು ಅಭೀಷ್ಟಫಲವನ್ನು ಕೊಡುವಂಥಾದ್ದೂ, ಸಾತ್ವಿಕಗುಣವುಳ್ಳದ್ದೂ, ಬೃಹಸ್ಪತಿಯೂ, ದ್ವಿಜನೂ ಆಗಿರುವಂಥಾದ್ದು. ಈ ಯೋನಿಯು ಪೂರ್ವದಿಕ್ಕಿನದ್ದಾದರೂ ವಿಶೇಷತಃ ವಾಸ್ತುವಿನ ವಿಷಯದಲ್ಲಿ ಎಲ್ಲ ದಿಕ್ಕುಗಳಿಗೂ ಹಿತಕರವಾಗಿದೆ.

ಶ್ಲೋಕ : ಸಿಂಹೋ ದಕ್ಷಿಣಸಂಸ್ಥಿತಃ ಕ್ಷಿತಿಸುತೋ ಲಕ್ಷ್ಮೀಪ್ರದಸ್ತಾಮಸೋ
ಭೂಪೋಽಥೋ ವಣಿಗುತ್ತರೇ ಶುಭಕರೋ ದಂತೀ ಬುಧೋ ರಾಜಸಃ
ಶೂದ್ರಃ ಪಶ್ಚಿಮದಿಕ್ ಸ್ಥಿತೋಽರ್ಕತನಯೋ ಧಾನ್ಯಪ್ರದಸ್ತಾಮಸೋ
ಸಂಪ್ರೋಕ್ತೋಽಥ ವಿದಿಕ್ಷು ಯೋನಿಗದಿತಾಸ್ತತ್ರಾಪಿ ತೇ ನಿಂದಿತಾಃ ॥೨೭॥

ತಾತ್ಪರ್ಯ :

ಸಿಂಹಯೋನಿಯ ಸ್ಥಾನ ದಕ್ಷಿಣದಿಕ್ಕಾಗಿದೆ. ಅದು ಕುಜನೂ, ಸಂಪತ್ಪ್ರದವೂ, ತಾಮಸಗುಣವುಳ್ಳದ್ದೂ, ಕ್ಷತ್ರಿಯನೂ ಆಗಿರುವುದು. ಗಜಯೋನಿಯ ಸ್ಥಾನ ಉತ್ತರದಿಕ್ಕು. ಅದು ವೈಶ್ಯನೂ, ಶುಭಕರವೂ, ಬುಧನೂ, ರಾಜಸಗುಣವುಳ್ಳದ್ದೂ ಆಗಿದೆ. ವೃಷಭಯೋನಿಯ ಸ್ಥಾನ ಪಶ್ಚಿಮದಿಕ್ಕು. ಅದು ಶೂದ್ರನೂ, ಶನಿಯೂ, ಧಾನ್ಯಪ್ರದವೂ ತಾಮಸಗುಣವುಳ್ಳದ್ದೂ ಆಗಿದೆ. ವಿದಿಕ್ಕುಗಳಿಗೆ (ಆಗ್ನೇಯ, ನೈಋತ್ಯ, ವಾಯುವ್ಯ ಮತ್ತು ಈಶಾನ್ಯ) ನಿಗದಿತವಾದ ಯೋನಿಗಳು ಆ ದಿಕ್ಕುಗಳಲ್ಲಿಯೇ ನಿಂದಿತಗಳಾಗಿ ಪ್ರಾಧಾನ್ಯವಿಲ್ಲದವುಗಳಾಗಿವೆ.

ಶ್ಲೋಕ : ಉದ್ವೇಗಃ ಸ್ಯಾದ್ ಧೂಮೇ ಶುನಿ ಕಲಹಶ್ಚಪಲತಾ ಖರೇ ಭವತಿ
ಧ್ವಾಂಕ್ಷೇ ಕುಲಹಾನಿಃ ಸ್ಯಾತ್ ಸರ್ವವಿದಿಗ್ಯೋನಯಸ್ತತೋ ನಿಂದ್ಯಾಃ ॥೨೮॥

ತಾತ್ಪರ್ಯ :

ಧೂಮಯೋನಿಯಲ್ಲಿ ಉದ್ವೇಗವೂ, ಕುಕ್ಕುರದಲ್ಲಿ ಕಲಹವೂ, ಖರಯೋನಿಯಲ್ಲಿ ಚಪಲತೆಯೂ, ವಾಯಸ (ಕಾಕ) ಯೋನಿಯಲ್ಲಿ ಕುಲಹಾನಿಯೂ ಆಗುತ್ತದೆ. ವಿದಿಕ್ ಯೋನಿಗಳ ಫಲ ಹೀಗಿರುವುದರಿಂದ ಅವುಗಳೆಲ್ಲ ದೂಷಿತಗಳಾಗಿವೆ.

ವಿ.ವಿ. :

ಶ್ಲೋಕ ಇಪ್ಪತ್ತಾರರಿಂದ ಇಪ್ಪತ್ತೆಂಟರವರೆಗೆ ಯೋನಿಗಳ ದಿಕ್‌ಸ್ಥಾನ, ಗ್ರಹ, ಗುಣಫಲ ಮೊದಲಾದವುಗಳ ವಿವರವನ್ನು ಕೊಡಲಾಗಿದೆ. ಅವುಗಳ ಸಂಕ್ಷಿಪ್ತ ರೂಪ ಹೀಗಿದೆ.

ದಿಕ್ ಯೋನಿ ಫಲ

	ಯೋನಿ	ದಿಕ್ಸ್ಥಾನ	ಗ್ರಹ	ಗುಣ	ವರ್ಣ	ಫಲ
1.	ಧ್ವಜ	ಪೂರ್ವ	ಬೃಹಸ್ಪತಿ	ಸಾತ್ವಿಕ	ದ್ವಿಜ	ಅಭೀಷ್ಟಫಲದಾಯಕ
2.	ಸಿಂಹ	ದಕ್ಷಿಣ	ಕುಜ	ತಾಮಸ	ಕ್ಷತ್ರಿಯ	ಸಂಪತ್ಪ್ರದ
3.	ವೃಷಭ	ಪಶ್ಚಿಮ	ಶನಿ	ತಾಮಸ	ಶೂದ್ರ	ಧಾನ್ಯಪ್ರದ
4.	ಗಜ	ಉತ್ತರ	ಬುಧ	ರಾಜಸ	ವೈಶ್ಯ	ಶುಭಕರ

ವಿದಿಕ್ ಯೋನಿಫಲ

	ಯೋನಿ	ದಿಕ್ಸ್ಥಾನ	ಗ್ರಹ	ಗುಣ	ವರ್ಣ	ಫಲ
1.	ಧೂಮ	ಆಗ್ನೇಯ	-	-	-	ಉದ್ವೇಗ
2.	ಕುಕ್ಕುರ	ನೈಋತ್ಯ	-	-	-	ಕಲಹ
3.	ಖರ	ವಾಯುವ್ಯ	-	-	-	ಚಾಪಲ್ಯ
4.	ಕಾಕ	ಈಶಾನ್ಯ	-	-	-	ಕುಲಹಾನಿ

೯. ಯೋನಿಗಳ ಉಪಯೋಗ

ಶ್ಲೋಕ : ಪ್ರಾಚ್ಯಾಂ ಕೇತುರ್ವಿಧೇಯಃ ಸ ತು ಭವನವಿಧಾನೇಷು ಸರ್ವತ್ರ ಶಸ್ತಃ
ಶಾಲಾಯಾಂ ದಕ್ಷಿಣಸ್ಯಾಂ ಮೃಗಪತಿರುದಿತಃ ಕೇತುಯೋನಿಶ್ಚ ಯೋಜ್ಯಃ
ಮಾತಂಗಃ ಕೇತುಸಿಂಹಾವಪಿ ಚ ಧನಪತೌ ಪಶ್ಚಿಮೇ ಸ್ಯಾದ್ ವೃಷೋಽನ್ಯೇ
ಕೇತುಃ ಸಿಂಹೋ ಗಜಶ್ಚಾಪಿ ಚ ನಿಜ ನಿಜಕೋಣಾಲಯೇಽಪ್ಯೇವಮೇವ ॥೨೯॥

ತಾತ್ಪರ್ಯ :

ಪೂರ್ವದಿಕ್ಕಿನ ಮನೆಗೆ ಧ್ವಜಯೋನಿಯು ಯೋಗ್ಯವಾದುದು. ಧ್ವಜಯೋನಿಯು ಪೂರ್ವದಿಕ್ಕಿನದ್ದಾದರೂ ಅದು ಗೃಹನಿರ್ಮಾಣ ವಿಧಾನಗಳಲ್ಲಿ ಎಲ್ಲ ಕಡೆ (ಎಲ್ಲ ದಿಕ್ಕುಗಳಲ್ಲಿ) ಪ್ರಶಸ್ತವಾಗಿದೆ. ತೆಂಕು ದಿಕ್ಕಿನ ಮನೆಗೆ ಸಿಂಹಯೋನಿ ಹೇಳಿಸಿದ್ದು. ಧ್ವಜಯೋನಿಯನ್ನೂ ಯೋಜಿಸಬಹುದು. ಉತ್ತರ ದಿಕ್ಕಿನ ಮನೆಗೆ ಗಜಯೋನಿ ಒಳ್ಳೆಯದು. ಧ್ವಜ ಮತ್ತು ಸಿಂಹಯೋನಿಗಳನ್ನೂ ಬಳಸಬಹುದು. ಪಶ್ಚಿಮ ದಿಕ್ಕಿನ ಮನೆಗೆ ವೃಷಭಯೋನಿ ಶ್ರೇಷ್ಠ. ಕೇತು, ಸಿಂಹ ಮತ್ತು ಗಜಯೋನಿಗಳೂ ಸ್ವೀಕಾರಾರ್ಹ. ಕೋಣಾಲಯಗಳಲ್ಲಿ ತಮ್ಮ ತಮ್ಮ ದಿಕ್ಕುಗಳಿಗೆ ವಿಧಿಸಿದ ಯೋನಿಗಳನ್ನು ಸ್ವೀಕರಿಸಬೇಕು.

ವಿ.ವಿ. :

ಇಲ್ಲಿ ಪೂರ್ವದಿಕ್ಕಿನ ಮನೆ ಎಂದು ಹೇಳಿರುವುದರಿಂದ ಪೂರ್ವದಿಕ್ಕಿನ ಪಶ್ಚಿಮ ಮುಖದ ಮನೆ ಎಂದು ತಿಳಿಯಬೇಕಾಗುತ್ತದೆ. ಹಾಗೆಯೇ ದಕ್ಷಿಣ ದಿಕ್ಕಿನ ಮನೆ ಎಂದರೆ ಉತ್ತರ ಮುಖದ ಮನೆಯಾಗುತ್ತದೆ. ಪಶ್ಚಿಮ ದಿಕ್ಕಿನ ಮನೆ ಎಂದರೆ ಪೂರ್ವಮುಖದ ಮನೆ ಮತ್ತು ಉತ್ತರ ದಿಕ್ಕಿನ ಮನೆ ಎಂದರೆ ದಕ್ಷಿಣಮುಖದ ಮನೆ ಎಂದು ತಿಳಿದುಕೊಳ್ಳಬೇಕು. ಮುಖ್ಯವಾಗಿ ಇಲ್ಲಿ ಚತುಶ್ಶಾಲೆಯನ್ನು ಗಮನಿಸಿ ಯೋನಿಗಳನ್ನು ದಿಕ್ಕುಗಳಿಗೆ ನಿರ್ದೇಶಿಸಲಾಗಿದೆ. ಅದನ್ನೇ ಏಕಶಾಲೆಗೂ ಅನ್ವಯಿಸಿಕೊಳ್ಳಬೇಕು.

(ಅ) ದಿಕ್‌ಶಾಲೆಗಳಿಗೆ ವಿಧಿಸಿದ ಯೋನಿಗಳು

	ದಿಕ್ಕು	ಯೋನಿ
1.	ಪೂರ್ವ	ಧ್ವಜ
2.	ದಕ್ಷಿಣ	ಸಿಂಹ (ಧ್ವಜ ಯೋನಿಯೂ ಆಗಬಹುದು)
3.	ಪಶ್ಚಿಮ	ವೃಷಭ (ಕೇತು, ಸಿಂಹ, ಗಜಯೋನಿಗಳೂ ಆಗಬಹುದು)
4.	ಉತ್ತರ	ಗಜ (ಧ್ವಜ, ಸಿಂಹ ಯೋನಿಗಳೂ ಆಗಬಹುದು)

(ಆ) ಕೋಣಾಲಯಗಳ ದಿಕ್ಕುಗಳಿಗೆ ಸಂಬಂಧಿಸಿದ-ಪ್ರಧಾನ ದಿಕ್ಕು ಮತ್ತು ಯೋನಿ

	ವಿದಿಕ್	ಸಂಬಂಧಿಸಿದ ಪ್ರಧಾನ ದಿಕ್	ಯೋನಿ
1.	ಈಶಾನ್ಯ (ಪ್ರಾರಂಭ)	ಉತ್ತರ - ಪೂರ್ವ > ಪೂರ್ವ	ಧ್ವಜ
2.	ಆಗ್ನೇಯ	ದಕ್ಷಿಣ - ಪೂರ್ವ > ದಕ್ಷಿಣ	ಸಿಂಹ
3.	ನೈಋತ್ಯ	ದಕ್ಷಿಣ - ಪಶ್ಚಿಮ > ಪಶ್ಚಿಮ	ವೃಷಭ
4.	ವಾಯುವ್ಯ	ಉತ್ತರ - ಪಶ್ಚಿಮ > ಉತ್ತರ	ಗಜ

೧೦. ಯೋನಿಗಳ ಪ್ರಾಧಾನ್ಯ

ಶ್ಲೋಕ : ಯೋನಿಃ ಪ್ರಾಣಾ ಏವ ಧಾಮ್ನಾಂ ಯದಸ್ಮಾತ್
ಗ್ರಾಹ್ಯಸ್ತತ್ತದ್ಯೋಗ್ಯಯೋನಿಪ್ರಭೇದಃ
ಮೃತ್ಯುರ್ವರ್ಜ್ಯಃ ಸರ್ವಗೇಹೇಷ್ವವಶ್ಯಂ
ಸರ್ವವ್ಯಾಪತ್ ಪ್ರಾಪ್ಯತೇಽಸ್ಮಿನ್ ಗೃಹೀತೇ ॥೩೦॥

ತಾತ್ಪರ್ಯ :

ಮನೆಗಳಿಗೆ ಯೋನಿಯೇ ಪ್ರಾಣವಾಗಿದೆ. ಆದ ಕಾರಣ ಯೋನಿಗಳಲ್ಲಿ ಮನೆಗೆ ತಕ್ಕುದಾದ ಯೋನಿಯನ್ನು ಸ್ವೀಕರಿಸಲೇಬೇಕು. ಯಾವುದೇ ಮನೆಗಾದರೂ ಮೃತ್ಯುವು ತಟ್ಟಲೇಬಾರದು. ಆ ಮೃತ್ಯುವನ್ನು ಸ್ವಾಗತಿಸಿದರೆ ಸಕಲಸಂಕಷ್ಟಗಳು ಪ್ರಾಪ್ತವಾಗುತ್ತವೆ.

ವಿ.ವಿ. :

ಈ ಶ್ಲೋಕದಲ್ಲಿ ಯೋನಿಯ ಪ್ರಾಧಾನ್ಯವನ್ನು ಹೇಳಲಾಗಿದೆ. ಮನೆಗಳಿಗೆ ಯೋನಿಯೇ ಇಲ್ಲವೆಂದಾದರೆ ಅದು ಪ್ರಾಣವಿಲ್ಲದ ಶರೀರದಂತೆ. ಯೋನಿಯಿಲ್ಲದ ಮನೆ ನಿರ್ಜೀವ ಮಾತ್ರವಲ್ಲ ಮೃತ್ಯುಸದೃಶವಾಗಿ ಅನೇಕ ಕಷ್ಟ ಪರಂಪರೆಗಳ ಬೀಡಾಗುತ್ತದೆ. ಆದುದರಿಂದ ದಿಕ್ಕಿಗೆ ಸರಿಯಾದ ಯೋನಿಯನ್ನು ನಿಶ್ಚಯಿಸಿಕೊಂಡು ಆ ಯೋನಿಗೆ ಅನುಗುಣವಾದ ಮನೆಯನ್ನು ಕಟ್ಟಬೇಕು. ಹಾಗಾದರೆ ಮಾತ್ರ ಅದು ಸುಖ ಶಾಂತಿಯ ತವರೂರಾಗಿ ಪರಿಣಮಿಸುತ್ತದೆ.

ಶ್ಲೋಕ : ಆಯಾಧಿಕ್ಯಂ ವ್ಯಯತಃ ಸಂಪಾದ್ಯಂ ಸರ್ವಥಾಽನ್ಯಥಾಽಽಪತ್ತಿಃ
ನಕ್ಷತ್ರಾದಿ ಶುಭತ್ವಂ ಜ್ಯೋತಿಶ್ಶಾಸ್ತ್ರಾದಿಭಿಃ ಸುವಿಜ್ಞೇಯಮ್ ||೩೧||

ತಾತ್ಪರ್ಯ :

ವ್ಯಯಕ್ಕಿಂತ ಆದಾಯವು ಹೆಚ್ಚಾಗಿರುವಂತೆ ಸರ್ವಥಾ ನೋಡಿಕೊಳ್ಳಬೇಕು. ಒಂದು ವೇಳೆ ಹಾಗೆ ಮಾಡದಿದ್ದರೆ ಆಪತ್ತು ಸಂಭವಿಸಿಯೇ ತೀರುತ್ತದೆ. ನಕ್ಷತ್ರಾದಿಗಳ (ನಕ್ಷತ್ರ, ತಿಥಿ, ವಾರಗಳು) ಶುಭತ್ವವನ್ನು ಜ್ಯೋತಿಶ್ಶಾಸ್ತ್ರಾದಿಗಳಿಂದ ತಿಳಿದುಕೊಳ್ಳಬೇಕು.

೧೧. ಬಾಲ್ಯಾದಿ ಆಯುಃ ಪ್ರಮಾಣಗಳು

ಶ್ಲೋಕ : ಬಾಲತ್ವಂ ಕೌಮಾರಂ ಯೌವನಮಥ ವಾರ್ಧಕಂ ಚ ನಿಧನಂ ಚ
ಪಂಚವಯಾಸ್ಯೇಷ್ವಂತ್ಯಂ ನೇಷ್ಟಂ ಶಿಷ್ಟಾನಿ ವಾಸ್ತುನೀಷ್ಟಾನಿ ||೩೨||

ತಾತ್ಪರ್ಯ :

ಬಾಲ್ಯ, ಕೌಮಾರ್ಯ, ಯೌವನ, ವಾರ್ಧಕ ಮತ್ತು ನಿಧನ ಎಂದು ಐದು ಆಯುಃ ಪ್ರಮಾಣಗಳು. ಈ ಐದು ವಯೋಪ್ರಮಾಣಗಳ ಪೈಕಿ ಕೊನೆಯದಾದ ನಿಧನವನ್ನು ಬಿಡಲೇಬೇಕು (ಅದು ವರ್ಜ್ಯ). ಉಳಿದವುಗಳು ವಾಸ್ತುವಿಗೆ ಸಂಬಂಧಿಸಿದ ಕಾರ್ಯಗಳಲ್ಲಿ (ಗೃಹ ನಿರ್ಮಾಣಾದಿಗಳಲ್ಲಿ) ಶ್ರೇಷ್ಠವಾದವುಗಳು. (ಹೀಗಿದ್ದರೂ ಯೌವನವು ಅತಿ ಶ್ರೇಷ್ಠ)

ಶ್ಲೋಕ : ದ್ವೇಧಾ ಯೋನಿಶ್ಚತುರ್ಧಾ ವ್ಯಯವಿಧಿರುದಿತಶ್ಚ ದ್ವಿಧಾಽಽಯೋ ವಯಶ್ಚಾ -
ಪ್ಯೃಕ್ಷಂ ವಿಪ್ರಾದಿವರ್ಣಾಸ್ತಿಥಿರಪಿ ಚ ತಥಾ ರಾಶಯೋ ದ್ವಿಪ್ರಕಾರಾಃ
ತ್ರೇಧಾ ವಾರೋ ಧ್ರುವಾದಿಸ್ತ್ರಿವಿಧ ಇತಿ ವಿಕಲ್ಪೇನ ಯೋನ್ಯಾದಯಃ ಸ್ಯುಃ
ಪ್ರೋಕ್ತೇಷ್ವೇತೇಷು ಪೂರ್ವೋದಿತಮಖಿಲಮತಂ ಕಾರ್ಯಮಾವಶ್ಯಕೇಽನ್ಯತ್ ||೩೩||

ತಾತ್ಪರ್ಯ :

ಯೋನಿಯು ಎರಡು ವಿಧ. ಖರ್ಚಿನ ವಿಧಿ ನಾಲ್ಕು ವಿಧ. ಆದಾಯ ಮತ್ತು ವಯಸ್ಸು ಎರಡು ವಿಧ. ನಕ್ಷತ್ರಗಳು, ವಿಪ್ರಾದಿ ವರ್ಣಗಳು, ತಿಥಿಗಳು ಮತ್ತು ರಾಶಿಗಳು ಎರಡೆರಡು ವಿಧಗಳು. ವಾರಗಳು ಮೂರು ವಿಧ. ಧ್ರುವಾದಿಗಳು ಮೂರು ವಿಧ. ಈ ರೀತಿ ವಿಕಲ್ಪವಾಗಿ ಯೋನ್ಯಾದಿಗಳು ಇವೆ. ಇದಕ್ಕಿಂತ ಮೊದಲು ಹೇಳಿದ ಯೋನಿ ಮೊದಲಾದವುಗಳು ಎಲ್ಲ ವರ್ಣದವರಿಗೂ ವಿಹಿತ. ಬೇರೆ ರೀತಿಯ ಈ ವಿಧಗಳನ್ನು ಅವಶ್ಯವಿದ್ದಾಗ ಸ್ವೀಕರಿಸಬೇಕು.

೧೨. ಯೋನಿಗಳ ಪಕ್ಷಾಂತರ ವಿಧಿ

ಶ್ಲೋಕ : ಸಾಮಾನ್ಯಂ ಪರಿಣಾಹತಃ ಸುವಿಹಿತಾ ಯೋನ್ಯಾದಯೋ ದೀರ್ಘತೋ
ವಿಸ್ತಾರೇಣ ಚ ಪಾದಮಾನ ಚರಣಾಧಿಷ್ಠಾನತುಂಗೈರಪಿ ||
ವಿಸ್ತಾರಾಹತ ದೀರ್ಘತೋಽಪಿ ಚ ಪೃಥಕ್ ಸ್ವಸ್ವೋಕ್ತಯೋನ್ಯಾದಯೋ
ಜಾತಾಶ್ಚೇದತಿ ಶೋಭನಾ ಗೃಹವಿಧೌ ಪಕ್ಷಾಂತರೋಕ್ತೈರಪಿ ||೩೪||

ತಾತ್ಪರ್ಯ :

ಸುತ್ತಳತೆಯಿಂದ ಯೋನಿಯನ್ನು (ಆಯವನ್ನು) ನಿಶ್ಚಯಿಸುವುದು ಸಾಮಾನ್ಯವಾಗಿ ಒಳ್ಳೆಯದು. ಮನೆಯ ಉದ್ದ ಮತ್ತು ಅಗಲಗಳಿಂದಲೂ, ಪಾದಮಾನ, ಚರಣ, ಅಧಿಷ್ಠಾನಗಳ ಎತ್ತರದಿಂದಲೂ, ಅಗಲದಿಂದ ಗುಣಿಸಲ್ಪಟ್ಟ ದೀರ್ಘದಿಂದಲೂ ಪ್ರತ್ಯೇಕವಾಗಿ ಅದಕ್ಕದಕ್ಕೆ ಹೇಳಿದ ಯೋನ್ಯಾದಿಗಳು ಗೃಹವಿಧಿಯಲ್ಲಿ ಕೂಡಿ ಬಂದರೆ ಪಕ್ಷಾಂತರವನ್ನು ಹೇಳಿದ್ದರೂ ಅದು ಅತ್ಯಂತ ಪ್ರಶಸ್ತ.

ವಿ.ವಿ. :

ವಾಸ್ತುವಿನಲ್ಲಿ ಯೋನಿಗೆ ಅತ್ಯಂತ ಪ್ರಾಧಾನ್ಯವಿದೆ. ವಸ್ತುವಿನ ಅಥವಾ ಮನೆಯ ಸುತ್ತಳತೆಯಿಂದ ಯೋನಿ ನಿರ್ಣಯ ಮಾಡುವುದು ಸರ್ವೇ ಸಾಮಾನ್ಯ. ಅದು ಸರಿಯೇ. ಅದಲ್ಲದೆ ಮನೆಯ ಉದ್ದ, ಅಗಲ, ಪಾದಮಾನ, ಪಾದುಕ, ಅಧಿಷ್ಠಾನಗಳ ಎತ್ತರ ಮೊದಲಾದ ಮನೆಯ ಪ್ರತ್ಯೇಕ ಪ್ರತ್ಯೇಕ ಅಂಗಾಂಗಗಳ ಅಳತೆಯ ಲೆಕ್ಕಾಚಾರದಲ್ಲಿ ಆಯಾ ಮನೆಗೆ ನಿಶ್ಚಿತವಾದ ಯೋನಿಯು ಕೂಡಿಬಂದರೆ ಬಹಳಷ್ಟು ಒಳ್ಳೆಯದೆಂದು ಶಾಸ್ತ್ರಕಾರರು ಹೇಳುತ್ತಾರೆ. ಹೆಚ್ಚಾಗಿ ಮನೆಯನ್ನು ಕಟ್ಟುವವರು ಮನೆಯ ಗರ್ಭಗೃಹಕ್ಕೆ ಆಯವನ್ನು ಅಂದರೆ ಯೋನಿಯನ್ನು ನಿರ್ಣಯಿಸುತ್ತಾರೆ. ಆ ಗರ್ಭಗೃಹದ ಸುತ್ತ ಇರುವ ಕೋಣೆಗಳಿಗೆ, ಮನೆಯ ಪಂಚಾಂಗಕ್ಕೆ, ಗೋಡೆ ಮೊದಲಾದವುಗಳಿಗೆ ಆಯವನ್ನು ನಿರ್ಣಯಿಸದೆ ಮನಬಂದ ರೀತಿಯಲ್ಲಿ ವರ್ತಿಸುತ್ತಾರೆ. ಈ ರೀತಿ ಮಾಡುವುದು ಸರಿಯಲ್ಲ. ಮನೆಯ ಪ್ರತಿಯೊಂದು ಅಂಗದಲ್ಲಿಯೂ ನಿಶ್ಚಿತ ಯೋನಿಯನ್ನು ನಿರ್ಣಯಿಸಿ ಕಾರ್ಯ ಮುಂದುವರಿಸುವುದು ಅತ್ಯಂತ ಸೂಕ್ತ ಹಾಗೂ ಕ್ಷೇಮಕರವೆಂದು ಇದರಲ್ಲಿ ಎಚ್ಚರಿಕೆಯನ್ನು ಕೊಡುತ್ತಾರೆ. ಆದುದರಿಂದ ಮನೆಯ ಪ್ರಧಾನವಾದ ಒಂದು ಕೋಣೆಗೆ ಮಾತ್ರ ಯೋನಿಯನ್ನು ಅಳವಡಿಸದೆ ಮನೆಯ ಪ್ರತಿಯೊಂದು ಭಾಗಕ್ಕೂ ಅಳತೆಯ ಲೆಕ್ಕಾಚಾರ ಹಾಕಿ ಒಂದೇ ಯೋನಿಯನ್ನು ನಿರ್ಣಯಿಸಿ ಸ್ವೀಕರಿಸುವುದು ಅತ್ಯಂತ ಸೂಕ್ತ ಹಾಗೂ ಪ್ರಶಸ್ತ.

೧೩. ಯೋನಿ ನಿರ್ಣಯ

ಶ್ಲೋಕ : ಸರ್ವಾಗಾರೇ ಪ್ರಧಾನೋತ್ತರ ಪರಿಧಿವಶಾತ್ ದೀರ್ಘವಿಸ್ತಾರತುಂಗ
ಸ್ತಂಭಾಧಿಷ್ಠಾನಗರ್ಭಾಲಯಮಿತಿ ವಿಧಯೋ ದ್ವಾರಬಿಂಬಾದಯೋಽಪಿ
ಆರೂಢಾದ್ಯುತ್ತರಂ ಚ ದ್ವಿತಲವಿಧಿ ಸಮಸ್ತಾಂಗಭೇದಾ ವಿಕಲ್ಪೇ
ನೋಕ್ತೈರಂಶೈಶ್ಚ ಕಾರ್ಯಾ ಯದಿ ನಿಕಟಗತಾ ಯೋನಿಭೇದಾಶ್ಚ ಯೋಜ್ಯಾಃ ||೩೫||

ತಾತ್ಪರ್ಯ :

ಎಲ್ಲ ಮನೆಗಳಲ್ಲಿಯೂ ಉದ್ದ, ಅಗಲ, ಎತ್ತರ, ಸ್ತಂಭ, ಅಧಿಷ್ಠಾನ, ಗರ್ಭಗೃಹ ಮೊದಲಾದವುಗಳು, ದ್ವಾರಬಿಂಬಾದಿಗಳು (ಬಾಗಿಲು ಮುಂತಾದವುಗಳು) ಆರೂಢೋತ್ತರ ಮತ್ತು ಉತ್ತರಗಳು, ಎರಡು ಮಾಳಿಗೆಯ ಎಲ್ಲ ಭಾಗಗಳು - ಇವೆಲ್ಲವುಗಳ ಅಳತೆಯನ್ನು ಪ್ರಧಾನ ಉತ್ತರದ ಪರಿಧಿಯ (ಸುತ್ತಳತೆ) ಆಧಾರದಿಂದಲೇ ನಿಶ್ಚಯಿಸಬೇಕು. ಮತಭೇದದಿಂದ ಹೇಳಿದ ಅಂಶಗಳೊಂದಿಗೂ ನಿಕಟವರ್ತಿಗಳಾದ ಯೋನಿಭೇದಗಳನ್ನು ಅಳವಡಿಸಬೇಕು.

ವಿ.ವಿ. :

ಈ ಶ್ಲೋಕದಲ್ಲಿಯೂ ಗೃಹದ ಎಲ್ಲ ಅವಯವಗಳಿಗೂ ಒಂದೇ ವಿಧದ ಯೋನಿಯನ್ನು ನಿಶ್ಚಯಿಸಬೇಕೆಂದು ಹೇಳಲಾಗಿದೆ. ಅಲ್ಲದೆ ಮನೆಗೆ ಮಾಳಿಗೆಯಿದ್ದರೆ ಅದನ್ನೂ ಕೆಳಮನೆಯ ನಿಶ್ಚಿತಯೋನಿಯ ಚೌಕಟ್ಟನೊಳಗೆ ನಿರ್ಮಿಸಬೇಕೆಂದು ಸೂಚಿಸಲಾಗಿದೆ. ಅದಕ್ಕಾಗಿ ಉತ್ತರದ ಹೊರಗಿನ ಸುತ್ತಳತೆಯನ್ನು ಆಧಾರವಾಗಿ ಯೋನಿನಿರ್ಣಯಕ್ಕೆ ತೆಗೆದುಕೊಳ್ಳಬೇಕೆಂದು ಶಾಸ್ತ್ರ ಹೇಳುತ್ತದೆ. ಮಾಳಿಗೆಯ ಗೋಡೆಯನ್ನು ಉತ್ತರದ ಮೇಲೆ ರಚಿಸುವುದರಿಂದ ಮಾಳಿಗೆಯು ಅದೇ ಉತ್ತರದ ಯೋನಿಯನ್ನು ಹೊಂದುತ್ತದೆ. ಅಲ್ಲದೆ ಮಾಳಿಗೆಯ ಗೋಡೆಗಳಿಗೆ ಆಧಾರವಾದ ಉತ್ತರವು ನೆಲಮನೆಯ ನಿಶ್ಚಿತ ಯೋನಿಯಲ್ಲಿಯೇ ಇರುವುದರಿಂದ ನೆಲಮನೆ ಮತ್ತು ಮಾಳಿಗೆ ಎರಡಕ್ಕೂ ಒಂದೇ ಯೋನಿಯನ್ನು ಸ್ವೀಕರಿಸಿದಂತಾಗುತ್ತದೆ.

ಶ್ಲೋಕ : ಗೇಹೇ ಕ್ಷೇತ್ರಫಲಂ ವಿತಾನನಿಹತಾಯಾಮಂ ವಿದುಃ ಸ್ವೇಷ್ಟದಿಕ್
ಯೋನಿರ್ಯನ್ಮಿತಿದೀರ್ಘ ವಿಸ್ತೃತಿ ವಿಧಾನಾದತ್ರ ಪೂರ್ಣೋ ಭವೇತ್
ತಾವದ್ವಿಸ್ತೃತಿದೀರ್ಘಮಾನಮಭಿಕಲ್ಪ್ಯ ಪ್ರಾಗಥೋ ನಾಹವತ್
ಸರ್ವಂ ಕಲ್ಪಯತು ವ್ಯಯಾದಿಕಮಿದಂ ತ್ವಭ್ಯಂತರ ವ್ಯಾಪಿ ಹಿ ॥೩೬॥

ತಾತ್ಪರ್ಯ :

ಉದ್ದವನ್ನು ಅಗಲದಿಂದ ಗುಣಿಸಿದಾಗ ಬರುವ ಮೊತ್ತವೇ ಕ್ಷೇತ್ರಫಲ. ನಾವು ಬಯಸಿದ ದಿಕ್ಕಿನ ಮನೆಯ ಯೋನಿಯು (ಮನೆಯ) ಉದ್ದ ಮತ್ತು ಅಗಲದ ಗಣನೆಯಿಂದ ಸಿಗುವ ಕಾರಣ ಮನೆಯ ಉದ್ದ ಮತ್ತು ಅಗಲವನ್ನು ಮೊತ್ತಮೊದಲು ನಿಶ್ಚಯಿಸಿಕೊಂಡು ಪೂರ್ಣಗೊಳಿಸಬೇಕು. ಅನಂತರ ಸುತ್ತಳತೆಯ ವಿಧಾನದಿಂದ ವ್ಯಯ ಮೊದಲಾದವುಗಳನ್ನು ಕಲ್ಪಿಸಿಕೊಳ್ಳಬೇಕು. ಈ ಕ್ರಮವು ಗೃಹದ ಒಳಗನ್ನೆಲ್ಲ ವ್ಯಾಪಿಸಿದ ವಿಷಯವಾಗಿದೆ.

ವಿ.ವಿ. :

ಈ ಮೊದಲು ಯೋನಿಯನ್ನು ಕಂಡುಹುಡುಕಲು ಸುತ್ತಳತೆಯ ಲೆಕ್ಕವನ್ನು ತೆಗೆದುಕೊಳ್ಳಲಾಗಿದೆ. ಇಲ್ಲಿ ಕ್ಷೇತ್ರಫಲದಿಂದ ಯೋನಿಯನ್ನು ಕಂಡುಹುಡುಕುವ ಕ್ರಮವನ್ನು ಹೇಳಿರುತ್ತಾರೆ. ಉದ್ದವನ್ನು ಅಗಲದಿಂದ ಗುಣಿಸಿದರೆ ಕ್ಷೇತ್ರಫಲ ಸಿಗುತ್ತದೆ. ಅದನ್ನು ಎಂಟರಿಂದ ಭಾಗಿಸಿ ಉಳಿದ ಶೇಷ ಸಂಖ್ಯೆಯು ಯೋನಿ ಸಂಖ್ಯೆಯಾಗಿದೆ. ಉದಾ : ಉದ್ದ 9 ಕೋಲು, ಅಗಲ

7 ಕೋಲು ಆದರೆ ಕ್ಷೇತ್ರಫಲ 9x7 = 63 ಕೋಲು. ಅದನ್ನು 8ರಿಂದ ಭಾಗಿಸಿದಾಗ ಶೇಷ 7. ಅಂದರೆ ಗಜಯೋನಿ. ಆದರೆ ಇಂತಹ ಸಂದರ್ಭದಲ್ಲಿ ನಾವು ಬಯಸಿದ ಯೋನಿಯ ಲೆಕ್ಕಾಚಾರಕ್ಕಾಗಿ ಮನೆಯ ಉದ್ದ ಮತ್ತು ಅಗಲವನ್ನು ಮೊದಲೇ ನಿಶ್ಚಯಿಸಿಕೊಳ್ಳಬೇಕಾಗಿದೆ.

೧೪. ವ್ಯಯದ ನಾಲ್ಕು ವಿಧ

ಶ್ಲೋಕ : ಪೂರ್ವಂ ತ್ರಿಘ್ನ ಚತುರ್ದಶಾಪ್ತಪರಿಧೇಃ ಸಾಮಾನ್ಯಮುಕ್ತೋ ವ್ಯಯೋ
ನಂದಘ್ನೇಽಷ್ಟಹತೇ ಚ ಪಂಕ್ತಿವಿಹೃತೇ ಶಿಷ್ಟೋ ವ್ಯಯೋ ವಾ ಭವೇತ್
ಸಿದ್ಧರ್ಕ್ಷೇ ವಸುಭಾಜಿತೇಽಪಿ ಚ ಚತುರ್ಧೇತಿ ವ್ಯಯಃ ಸರ್ವಥಾಽ
ಸ್ಯಾಽಲ್ಪತ್ವಂ ಪರಿಕಲ್ಪ್ಯಮಾತ್ಮಜಧನಾದೀನಾಂ ವಿನಾಶೋಽನ್ಯಥಾ ॥೩೭॥

ತಾತ್ಪರ್ಯ :

(೧)ಸುತ್ತಳತೆಯನ್ನು ಮೂರರಿಂದ ಗುಣಿಸಿ ಹದಿನಾಲ್ಕರಿಂದ ಭಾಗಿಸಿದಾಗ ಉಳಿಯುವ ಶೇಷವೇ ವ್ಯಯವೆಂದು ಈ ಮೊದಲು ಹೇಳಲಾಗಿದೆ. (೨) ಸುತ್ತಳತೆಯನ್ನು ಒಂಬತ್ತರಿಂದ ಗುಣಿಸಿ ಎಂಟರಿಂದ ಭಾಗಿಸಿದಾಗ ಉಳಿಯುವ ಶೇಷವು ವ್ಯಯವಾಗಿದೆ. (೩) ಸುತ್ತಳತೆಯನ್ನು ಒಂಬತ್ತರಿಂದ ಗುಣಿಸಿ ಹತ್ತರಿಂದ ಭಾಗಿಸಿದಾಗಲೂ ಬರುವ ಶೇಷ ಸಂಖ್ಯೆ ವ್ಯಯಸಂಖ್ಯೆಯಾಗಿದೆ. (೪) ನಿಯಮ ಪ್ರಕಾರ ಸಿದ್ಧಿಸಿದ ನಕ್ಷತ್ರ ಸಂಖ್ಯೆಯನ್ನು (ಸುತ್ತಳತೆಯನ್ನು ಎಂಟರಿಂದ ಗುಣಿಸಿ ಇಪ್ಪತ್ತೇಳರಿಂದ ಭಾಗಿಸಿದಾಗ ಉಳಿಯುವ ಶೇಷ ಸಂಖ್ಯೆ) ಎಂಟರಿಂದ ಭಾಗಿಸಿದಾಗ ಉಳಿಯುವುದೇ ವ್ಯಯ. ಹೀಗೆ ವ್ಯಯವು ನಾಲ್ಕು ವಿಧವಾಗಿರುತ್ತದೆ. ಯಾವುದೇ ವಿಧವನ್ನು ಸ್ವೀಕರಿಸಿದರೂ ವ್ಯಯವು ಆದಾಯಕ್ಕಿಂತ ಕಡಿಮೆಯಾಗಿಯೇ ಇರಬೇಕು. ಅದಕ್ಕೆ ವಿರುದ್ಧವಾದರೆ ಅರ್ಥಾತ್ ವ್ಯಯವು ಆದಾಯಕ್ಕಿಂತ ಹೆಚ್ಚಾದರೆ ಪುತ್ರನಾಶ, ಧನಾದಿಗಳ ನಾಶಗಳು ಸಂಭವಿಸುತ್ತವೆ.

ವಿ.ವಿ. :

ನಾಲ್ಕು ವಿಧದ ವ್ಯಯವನ್ನು ಕಂಡುಹಿಡಿಯುವ ಸೂಕ್ಷ್ಮಕ್ರಮ ಹೀಗಿದೆ :

೧) (ಸುತ್ತಳತೆ x 3) + 14 = ಉಳಿದ ಶೇಷವೇ ವ್ಯಯ

೨) (ಸುತ್ತಳತೆ x 9) + 8 = ಉಳಿದ ಶೇಷವೇ ವ್ಯಯ

೩) (ಸುತ್ತಳತೆ x 9) + 10 = ಉಳಿದ ಶೇಷವೇ ವ್ಯಯ

೪) (ಸುತ್ತಳತೆ x 8) + 27 = ಉಳಿದ ಶೇಷವನ್ನು ಎಂಟರಿಂದ ಭಾಗಿಸಿದಾಗ ಸಿಗುವ ಶೇಷವೇ ವ್ಯಯ

ಉದಾ : ೧. ಸುತ್ತಳತೆ 63 ಕೋ x 3 = 189

189 + 14 = 13. ಶೇಷ 7

∴ ವ್ಯಯ ಸಂಖ್ಯೆ 7

ಉದಾ : ೨. (ಸುತ್ತಳತೆ 63 ಕೋ x 9) + 8 = ಶೇಷ ಸಂಖ್ಯೆ 7 ∴ ವ್ಯಯ ಸಂಖ್ಯೆ 7

ಉದಾ : ೩. (ಸುತ್ತಳತೆ 63 ಕೋ x 9) + 10 = ಶೇಷ ಸಂಖ್ಯೆ 7 ∴ ವ್ಯಯ ಸಂಖ್ಯೆ 7

ಉದಾ : ೪. (ಸುತ್ತಳತೆ 63 ಕೋ x 8) + 27 = ಶೇಷ 18

18 + 8 = ಶೇಷ ಸಂಖ್ಯೆ 2

∴ವ್ಯಯ ಸಂಖ್ಯೆ 2

ಈ ನಾಲ್ಕು ವಿಧಗಳಲ್ಲಿ ಯಾವುದನ್ನು ಸ್ವೀಕರಿಸಿದರೂ ಆದಾಯವನ್ನು ಸ್ವೀಕರಿಸುವಾಗ ಅದಕ್ಕಿಂತ ವ್ಯಯವು ಕಡಿಮೆಯಾಗಿರಬೇಕು.

ಶ್ಲೋಕ : ಸ್ವತ್ರ್ಯಂಶೇನ ಯುತೇ ತಥೇಕ್ಷಣಹತೇ ನಾಹೇಽಷ್ಟಭಕ್ತೇ ಭವೇ -
ದಾಯೋ ವಾ ಪುನರ್ಋಕ್ಷನಿಘ್ನ ಪರಿಧೌ ದಿಗ್ದ್ವಂದ್ವ ಭಕ್ತೇ ವಯಃ
ಬಾಲತ್ವಾದಿ ವಿಶೇಷ ಮಾತ್ರಮವಗಂತವ್ಯಂ ಫಲೈಃ ಶೇಷತ -
ಸ್ತೇಷಾಮೇವ ಗತಾಬ್ದಮಾನಮಿಹ ತಾರುಣ್ಯಂ ವಯಃ ಶೋಭನಮ್ ॥೩೮॥

ತಾತ್ಪರ್ಯ :

ಸುತ್ತಳತೆಯನ್ನು ಮೂರು ಪಾಲು ಮಾಡಿ ಅದರ ಒಂದಂಶವನ್ನು ಸೇರಿಸಿ ಅದನ್ನು ಎರಡರಿಂದ ಗುಣಿಸಿ ಎಂಟರಿಂದ ಭಾಗಿಸಿದಾಗ ಉಳಿಯುವುದು ಆದಾಯವೆನಿಸುತ್ತದೆ. ಸುತ್ತಳತೆಯನ್ನು 27ರಿಂದ ಗುಣಿಸಿ 20ರಿಂದ ಭಾಗಿಸಿದಾಗ ಉಳಿಯುವ ಶೇಷ ವಯಸ್ಸು. ಭಾಗಲಬ್ಧದಿಂದ ಬಾಲತ್ವಾದಿಗಳ ವಿವರ ತಿಳಿದು ಬರುತ್ತದೆ. ಶೇಷದಿಂದ ಸಂಪೂರ್ಣವಾದ ವರ್ಷವನ್ನು ತಿಳಿಯಬೇಕು. ಬಾಲತ್ವಾದಿ ವಯಸ್ಸುಗಳ ಪೈಕಿ ತಾರುಣ್ಯವು ಶುಭಕರವಾಗಿದೆ.

ವಿ.ವಿ. :

ಈ ಶ್ಲೋಕದಲ್ಲಿ ಆದಾಯವನ್ನು ಕಂಡು ಹಿಡಿಯುವ ಇನ್ನೊಂದು ವಿಧಾನವನ್ನು ಹೇಳಲಾಗಿದೆ. ಈ ಮೊದಲು ಅಧ್ಯಾಯ ೩, ಶ್ಲೋಕ ೨೪ರಲ್ಲಿ ಒಂದು ವಿಧಾನವನ್ನು ವಿವರಿಸಲಾಗಿತ್ತು. ಉದಾಹರಣೆಗೆ

೧ನೇ ವಿಧಾನ :

ಸೂತ್ರ : (ಸುತ್ತಳತೆ x 8) + 12 = ಉಳಿಯುವ ಶೇಷ ಆದಾಯ.

ಉದಾ : (ಸುತ್ತಳತೆ 63 ಕೋ x 8) + 12 = ಶೇಷ ಶೂನ್ಯ. ಆದುದರಿಂದ ಶೇಷ ಸಂಖ್ಯೆ = 12

∴ ಆದಾಯ 12

೨ನೇ ವಿಧಾನ :

ಸೂತ್ರ : $\left\{(\text{ಸುತ್ತಳತೆ} \times 1\frac{1}{3}) \times 2\right\} \div 8$ = ಉಳಿಯುವ ಶೇಷ ಆದಾಯ.

ಉದಾ : ಸುತ್ತಳತೆ 63 ಕೋ $\div \frac{1}{3}$ = 21

= 63 + 21 = 84

= 84 x 2 = 168

= 168 ÷ 8 = ಶೇಷ ಶೂನ್ಯ

∴ ಆದಾಯ 8

ವಯಸ್ಸು :

ವಯಸ್ಸನ್ನೂ ಇದರಲ್ಲಿ ಇನ್ನೊಂದು ಬಗೆಯಲ್ಲಿ ತಿಳಿಸಲಾಗಿದೆ.

೧. ಮೊದಲನೆಯದರ ಪ್ರಕಾರ :

ಸೂತ್ರ : (ಸುತ್ತಳತೆ x 8) ÷ 27 = ಭಾಗಲಬ್ಧವೇ ವಯಸ್ಸು

ಉದಾ : (ಸುತ್ತಳತೆ63 ಕೋ x 8) ÷ 27

ಭಾಗಲಬ್ಧ = 18

= 18 ÷ 5 = 3 ಶೇಷ 3 = ಯೌವನ

೨. ಎರಡನೆಯದರ ಪ್ರಕಾರ :

ಸೂತ್ರ : (ಸುತ್ತಳತೆ x 27) ÷ 20 ಉಳಿಯುವ ಶೇಷ ವಯಸ್ಸು

ಉದಾ : ಸುತ್ತಳತೆ 63 ಕೋ x 27 = 1701

= 1701 ÷ 20 = ಶೇಷ ಸಂಖ್ಯೆ 1

= ವಯಸ್ಸು - ಬಾಲ್ಯ

ಶ್ಲೋಕ : ನಂದಘ್ನೇ ಪರಿಧೌ ಚ ಕೇವಲ ಪರೀಣಾಹೇಽಥವಾ ತ್ರಿಂಶತಾ
ಭಕ್ತೇ ತತ್ರ ವಿಕಲ್ಪಪಕ್ಷಯುಗಲೇ ಪ್ರಾಗ್ವತ್ ತಿಥಿಃ ಶಿಷ್ಯತೇ
ತ್ರಿಘ್ನೇಽಂಕಾದಿ ಹತೇಽಥವಾರ್ಣವಹೃತೇ ನಾಹೇ ದ್ವಿಜಾದ್ಯಾಃ ಕ್ರಮಾ -
ದ್ವರ್ಣಾಃ ಸ್ಯುರ್ನಿಗಮಾಹತೇ ವಸುಹತೇ ವಾಽರ್ಕಾಹೃತೇ ರಾಶಯಃ ॥೩೯॥

ತಾತ್ಪರ್ಯ :

ಪರಿಧಿಯನ್ನು (ಸುತ್ತಳತೆಯನ್ನು) ಒಂಬತ್ತರಿಂದ ಗುಣಿಸಿ ಅಥವಾ ಸುತ್ತಳತೆಯನ್ನು ಮಾತ್ರ, ಮೂವತ್ತರಿಂದ ಭಾಗಿಸಿದಾಗ ಉಳಿದ ಶೇಷವು ಎರಡೂ ಪಕ್ಷಗಳಲ್ಲಿ ಬರುವ ತಿಥಿಗಳನ್ನು ಹೇಳುತ್ತದೆ. ಸುತ್ತಳತೆಯನ್ನು ಮೂರರಿಂದ ಅಥವಾ ಒಂಬತ್ತರಿಂದ ಗುಣಿಸಿ ನಾಲ್ಕರಿಂದ ಭಾಗಿಸಿದಾಗ ಉಳಿದ ಶೇಷ ಸಂಖ್ಯೆ ಬ್ರಾಹ್ಮಣಾದಿ ವರ್ಣವನ್ನು ಹೇಳುತ್ತದೆ. ಸುತ್ತಳತೆಯನ್ನು 4ರಿಂದ ಅಥವಾ 8ರಿಂದ ಗುಣಿಸಿ 12ರಿಂದ ಭಾಗಿಸಿದಾಗ ಉಳಿಯುವ ಶೇಷಸಂಖ್ಯೆಯು ಮೇಷಾದಿರಾಶಿಸಂಖ್ಯೆಯನ್ನು ಸೂಚಿಸುತ್ತದೆ.

ವಿ.ವಿ. :

ಈ ಶ್ಲೋಕದಲ್ಲಿ ಪಕ್ಷಗಳಲ್ಲಿ ಬರುವ ತಿಥಿಗಳು, ಬ್ರಾಹ್ಮಣಾದಿ ವರ್ಣಗಳು ಮತ್ತು ರಾಶಿಗಳನ್ನು ಕಂಡು ಹಿಡಿಯುವ ಕ್ರಮವನ್ನು ಹೇಳಲಾಗಿದೆ.

ತಿಥಿ :

೧ನೇ ವಿಧಾನ :

ಸೂತ್ರ : (ಸುತ್ತಳತೆ x 9) ÷ 30 = ಉಳಿದ ಶೇಷವೇ ತಿಥಿ ಸಂಖ್ಯೆ

ಉದಾ : 63 ಕೋ x 9 = 567 ÷ 30 = ಶೇಷ, 27 = ದ್ವಾದಶಿ (ಕೃಷ್ಣ ಪಕ್ಷ)

೨ನೇ ವಿಧಾನ :

ಸೂತ್ರ : (ಸುತ್ತಳತೆ ÷ 30) = ಉಳಿದ ಶೇಷ ತಿಥಿ ಸಂಖ್ಯೆ

ಉದಾ : 63 ಕೋ ÷ 30 = ಶೇಷ 3 = ತದಿಗೆ (ಶುಕ್ಲ ಪಕ್ಷ)

ವರ್ಣ :

೧ನೇ ವಿಧಾನ :

ಸೂತ್ರ : (ಸುತ್ತಳತೆ x 3) ÷ 4 = ಶೇಷ ಸಂಖ್ಯೆ ಬ್ರಾಹ್ಮಣಾದಿ ವರ್ಣ ಸಂಖ್ಯೆ

ಉದಾ : 63 ಕೋ x 3 = 189 ÷ 4 = ಶೇಷ - 1 - ಬ್ರಾಹ್ಮಣ ವರ್ಣ

೨ನೇ ವಿಧಾನ :

ಸೂತ್ರ : (ಸುತ್ತಳತೆ x 9) ÷ 4 = ಶೇಷ ಸಂಖ್ಯೆ ಬ್ರಾಹ್ಮಣಾದಿ ವರ್ಣಸಂಖ್ಯೆ

ಉದಾ : 63 ಕೋ x 9 = 567 ÷ 4 = ಶೇಷ 3 = ವೈಶ್ಯ ವರ್ಣ

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವರ್ಣಗಳ ಸಂಖ್ಯೆಯ ಗಣನೆಯನ್ನು ಬ್ರಾಹ್ಮಣದಿಂದ ಪ್ರಾರಂಭಿಸಬೇಕು.

ರಾಶಿ :

೧ನೇ ವಿಧಾನ :

ಸೂತ್ರ : (ಸುತ್ತಳತೆ x 4) ÷ 12 = ಶೇಷ ಸಂಖ್ಯೆಯು ಮೇಷಾದಿ ರಾಶಿ ಸಂಖ್ಯೆ

ಉದಾ : 63 ಕೋ x 4 = 252

= 252 ÷ 12 = 21 - ಇಲ್ಲಿ ಶೇಷವಿಲ್ಲದಿರುವುದರಿಂದ ಭಾಜಕ ಸಂಖ್ಯೆಯಾದ 12ನ್ನು ಸ್ವೀಕರಿಸಬೇಕು. ಭಾಜಕ ಸಂಖ್ಯೆ 12 ಆದುದರಿಂದ 12ನೇ ರಾಶಿ ಮೀನವಾಗಿದೆ.

೨ನೇ ವಿಧಾನ :

ಸೂತ್ರ : (ಸುತ್ತಳತೆ x 8) ÷ 12 = ಶೇಷ ಸಂಖ್ಯೆಯು ಮೇಷಾದಿ ರಾಶಿ ಸಂಖ್ಯೆ

ಉದಾ : (63 ಕೋ x 8) ÷ 12

63 x 8 = 504 ÷ 12 = ಶೇಷ ಇಲ್ಲ. ಆದುದರಿಂದ ಮೇಲಿನಂತೆಯೇ ಮೀನರಾಶಿ.

ಶ್ಲೋಕ ; ಕೇವಲ ನಾಹೇಽದ್ರಿಹೃತೇ ತ್ರಿಘ್ನೇ ನಾಹೇ ಚ ಶಿಷ್ಯತೇ ವಾರಃ
ದ್ವಿಘ್ನೇ ವಾ ತ್ರಿಘ್ನೇ ವಾ ನಾಹೇ ನೃಪಭಾಜಿತೇ ಧ್ರುವಾದ್ಯಾಃ ಸ್ಯುಃ ॥೪೦॥

ತಾತ್ಪರ್ಯ :

ಸುತ್ತಳತೆಯನ್ನು 7 ರಿಂದ ಭಾಗಿಸಿದಾಗ ಅಥವಾ ಸುತ್ತಳತೆಯನ್ನು ಮೂರರಿಂದ ಗುಣಿಸಿ ಏಳರಿಂದ ಭಾಗಿಸಿದಾಗ ಉಳಿಯುವ ಶೇಷವೇ ವಾರ. (ಆ ಶೇಷ ಸಂಖ್ಯೆಯೇ ಆದಿತ್ಯಾದಿ ವಾರವನ್ನು ಹೇಳುತ್ತದೆ) ಸುತ್ತಳತೆಯನ್ನು ಎರಡು ಅಥವಾ ಮೂರರಿಂದ ಗುಣಿಸಿ ಹದಿನಾರರಿಂದ ಭಾಗಿಸಿದಾಗ ಉಳಿಯುವುದು ಧ್ರುವವನ್ನು ಹೇಳುವ ಸಂಖ್ಯೆಯಾಗಿದೆ.

ವಿ.ವಿ. :

ಈ ಶ್ಲೋಕದಲ್ಲಿ ವಾರ ಮತ್ತು ಧ್ರುವಾದಿಗಳನ್ನು ಗೊತ್ತು ಮಾಡುವ ಕ್ರಮವನ್ನು ಹೇಳುತ್ತಾರೆ.

ವಾರ :

೧ನೇ ವಿಧಾನ :

ಸೂತ್ರ : ಸುತ್ತಳತೆ + 7 = ಶೇಷ ಸಂಖ್ಯೆಯೇ ವಾರ ಸಂಖ್ಯೆ

ಉದಾ : 63 ಕೋ + 7 = ಶೇಷ ಇಲ್ಲದುದರಿಂದ ವಾರದ ಅಂತಿಮ ಸಂಖ್ಯೆ 7 = ಶನಿವಾರ

೨ನೇ ವಿಧಾನ :

ಸೂತ್ರ : (ಸುತ್ತಳತೆ x 3) + 7 = ಶೇಷ ಸಂಖ್ಯೆಯೇ ವಾರ ಸಂಖ್ಯೆ

ಉದಾ : 63 ಕೋ x 3 = 189.

= 189 + 7 = ಶೇಷ ಇಲ್ಲದುದರಿಂದ ವಾರದ ಅಂತಿಮ ಸಂಖ್ಯೆ 7.

ಆದುದರಿಂದ ವಾರ - ಶನಿವಾರ

ಧ್ರುವಾದಿಗಳು :

೧ನೇ ವಿಧಾನ :

ಸೂತ್ರ : (ಸುತ್ತಳತೆ x 2) + 16 = ಶೇಷ ಸಂಖ್ಯೆಯೇ ಧ್ರುವ ಸಂಖ್ಯೆ

ಉದಾ : 63 x 2 = 126

= 126 + 16 = ಶೇಷ ಸಂಖ್ಯೆ - 14 = ಧ್ರುವಾದಿಗಳಲ್ಲಿ 14ನೆಯದು ಆಕ್ರಂದ

೨ನೇ ವಿಧಾನ :

ಸೂತ್ರ : (ಸುತ್ತಳತೆ x 3) + 16 = ಶೇಷ ಸಂಖ್ಯೆಯೇ ಧ್ರುವ ಸಂಖ್ಯೆ

ಉದಾ : 63 x 3 = 189

= 189 + 16 = ಶೇಷ ಸಂಖ್ಯೆ - 13 = ಧ್ರುವಾದಿಗಳಲ್ಲಿ 13ನೆಯದು ಕ್ಷಯ

(ಧ್ರುವಾದಿಗಳ ಸಂಖ್ಯೆಯನ್ನು ಮುಂದಿನ ಶ್ಲೋಕದ ಅಡಿಯಲ್ಲಿ ಕೊಡಲಾಗಿದೆ.)

೧೫. ಧ್ರುವಾದಿಗಳು

ಶ್ಲೋಕ : ಕ್ಷೇತ್ರಫಲೇ ವ್ಯಯಯುಕ್ತೇ ನೃಪಭಕ್ತೇ ವಾ ಧ್ರುವಾದಯಃ ಶಿಷ್ಟಾಃ
ಧ್ರುವ ಧಾನ್ಯ ಜಯವಿನಾಶಾಃ ಖರ ಕಾಂತ ಮನಃಪ್ರಸಾದ ಸುಮುಖತ್ವಂ ||೪೧||
ಸೌಮ್ಯತಾಸೌಮ್ಯತ್ವೇ ವಿರೋಧ ವಿತ್ತೋದ್ಭವ ಕ್ಷಯಾಕ್ರಂದಾಃ
ವೃದ್ಧಿಜಯೌ ಚ ಕ್ರಮಶಃ ಸಂಜ್ಞಾತುಲ್ಯಂ ಫಲಂ ಭವೇದೇಷಾಮ್ ||೪೨||

ತಾತ್ಪರ್ಯ :

ಕ್ಷೇತ್ರಫಲ (ಉದ್ದxಅಗಲ)ದ ಸಂಖ್ಯೆಗೆ ವ್ಯಯದ ಸಂಖ್ಯೆಯನ್ನು ಕೂಡಿಸಿ ಬಂದುದನ್ನು 16ರಿಂದ ಭಾಗಿಸಿದಾಗ ಉಳಿಯುವ ಶೇಷವೇ ಧ್ರುವ ಸಂಖ್ಯೆ. ಧ್ರುವಾದಿಗಳು ಹದಿನಾರು ವಿಧ. (೧) ಧ್ರುವ (ಸ್ಥಿರ), (೨) ಧಾನ್ಯ (೩) ಜಯ (೪) ವಿನಾಶ (೫) ಖರ (ಕಠಿಣ) (೬) ಕಾಂತ (ಮನೋಹರ, ಸುಖದಾಯಕ) (೭) ಮನಃಪ್ರಸಾದ (ಮನಃಸಂತೋಷ) (೮) ಸುಮುಖತ್ವ (೯) ಸೌಮ್ಯತ್ವ (೧೦) ಅಸೌಮ್ಯತ್ವ (ಒರಟುತನ) (೧೧) ವಿರೋಧ (೧೨) ವಿತ್ತೋದ್ಭವ (೧೩) ಕ್ಷಯ

(೧೪) ಆಕ್ರಂದ (ಗೋಳಾಟ) (೧೫) ವೃದ್ಧಿ ಮತ್ತು (೧೬) ಜಯ. ಈ ಹದಿನಾರು ಧ್ರುವಾದಿಗಳು ಅನುಕ್ರಮವಾಗಿ ಇರುವವುಗಳು. ಅಲ್ಲದೆ, ಅವುಗಳ ಹೆಸರುಗಳೇ ಹೇಳುವಂತೆ, ಅವುಗಳು ಹೆಸರಿಗೆ ಅನುಗುಣವಾದ ಆಯಾಯ ಫಲಗಳನ್ನು ಕೊಡುತ್ತವೆ.

ವಿ.ವಿ. :

(೧) ಧ್ರುವ, (೨) ಧಾನ್ಯ (೩) ಜಯ (೪) ಕಾಂತ (೫) ಮನಃಪ್ರಸಾದ (೬) ಸುಮುಖತ್ವ (೭) ಸೌಮ್ಯತ್ವ (೮) ವಿತ್ತೋದ್ಭವ (೯) ವೃದ್ಧಿ ಮತ್ತು (೧೦) ಜಯ - ಇವುಗಳು ಒಳ್ಳೆಯ ಫಲವನ್ನು ಕೊಡುವವುಗಳಾಗಿವೆ.

ಕ್ಷೇತ್ರಫಲವನ್ನು ಕಂಡು ಹಿಡಿಯುವುದು

ಸೂತ್ರ : ಕ್ಷೇತ್ರ ಫಲ = ಉದ್ದ x ಅಗಲ

ಉದಾ : 16 ಕೋ. ಉದ್ದ x 4 ಕೋ. ಅಗಲ = <u>64 ಕೋಲು ಕ್ಷೇತ್ರಫಲ.</u>

ಧ್ರುವಾದಿಗಳನ್ನು ಗೊತ್ತುಮಾಡುವ ಕ್ರಮ.

ಸೂತ್ರ : (ಕ್ಷೇತ್ರಫಲ + ವ್ಯಯ) ÷ 16 = ಉಳಿದ ಶೇಷ ಸಂಖ್ಯೆ ಧ್ರುವಾದಿಗಳ ಸಂಖ್ಯೆ.

ಉದಾ : ಕ್ಷೇತ್ರಫಲ64 ಕೋ + ವ್ಯಯ 7 = 71

71 ÷ 16 = 4 ಭಾಗಲಬ್ಧ, 7 ಶೇಷ.

ಶೇಷ ಏಳು ಆದುದರಿಂದ ಧ್ರುವಾದಿಗಳಲ್ಲಿ ಏಳನೆಯದು ಮನಃಪ್ರಸಾದ.

ಇತಿ ಮನುಷ್ಯಾಲಯಚಂದ್ರಿಕಾಯಾಂ ಮಾನಭೇದ ಯೋನ್ಯಾಯವ್ಯ-
ಯಾದಿನಿರ್ಣಯೋ ನಾಮ ತೃತೀಯೋಧ್ಯಾಯಃ

ತಾತ್ಪರ್ಯ :

ಮನುಷ್ಯಾಲಯ ಚಂದ್ರಿಕೆಯಲ್ಲಿ ಮಾನಭೇದ, ಯೋನಿ, ಆಯ, ವ್ಯಯಾದಿಗಳ ನಿರ್ಣಯವೆಂಬ ಮೂರನೆಯ ಅಧ್ಯಾಯವು ಮುಗಿದುದು.

ಅಥ ಚತುರ್ಥೋಽಧ್ಯಾಯಃ

ನಾಲ್ಕನೆಯ ಅಧ್ಯಾಯ - ಮನೆಗಳ ಇಷ್ಟದೀರ್ಘ ಪರಿಣಾಹ ದೀರ್ಘ ವಿಸ್ತಾರ ಶಾಲಾಭೇದಾದಿ ನಿರ್ಣಯ

೧. ಶಾಲಾ ವಿಧಾನ

ಶ್ಲೋಕ : ಸ್ವಾಭೀಷ್ಟಾಲಯದೀರ್ಘಮಂಕಣವಿಧಿಂ ತೇಷಾಂ ಪೃಥಙ್ನಾಹತೋ
ಯೋನ್ಯಾಯರ್ಕ್ಷವಯೋವ್ಯಯಾದಿ ಶುಭದಂ ಸರ್ವಪ್ರಕಾರಾದಪಿ
ಸಂಪಾದ್ಯಾಥ ಗೃಹೇಷ್ಟದೀರ್ಘಗುಣವಿಸ್ತಾರಾದಿ ಭೇದಾನ್ ಪೃಥಕ್
ದೀರ್ಘವ್ಯಾಸಮಿತಿಂ ಕರೋತು ಚ ಯಥಾತ್ರಾಲ್ಪಾಂತರಾಲಂ ಸುಧೀಃ ॥೧॥

ತಾತ್ಪರ್ಯ :

ನಮಗೆ ಸಮ್ಮತವಾದ (ನಾವು ಬಯಸಿದ) ದೀರ್ಘ ಮತ್ತು ಅಂಗಳದ ವಿಸ್ತಾರದೊಂದಿಗೆ ಆಯಾಯ ಮನೆಯ ಸುತ್ತಳತೆಗೆ (ಪರಿಧಿ) ಶುಭಕರವಾದ ಯೋನಿ, ಆದಾಯ, ನಕ್ಷತ್ರ, ವಯಸ್ಸು, ವ್ಯಯಾದಿಗಳನ್ನು ಸ್ವೀಕರಿಸಬೇಕು. ಆದುದರಿಂದ ಸೂಕ್ಷ್ಮಮತಿಯಾದ ಶಿಲ್ಪಿಯು ಮನೆಯ ಆವಾರ ಅಥವಾ ಮೊಗಸಾಲೆಯನ್ನು ಇಷ್ಟದೀರ್ಘಕ್ಕೆ ಮತ್ತು ಗುಣಾಂಶಕ್ಕೆ ಅನುಗುಣವಾಗಿ ಯೋಜಿಸಿಕೊಂಡು ಮನೆಯ ಉದ್ದ ಮತ್ತು ಅಗಲವನ್ನು ನಿಶ್ಚಯಿಸಬೇಕು.

ವಿ.ವಿ. :

ಮನೆಯನ್ನು ಕಟ್ಟಿಸುವವನು ತನ್ನ ಅನುಕೂಲಕ್ಕೆ ತಕ್ಕಂತೆ ಮನೆಯ ಉದ್ದವನ್ನು ತನಗೆ ಇಷ್ಟವಾದ ರೀತಿಯಲ್ಲಿ ಮೊದಲು ನಿಶ್ಚಯಿಸಬೇಕು. ಅನಂತರ ಅದಕ್ಕೆ ಅನುಗುಣವಾದ ಶುಭಕರವಾದ ಯೋನಿ, ನಕ್ಷತ್ರ, ವಯಸ್ಸು ಮೊದಲಾದವುಗಳನ್ನು ನಿಶ್ಚಯಿಸಬೇಕು. ಹೀಗೆ ಮನೆಯ ದೀರ್ಘತ್ವವನ್ನು ಮೊತ್ತಮೊದಲು ಗೊತ್ತುಮಾಡಿಕೊಂಡರೆ ಮುಂದಿನ ಕೆಲಸ ಸುಲಭವಾಗುತ್ತದೆ. ಅದಕ್ಕಾಗಿ ಇಲ್ಲಿ ಇಷ್ಟದೀರ್ಘವಿಧಿಯನ್ನು ಸೂಚಿಸಲಾಗಿದೆ. ಇಷ್ಟದೀರ್ಘವೆಂದರೆ ಮನೆಯ ಯಜಮಾನನು ತನ್ನ ಅಪೇಕ್ಷೆಯಂತೆ ಗೊತ್ತು ಮಾಡಿದ ದೀರ್ಘವೆಂದು ಅರ್ಥ. ಇಲ್ಲಿ ಇಷ್ಟದೀರ್ಘದ ಉಲ್ಲೇಖದಿಂದ ಮನೆಯ ಆಕಾರವನ್ನು ನಿರ್ದೇಶಿಸಿದಂತಾಗುತ್ತದೆ. ಈ ದೀರ್ಘ ಶಬ್ದ ಆಯತಾಕಾರಕ್ಕೆ ಹೆಚ್ಚು ಒತ್ತು ಕೊಡುತ್ತದೆ. ಮನೆಗಳನ್ನು ಆಯತಾಕಾರದಲ್ಲಿ ನಿರ್ಮಿಸುವುದೇ ಹೆಚ್ಚು ಬಳಕೆಯಲ್ಲಿದೆ. ಚೌಕಾಕಾರದ ಮನೆಗಿಂತ ಆಯತಾಕಾರದ ಮನೆಯಲ್ಲಿ ಗಾಳಿ, ಬೆಳಕುಗಳ ಸಂಚಾರವು ಅಧಿಕವಾಗಿ ಅದು ಹಿತಕರವೆನಿಸಿ ರೂಢಿಗೆ ಬಂದಿದೆ.

ಶ್ಲೋಕ : ಇಷ್ಟಾದ್ದೀರ್ಘಾತ್ ಸರ್ವಧಾಮ್ನಾಂ ಚ ನಾಹೋ
ವಿಸ್ತಾರೋಽಸ್ಮಾದ್ ವಿಸ್ತೃತೇಃ ಪಾದಮಾನಮ್
ತಸ್ಮಾನ್ಮಾಸೂರಂ ಚ ತಚ್ಛೇಷತಃ ಸ್ಯಾತ್
ಸ್ತಂಭಃ ಸ್ತಂಭಾದ್ವಿಸ್ತೃತಿಶ್ಚೋತ್ತರಾಣಾಮ್ ॥೨॥

ತಾತ್ಪರ್ಯ :

(ಯಜಮಾನನು) ಬಯಸಿದ ಉದ್ದದಿಂದ (ಮನೆಯ ಉದ್ದ) ಎಲ್ಲ ಮನೆಗಳ ಸುತ್ತಳತೆ (ಪರಿಧಿ) ಸಿಗುತ್ತದೆ. ಸುತ್ತಳತೆಯಿಂದ ಅಗಲವೂ, ಅಗಲದಿಂದ ಮನೆಯ ಎತ್ತರವೂ (ಪಂಚಾಂಗದ ಮೇಲು ಬದಿಯಿಂದ ಉತ್ತರದ ಕೆಳಬದಿಯ ವರೆಗಿನ ಎತ್ತರ = ಪಾದಮಾನ). ಎತ್ತರದಿಂದ ಪಂಚಾಂಗವೂ (ಪಂಚಾಂಗದ ಎತ್ತರ), ಅದರ ಶೇಷದಿಂದ ಗೋಡೆಯ ಎತ್ತರವೂ (ಸ್ತಂಭ) ಸ್ತಂಭದ ಎತ್ತರದಿಂದ ಉತ್ತರಗಳ ಅಗಲವೂ ಲಭಿಸುತ್ತವೆ.

ಶ್ಲೋಕ : ತತ್ತದುತ್ತರ ವಿಸ್ತಾರಾಲ್ಲುಪಾನೀಪ್ರಾದಿವಿಸ್ತೃತಿ:
ಉತ್ತರಾದೇರ್ಘನಂ ತದ್ವದ್ವಿಸ್ತಾರಾದೇವ ಕಲ್ಪ್ಯತೇ ॥೩॥

ತಾತ್ಪರ್ಯ :

ಆಯಾ ಉತ್ತರದ ಅಗಲದಿಂದ ಪಕಾಸು, ಸೂರುಪಕಾಸು ಮೊದಲಾದವುಗಳ ಅಗಲವನ್ನೂ ಅದೇ ರೀತಿ ಆ ಪಕಾಸಿನ ಅಗಲದಿಂದ ಉತ್ತರದ ದಪ್ಪವನ್ನೂ ಕಲ್ಪಿಸಬೇಕು.

ವಿ.ವಿ. :

ಮೇಲಿನ ೨ ಮತ್ತು ೩ ನೆಯ ಶ್ಲೋಕಗಳಲ್ಲಿ ಮನೆಯ ಉದ್ದದಿಂದ ಹಿಡಿದು ಉತ್ತರದ ದಪ್ಪದವರೆಗೆ ಇರುವ ಗೃಹವಾಸ್ತುವಿನ ಅಂಗಗಳಿಗೆ ಪರಸ್ಪರವಾಗಿ ಅತಿ ನಿಕಟ ಸಂಬಂಧವಿದೆಯೆಂಬುದನ್ನು ವಿವರಿಸಲಾಗಿದೆ. ಮಾತ್ರವಲ್ಲ, ಗೃಹದ ಉದ್ದವನ್ನು ತೆಗೆದುಕೊಂಡು ಉತ್ತರದ ದಪ್ಪದವರೆಗಿನ ಎಲ್ಲ ಅಂಗಾಂಗಗಳ ರಚನಾಪ್ರಮಾಣದ ಸಂಬಂಧವನ್ನು ಇಲ್ಲಿ ತಿಳಿಸಲಾಗಿದೆ. ಆ ಸಂಬಂಧ ಸೂತ್ರವನ್ನು ಈ ಕೆಳಗಿನಂತೆ ಸೂಚಿಸಬಹುದಾಗಿದೆ.

೧. ಮನೆಯ ಉದ್ದ (ಇಷ್ಟದೀರ್ಘ-ಮನೆ ಕಟ್ಟಿಸುವವನಿಗೆ ಬೇಕಾದಂತೆ)
↓
೨. ಸುತ್ತಳತೆ
↓
೩. ಅಗಲ
↓
೪. ಎತ್ತರ (ಉತ್ತರದ ವರೆಗಿನ ಎತ್ತರ)
↓
೫. ಪಂಚಾಂಗ (ಅಧಿಷ್ಠಾನ)ದ ಎತ್ತರ
↓
೬. ಸ್ತಂಭದ ಎತ್ತರ
↓
೭. ಉತ್ತರದ ಅಗಲ
↓
೮. ಪಕಾಸಿನ ಅಗಲ
↓
೯. ಉತ್ತರದ ದಪ್ಪ

ಈ ಸೂತ್ರ ಗೊತ್ತಿದ್ದರೆ ಮೇಲೆ ಹೇಳಿದ ಒಂಬತ್ತು ಗೃಹಾಂಗಗಳ ಲೆಕ್ಕಾಚಾರವನ್ನು ಸುಲಭದಲ್ಲಿ ಮಾಡಬಹುದಾಗಿದೆ. ಮನೆಗಳು ಚೌಕಾಕಾರದಲ್ಲಿ ಅಥವಾ ವಿಶೇಷವಾಗಿ ಆಯತಾಕಾರದಲ್ಲಿ ಇರುವುದೇ ಹೆಚ್ಚು ಅನುಕೂಲ. ನಮಗೆ ಇಷ್ಟಬಂದಂತೆ ಮನೆಯ ಉದ್ದವನ್ನು ನಿಶ್ಚಯಿಸಬಹುದೆಂಬ ಇಲ್ಲಿನ ನಿಯಮವಿರುವುದರಿಂದ ಉದ್ದವನ್ನು ಮೊದಲು ಬೇಕಾದಂತೆ ನಿಶ್ಚಯಿಸಿ ಅನಂತರ ಅನುಕೂಲವಾದ ಯೋನಿಯು ಸಿಗುವಂತಾಗಲು ಅಗಲವನ್ನು ಹೆಚ್ಚು ಕಡಿಮೆಗೊಳಿಸುವ ಸ್ವಾತಂತ್ರ್ಯ ಸಿಕ್ಕಿದುದರಿಂದ ಬಹಳಷ್ಟು ಪ್ರಯೋಜನ ಸಿಗುವಂತಾಗಿದೆ.

೨. ಇಷ್ಟದೀರ್ಘದ ಲೆಕ್ಕಾಚಾರ

ಶ್ಲೋಕ : ಷಡ್ ಹಸ್ತಾದಿ ನಿಜೇಷ್ಟದೀರ್ಘಕರಸಂಖ್ಯಾನೇಽಷ್ಟನಿಘ್ನೇ ಸ್ವದಿಕ್
ಯೋನ್ಯಾಢ್ಯೇ ಸತಿ ತತ್ರಿಭಾಗ ಇಹ ತದ್ಗೇಹಸ್ಯ ನಾಹೋ ಭವೇತ್
ವ್ಯತ್ಯಾಸಕ್ರಿಯಯಾ ಭವೇದಪಿ ಚ ತದ್ದೀರ್ಘೋಽಥ ನಾಹೇಽರ್ಧಿತೇ
ದೀರ್ಘೋನೇ ಪರಿಶಿಷ್ಯತೇಽತ್ರ ವಿತತಿಃ ಸರ್ವತ್ರ ಮರ್ತ್ಯಾಲಯೇ ॥೪॥

ತಾತ್ಪರ್ಯ :

ಆರು ಕೋಲಿನಿಂದ ಪ್ರಾರಂಭಿಸಿ ಇಷ್ಟದೀರ್ಘಸಂಖ್ಯೆಯನ್ನು ಎಂಟರಿಂದ ಗುಣಿಸಿ ಆಯಾ ದಿಕ್ ಯೋನಿಯ ಸಂಖ್ಯೆಯನ್ನು ಸೇರಿಸಿ ಬಂದ ಸಂಖ್ಯೆಯ ಮೂರನೇ ಒಂದು ಭಾಗವೇ ನಾವು ಬಯಸಿದ ಮನೆಯ ಸುತ್ತಳತೆಯಾಗುತ್ತದೆ. ಇದೇ ಕ್ರಮವನ್ನು ವ್ಯತ್ಯಾಸಗೊಳಿಸಿದಾಗ (ವಿರುದ್ಧಕ್ರಿಯೆ) ಮನೆಯ ಉದ್ದ ಸಿಗುತ್ತದೆ. ಮನುಷ್ಯಾಲಯಗಳಲ್ಲಿ ಎಲ್ಲ ಕಡೆ ಸುತ್ತಳತೆಯನ್ನು ಎರಡು ಸಮಭಾಗ ಮಾಡಿ ಆ ಒಂದು ಭಾಗದ ಅಳತೆಯಿಂದ ಬಯಸಿದ ಉದ್ದವನ್ನು (ಇಷ್ಟದೀರ್ಘ) ಕಳೆದರೆ ಮನೆಯ ಅಗಲ ಸಿಗುತ್ತದೆ.

ವಿ.ವಿ. :

ಸೂತ್ರ : (ಇಷ್ಟದೀರ್ಘ ಸಂಖ್ಯೆ x 8 + ದಿಕ್ ಯೋನಿ ಸಂಖ್ಯೆ) + $\frac{1}{3}$

ಇಷ್ಟದೀರ್ಘ ಸಂಖ್ಯೆ - 10 ಕೋ. ಎಂದಿರಲಿ

10 x 8 = 80

80 + ಯೋನಿ ಸಂಖ್ಯೆ (ಧ್ವಜ) 1 = 81

81 + $\frac{1}{3}$ = 27 ಕೋಲು

∴ ಸುತ್ತಳತೆ 27 ಕೋಲು

ಇದರ ವಿರುದ್ಧ ಕ್ರಿಯೆಗೆ ಉದಾ : 27 ಕೋ. x 3 = 81

81— ಯೋನಿಸಂಖ್ಯೆ 1 (ಧ್ವಜ) = 80

80 + 8 = 10 ಕೋ. ಉದ್ದ

ಸೂತ್ರ : (ಸುತ್ತಳತೆ ÷ 2) - ಇಷ್ಟದೀರ್ಘ = ಅಗಲ.

ಅಗಲಕ್ಕೆ ಉದಾ : ಸುತ್ತಳತೆ - 27 ಕೋ. ಎಂದಿರಲಿ

27 ÷ 2 = 13ಕೋ. - 12 ಅಂ.

13 ಕೋ. 12 ಅಂ — ಇಷ್ಟದೀರ್ಘಕೋಲು 10 = 3 ಕೋ. 12 ಅಂ.

∴ 3 ಕೋ. 12 ಅಂ. ಅಗಲ.

ತಾಳೆ : ಉದ್ದ 10 ಕೋ
ಅಗಲ 3 ಕೋ 12 ಅಂ } x 2 = 27 ಕೋ. ಸುತ್ತಳತೆ

ಶ್ಲೋಕ : ಸ್ವಾಭೀಷ್ಟದೀರ್ಘಹಸ್ತೇ ದ್ವಿಘ್ನೇ ಸತಿ ತತ್ರಿಭಾಗಸಂಯುಕ್ತೇ
ಸ್ವಾಭೀಷ್ಟಯೋನಿಸಂಖ್ಯಾತ್ರ್ಯಂಶಯುತೇ ನಾಹ ಇತಿ ಚ ಸಂಭವತಿ ॥೫॥

ತಾತ್ಪರ್ಯ :

ಇಷ್ಟದೀರ್ಘದ ಕೋಲಿನ ಸಂಖ್ಯೆಯನ್ನು ಎರಡರಿಂದ ಗುಣಿಸಿ ಬಂದ ಸಂಖ್ಯೆಗೆ ಆ ಸಂಖ್ಯೆಯ ಮೂರನೇ ಒಂದು ಭಾಗವನ್ನು ಕೂಡಿಸಬೇಕು. ಅಲ್ಲದೆ ಹಾಗೆ ಕೂಡಿಸಿ ಬಂದ ಸಂಖ್ಯೆಗೆ ಬಯಸಿದ ಯೋನಿ ಸಂಖ್ಯೆಯ ಮೂರನೇ ಒಂದು ಅಂಶವನ್ನು ಸೇರಿಸಿದಾಗ ಮನೆಯ ಸುತ್ತಳತೆ ಸಿಗುತ್ತದೆ.

ವಿ.ವಿ. :

ಈ ಶ್ಲೋಕದಲ್ಲಿ ಹೇಳಿದ ಲೆಕ್ಕಾಚಾರ ಒಂದು ವಿಧದಲ್ಲಿ ಮೇಲೆ ಶ್ಲೋ.೪ರಲ್ಲಿ ಹೇಳಿದುದರ ಮತ್ತೊಂದು ರೂಪ.

ಉದಾ : ಇಷ್ಟದೀರ್ಘ 10 ಕೋ. ಎಂದು ತಿಳಿಯೋಣ.

ಹಾಗಾದರೆ 10 ಕೋ x 2 = 20


$20 + \frac{20}{3}$ = 26 ಕೋ. 16 ಅಂ.

ಯೋನಿ ಧ್ವಜ ಎಂದಿರಲಿ. ಅದರ ಸಂಖ್ಯೆ - 1

ಯೋನಿ ಸಂಖ್ಯೆಯ 1/3 ಅಂದರೆ 8 ಅಂ.

26 ಕೋ. 16 ಅಂ. + ಯೋನಿ ಸಂಖ್ಯೆಯ 1/3 (8 ಅಂ.) = 27 ಕೋ.

= <u>ಸುತ್ತಳತೆ 27 ಕೋ.</u>



= 27 ಕೋ. ಸುತ್ತಳತೆ

೩. ಚತುರಶ್ರ, ಪಾದಾಧಿಕ, ಅರ್ಧಾಧಿಕ - ಇತ್ಯಾದಿಗಳ ವಿಚಾರ

ಶ್ಲೋಕ : ನಾಹಾಂಘ್ರ್ಯಂಶೇನ ದೀರ್ಘೋ ವಿತತಿರಪಿ ಭವೇತ್ ತುಲ್ಯವೇದಾಶ್ರಗೇಹೇ
ನಾಹಾರ್ಧೇ ನಂದಭಕ್ತೇ ವಿತತಿರುದಧಿಭಾಗೈಶ್ಚ ದೀರ್ಘೋ ವಿಶಿಷ್ಟೈಃ
ಸಃ ಸ್ಯಾತ್ ಪಾದಾಧಿಕೋಽರ್ಧಾಧಿಕ ಇಹ ಪರಿಣಾಹೇಽರ್ಧಿತೇ ದಿಗ್‌ವಿಭಕ್ತೇ
ಷಡ್ಭಿರ್ದೀರ್ಘಶ್ಚತುರ್ಭಿರ್ವಿತತಿರಿತಿ ಸುರಾಗಾರಯೋಗ್ಯಾಸ್ತ್ರಯೋಽಮೀ ॥೬॥

ತಾತ್ಪರ್ಯ :

ಚತುರಶ್ರ ಗೃಹಗಳ (ಚಚ್ಚೌಕದ ಮನೆ)ಲ್ಲಿ ಉದ್ದ ಮತ್ತು ಅಗಲಗಳು ಪ್ರತಿಯೊಂದು ಸುತ್ತಳತೆಯ ನಾಲ್ಕನೆಯ ಒಂದಂಶವಾಗಿದೆ. ಸುತ್ತಳತೆಯ ಅರ್ಧವನ್ನು ಒಂಬತ್ತರಿಂದ ಭಾಗಿಸಿದಾಗ ನಾಲ್ಕು ಪಾಲು ಅಗಲವನ್ನು ಸೂಚಿಸುತ್ತದೆ. ಉಳಿದುದು (ಉಳಿದ ಐದು ಅಂಶ) ಉದ್ದವನ್ನು ಹೇಳುತ್ತದೆ. ಅದಕ್ಕೆ ಪಾದಾಧಿಕ ಎನ್ನುತ್ತಾರೆ. ಸುತ್ತಳತೆಯ ಅರ್ಧವನ್ನು ಹತ್ತರಿಂದ ಭಾಗಿಸಿದಾಗ ಬರುವ ಆರು ಪಾಲು ಉದ್ದವಾಗಿದೆ. ನಾಲ್ಕು ಪಾಲು ಅಗಲವಾಗಿದೆ. ಇದು ಅರ್ಧಾಧಿಕವೆನಿಸುತ್ತದೆ. ಈ ಮೂರು ಅಳತೆಗಳು ದೇವಾಲಯ ರಚನೆಗೆ ಯೋಗ್ಯವಾಗಿದೆ.

ವಿ.ವಿ. :

ಇಲ್ಲಿ (೧) ಚತುರಶ್ರ (೨) ಪಾದಾಧಿಕ ಮತ್ತು (೩) ಅರ್ಧಾಧಿಕ ಎಂಬ ಮೂರು ವಿಧದ ಅಳತೆಗಳನ್ನು ಹೇಳಲಾಗಿದೆ.

೧. ಚತುರಶ್ರ :

ಚತುರಶ್ರ ಗೃಹಗಳಲ್ಲಿ ಉದ್ದ ಮತ್ತು ಅಗಲಗಳು ಸುತ್ತಳತೆಯ ನಾಲ್ಕನೆಯ ಒಂದು ಅಂಶವಾಗಿದ್ದು ಸಮವಾಗಿರುತ್ತದೆ.

ಉದಾ : ಸೂತ್ರ : ಭುಜ = ಸುತ್ತಳತೆ ÷ 4
ಸುತ್ತಳತೆ 63 ಕೋಲು ÷ 4 = 15 ಕೋ. 18 ಅಂ.
ಪ್ರಮಾಣ : ಉದ್ದ : ಅಗಲ = 1:1
ಉದ್ದ - <u>15 ಕೋ. 18 ಅಂ.</u>
ಅಗಲ - <u>15 ಕೋ. 18 ಅಂ.</u>

೨. ಪಾದಾಧಿಕ :

ಸುತ್ತಳತೆಯ ಅರ್ಧವನ್ನು ಒಂಬತ್ತು ಪಾಲು ಮಾಡಿದಾಗ ಐದು ಪಾಲನ್ನು ಉದ್ದವನ್ನಾಗಿಯೂ ನಾಲ್ಕು ಪಾಲನ್ನು ಅಗಲವೆಂದೂ ಸ್ವೀಕರಿಸುವುದು. ಅಂದರೆ ಅಗಲಕ್ಕಿಂತ ಉದ್ದ $\frac{1}{4}$ ಅಂಶದಷ್ಟು ಅಧಿಕ. ಅಗಲ ಒಂದು ಕೋಲಾದರೆ ಉದ್ದ ಒಂದು ಕೋಲು ಆರು ಅಂಗುಲ (ಒಂದೂ ಕಾಲು ಕೋಲು).

ಉದಾ : ಸೂತ್ರ : (ಸುತ್ತಳತೆ ÷ 2) ÷ ಪ್ರಮಾಣ : 5:4
ಸುತ್ತಳತೆ - 63 ಕೋಲು

ಸುತ್ತಳತೆಯ ಅರ್ಧ - 31 ಕೋ. 12 ಅಂ.

ಒಂದು ಪ್ರಮಾಣ = ಸುತ್ತಳತೆಯ ಅರ್ಧ ÷ 9 = 3 ಕೋ. 12 ಅಂ.

ಉದ್ದ = 5 ಪ್ರಮಾಣ = 5 x 3 ಕೋ. 12 ಅಂ. = 17 ಕೋ. 12 ಅಂ.

ಅಗಲ = 4 ಪ್ರಮಾಣ = 4x3 ಕೋ. 12 ಅಂ. = 14 ಕೋಲು.

ತಾಳೆ { ಉದ್ದ : 17 ಕೋ. 12 ಅಂ x 2 = 35 ಕೋಲು
ಅಗಲ : 14 ಕೋ x 2 = 28 ಕೋಲು

ಒಟ್ಟು ಸುತ್ತಳತೆ - 63 ಕೋಲು.

೩. ಅರ್ಧಾಧಿಕ :

ಸುತ್ತಳತೆಯ ಅರ್ಧವನ್ನು ಹತ್ತು ಪಾಲು ಮಾಡಿದಾಗ ಆರು ಪಾಲನ್ನು ಉದ್ದವನ್ನಾಗಿಯೂ ನಾಲ್ಕು ಪಾಲನ್ನು ಅಗಲವನ್ನಾಗಿಯೂ ತೆಗೆದುಕೊಳ್ಳುವುದು. ಅಂದರೆ ಅಗಲ ಒಂದು ಕೋಲು ಇದ್ದಾಗ ಉದ್ದ ಒಂದೂವರೆ ಕೋಲು (1ಕೋ. 12 ಅಂ)

ಉದಾ : (ಸುತ್ತಳತೆ ÷ 2) ÷ 10 ಪ್ರಮಾಣ : 6:4

ಸುತ್ತಳತೆ = 63 ಕೋ.

ಸುತ್ತಳತೆಯ ಅರ್ಧ = 31-12

ಒಂದು ಪ್ರಮಾಣ = 31 ಕೋ. 12 ಅಂ. ÷ 10 = 3 ಕೋ. 3 ಅಂ. 4.8ಯವ

ಉದ್ದ - 6x3 ಕೋ. 3 ಅಂ. 4.8 ಯವ

= 18 ಕೋ. 21 ಅಂ. 4.8 ಯವ

ಅಗಲ - 4x3 ಕೋ. 3 ಅಂ. 4.8 ಯವ

= 12 ಕೋ. 14 ಅಂ. 3.2 ಯವ

ತಾಳೆ { ಉದ್ದ 18 ಕೋ. 21 ಅಂ. 4.8 ಯವ x 2 = 37 ಕೋ. 19 ಅಂ. 1.6 ಯವ
ಅಗಲ 12 ಕೋ 14 ಅಂ. 3.2 ಯವ x 2 = 25 ಕೋ 4 ಅಂ. 6.4 ಯವ

ಒಟ್ಟು 63 ಕೋಲು

ಶ್ಲೋಕ : ಪಾದಾಧಿಕೋ ಮನುಜಸದ್ಮನಿ ಗೃಹ್ಯತೇ ತ -
ತ್ರಾವಶ್ಯಕೇ ಸಮತತಾ ಯತಿಕೋಽಪಿ ಕೈಶ್ಚಿತ್
ಅರ್ಧಾಧಿಕೋಽತ್ರ ನ ಹಿತೋ ಮುನಿಭಿಃ ಸಮಸ್ತ
ಪಾದೋನತಾಪಿ ಕಥಿತಾಽಖಿಲನಾಶಿನೀತಿ ॥೭॥

ತಾತ್ಪರ್ಯ :

ಮನುಷ್ಯಾಲಯಗಳಿಗೆ ಪಾದಾಧಿಕವನ್ನು ಬಳಸಬೇಕು. ಒಂದು ವೇಳೆ ಅವಶ್ಯ ಬಿದ್ದರೆ

ಕೆಲವರು ಸಮತತೆಯನ್ನು ಸ್ವೀಕರಿಸುತ್ತಾರೆ. ಅರ್ಧಾಧಿಕವು ಮನುಷ್ಯಾಲಯಗಳಿಗೆ ಹಿತಕರವಲ್ಲ. ಪಾದೋನತವು ಕೂಡ ಸರ್ವನಾಶಕಾರಕವೆಂದು ಮುನಿಗಳು ಹೇಳುತ್ತಾರೆ.

ವಿ.ವಿ. :

1) ಸಮತತೆ : ಸುತ್ತಳತೆಯ ಅರ್ಧವನ್ನು ಭಾಗಿಸುವ ಪ್ರಮಾಣ ಸಂಖ್ಯೆಗಳಾದ 8, 12, 16, 20, 24, 32ಗಳಿಂದ ಭಾಗಿಸಿದಾಗ ಅಗಲವನ್ನು 4 ಪ್ರಮಾಣಕ್ಕೆ ನಿಗದಿಗೊಳಿಸಿದರೆ ಉದ್ದವು 4, 8, 12, 16, 20, 28 ಪ್ರಮಾಣದಲ್ಲಿ ಒಂದು 1:1, 1:2, 1:3, 1:4, 1:5, 1:7 ಆಗುತ್ತದೆ.

2) ಪಾದಾಧಿಕ : ಸುತ್ತಳತೆಯ ಅರ್ಧವನ್ನು ಭಾಗಿಸುವ ಪ್ರಮಾಣ ಸಂಖ್ಯೆಗಳಾದ 9, 13, 17, 21, 25ಗಳಿಂದ ಭಾಗಿಸುವಾಗ ಅಗಲವನ್ನು 4 ಪ್ರಮಾಣಕ್ಕೆ ನಿಗದಿ ಗೊಳಿಸಿದರೆ ಉದ್ದವು 5, 9, 13, 17, 21ಪ್ರಮಾಣವಾಗಿ ಅಗಲ ಉದ್ದಗಳ ಪ್ರಮಾಣವು $1:1\frac{1}{4}$, $1:2\frac{1}{4}$, $1:3\frac{1}{4}$, $1:4\frac{1}{4}$, $1:5\frac{1}{4}$ ಆಗುತ್ತದೆ. ಪ್ರತಿಯೊಂದರಲ್ಲೂ $\frac{1}{4}$ ಅಂಶ ಹೆಚ್ಚಾಗಿರುವುದರಿಂದ ಇದನ್ನು ಪಾದಾಧಿಕ ಎನ್ನುವರು.

3) ಅರ್ಧಾಧಿಕ : ಇಲ್ಲಿ ಪ್ರಮಾಣ ಸಂಖ್ಯೆಗಳು 10, 14, 18, 22, 26 ಆಗಿದ್ದು ಸುತ್ತಳತೆಯ ಅರ್ಧವನ್ನು ಬಾಗಿಸಿ ಅಗಲವನ್ನು 4 ಪ್ರಮಾಣಕ್ಕೆ ನಿಗದಿಗೊಳಿಸಿದರೆ ಕಟ್ಟಡದ ಉದ್ದವು 6, 10, 14, 18, 22 ಪ್ರವಮಾಣಗಳದ್ದಾಗುತ್ತದೆ. ಇದು $1:1\frac{1}{2}$, $1:2\frac{1}{2}$, $1:3\frac{1}{2}$, $1:4\frac{1}{2}$ ಆಗಿ ಪ್ರತಿಯೊಂದರಲ್ಲಿ $\frac{1}{2}$ ಅಂಶವು ಹೆಚ್ಚಾಗಿರುವುದರಿಂದ ಅರ್ಧಾಧಿಕವೆನ್ನುವರು.

4) ಪಾದೋನ : ಶ್ಲೋಕದಲ್ಲಿ ಹೇಳದೆ ಬಿಟ್ಟಿರುವ ಪ್ರಮಾಣ ಸಂಖ್ಯೆಗಳಾದ 11, 15, 19, 23, 27ಗಳಿಂದ ಕಟ್ಟಡದ ಸುತ್ತಳತೆಯ ಅರ್ಧವನ್ನು ಭಾಗಿಸಿ ಅಗಲವನ್ನು 4 ಪ್ರಮಾಣಕ್ಕೆ ನಿಗದಿಗೊಳಿಸಿದರೆ ಉದ್ದವು 7, 11, 15, 19, 23 ಪ್ರಮಾಣಗಳಾಗಿ $1:1\frac{3}{4}$, $1:2\frac{3}{4}$, $1:3\frac{3}{4}$, $1:4\frac{3}{4}$, $1:5\frac{3}{4}$ ಆಗುತ್ತದೆ. ಪ್ರತಿಯೊಂದು $\frac{3}{4}$ ಅಂಶದಲ್ಲಿ ಪ್ರಮಾಣ ಹೆಚ್ಚಾಗಿರುವುದರಿಂದ ಅಂದರೆ $\frac{1}{4}$ ಅಂಶ ಕಡಿಮೆ (ಊನವಾಗಿ) ಇರುವುದರಿಂದ ಇದು ಪಾದೋನ ಎನಿಸುತ್ತದೆ. ಹಿಂದಿನ ಶ್ಲೋಕದಲ್ಲಿ ತಿಳಿಸಿದಂತೆ ಸರ್ವನಾಶಕಾರಕವಾದ ಈ ಪ್ರಮಾಣಗಳನ್ನು ಗುಣ ವಿಸ್ತಾರಕ್ಕೆ ಉಪಯೋಗಿಸುವುದು ಹಿತಕರವಲ್ಲ.

ಶ್ಲೋಕ : ನಾಹಾರ್ಧೇ ದ್ವಾದಶಾದ್ಯೈಸ್ತ್ರಿಭಿರಪಿ ಚ ವಿಭಕ್ತೇಽಥವಾ ಷೋಡಶಾದ್ಯೈ -
ರ್ವಿಂಶತ್ಯಾದ್ಯೈಶ್ಚ ತತ್ವಾದಿಭಿರಪಿ ಮನುಯುಗ್ಮಾದಿಭಿರ್ವಾಂತಸಂಖ್ಯೈ:
ತತ್ತತ್ತುರ್ಯ ಪ್ರಹೀಣ್ಯೈರಥ ವಿತತಿರುದಧ್ಯಂಶತಃ ಶೇಷಭಾಗ್ಯೈ:
ದೀರ್ಘೋ ವಸ್ವಂಕಪಂಕ್ತ್ಯಾದಿಭಿರಿತಿ ಗುಣವಿಸ್ತಾರಮಾಹುರ್ಮುನೀಂದ್ರಾ: ॥೮॥


ತಾತ್ಪರ್ಯ :

ಸುತ್ತಳತೆಯ ಅರ್ಧವನ್ನು (ನಾಹಾರ್ಧ) 12ರಿಂದ ಪ್ರಾರಂಭವಾಗಿ ಮೂರು ಸಂಖ್ಯೆಗಳಿಂದ (12, 13, 14) ಅಥವಾ 16ರಿಂದ ಪ್ರಾರಂಭವಾಗಿ ಮೂರು ಸಂಖ್ಯೆಗಳಿಂದ (16, 17, 18) ಅಥವಾ 20ರಿಂದ ಪ್ರಾರಂಭವಾಗಿ ಮೂರು ಸಂಖ್ಯೆಗಳಿಂದ (20, 21, 22) ಅಥವಾ 24ರಿಂದ ಪ್ರಾರಂಭವಾಗಿ ಮೂರು ಸಂಖ್ಯೆಗಳಿಂದ (24, 25, 26) ಅಥವಾ 32ರಿಂದ ಇವುಗಳಲ್ಲಿ ಯಾವುದೇ ಒಂದು

ಸಂಖ್ಯೆಯಿಂದ ಭಾಗಿಸಿದಾಗ ನಾಲ್ಕು ಪಾಲನ್ನು ಅಗಲವೆಂದೂ ಉಳಿದುದನ್ನು (ಶೇಷಭಾಗ) ಉದ್ದವೆಂದೂ ಗಣಿಸಬೇಕು. ಅಲ್ಲದೆ, 8, 9 ಮತ್ತು 10 ಸಂಖ್ಯೆಗಳಿಂದಲೂ ಈ ಗುಣ ವಿಸ್ತಾರವನ್ನು ಮಾಡಬಹುದೆಂದು ಋಷಿಶ್ರೇಷ್ಠರು ಹೇಳುತ್ತಾರೆ.

ವಿ.ವಿ. :

ಸುತ್ತಳತೆಯ ಅರ್ಧವನ್ನು 12, 13, 14, 16, 17, 18, 20, 21, 22, 24, 25, 26, 32, 8, 9 ಮತ್ತು 10. ಈ ಸಂಖ್ಯೆಗಳಲ್ಲಿ ಯಾವುದಾದರೂ ಒಂದರಿಂದ ಭಾಗಿಸಿದಾಗ ಬಂದ ಭಾಗಲಬ್ಧವನ್ನು 4ರಿಂದ ಗುಣಿಸಿ ಬಂದ ಸಂಖ್ಯೆಯೇ ಮನೆಯ ಅಗಲವಾಗುತ್ತದೆ. ಅಗಲದ ಆ ಸಂಖ್ಯೆಯನ್ನು ಸುತ್ತಳತೆಯ ಅರ್ಧದ ಸಂಖ್ಯೆಯಿಂದ ಕಳೆದಾಗ ಉಳಿಯುವ ಶೇಷವೇ ಆ ಮನೆಯ ಉದ್ದವಾಗುತ್ತದೆ.



ಗುಣ ವಿಸ್ತಾರದ ಆಕೃತಿಗಳು

ಚಿತ್ರ. ೪೫, ಅ. ೪, ಶ್ಲೋ. ೮

ಅಗಲ - ಉದ್ದಗಳ ಪ್ರಮಾಣ

8-4:4 (1:1)
12-4:8 (1:2)
16-4:12 (1:3)
20-4:16 (1:4)
24-4:20 (1:5)
32-4:28 (1:7)

(೧) ಉದಾ : 63 ಕೋಲಿನ ವೃಷಭ ಯೋನಿ

ಸೂತ್ರ : $\{$(ಸುತ್ತಳತೆ ÷ 2) ÷ 12$\}$ x 4 = ಮನೆಯ ಅಗಲ

ಸುತ್ತಳತೆಯ ಅರ್ಧ – ಮನೆಯ ಅಗಲ = ಮನೆಯ ಉದ್ದ

1. ಸುತ್ತಳತೆ - 63 ಕೋಲು

2. ಸುತ್ತಳತೆಯ ಅರ್ಧ - 31 ಕೋ. 12 ಅಂ.
3. ಸುತ್ತಳತೆಯ ಅರ್ಧ, 31 ಕೋ. 12 ಅಂ. ÷ 12
4. = 2 ಕೋ. 15 ಅಂ.
5. = 2 ಕೋ. 15 ಅಂ. x 4 = 10 ಕೋ. 12 ಅಂ.
6. ಆದುದರಿಂದ ಮನೆಯ ಅಗಲ 10 ಕೋ. 12 ಅಂ.
7. ಮನೆಯ ಉದ್ದ = 31.12 – 10.12 = 21 ಕೋ.

ತಾಳೆ {
10.12 } ಅಗಲ
10.12
21.00 } ಉದ್ದ
21.00

ಮನೆಯ ಸುತ್ತಳತೆ 63.00 ಕೋಲು

ಶ್ಲೋಕ : ನಾಹಾರ್ಧೇ ಶಿವಭಕ್ತೇ ವಿತತಿಸ್ತ್ರಿಭಿರಷ್ಟಭಿಶ್ಚ ದೀರ್ಘೋ ವಾ
ದೀರ್ಘಾರ್ಧಾದಧಿಕತರಂ ವ್ಯಾಸಂ ನೇಚ್ಛಂತಿ ಗರ್ಗದಕ್ಷಾದ್ಯಾಃ ॥೯॥

ತಾತ್ಪರ್ಯ :

ಸುತ್ತಳತೆಯ ಅರ್ಧವನ್ನು 11ರಿಂದ ಭಾಗಿಸಿದಾಗ ಅದರಲ್ಲಿ ಮೂರು ಭಾಗವನ್ನು ಅಗಲವೆಂದೂ ಎಂಟು ಭಾಗವನ್ನು ಉದ್ದವೆಂದೂ ಸ್ವೀಕರಿಸಬೇಕು. ಉದ್ದದ ಅರ್ಧಕ್ಕಿಂತ ಅಧಿಕವಾದ ಅಗಲವಿರುವುದನ್ನು ಗರ್ಗ, ದಕ್ಷ ಮೊದಲಾದ ಶಾಸ್ತ್ರಜ್ಞರು ಒಪ್ಪುವುದಿಲ್ಲ.

ವಿ.ವಿ. :

ಸುತ್ತಳತೆ 63 ಕೋಲು - ವೃಷಭ ಯೋನಿ

ಉದಾ : ಸುತ್ತಳತೆಯ ಅರ್ಧ - 31 ಕೋ. 12 ಅಂ.

ಸುತ್ತಳತೆಯ ಅರ್ಧವನ್ನು 11ರಿಂದ ಭಾಗಿಸಿದಾಗ ಸಿಗುವ ಮೊತ್ತ

- 31ಕೋ. - 12ಅಂ. ÷ 11 = 2 ಕೋ. 20 ಅಂ. 5.8 ಯ

ಅಗಲ - 2 ಕೋ. 20 ಅ. 5.8 ಯ x 3 = 8 ಕೋ. 14 ಅಂ. 1.4 ಯ

ಉದ್ದ - 2 ಕೋ. 20 ಅ. 5.8 ಯ x 8 = 22 ಕೋ. 21 ಅಂ. 6.6 ಯ

ತಾಳೆ : (ಅಗಲ + ಉದ್ದ) x 2 = 63 ಕೋಲು

ಅಗಲ - 8 ಕೋ. 14 ಅಂ. 1.4 ಯ } ಒಟ್ಟು 31 ಕೋ. 12 ಅಂ.
ಉದ್ದ - 22 ಕೋ. 21 ಅಂ. 6.6 ಯ

∴ 31 ಕೋ. 12 ಅಂ. x 2 = 63 ಕೋಲು

೪. ಚತುಶ್ಶಾಲಾರಚನೆ

ಶ್ಲೋಕ : ಚತ್ವಾರೋಽತ್ರತು ದಿಕ್ ಗೃಹಾಃ ಪೃಥಗಥೋ ಕೋಣಾಲಯಾಶ್ಚೈವಮಿ -
ತ್ಯಷ್ಟಾವೇವ ಗೃಹಾ ನೃಣಾಂ ಮುನಿಮತಾಃ ಸಂಸ್ಥಾನಭಿನ್ನಾಸ್ತತಃ
ಭಿದ್ಯಂತೇ ನವಧೋತ್ತರಸ್ಯ ಗತಿಭಿರ್ಮಾನೇನ ನಾಮಾದಿಭಿ
ಶ್ಚೈತೇಷಾಂ ದ್ವಿತಲಾದಿಲಕ್ಷಣವಿಧೌ ಮಾನಾನಿ ತಾನ್ಯೇವ ಚ ॥೧೦॥


ತಾತ್ಪರ್ಯ :

ವಾಸ್ತುಶಿಲ್ಪ ತಜ್ಞರಾದ ಮುನಿಗಳ ಮತದಂತೆ ಮನುಷ್ಯರಿಗೆ ವಾಸಮಾಡಲು ಪೂರ್ವಾದಿ ದಿಕ್ಕುಗಳಲ್ಲಿ ನಾಲ್ಕು ಮನೆಗಳೂ, (ವಿದಿಕ್ಕುಗಳಲ್ಲಿ) ನಾಲ್ಕು ಕೋಣಾಲಯಗಳೂ (ಮೂಲೆ ಮನೆಗಳು) ಹೀಗೆ ಎಂಟು ಪ್ರತ್ಯೇಕ ಪ್ರತ್ಯೇಕ ಮನೆಗಳನ್ನು ಹೇಳಲಾಗಿದೆ. ಇವುಗಳ ಉತ್ತರದ ಗತಿಗಳು, ಅಳತೆಗಳು ಮತ್ತು ಹೆಸರುಗಳ ಭೇದಗಳಿಗೆ ಅನುಗುಣವಾಗಿ ಅವುಗಳು ಒಂಬತ್ತು ತೆರನಾಗುತ್ತವೆ. ಈ ಮನೆಗಳಿಗೆ ಮಾಡುವ ಎರಡು ಮೂರು ಇತ್ಯಾದಿ ಮಾಳಿಗೆಗಳ ನಿರ್ಮಾಣದಲ್ಲಿ ನೆಲಮನೆಯ ರಚನೆಯ ಮಾನಗಳನ್ನೇ (ಅಳತೆ) ಸ್ವೀಕರಿಸಬೇಕು.

ವಿ.ವಿ. :

ಚತುಶ್ಶಾಲಾ ರಚನೆ

೧. ದಿಕ್ ಗೃಹ - 4
೨. ವಿದಿಕ್ ಗೃಹ - 4
ಒಟ್ಟು - 8



ಸಂ. 1 - ಗೃಕ್ ಗೃಹ
ಸಂ. 2 - ವಿದಿಕ್ ಗೃಹ

ಚತುಶ್ಶಾಲೆ

ಚಿತ್ರ. ೪೬, ಅ.೪, ಶ್ಲೋ.೧೦

ಒಂಬತ್ತು ವಿಧದ ಮನೆಗಳು

1. ವಿಶುದ್ಧಭಿನ್ನಶಾಲೆ (ದಿಕ್ ಶಾಲೆಗಳು ಮಾತ್ರ, ಕೋಣಾಲಯಗಳು ಇಲ್ಲ)
2. ಶ್ಲಿಷ್ಟಭಿನ್ನಶಾಲಾ
3. ಸಂಶ್ಲಿಷ್ಟಭಿನ್ನಶಾಲಾ
4. ಶ್ಲಿಷ್ಟಭಿನ್ನಾಷ್ಟಶಾಲಾ
5. ಮಿಶ್ರಭಿನ್ನಚತುಶ್ಶಾಲಾ
6. ಸಮ್ಮಿಶ್ರಭಿನ್ನಶಾಲಾ
7. ಮಿಶ್ರಕಚತುಶ್ಶಾಲಾ
8. ಚತುಶ್ಶಾಲಾ
9. ಮಧ್ಯಪ್ರರೂಢಶಾಲಾ


೫. ವಿಶುದ್ಧಭಿನ್ನಶಾಲೆಯ ಲಕ್ಷಣ (1)

ಶ್ಲೋಕ : ಭಿನ್ನಾಭಿನ್ನವಶಾತ್ ದ್ವಿಧೈವ ವಿದಿತಾ ಶಾಲಾತ್ರ ಭಿನ್ನಾ ಪೃಥಕ್
ದಿಕ್‌ಸ್ಥಾ ಸ್ವಾಂಗವಿಶೇಷಪೂರ್ಣವಿಭವಾ ಕೋಣಾಲಯಾಸಂಭವಾ
ಅಂತರ್ಬಾಹ್ಯಭವೋತ್ತರಾಭಿಮಿಲನಾದೇಕೀ ಭವೇತ್ ಕೋಣಗೇ -
ಹಾಪರ್ಯಂತಲಸದ್ಧ್ವಜಾ ಭವತಿ ಯತ್ರಾಭಿನ್ನಶಾಲೈವ ಸಾ ||೧೧||


ತಾತ್ಪರ್ಯ :

ಚತುಶ್ಶಾಲೆಗಳು ಭಿನ್ನ ಮತ್ತು ಅಭಿನ್ನವೆಂದು ಎರಡು ವಿಧ. ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಮನೆಗಳಿದ್ದು ಅವುಗಳು ಒಂದು ಮತ್ತೊಂದಕ್ಕೆ ತಾಗದೆ ಪ್ರತ್ಯೇಕವಾಗಿರಬೇಕು. ಅವುಗಳು ಮನೆಯ ಎಲ್ಲ ಅಂಗೋಪಾಂಗಗಳಿಂದ ಕೂಡಿರಬೇಕು. ಕೋಣಾಲಯಗಳು ಇಲ್ಲದಿರಬೇಕು. ಅಂತಹ ಮನೆಗೆ ಭಿನ್ನಶಾಲೆಯೆಂದು ಹೆಸರು.

ದಿಕ್‌ಶಾಲೆಗಳ ಒಳಗಿನ ಮತ್ತು ಹೊರಗಿನ ಉತ್ತರಗಳು ಕೋಣಾಲಯ (ವಿದಿಕ್‌ಶಾಲೆ)ಗಳೊಂದಿಗೆ ಒಂದಾಗಿ ಸೇರಿ ಹೊರಗಿನ ಸುತ್ತಳತೆ ಮತ್ತು ಒಳಗಿನ ಸುತ್ತಳತೆಯು ಧ್ವಜಯೋನಿಯಾಗಿದ್ದರೆ ಅಭಿನ್ನಶಾಲೆಯಾಗುತ್ತದೆ.



ವಿಶುದ್ಧ ಭಿನ್ನಶಾಲೆ
ಚಿ.೪೭, ಅ.೪, ಶ್ಲೋ.೧೧



ಅಭಿನ್ನ ಶಾಲೆ
ಚಿ.೪೮, ಅ.೪, ಶ್ಲೋ.೧೧

೬. ಭಿನ್ನಶಾಲೆಯ ಲಕ್ಷಣ

ಶ್ಲೋಕ : ಶಾಲಾಸ್ತ್ವನ್ಯೋನ್ಯಭಿನ್ನಾ ನಿಜವಿಹಿತಗತಿವ್ಯಾಸಯೋನ್ಯಾದಿಯುಕ್ತಾ:
ಪರ್ಯುದ್ಯತ್ಪತ್ರಮಾನಾವಧಿನಿಹಿತಲಸತ್ಪಾದುಕಾ ಭಿನ್ನಶಾಲಾಃ
ಸರ್ವಾರ್ಹಾಸ್ತಾ ವಿಶೇಷಾದವನಿಸುರಹಿತಾಃ ಕೋಣವೇಶ್ಮಪ್ರಹೀಣಾ -
ಸ್ತತ್ರಾಪಿ ಪ್ರಾಂಗಣಂ ಕೇತುಜಮಿತಿ ವಿದಿತಾ ಭಿನ್ನಶಾಲಾ ವಿಶುದ್ಧಾ: ॥೧೨॥

ತಾತ್ಪರ್ಯ :

ನಾಲ್ಕು ದಿಕ್‌ಗೃಹಗಳು ಒಂದು ಮತ್ತೊಂದಕ್ಕೆ ಸೇರದೆ ಪ್ರತ್ಯೇಕವಾಗಿದ್ದು, ಪ್ರತಿಯೊಂದೂ ವಾಸ್ತುಶಾಸ್ತ್ರಕ್ಕೆ ಅನುಗುಣವಾದ ಗತಿ, ಅಗಲ, ಯೋನಿ ಮೊದಲಾದವುಗಳಿಂದ ಕೂಡಿದ್ದು, ಪತ್ರಮಾನ, ಪಾದುಕೆಗಳಿಂದ ಕೂಡಿ ಕೋಣಾಲಯಗಳಿಲ್ಲದೆ ಇರುವ ಭಿನ್ನಶಾಲೆಗಳು ಎಲ್ಲರಿಗೂ ವಾಸಕ್ಕೆ ಯೋಗ್ಯ. ಬ್ರಾಹ್ಮಣರಿಗಂತೂ ಅತಿ ಹಿತಕರವಾದವುಗಳು. ಇಂತಹ ಚತುಶ್ಶಾಲೆಗಳ ಮಧ್ಯದಲ್ಲಿರುವ ಅಂಗಳವು ಧ್ವಜಯೋನಿಯಲ್ಲಿರಬೇಕು. ಇಂತಹ ಮನೆಗಳೇ ವಿಶುದ್ಧ ಭಿನ್ನಶಾಲೆಗಳಾಗಿವೆ.

ವಿ.ವಿ. :

ಈ ಶ್ಲೋಕದಲ್ಲಿ ವಿಶುದ್ಧಭಿನ್ನಶಾಲೆಯ ಲಕ್ಷಣವನ್ನು ಹೇಳಲಾಗಿದೆ. ಈ ಮೊದಲು ಶ್ಲೋ.೧೧ರಲ್ಲಿ ವಿವರಿಸಿದ ಭಿನ್ನಶಾಲೆಯೇ ಇದಾಗಿದೆ.

ಶ್ಲೋಕ : ಮಿತ್ರೇ ದಕ್ಷಿಣಪಶ್ಚಿಮೇ ಪುನರುದಕ್ ಪ್ರಾಚ್ಯೇ ಚ ಗೇಹೇ ಮಿಥ
ಸ್ತಸ್ಮಾತ್ ತದ್ಯುಗಲೋತ್ಥಕೋಣನಿಲಯಃ ಶೇಷೋ ವಿಧೇಯೋಽಪಿ ಚ
ಅನ್ಯತ್ ಕೋಣಯುಗಂ ತಥೈಕಮಥವಾ ನಶ್ಲೇಷಯೇತ್ ಸೂತಿಕಾ
.ಶೂದ್ರಾದ್ಯಾಗಮ ನಿಷ್ಕ್ರಮಾರ್ಥಮುದಿತೋ ಮಾರ್ಗೋಽಯಮೇವಾತ್ರ.ತು ॥೧೩॥

ತಾತ್ಪರ್ಯ :


ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳ ಮನೆಗಳು ಹಾಗೂ ಉತ್ತರ ಮತ್ತು ಪೂರ್ವದಿಕ್ಕಿನ ಮನೆಗಳು ಪರಸ್ಪರ ಮಿತ್ರತ್ವದವುಗಳು. ಮಿತ್ರತ್ವವಿರುವ ಆ ಎರಡು ಮನೆಗಳ ಮಧ್ಯದಲ್ಲಿ ಕೋಣಾಲಯ ನಿರ್ಮಾಣ ಪ್ರಶಸ್ತವಾಗಿದೆ. ಆ ಎರಡು ಕೋಣಾಲಯಗಳು ಪ್ರಧಾನ ದಿಕ್ಕುಗಳ ಮನೆಗಳಿಗೆ ಸೇರಿರಬಾರದು. ಆಗ ಅವುಗಳ ಮಧ್ಯದಲ್ಲಿರುವ ಸ್ಥಳಾವಕಾಶವು ಅಶೌಚದವರು, ಕೆಲಸದವರು ಮೊದಲಾದವರಿಗೆ ಹೋಗಿ ಬರಲು ಅನುಕೂಲವಾಗುತ್ತದೆ.

ವಿ.ವಿ. :

ಉದಾ : ಗೃಹಮಿತ್ರತ್ವ

೧. ದಕ್ಷಿಣ - ಪಶ್ಚಿಮ ಮಿತ್ರತ್ವ

೨. ಉತ್ತರ - ಪೂರ್ವ ಮಿತ್ರತ್ವ




ದಕ್ಷಿಣ - ಪಶ್ಚಿಮ ಮಿತ್ರತ್ವ

1) ದಿಕ್ ಗೃಹ

2) ಕೋಣಾಲಯ

ಚಿತ್ರ. ೪೯, ಅ.೪, ಶ್ಲೋ.೧೩



ಉತ್ತರ - ಪೂರ್ವ ಮಿತ್ರತ್ವ

ಚಿ.೫೦, ಅ.೪, ಶ್ಲೋ.೧೩

೭. ಶ್ಲಿಷ್ಟ ಭಿನ್ನಶಾಲೆಯ ಲಕ್ಷಣ (2)

ಶ್ಲೋಕ : ಏಕದ್ವಿತ್ರಿಕ ಕೋಣಶ್ಲೇಷವಶಾಚ್ಛ್ಲಿಷ್ಟಭಿನ್ನಶಾಲಾ ಸ್ಯಾತ್
ಅವನೀದೇವಹಿತಾ ಸಾಽಪ್ಯಖಿಲಾರ್ಹಾ ಭಿನ್ನಮಿಶ್ರಭಾವೇನ ॥೧೪॥

ತಾತ್ಪರ್ಯ :

ಒಂದು, ಎರಡು ಅಥವಾ ಮೂರು ಕೋಣಾಲಯಗಳನ್ನು ಪ್ರಧಾನ ಗೃಹಗಳಿಗೆ (ದಿಕ್‌ಗೃಹ) ಸೇರಿಸಿ ರಚಿಸಿದರೆ ಅದು ಶ್ಲಿಷ್ಟಭಿನ್ನಶಾಲೆಯೆನಿಸುತ್ತದೆ. ಅದು ಭಿನ್ನಲಕ್ಷಣದಿಂದ ಕೂಡಿದ ಕಾರಣ ಬ್ರಾಹ್ಮಣರಿಗೆ ಹಿತಕರವಾಗುತ್ತದೆ. ಭಿನ್ನ ಮತ್ತು ಮಿಶ್ರಲಕ್ಷಣವಿರುವುದರಿಂದ ಅದು ಎಲ್ಲರಿಗೂ ವಾಸಯೋಗ್ಯವಾಗುತ್ತದೆ.


ವಿ.ವಿ. :

ಇಲ್ಲಿ ಭಿನ್ನತೆಯು ಮನೆಗಳ ಯೋನಿ, ಗಮನ ಇತ್ಯಾದಿಗಳಲ್ಲಿದೆ. ಆದರೆ ಒಂದು ಮತ್ತೊಂದಕ್ಕೆ ಸೇರಿರುವುದರಿಂದ ಶ್ಲಿಷ್ಟತೆಯೂ ಇದೆ. ಈ ಎರಡು ಲಕ್ಷಣಗಳು ಇರುವುದರಿಂದ ಶ್ಲಿಷ್ಟ ಭಿನ್ನಶಾಲೆಯಾಗುತ್ತದೆ.

ಶ್ಲಿಷ್ಟ ಭಿನ್ನಶಾಲೆಯ ಮಾದರಿಗಳು


ಚಿತ್ರ - (1) ಒಂದು ಕೋಣಾಲಯ - ನೈಋತ್ಯದಲ್ಲಿ ಕೋಣಾಲಯ
(2) ಎರಡು ಕೋಣಾಲಯ - ನೈಋತ್ಯ ಮತ್ತು ಈಶಾನ್ಯದಲ್ಲಿ ಕೋಣಾಲಯಗಳು
(3) ಮೂರು ಕೋಣಾಲಯ - ವಾಯುವ್ಯ ಬಿಟ್ಟು ಉಳಿದ ದಿಕ್ಕುಗಳಲ್ಲಿ ಕೋಣಾಲಯಗಳು

(1)




ಒಂದು ಕೋಣಾಲಯ

(2)



ಎರಡು ಕೋಣಾಲಯ

(3)



ಮೂರು ಕೋಣಾಲಯ

ಚಿ.೫೧, ೫೨, ೫೩, ಅ.೪, ಶ್ಲೋ.೧೪.

೮. ಸಂಶ್ಲಿಷ್ಟ ಭಿನ್ನಶಾಲೆಯ ಲಕ್ಷಣ (3)

ಶ್ಲೋಕ : ದಿಗ್ಗೇಹೋತ್ತರಪಷ್ಕಷ್ಟಸಮ್ಮಿತವಿದಿಗ್ಗೇಹೋತ್ತರಾಣಿ ಕ್ರಮಾ -
ನ್ನಂದ್ಯಾವರ್ತಪದಪ್ರದಕ್ಷಿಣಗತೀನ್ಯಾತತ್ಯ ಸಂಯೋಜಯೇತ್
ಅಂತಸ್ಥೋತ್ತರಯೋಗನಾಹಮಿಹ ಸರ್ವತ್ರಾಪಿ ಕೇತೂದ್ಭವಂ
ಬಾಹ್ಯಸ್ಥಂ ಚ ತಥೈವ ಚೇದತಿಶುಭಂ ಸಂಶ್ಲಿಷ್ಟಭಿನ್ನಾತ್ವಿಯಮ್ ||೧೫||


ತಾತ್ಪರ್ಯ :

ಪ್ರಧಾನ ಗೃಹಗಳ (ದಿಕ್‌ಗೃಹ) ಉತ್ತರಗಳಷ್ಟೇ ಉದ್ದವಿರುವ ಕೋಣಾಲಯಗಳ ಉತ್ತರಗಳನ್ನು ನಂದ್ಯಾವರ್ತಹೂವಿನ ಎಸಳಿನಂತೆ ಅಪ್ರದಕ್ಷಿಣವಾಗಿ ಪ್ರಧಾನಗೃಹಗಳ ಉತ್ತರಗಳಿಗೆ ಸೇರಿಸಬೇಕು. ಇಲ್ಲಿ ಎಲ್ಲ ಕಡೆ ಅಂಗಣದ ಸುತ್ತಳತೆಯು ಧ್ವಜಯೋನಿಯಾಗಿರಬೇಕು. ಮಾತ್ರವಲ್ಲ, ಹೊರಗಿನ ಸುತ್ತಳತೆಯು ಕೂಡ ಧ್ವಜಯೋನಿಯಲ್ಲಿರಬೇಕು. ಹಾಗಿದ್ದರೆ ಅದು ಅತ್ಯಂತ ಶುಭಪ್ರದ. ಅಲ್ಲದೆ ಅಂತಹ ಮನೆಯು ಸಂಶ್ಲಿಷ್ಟ ಭಿನ್ನಶಾಲೆಯೆನಿಸುತ್ತದೆ.

ವಿ.ವಿ. :

ಪ್ರಧಾನ ಗೃಹದ ಒಳಗಿನ ಉತ್ತರವು ಕೋಣಾಲಯದ ಹೊರಗಿನ ಉತ್ತರಕ್ಕೆ ಎಡದಿಂದ ಹೋಗಿ ಸೇರಬೇಕು. ಇದೇ ರೀತಿ ಮುಂದುವರಿದರೆ ಆಗ ನಂದ್ಯಾವರ್ತಪುಷ್ಪದ ಎಸಳಿನ ಆಕಾರ ಬರುತ್ತದೆ. ಈ ರೀತಿ ಉತ್ತರಗಳನ್ನು ಸೇರಿಸುವುದರಿಂದ ಕಟ್ಟಡದ ಭದ್ರತೆ (ಬಿಗಿ) ಅಧಿಕವಾಗುತ್ತದೆ. ಉತ್ತರ ಸಹಿತ ಮನೆಯ ಮೇಲಿನ ಭಾಗಗಳು ಸೇರಿ ಒಂದಾದರೂ ಕೆಳಗೆ ಪ್ರಧಾನಗೃಹಗಳಿಂದ ಕೋಣಾಲಯಗಳು ಅವುಗಳ ಮಧ್ಯದಲ್ಲಿರುವ ಅಂತರಾಳ, ಮೊಗಸಾಲೆಗಳಿಂದಾಗಿ ಪ್ರತ್ಯೇಕವಾಗುತ್ತವೆ. ಆದುದರಿಂದ ಇಂತಹ ಮನೆಗೆ ಸಂಶ್ಲಿಷ್ಟಭಿನ್ನಶಾಲೆಯೆಂದು ಹೆಸರು.

ಸಂಶ್ಲಿಷ್ಟ ಭಿನ್ನಶಾಲೆ (ನಂದ್ಯಾವರ್ತರೂಪ)



ಚಿತ್ರ. ೫೪, ಅ.೪, ಶ್ಲೋ.೧೫

೯. ಕೋಣಾಲಯಗಳ ಯೋನಿನಿರ್ದೇಶ

ಶ್ಲೋಕ : ಸರ್ವತ್ರಾಪಿ ಚ ಕೋಣಗೇಹಪರಿಣಾಹಾಪ್ಯೈ ಸ್ವದಿಗ್ಯೋನಿರೇ -
ವೋಕ್ತಸ್ತತ್ರ ವಿದಿಗ್ಗೃಹಾಸ್ತು ಸಕಲಾ ಜನ್ಯಾ ಭವಂತ್ಯೇವ ಹಿ
ದಿಕ್‌ಶಾಲಾ ಜನಕಾ ಭವಂತಿ ಚ ತತಃ ಕೇತುರ್ಧ್ವಜೇದೀಶ್ವರೇ
ಸಿಂಹೋऽಗ್ನೌ ನಿರ್ಋತೌ ವೃಷಃ ಕರಿವರೋ ವಾಯೌ ನೃಣಾಂ ಧಾಮನಿ ॥೧೬॥

ತಾತ್ಪರ್ಯ :

ಕೋಣಾಲಯಗಳ ಸುತ್ತಳತೆಯು ಸರ್ವತ್ರ ಅವುಗಳಿಗೆ ಸಂಬಂಧಿಸಿದ ಪ್ರಧಾನದಿಕ್‌ಗೃಹದ ಯೋನಿಯಲ್ಲಿಯೇ ಇರಬೇಕು. ವಿದಿಕ್‌ಗೃಹ ಜನ್ಯ. ದಿಕ್-ಗೃಹವು ಜನಕ. (ಮಗ ಮತ್ತು ತಂದೆಯಂತೆ) ಆದುದರಿಂದ ಮನುಷ್ಯಾಲಯಗಳಲ್ಲಿ ಈಶಾನ್ಯದ ಕೋಣಾಲಯವು ಧ್ವಜಾಯದಲ್ಲಿರಬೇಕು. ಆಗ್ನೇಯ ದಿಕ್ಕಿನ ಕೋಣಾಲಯವು ಸಿಂಹಯೋನಿಯಲ್ಲಿರಬೇಕು. ನೈಋತ್ಯ ದಿಕ್ಕಿನ ಕೋಣಾಲಯವು ವೃಷಭಾಯದಲ್ಲಿರಬೇಕು. ವಾಯವ್ಯ ದಿಕ್ಕಿನ ಕೋಣಾಲಯವು ಗಜಾಯದಲ್ಲಿರಬೇಕು.

ವಿ.ವಿ. :

ಅಧ್ಯಾಯ ೩, ಶ್ಲೋ ೨೯ರಲ್ಲಿ ದಿಕ್ಕುಗಳ ಮತ್ತು ವಿದಿಕ್ಕುಗಳ ಯೋನಿಗಳನ್ನು ನಿರ್ದೇಶಿಸಲಾಗಿದೆ. ಈ ಶ್ಲೋಕದಲ್ಲಿ ಅವುಗಳ ಜನ್ಯ-ಜನಕ ಸಂಬಂಧವನ್ನು ತಿಳಿಸುವ ಮೂಲಕ ಯೋನಿನಿರ್ಣಯವನ್ನು ಸ್ಪಷ್ಟೀಕರಿಸಿರುತ್ತಾರೆ. ದಿಕ್ ಗೃಹಗಳಿಗೂ ವಿದಿಕ್ ಗೃಹಗಳಿಗೂ ತಂದೆ-ಮಗನ ಸಂಬಂಧ. ದಿಕ್ ಗೃಹ ತಂದೆ, ಜನಕ. ವಿದಿಕ್ ಗೃಹ ಮಗ, ಜನ್ಯ. ಆದುದರಿಂದ ತಂದೆಗೆ ನಿರ್ದೇಶಿಸಿದ ಆಯವೇ ಮಗನಿಗೆ ಬರಬೇಕು. ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರ ಇವುಗಳು ಜನಕನ ಸ್ಥಾನದಲ್ಲಿರುವ ದಿಕ್ಕುಗಳು. ಈಶಾನ್ಯ, ಆಗ್ನೇಯ, ನೈಋತ್ಯ ಮತ್ತು ವಾಯವ್ಯಗಳು ಆ ದಿಕ್ಕುಗಳ ಜನ್ಯಸ್ಥಾನದಲ್ಲಿರುವ ವಿದಿಕ್ಕುಗಳು. ಶಾಸ್ತ್ರದಲ್ಲಿ ಪೂರ್ವ ದಿಕ್ಕಿಗೆ ಧ್ವಜಯೋನಿ, ದಕ್ಷಿಣಕ್ಕೆ ಸಿಂಹಯೋನಿ, ಪಶ್ಚಿಮಕ್ಕೆ ವೃಷಭಯೋನಿ ಮತ್ತು ಉತ್ತರಕ್ಕೆ ಗಜಯೋನಿಯೆಂದು ನಿರ್ದಿಷ್ಟವಾಗಿದೆ. ಹಾಗೆ ನಿರ್ದಿಷ್ಟ ಪಡಿಸಿದ ದಿಕ್ಕುಗಳ ಯೋನಿಯೇ ಅದಕ್ಕೆ ಸಂಬಂಧಿಸಿದ ವಿದಿಕ್ಕಿಗೂ ಯೋನಿಯಾಗಿರಬೇಕು. ಅದನ್ನು ಈ ಕೆಳಗಿನಂತೆ ತಿಳಿಸಬಹುದು.

ಜನಕ ದಿಕ್ಕು / ಗೃಹ	ಯೋನಿ	ಜನ್ಯದಿಕ್ಕು/ಕೋಣಾಲಯ	ಯೋನಿ
ಪೂರ್ವ	ಧ್ವಜ	ಪೂರ್ವ-ಉತ್ತರ-ಈಶಾನ್ಯ (ಮಿತ್ರತ್ವ)	ಧ್ವಜ
ದಕ್ಷಿಣ	ಸಿಂಹ	ದಕ್ಷಿಣ-ಪೂರ್ವ-ಆಗ್ನೇಯ	ಸಿಂಹ
ಪಶ್ಚಿಮ	ವೃಷಭ	ಪಶ್ಚಿಮ-ದಕ್ಷಿಣ-ನೈಋತ್ಯ (ಮಿತ್ರತ್ವ)	ವೃಷಭ
ಉತ್ತರ	ಗಜ	ಉತ್ತರ-ಪಶ್ಚಿಮ-ವಾಯುವ್ಯ	ಗಜ

೧೦. ಶ್ಲಿಷ್ಟಭಿನ್ನಾಷ್ಟಶಾಲಾ (4)


ಶ್ಲೋಕ : ಏವಂ ಸಂಶ್ಲಿಷ್ಟಭಿನ್ನಾಲಯ ವಿಧಿವದಥಾಕಲ್ಪ್ಯ ಸರ್ವೋತ್ತರಾಣಿ
ಸ್ವೋಕ್ತೈರ್ದಿಗ್ಯೋನಿಭಿಶ್ಚೈವ ಚ ಪರಿಧಿಮುಪಾದಾಯ ಕೋಣಾಲಯಾನಾಮ್
ದಿಗ್ಗೇಹಾಂತಾಂತರಾಲೇ ಪೃಥಗಪಿ ಚ ಮಹಾದ್ವಾರಮಧ್ಯಂ ವಿನಾನ್ಯ -
ತ್ರಾದಧ್ಯಾತ್ ಕೋಣಗೇಹೋತ್ತರಮಪರಿಮಿತಿ ಶ್ಲಿಷ್ಟಭಿನ್ನಾಷ್ಟಶಾಲಾ ||೧೭||

ತಾತ್ಪರ್ಯ :

ಸಂಶ್ಲಿಷ್ಟ ಭಿನ್ನಶಾಲೆಯ ವಿಧಿವಿಧಾನಕ್ಕೆ ಅನುಗುಣವಾಗಿ ಎಲ್ಲ ಉತ್ತರಗಳನ್ನು ರಚಿಸಬೇಕು. ದಿಕ್‌ಗೃಹಗಳಿಗೆ ನಿರ್ದಿಷ್ಟವಾದ ಯೋನಿಗಳ್ನು ಆಯಾ ಮೂಲೆಮನೆಗಳ ಸುತ್ತಳತೆಗೂ ಅಳವಡಿಸಿ ಮೂಲೆ ಮನೆಗಳ (ಕೋಣಾಲಯ) ಉತ್ತರಗಳನ್ನು ಅಂತರಾಳದಲ್ಲಿ ದಿಕ್‌ಗೃಹದ ಕೊನೆಯಲ್ಲಿ ಉತ್ತರಕ್ಕೆ ಸೇರಿಸಬೇಕು. ಹಾಗೆ ಸೇರಿಸುವಾಗ ದ್ವಾರಮಧ್ಯವನ್ನು ಬಿಡಬೇಕು. ಅದನ್ನೇ 'ಶ್ಲಿಷ್ಟಭಿನ್ನಾಷ್ಟಶಾಲೆ' ಎನ್ನುತ್ತಾರೆ.

ವಿ.ವಿ. :

1. ಉತ್ತರಗಳನ್ನು ಮಿತ್ರತ್ವವಿರುವ ದಿಕ್‌ಗೃಹಗಳಿಗೆ ಸೇರಿಸಬೇಕು.
2. ಪೂರ್ವ ಮತ್ತು ಉತ್ತರ ದಿಕ್ಕುಗಳಿಗೆ ಹಾಗೂ ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳಿಗೆ ಮಿತ್ರತ್ವವಿದೆ.
3. ಇಲ್ಲಿ ಎಲ್ಲ ದಿಕ್‌ಶಾಲೆಗಳಿಗೆ ಮತ್ತು ವಿದಿಕ್‌ಶಾಲೆಗಳಿಗೆ ಮೊಗಸಾಲೆ (ಅಂತರಾಳ)ಯಿದ್ದು ಒಂದು ಮತ್ತೊಂದನ್ನು ಪ್ರತ್ಯೇಕಿಸುವ ಕಾರಣ ಶ್ಲಿಷ್ಟಭಿನ್ನ ಅಷ್ಟಶಾಲೆಯಾಗುತ್ತದೆ.



ಚಿತ್ರ. ೫೫, ಅ.೪, ಶ್ಲೋ.೧೭.

ಶ್ಲೋಕ : ಕೋಣಗೃಹೋತ್ತರಯೋಗಃ ಸಂಧಿಮೃತೇ ದಿಗ್ಗೃಹೋತ್ತರಾಂತೇಷು
ಯತ್ರ ಸ್ಯಾತ್ ತತ್ರ ಭವೇತ್ ಭಿನ್ನತ್ವಂ ತದ್ಗೃಹಾಶ್ಚತುರ್ಧೇತಿ ॥೧೮॥

ತಾತ್ಪರ್ಯ :

ದಿಕ್ ಗೃಹಗಳ ಉತ್ತರಗಳ ಅಂತ್ಯಕ್ಕೆ ಕೋಣಾಲಯಗಳ (ವಿದಿಕ್ ಗೃಹಗಳ) ಉತ್ತರಗಳನ್ನು ಜೋಡಿಸುವ ಕಾರಣ ಎರಡು ಆಲಯಗಳೂ ಸೇರದ ಭಿನ್ನತ್ವ ಉಂಟಾಗುತ್ತದೆ. ಅಂತಹ ಮನೆಗಳು ನಾಲ್ಕು ವಿಧಗಳಾಗುತ್ತವೆ.

ವಿ.ವಿ. :

ನಾಲ್ಕು ವಿಧದ ಭಿನ್ನಶಾಲೆಗಳು ಈ ರೀತಿಯಾಗಿವೆ (೧) ವಿಶುದ್ಧಭಿನ್ನಶಾಲಾ (೨) ಶಿಷ್ಟಭಿನ್ನಶಾಲಾ (೩) ಸಂಶ್ಲಿಷ್ಟ ಭಿನ್ನಶಾಲಾ ಮತ್ತು (೪) ಶ್ಲಿಷ್ಟಭಿನ್ನಾಷ್ಟಶಾಲಾ.

೧೧. ಉತ್ತರಗಳ (ವಾಲ್‌ಪ್ಲೇಟ್) ಜೋಡಣೆಯ ಕ್ರಮ

ಶ್ಲೋಕ : ದೀರ್ಘವ್ಯಾಸಾದ್ಯಭಾವೇ ಪೃಥಗಥ ವಿಧಿವತ್ಸಂಧಿ ಕರ್ಮೋಕ್ತರೀತ್ಯಾ
ಸಂಧಾಯಾ ಕೋಣಗೇಹಾವಧಿ ಬಹಿರುದಿತಾನ್ಯುತ್ತರಾಣ್ಯತ್ರ ಧೀಮಾನ್
ಆಧಾರೀಕೃತ್ಯ ಪೂರ್ವಾಪರನಿಲಯ ಬಹಿಷ್ಠೋತ್ತರಸ್ಯಾಗ್ರಮೂಲಾ
ವಾಧೇಯತ್ವೇನ ಚಾನ್ಯದ್ ದ್ವಿತಯಮಿತಿ ಚತುಷ್ಕೋಣಸಂಧಿಂ ವಿದಧ್ಯಾತ್ ॥೧೯॥


ತಾತ್ಪರ್ಯ :

ಉತ್ತರಕ್ಕೆ ಬೇಕಾದಷ್ಟು ಉದ್ದ ಮತ್ತು ಅಗಲವಿರುವ ಮರವು ಸಿಗದೇ ಹೋದರೆ ವಿಧಿಪ್ರಕಾರ ಹೊರಗಿನ ಉತ್ತರವನ್ನು ಪ್ರತ್ಯೇಕವಾಗಿ ಸಂಧಿಸಿ ಕೋಣಾಲಯದ ಕೊನೆಯವರೆಗೆ ಕೊಂಡುಹೋಗಬೇಕು. ನಾಲ್ಕು ಮೂಲೆಗಳಲ್ಲಿ ಉತ್ತರಗಳನ್ನು ಜೋಡಿಸುವಾಗ ಪೂರ್ವಭಾಗದ ಮನೆಗೆ ಪೂರ್ವ-ಪಶ್ಚಿಮವಾಗಿ ಉತ್ತರದ ಮೂಲ ಮತ್ತು ಅಗ್ರಭಾಗವನ್ನು ಇಟ್ಟು, ಪಶ್ಚಿಮದ ಮನೆಗೆ ಪಶ್ಚಿಮ-ಪೂರ್ವವಾಗಿ ಮೂಲ ಮತ್ತು ಅಗ್ರಭಾಗ ಬರುವಂತೆ ಇದ್ದು ದಕ್ಷಿಣೋತ್ತರವಾಗಿ ಇಟ್ಟ ಉತ್ತರಗಳು ಆಧಾರಗಳಾಗಿಯೂ ಪೂರ್ವ-ಪಶ್ಚಿಮವಾಗಿ ಇಟ್ಟ ಉತ್ತರಗಳು ಆಧೇಯಗಳಾಗಿಯೂ ಇರುವಂತೆ ನಾಲ್ಕು ಮೂಲೆಗಳಲ್ಲಿಯೂ ಜೋಡಿಸಬೇಕು.


ವಿ.ವಿ. :

ಉತ್ತರಗಳನ್ನು ಜೋಡಿಸುವಾಗ ದಕ್ಷಿಣೋತ್ತರಗಳ ಉತ್ತರಗಳು ಕೆಳಗಡೆಯಿರಬೇಕು. ಅವುಗಳ ಮೇಲೆ ಪೂರ್ವ-ಪಶ್ಚಿಮದ ಉತ್ತರಗಳನ್ನು ಇಡಬೇಕು. ದಕ್ಷಿಣೋತ್ತರವಾಗಿ ಇಡುವ ಉತ್ತರದ ಸಂಧಿಯ ಚಡಿಗಳು ಮೇಲುಮುಖವಾಗಿರುತ್ತವೆ. ಪೂರ್ವ-ಪಶ್ಚಿಮವಾಗಿ ಇಡುವ ಉತ್ತರಗಳ ಚಡಿಗಳು ಕೆಳಮುಖದವುಗಳಾಗಿರುತ್ತವೆ. ಹಾಗಿದ್ದರೆ ಜೋಡಣೆಯ ಕ್ರಮ ಸರಿಯಾಗುತ್ತದೆ. ಅಲ್ಲದೆ, ಮನೆಯ ಮುಖದ ಕಡೆ ಆಧೇಯವಾದ ಉತ್ತರದ ತುದಿಯಿರಬೇಕು.

ಉತ್ತರದ ಜೋಡಣೆಯ ಮಾದರಿ



ಸಂಖ್ಯೆ - 1 - ಆಧಾರ
ಸಂಖ್ಯೆ - 2 - ಆಧೇಯ



ಚಿತ್ರ. ೫೬, ಅ. ೪, ಶ್ಲೋ. ೧೯. ಚಿತ್ರ. ೫೭, ಅ. ೪, ಶ್ಲೋ. ೧೯.

೧೨. ಮಿಶ್ರಭಿನ್ನಚತುಶ್ಶಾಲಾ (5)

ಶ್ಲೋಕ : ನಾಹಂ ಕೇತುಜಮೇವಮತ್ರ ಬಹಿರಪ್ಯಂತಶ್ಚ ಕೃತ್ವಾ ವಿದಿ -
ಗ್ಗೇಹಾಂತರ್ವಿಹಿತೋತ್ತರೈರ್ವಿರಹಿತಂ ತ್ವಂತಸ್ಥಕೋಣೇಷ್ವಪಿ
ಸಂದಧ್ಯಾತ್ ಬಹಿರುತ್ತರೋಕ್ತವದಿದಂ ಸ್ಯಾನ್ಮಿಶ್ರಭಿನ್ನಂ ಚತು
ಶ್ಶಾಲಂ ದಿಕ್‌ನಿಲಯಾಃ ಸ್ವಯೋನಿಗತಿಭಿರ್ಯುಕ್ತಾಃ ಸಮಸ್ತಾ ಅಪಿ ॥೨೦॥

ತಾತ್ಪರ್ಯ :

ಮಿಶ್ರಭಿನ್ನಶಾಲೆಯ ಹೊರಗಿನ ಸುತ್ತಳತೆ ಮತ್ತು ಅಂಗಳವು ಧ್ವಜಯೋನಿಯಲ್ಲಿರಬೇಕು. ಅಂಗಳದ ಮೂಲೆಗಳೂ (ಚತುಶ್ಶಾಲೆಯ) ಹೊರಗಿನ ಉತ್ತರಗಳ ಜೋಡಣೆಯಂತೆ ಇರಬೇಕು. ಕೋಣಾಲಯಗಳಿಗೆ ಒಳಗಿನ ಉತ್ತರಗಳಿರಬಾರದು. ಎಲ್ಲ ದಿಕ್ ಶಾಲೆಗಳು ಅವುಗಳ ನಿಶ್ಚಿತಯೋನಿ ಮತ್ತು ಗತಿಯಿಂದ ಕೂಡಿರಬೇಕು. ಇಂತಹ ಚತುಶ್ಶಾಲೆ ಮಿಶ್ರಭಿನ್ನಚತುಶ್ಶಾಲೆ ಎನ್ನಿಸುತ್ತದೆ.

ಶ್ಲೋಕ : ಕೋಣೇಷು ಸರ್ವನಿಲಯೋತ್ತರಯೋಗಭೇದಾ -
ನ್ಮಿಶ್ರತ್ವಮತ್ರ ತು ವಿದಿಗ್ಗೃಹಹೀನಭಾವಾತ್
ದಿಙ್ಮಂದಿರಾಣಿ ನಿಜಯೋನಿಗತಿಪ್ರಭೇದೈ -
ರ್ಯುಕ್ತಾನ್ಯಮೂನಿ ಯದತೋಽಪಿ ಚ ಭಿನ್ನತಾತ್ರ ॥೨೧॥

ತಾತ್ಪರ್ಯ :

ಎಲ್ಲ ಮನೆಗಳ ಉತ್ತರಗಳು ಕೋಣಗಳಲ್ಲಿ (ಮೂಲೆ) ಸೇರುವುದರಿಂದ ಮಿಶ್ರತ್ವವು ಬರುತ್ತದೆ. ವಿದಿಕ್‌ಗೃಹಗಳ ಒಳಗಿನ ಉತ್ತರವು ಇಲ್ಲದಿರುವುದರಿಂದ ಅವುಗಳ ಅಸ್ತಿತ್ವವೇ ಇಲ್ಲದಂತಾಗುವುದರಿಂದ ಮತ್ತು ದಿಕ್‌ಗೃಹಗಳಿಗೆ ತನ್ನದೇ ಆದ ಯೋನಿ, ಗತಿ ಪ್ರಭೇದಗಳಿರುವುದರಿಂದ ಭಿನ್ನತ್ವ ಬರುತ್ತದೆ. ಈ ರೀತಿ ಮಿಶ್ರತ್ವ ಮತ್ತು ಭಿನ್ನತ್ವ ಎರಡೂ ಈ

ಚತುಶ್ಶಾಲೆಯಲ್ಲಿರುವುದರಿಂದ ಇದಕ್ಕೆ ಮಿಶ್ರಭಿನ್ನಶಾಲೆಯೆಂದು ಹೆಸರು.

ವಿ.ವಿ. :


ಈ ಶ್ಲೋಕವು ಹಿಂದಿನ ಶ್ಲೋಕದಲ್ಲಿ ಹೇಳಿದ ಮಿಶ್ರ ಭಿನ್ನಶಾಲೆಯ ಲಕ್ಷಣದ ವಿವರಣೆಯನ್ನು ಸ್ಪಷ್ಟಪಡಿಸುತ್ತದೆ.

೧೩. ಸಮ್ಮಿಶ್ರ ಭಿನ್ನಶಾಲಾ (6)

ಶ್ಲೋಕ : ಪರ್ಯಂತಂ ಧ್ವಜಮಾದಧೀತ ಬಹಿರಪ್ಯಂತಶ್ಚ ತತ್ಪತ್ರಮಾ -
ನಾಂತಂ ಚಾಂಕಣನಾಹಮಪ್ಯಥ ಬಹಿರ್ನಾಹಂ ಚ ದಿಗ್ಧಾಮಸು
ಕೋಣಾಗಾರಗತೋತ್ತರಾಂತರುದಿತಂ ನಾಹಂ ಚ ಕೇತೂದ್ಭವಂ
ಯುಕ್ತ್ಯಾತೂತ್ತರ ವಿಸ್ತೃತಿಂ ಚ ಜನಯೇತ್ಸಂಮಿಶ್ರಭಿನ್ನಾಲಯೇ ॥೨೨॥

ತಾತ್ಪರ್ಯ :

ಸಮ್ಮಿಶ್ರ ಭಿನ್ನಶಾಲೆಯಲ್ಲಿ ಹೊರಗಿನ ಸುತ್ತಳತೆ ಧ್ವಜಯೋನಿಯಲ್ಲಿರಬೇಕು. ಪತ್ರಮಾನದ ಹೊರಗಿನ ಮತ್ತು ಒಳಗಿನ ಸುತ್ತಳತೆ, ಅಂಗಣದ ಸುತ್ತಳತೆ, ಪ್ರಧಾನ ಗೃಹಗಳ (ದಿಕ್ ಗೃಹಗಳು) ಹೊರಗಿನ ಸುತ್ತಳತೆ ಮತ್ತು ಕೋಣಾಲಯಗಳ ಉತ್ತರಗಳ ಒಳಭಾಗದ ಸುತ್ತಳತೆಗಳು ಧ್ವಜಯೋನಿಯಲ್ಲಿರಬೇಕು. ಇಂತಹ ಸಮ್ಮಿಶ್ರಭಿನ್ನ ಶಾಲೆಗಳಲ್ಲಿ ಉತ್ತರದ ಅಗಲವನ್ನು ಬಹಳ ಜಾಗರೂಕತೆಯಿಂದ ಬುದ್ಧಿಯನ್ನು ಉಪಯೋಗಿಸಿ ನಿಶ್ಚಯಿಸಬೇಕು. (ಇಲ್ಲದೇ ಹೋದರೆ ಯೋನಿ ವ್ಯತ್ಯಾಸವಾಗುವ ಸಾಧ್ಯತೆಯಿದೆ).



ಹೊರ ಆಯ 80 - 8 (ಧ್ವ)
ಒಳ ಆಯ 43 - 0 (ಧ್ವ)
ಜಗಲಿ 29 - 16 (ಧ್ವ)
ದಿಕ್ ಗೃಹಗಳು 29 - 16 (ಧ್ವ)
ಗೋಡೆ ದಪ್ಪ 0 - 7 - 4

ಚಿತ್ರ. ೫೮, ಅ. ೪, ಶ್ಲೋ. ೨೨.

೧೪. ಉತ್ತರದ ಅಗಲವನ್ನು ನಿಶ್ಚೈಸುವ ವಿಧಾನ

ಶ್ಲೋಕ : ಮಾನಾದ್ ಬಾಹ್ಯಾನ್ನಿಜೇಷ್ಟಾದ್ರಹಯತು ಮಿತಿಮಾಭ್ಯಂತರೀಂ ಶೇಷಮಾನಾತ್
ಕೋಣಾಬ್ಧ್ಯಶ್ರೋದರೋದ್ಯದ್ಭುಜಮಪಿ ಶಿತಧೀರಷ್ಟನಿಘ್ನಂ ವಿಜಹ್ಯಾತ್
ತಚ್ಛೇಷಾದುತ್ತರಾಣಾಮಪಿ ಜನಯತು ವಿಷ್ಕಂಭಮಷ್ಟ್ಯಂಶತೋಽಮೂ -
ನ್ಯಾಪರ್ಯಂತಾಯತಾನ್ಯಾಕಲಯತು ಚ ಚತುರ್ದಿಕ್ಷು ಬಾಹ್ಯಾಂತರಾಣಿ ॥೨೩॥

ತಾತ್ಪರ್ಯ :

ತನಗೆ ಇಷ್ಟಬಂದ ಹೊರಗಿನ ಸುತ್ತಳತೆಯಿಂದ ಒಳಗಿನ ಸುತ್ತಳತೆಯನ್ನು ಕಳೆಯಬೇಕು. ಹಾಗೆ ಕಳೆದು ಉಳಿದುದರಿಂದ ಚತುರಶ್ರವಾದ ಕೋಣಾಲಯದ ಒಳಗಿನ ಭುಜದ ಎಂಟು ಪಾಲಷ್ಟನ್ನು ಕಳೆಯಬೇಕು. ಆಗ ಉಳಿಯುವ ಸಂಖ್ಯೆಯನ್ನು 16ರಿಂದ ಭಾಗಿಸಿದಾಗ ಆ $\frac{1}{16}$ ಅಂಶವೇ ಉತ್ತರದ ಅಗಲ. ಒಳಗಿನ ಮತ್ತು ಹೊರಗಿನ ಉತ್ತರದ ಹೊರ ಬದಿಯನ್ನು ತೆಗೆದುಕೊಂಡು ನಾಲ್ಕೂ ಕಡೆಗಳಲ್ಲಿ ಅವುಗಳನ್ನು ಜೋಡಿಸಬೇಕು.

ಉದಾ :


1. ಹೊರಗಿನ ಸುತ್ತಳತೆ - 59 ಕೋಲು (ಧ್ವಜಯೋನಿ)
2. ಒಳಗಿನ ಸುತ್ತಳತೆ - 29 ಕೋ. 16 ಅಂ.
3. ಹೊರಗಿನ ಸುತ್ತಳತೆಯಿಂದ ಒಳಗಿನ ಸುತ್ತಳತೆಯನ್ನು ಕಳೆದು ಉಳಿದುದು
   59 ಕೋ.— 29 ಕೋ. 16 ಅಂ. = 29 ಕೋ. 8 ಅಂ.
4. ಕೋಣಾಲಯದ ಒಳಗಿನ ಭುಜ $\frac{29.8}{8}$ = 3 ಕೋ. 16 ಅಂ.
5. ಕೋಣಾಲಯದ ಒಳಗಿನ ಸುತ್ತಳತೆ - 3 ಕೋ. 16 ಅಂ. x 4 = 14 ಕೋ. 16 ಅಂ.
6. ಸಮೀಪದ ಧ್ವಜಯೋನಿ - 13 ಕೋ. 16 ಅಂ.
7. ಕೋಣಾಲಯದ ಒಳ ಭುಜ - 3 ಕೋ. 16 ಅಂ.
8. ಆ ಭುಜದ ಎಂಟು ಪಾಲಿನಷ್ಟು - 27 ಕೋ. 8 ಅಂ.
9. ಕ್ರ.ಸಂ. 3 ರಿಂದ 8 ನ್ನು ಕಳೆದಾಗ - 29 ಕೋ. 8 ಅಂ. – 27 ಕೋ. 8 ಅಂ. = 2 ಕೋ. ಉಳಿದುದು
10. ಉಳಿದುದನ್ನು 16ರಿಂದ ಭಾಗಿಸಿ ಬಂದ ಒಂದು ಅಂಶ $\frac{2}{16}$ ಕೋ. = 0 ಕೋ. 3 ಅಂ.
11. ∴ ಆ ಅಂಶವೇ ಉತ್ತರದ ಅಗಲ - 0 ಕೋ. 3 ಅಂ.

೧೫. ಮಿಶ್ರಕಚತುಶ್ಶಾಲಾ (7)

ಶ್ಲೋಕ : ಪ್ರಾಗ್ವತ್ ಪ್ರಾಂಗಣ ಪತ್ರಮಾನ ಬಹಿರಂತರ್ನಾಹಕೋಣಾಲಯಾಃ
ಕೇತೂತ್ಥಾ ಹಿ ದಿಗಾಲಯಾಸ್ತು ನಿಜಯೋನ್ಯಾಢ್ಯಾಃ ಸ್ವಗತ್ಯಾನ್ವಿತಾಃ
ರಾಜಾರ್ಹಂ ತದಪೀಹ ಮಿಶ್ರಕಚತುಶ್ಶಾಲಂ ನೃಗೇಹಂ ವಿದು -
ರ್ದಿಕ್ ಶಾಲಾ ನಿಜಯೋನಿಜಾ ಯದಖಿಲಾರ್ಹಾಸ್ತ್ವಾದ್ವಿಜೇಷ್ಟಾ ನ ವಾ ॥೨೪॥

ತಾತ್ಪರ್ಯ :

ಹಿಂದೆ ಹೇಳಿದ ಸಮ್ಮಿಶ್ರಭಿನ್ನಶಾಲೆಯ (ಅ.೪, ಶ್ಲೋ.೨೨) ಲಕ್ಷಣಕ್ಕೆ ಅನುಗುಣವಾಗಿ ಅಂಗಳದ ಪತ್ರಮಾನವೂ, ಮೂಲೆಮನೆಗಳ (ಕೋಣಾಲಯಗಳ) ಹೊರಗಿನ ಮತ್ತು ಒಳಗಿನ ಸುತ್ತಳತೆಯೂ ಧ್ವಜಾಯದಲ್ಲಿರಬೇಕು. ಅಲ್ಲದೆ, ದಿಕ್ ಗೃಹಗಳು ಅವವುಗಳ ಯೋನಿ ಮತ್ತು ಗಮನಗಳಿಂದ ಕೂಡಿರಬೇಕು. ಹಾಗಿದ್ದರೆ ಅದಕ್ಕೆ ಮಿಶ್ರಕಚತುಶ್ಶಾಲೆಯೆಂದು ಹೆಸರು. ಇದು ರಾಜರಿಗೆ ಯೋಗ್ಯವಾದುದು. ದಿಕ್‌ಗೃಹಗಳು ತಮ್ಮದೇ ಯೋನಿ ಮತ್ತು ಗಮನಗಳಿಂದ ಕೂಡಿದ ಕಾರಣ ಸರ್ವರಿಗೂ ಶುಭ. ಆದರೆ ಬ್ರಾಹ್ಮಣರಿಗೆ ಶುಭವಲ್ಲ.



ಹೊರ ಆಯ 80 - 8 (ಧ್ವ)
ಒಳ ಆಯ 45 - 16 (ಧ್ವ)
ಪೂರ್ವದ ಮನೆ 29 - 16 (ಧ್ವ)
ದಕ್ಷಿಣದ ಮನೆ 30 - 8 (ಸಿಂ)
ಪಶ್ಚಿಮದ ಮನೆ 31 - 0 (ವೃ)
ಉತ್ತರದ ಮನೆ 29 - 0 (ಗ)
ಗೋಡೆ ದಪ್ಪ 0 - 9 - 0


ಚಿತ್ರ. ೫೯, ಅ. ೪, ಶ್ಲೋ. ೨೪.

೧೬. ಚತುಶ್ಶಾಲಾ (8)

ಶ್ಲೋಕ : ತುಲ್ಯಾ ತಾನವಿತಾನತಾಂಗಣವಿಧೌ ಗತ್ಯಾ ವಿನಾಂತರ್ಬಹಿ -
ರ್ಯೋರ್ಗೇ ತೂತ್ತರಪತ್ರಮಾನ ಪರಿಣಾಹೋಽಪ್ಯಸ್ತು ಕೇತೂದ್ಭವಃ
ಕೇತೂತ್ಥಾ ಅಪಿ ದಿಗ್ವಿದಿಕ್‌ನಿಲಯನಾಂತರ್ಭಾಗನಾಹಾಃ ಸ್ವಮ -
ಧ್ಯೋದ್ಯದ್ವಾರಪದಾ ಭವಂತಿ ಚ ಚತುಶ್ಶಾಲಂ ಗೃಹಂ ಭೂಭುಜಾಮ್ ॥೨೫॥

ತಾತ್ಪರ್ಯ :

ಅಂಗಳದ ಉದ್ದ ಮತ್ತು ಅಗಲ ಸಮವಾಗಿದ್ದು (ಚತುರಶ್ರ), ಗಮನ ವಿರಹಿತವಾಗಿರಬೇಕು. ಒಳಗಿನ ಮತ್ತು ಹೊರಗಿನ ಉತ್ತರದ ಸುತ್ತಳತೆ ಮತ್ತು ಪತ್ರಮಾನದ ಪರಿಧಿಗಳು ಧ್ವಜಾಯದಲ್ಲಿರಬೇಕು. ದಿಕ್ ಮತ್ತು ವಿದಿಕ್ಕುಗಳ ಮನೆಗಳ ಒಳಗಿನ ಸುತ್ತಳತೆ ಹಾಗೂ ಮಧ್ಯದ್ವಾರದ ಒಳಭಾಗ - ಇವುಗಳೆಲ್ಲ ಧ್ವಜಯೋನಿಯಲ್ಲಿರಬೇಕು. ಇಂತಹ ಚತುಶ್ಶಾಲೆಗಳು ರಾಜರುಗಳಿಗೆ ಉಚಿತವಾದವುಗಳು.



ಹೊರ ಆಯ 80 - 8 (ಧ್ವ)
ಒಳ ಆಯ 45 - 16 (ಧ್ವ)
ಪೂರ್ವದ ಗೃಹ 29 - 16 (ಧ್ವ)
ದಕ್ಷಿಣದ ಗೃಹ 30 - 8 (ಸಿಂ)
ಪಶ್ಚಿಮದ ಗೃಹ 31 - 0 (ವೃ)
ಉತ್ತರದ ಗೃಹ 29 - 0 (ಗ)
ಗೋಡೆ ದಪ್ಪ :
ಪೂ - ಪಶ್ಚಿಮ 0 - 11 - 0
ಉ - ದಕ್ಷಿಣ 0 - 7 - 0

ಚಿತ್ರ. ೬೦, ಅ. ೪, ಶ್ಲೋ. ೨೫.

೧೭. ಮಧ್ಯಪ್ರರೂಢಶಾಲಾ (9)

ಶ್ಲೋಕ : ಕ್ವಚಿಚ್ಚತುಶ್ಶಾಲಗೃಹೇ ಸಮಸ್ತೇ ಸರ್ವೋತ್ತರಾಣಾಮಪಿ ಮಧ್ಯಸೂತ್ರೇ
ನಾಹೋ ವಿಧೇಯೋ ಯದಿ ತತ್ತು ಮಧ್ಯಪ್ರರೂಢಮಾನಂ ಭವನಂ ವದಂತಿ ॥೨೬॥

ತಾತ್ಪರ್ಯ :

ಎಲ್ಲ ಚತುಶ್ಶಾಲೆಗಳಲ್ಲಿ ಎಲ್ಲ ಉತ್ತರಗಳ ಮಧ್ಯ ಸೂತ್ರದ ಅಳತೆಯನ್ನು ಸುತ್ತಳತೆಯನ್ನಾಗಿ ಕಲ್ಪಿಸಿದರೆ ಮಧ್ಯಪ್ರರೂಢ ಶಾಲೆಯಾಗುತ್ತದೆ.

೧೮. ಏಕಶಾಲಾ (ಒಂದು ಮನೆ)

ಶ್ಲೋಕ : ಏಕಂ ಸ್ಯಾದ್ಯದಿ ದಕ್ಷಿಣಂ ಗೃಹಮುಭೇ ಚೇತ್ತಚ್ಚ ಪಾಶ್ಚಾತ್ಯಕಂ
ತೇ ಸೌಮ್ಯಂ ಚ ಗೃಹತ್ರಿಕೇ ಗೃಹಚತುಷ್ಕೇ ಪ್ರಾಚ್ಯಮೇತಾನಿ ಚ
ವಾಂಛಂತಿ ಕ್ವಚಿದೇಕಮೇವ ಭವನಂ ಯದ್ಯತ್ರ ಪಾಶ್ಚಾತ್ಯಕಂ
ಚೇಷ್ಟಂ ಗೇಹಯುಗಾದಿನಿರ್ಮಿತಿವಿಧೌ ಪ್ರಾಗುಕ್ತವತ್ ಕಲ್ಪ್ಯತಾಮ್ ॥೨೭॥

ತಾತ್ಪರ್ಯ :

ಒಂದು ಮನೆಯನ್ನು ರಚಿಸುವುದಾದರೆ ದಕ್ಷಿಣ ದಿಕ್ಕಿನಲ್ಲಿಯೂ, ಎರಡು ಮನೆಗಳನ್ನು

ನಿರ್ಮಿಸುವುದಾದರೆ ದಕ್ಷಿಣ ಮತ್ತು ಪಶ್ಚಿಮದಲ್ಲಿಯೂ, ಮೂರು ಮನೆಗಳನ್ನು ಕಟ್ಟುವುದಾದರೆ ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಕ್ಕುಗಳಲ್ಲಿಯೂ, ನಾಲ್ಕು ಮನೆಗಳನ್ನು ಕಟ್ಟುವುದಾದರೆ ದಕ್ಷಿಣ, ಪಶ್ಚಿಮ, ಉತ್ತರ ಮತ್ತು ಪೂರ್ವ ದಿಕ್ಕುಗಳಲ್ಲಿಯೂ ನಿರ್ಮಿಸಬೇಕು. ಒಂದೇ ಮನೆಯನ್ನು ಕಟ್ಟಲು ಬಯಸುವುದಾದರೆ ಪಶ್ಚಿಮ ದಿಕ್ಕಿನಲ್ಲಿ ಕಟ್ಟಬೇಕು. ಒಂದಕ್ಕಿಂತ ಹೆಚ್ಚು ಮನೆಗಳನ್ನು ನಿರ್ಮಿಸುವುದಾದರೆ ಮೇಲೆ ಹೇಳಿದಂತೆ ಮಾಡಬೇಕು.


ವಿ.ವಿ. :

ಈ ಶ್ಲೋಕದಲ್ಲಿ ವಿವರಿಸಿದ ಏಕ ಶಾಲೆಗಳನ್ನು ನಿರ್ಮಿಸುವಾಗ ಅವುಗಳ ಮುಖಗಳು ವಿರುದ್ಧ ದಿಕ್ಕಿನ ಕಡೆ ಇರುತ್ತವೆ. ಉದಾ : ದಕ್ಷಿಣ ದಿಕ್ಕಿನ ಮನೆಗೆ ಉತ್ತರಮುಖವಾಗುತ್ತದೆ. ಇದೇ ರೀತಿ ಇತರ ದಿಕ್‌ಗೃಹಗಳ ಮುಖಗಳು ಕೂಡ. ಇವುಗಳೆಲ್ಲ ವಾಸ್ತು ಮಂಡಲದೊಳಗೆ ಇರುವುದರಿಂದ ಪ್ರತಿಯೊಂದು ಮನೆಯ ಮುಂದೆಯೂ ಬ್ರಹ್ಮಸ್ಥಾನ ಇದ್ದೇ ಇರುತ್ತದೆ.


ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಪೂರ್ವ ಮುಖದ ಪಶ್ಚಿಮ ದಿಕ್ಕಿನ ಮನೆಗಳನ್ನು ಕಟ್ಟುವುದು ಸೂಕ್ತ. ಪಶ್ಚಿಮ ದಿಕ್ಕಿನ ಮನೆಗೆ ವೃಷಭ ಯೋನಿಯಲ್ಲದೆ ಇತರ ಯೋನಿಗಳನ್ನು ಅಳವಡಿಸುವ ಸೌಲಭ್ಯವಿರುವುದರಿಂದ ನಮಗೆ ಬೇಕಾದ ರೀತಿಯ ಗೃಹವಿನ್ಯಾಸವನ್ನು ಮಾಡಬಹುದು. ಹವಾಮಾನದ ದೃಷ್ಟಿಯಿಂದಲೂ ಈ ಪ್ರದೇಶಕ್ಕೆ ಪಶ್ಚಿಮ ದಿಕ್ಕಿನ ಮನೆಯೇ ಯೋಗ್ಯ. ಸೂರ್ಯಪ್ರಕಾಶವೂ ಮನೆಯ ಒಳಗೆ ನೇರವಾಗಿ ಬರಲು ಅನುಕೂಲವಾಗುತ್ತದೆ.

ಅದೇ ರೀತಿ ಉತ್ತರ ಮುಖದ ದಕ್ಷಿಣ ದಿಕ್ಕಿನ ಮನೆಯೂ ಒಳ್ಳೆಯದೇ. ಆ ದಿಕ್ಕಿಗೆ ಅವರವರಿಗೆ ಬೇಕಾದಂತೆ ಸಿಂಹ ಅಥವಾ ಧ್ವಜಯೋನಿಯನ್ನು ಬಳಸಬಹುದು. ಉತ್ತರವು ಕುಬೇರನ ಸ್ಥಾನವಾದುದರಿಂದ ಉತ್ತರಮುಖದ ಮನೆ ಸಂಪತ್ಕಾರಕವಾಗಿದೆ. ಅಲ್ಲದೆ ಭಾರತದ ದಕ್ಷಿಣ ಭಾಗ ಭೂಮಧ್ಯರೇಖೆಗಿಂತ ಸ್ವಲ್ಪವೇ ಮೇಲೆ ಇರುವುದರಿಂದ ಸೂರ್ಯನ ತಾಪ ವರ್ಷದ ಹೆಚ್ಚಿನ ತಿಂಗಳು ಇರುತ್ತದೆ. ಈ ತಾಪ ನಿವಾರಣೆಗೆ ಉತ್ತರ ಮುಖದ ದಕ್ಷಿಣ ದಿಕ್ಕಿನ ಮನೆ ಉಚಿತವಾಗಿದೆ. ಮಾತ್ರವಲ್ಲ, ದಕ್ಷಿಣ ಭಾಗಕ್ಕೆ ಗೋಡೆಯಿದ್ದು, ಪೂರ್ವಕ್ಕೆ ಮೀರಿ ನಿಲ್ಲುವ ಕಾರಣ ಸೂರ್ಯನ ತಾಪ ತಡೆಹಿಡಿದಂತಾಗಿ ಇಂತಹ ಮನೆ ಸುಖದಾಯಕವಾಗುತ್ತದೆ. ಉತ್ತರಕ್ಕೆ ಮುಖವಿರುವುದರಿಂದ ದಕ್ಷಿಣದ ಬಿಸಿಲಿನ ಬಾಧೆಯೇ ಇರದೆ ಮನೆಯ ಮುಂಭಾಗ ಉಷ್ಣಕಾಲದಲ್ಲಿಯೂ ಹೆಚ್ಚು ಉಷ್ಣತೆಯಿಲ್ಲದೆ ನಿಯಂತ್ರಿತ ಹವೆಯ ಅನುಕೂಲತೆಯನ್ನು ಒದಗಿಸುತ್ತದೆ. ಅಲ್ಲದೆ ಅದರ ಪರಿಣಾಮವಾಗಿ ಮನೆಯ ಮುಂದೆ ನೆಡುವ ಹೂಗಿಡಗಳೂ ಹೆಚ್ಚಿನ ತಾಪದಿಂದ ಬಳಲದೆ ಇರುತ್ತವೆ. ಈ ರೀತಿ ವಾಸ್ತುವು ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿರುವುದರಿಂದ ಈ ಶ್ಲೋಕದಲ್ಲಿ ಮೊದಲಿಗೆ ದಕ್ಷಿಣ, ಆಮೇಲೆ ಪಶ್ಚಿಮ ಅನಂತರ ಉತ್ತರ, ಆಮೇಲೆ ಪೂರ್ವದ ಮನೆಗಳಿಗೆ ಪ್ರಾಧಾನ್ಯ ಕೊಟ್ಟುದನ್ನು ನಾವು ಗಮನಿಸಬೇಕಾಗಿದೆ. ಎರಡನೆಯದಾಗಿ, ಇಂತಹ ಶಾಲಾ ರಚನಾ ವಿಧಾನಗಳನ್ನು ಶಾಲಾ ಕಟ್ಟಡ, ವ್ಯಾಪಾರದ ಮಳಿಗೆಗಳ ಕಟ್ಟಡ ಮೊದಲಾದವುಗಳಿಗೆ ಸ್ವೀಕರಿಸಬಹುದು.

ಏಕಶಾಲೆಗಳ ಮಾದರಿಗಳು



ಚಿತ್ರ. ೬೧, ಅ. ೪, ಶ್ಲೋ. ೨೭



ಚಿತ್ರ. ೬೨, ಅ. ೪, ಶ್ಲೋ. ೨೭

೧೯. ತ್ರಿಶಾಲಾ (ಮೂರು ಮನೆಗಳು)

ಶ್ಲೋಕ : ಪ್ರಾಕ್ ಶಾಲಾರಹಿತಂ ಗೃಹತ್ರಿಕಮಥೋ ಸುಕ್ಷೇತ್ರಮ್ವೃದ್ಧಿಪ್ರದಮ್
ಚುಲ್ಲೀ ದಕ್ಷಿಣಮಂದಿರೇಣ ರಹಿತಂ ತದ್ವಿತ್ತಹಾನಿಪ್ರದಮ್
ಧ್ವಂಸಃ ಪಶ್ಚಿಮಶಾಲಯಾ ವಿರಹಿತಂ ಪ್ರತ್ಯಕ್ಷಯಾರಿಪ್ರದಮ್
ಸೌಮ್ಯೇನಂ ತು ಹಿರಣ್ಯನಾಭಿರಿತಿ ತದ್ವಿತ್ತಪ್ರದಂ ಸರ್ವದಾ ॥೨೮॥

ತಾತ್ಪರ್ಯ :


ಪೂರ್ವ ದಿಕ್ಕಿನಲ್ಲಿ ಮನೆಯಿಲ್ಲದೆ ಇತರ ಮೂರು ದಿಕ್ಕುಗಳಲ್ಲಿ ಮನೆಗಳಿದ್ದರೆ (ತ್ರಿಶಾಲಾ) ಅದಕ್ಕೆ ಸುಕ್ಷೇತ್ರವೆಂದು ಹೆಸರು. ಅದು ಹೆಸರಿಗೆ ತಕ್ಕಂತೆ ವೃದ್ಧಿಪ್ರದವಾಗಿದೆ. ದಕ್ಷಿಣ ದಿಕ್ಕಿನಲ್ಲಿ ಮನೆಯಿಲ್ಲದೆ ಇತರ ಮೂರು ಕಡೆ ಇದ್ದರೆ ಅದಕ್ಕೆ "ಚುಲ್ಲಿ" ಎಂದು ಹೆಸರು. ಅದು ವಿತ್ತಹಾನಿಯನ್ನು ಉಂಟುಮಾಡುತ್ತದೆ. ಪಶ್ಚಿಮ ದಿಕ್ಕಿನಲ್ಲಿ ಮನೆಯಿಲ್ಲದೆ ಉಳಿದ ದಿಕ್ಕುಗಳಲ್ಲಿದ್ದರೆ ಅದಕ್ಕೆ "ಧ್ವಂಸ" ಎನ್ನುತ್ತಾರೆ. ಅದು ಸಂತತಿನಾಶವನ್ನೂ, ಶತ್ರುವೃದ್ಧಿಯನ್ನೂ ಮಾಡುತ್ತದೆ. ಉತ್ತರ ದಿಕ್ಕಿನಲ್ಲಿ ಮನೆಯಿಲ್ಲದೆ ಇತರ ಮೂರು ಕಡೆ ಇದ್ದರೆ ಅದಕ್ಕೆ ಹಿರಣ್ಯನಾಭ ಎಂದು ಹೆಸರು. ಅದು ಹೆಸರಿಗೆ ಅನುಗುಣವಾಗಿ ಯಾವಾಗಲೂ ಸಂಪತ್ಕಾರಕವಾಗಿದೆ.

ವಿ.ವಿ. :


ತ್ರಿಶಾಲೆಗಳ ಹೆಸರು ಮತ್ತು ಫಲ

೧.	ಪ್ರಾಕ್ ಶಾಲಾ ರಹಿತತೆ (ದಕ್ಷಿಣ-ಪಶ್ಚಿಮ-ಉತ್ತರ)	ಸುಕ್ಷೇತ್ರ	ಅಭಿವೃದ್ಧಿಪ್ರದ
೨.	ದಕ್ಷಿಣ ಶಾಲಾ ರಹಿತತೆ (ಪಶ್ಚಿಮ -ಉತ್ತರ -ಪೂರ್ವ)	ಚುಲ್ಲಿ	ವಿತ್ತಹಾನಿ
೩.	ಪಶ್ಚಿಮ ಶಾಲಾ ರಹಿತತೆ (ಉತ್ತರ-ಪೂರ್ವ-ದಕ್ಷಿಣ)	ಧ್ವಂಸ	ಪುತ್ರಕ್ಷಯ, ಶತ್ರುಪ್ರದ
೪.	ಉತ್ತರ ಶಾಲಾ ರಹಿತತೆ (ಪೂರ್ವ-ದಕ್ಷಿಣ-ಪಶ್ಚಿಮ)	ಹಿರಣ್ಯನಾಭಿ	ವಿತ್ತಪ್ರದ


ತ್ರಿಶಾಲೆಗಳ ಮಾದರಿಗಳು




ಸುಕ್ಷೇತ್ರ (ಒಳ್ಳೆಯದು)
(ಪೂರ್ವದಲ್ಲಿ ಮನೆಯಿಲ್ಲ)



ಚುಲ್ಲಿ (ಒಳ್ಳೆಯದಲ್ಲ)
(ದಕ್ಷಿಣದಲ್ಲಿ ಮನೆಯಿಲ್ಲ)



ಧ್ವಂಸ (ಒಳ್ಳೆಯದಲ್ಲ)
(ಪಶ್ಚಿಮದಲ್ಲಿ ಮನೆಯಿಲ್ಲ)



ಹಿರಣ್ಯನಾಭಿ (ಒಳ್ಳೆಯದು)
(ಉತ್ತರದಲ್ಲಿ ಮನೆಯಿಲ್ಲ)

ಚಿತ್ರ - ೬೩, ೬೪, ೬೫, ೬೬, ಅ. ೪, ಶ್ಲೋ. ೨೮

೨೦. ದ್ವಿಶಾಲಾ (ಎರಡು ಮನೆಗಳು)

ಶ್ಲೋಕ : ಪ್ರಾಕ್ ಪಾಶ್ಚಾತ್ಯವಿಹೀನಕೇ ಕಲಹಮುದ್ವೇಗಂ ಚ ಕಾಚಾಭಿಧೇ -
ಯಾಮ್ಯೋದಗ್ರಹಿತೇಽರ್ಥಸಿದ್ಧಿರುದಿತಾ ಸಿದ್ಧಾರ್ಥಕಾಖ್ಯೇ ದ್ವಿಕೇ
ಪ್ರಾಗಾದಿ ದ್ವಿತಯೋನಿತೇ ಕ್ರಮವಶಾನ್ಮೃತ್ಯುಂ ಭಯಂ ವಿಗ್ರಹಮ್
ಚಾರ್ಥಾಪ್ತಿಂ ಪ್ರವದಂತ್ಯತಃ ಕ್ರಮವಶಾದ್ಯಾಮ್ಯಾದಿಕಂ ಕಲ್ಪಯೇತ್ ॥೨೯॥

ತಾತ್ಪರ್ಯ :

ಪೂರ್ವ ಮತ್ತು ಪಶ್ಚಿಮ ದಿಕ್ಕಿನ ಮನೆಗಳಿರದೆ ಇತರ ಎರಡು ದಿಕ್ಕುಗಳಲ್ಲಿ ಮನೆಗಳಿದ್ದರೆ ಅಂತಹ ರಚನೆಗೆ 'ಕಾಚ' ಎಂದು ಹೆಸರು. ಆ ರೀತಿಯ ಮನೆಗಳು ಕಲಹವನ್ನೂ, ಉದ್ವೇಗವನ್ನೂ ಉಂಟು ಮಾಡುತ್ತವೆ. ಉತ್ತರ ಮತ್ತು ದಕ್ಷಿಣ ಗೃಹಗಳಿಲ್ಲದೆ ಉಳಿದ ದಿಕ್ಕುಗಳಲ್ಲಿ ಮನೆಗಳಿದ್ದರೆ ಆ ಮನೆಗಳಿಗೆ 'ಸಿದ್ಧಾರ್ಥ' ಎಂದು ಹೆಸರು. ಅಂತಹ ಮನೆಗಳು ಅರ್ಥಸಿದ್ಧಿಯನ್ನು ಉಂಟುಮಾಡುತ್ತವೆ. ಜೋಡಿ ಮನೆಗಳಲ್ಲಿ ಪೂರ್ವದಿಂದ ಪ್ರಾರಂಭಿಸಿ ಎರಡೆರಡು ಮನೆಗಳು ಇಲ್ಲದೇ ಇದ್ದು (ಪೂರ್ವ-ದಕ್ಷಿಣ, ದಕ್ಷಿಣ-ಪಶ್ಚಿಮ, ಪಶ್ಚಿಮ-ಉತ್ತರ, ಉತ್ತರ-ಪೂರ್ವ) ಇತರ ದಿಕ್ಕುಗಳಲ್ಲಿ ಇದ್ದರೆ ಕ್ರಮವಾಗಿ ಮರಣ, ಭಯ, ಜಗಳ ಮತ್ತು ಸಂಪತ್ಪ್ರಾಪ್ತಿ ಉಂಟಾಗುತ್ತದೆ.


ವಿ.ವಿ. :

೨೧. ದ್ವಿಶಾಲೆಗಳ (ಜೋಡಿಮನೆಗಳು) ಹೆಸರು ಮತ್ತು ಫಲ


	ದಿಕ್ಕು	ಹೆಸರು	ಫಲ
1.	ದಕ್ಷಿಣ - ಉತ್ತರ	ಕಾಚ	ಕಲಹ, ಉದ್ವೇಗ
2.	ಪೂರ್ವ - ಪಶ್ಚಿಮ	ಸಿದ್ಧಾರ್ಥ	ಅರ್ಥಸಿದ್ಧಿ
3.	ಪಶ್ಚಿಮ - ಉತ್ತರ	-	ಮರಣ
4.	ಉತ್ತರ - ಪೂರ್ವ		ಭಯ
5.	ಪೂರ್ವ - ದಕ್ಷಿಣ		ಜಗಳ
6.	ದಕ್ಷಿಣ - ಪಶ್ಚಿಮ		ಸಂಪತ್ಪ್ರಾಪ್ತಿ

ಕೆಟ್ಟ ಫಲದ ದ್ವಿಶಾಲೆಗಳನ್ನು ರಚಿಸಬಾರದು.


ದ್ವಿಶಾಲಾ ರಚನೆ




(1) ಕಾಚ (ಒಳ್ಳೆಯದಲ್ಲ)




(2) ಸಿದ್ಧಾರ್ಥ (ಒಳ್ಳೆಯದು)




(3) ಒಳ್ಳೆಯದಲ್ಲ



(4) ಒಳ್ಳೆಯದಲ್ಲ



(5) ಒಳ್ಳೆಯದಲ್ಲ



(6) ಒಳ್ಳೆಯದು

ಚಿ. ೬೭, ೬೮, ೬೯, ೭೦, ೭೧, ೭೨ ಅ. ೪, ಶ್ಲೋ. ೨೯

ಇತಿ ಮನುಷ್ಯಾಲಯ ಚಂದ್ರಿಕಾಯಾಂ ಗೃಹಾಣಾಮಿಷ್ಟದೀರ್ಘ
ಪರಿಣಾಹದೀರ್ಘ ವಿಸ್ತಾರ ಶಾಲಾಭೇದಾದಿನಿರ್ಣಯೋ ನಾಮ ಚತುರ್ಥೋಽಧ್ಯಾಯಃ

ತಾತ್ಪರ್ಯ :

ಮನುಷ್ಯಾಲಯ ಚಂದ್ರಿಕೆಯಲ್ಲಿ ಮನೆಗಳ ಇಷ್ಟದೀರ್ಘಪರಿಣಾಹದೀರ್ಘ ವಿಸ್ತಾರ ಶಾಲಾಭೇದಾದಿ ನಿರ್ಣಯವೆಂಬ ನಾಲ್ಕನೆಯ ಅಧ್ಯಾಯವು ಮುಗಿದುದು.

ಅಥ ಪಂಚಮೋಧ್ಯಾಯಃ
ಐದನೆಯ ಅಧ್ಯಾಯ
ಗೃಹಾವಯವ ವಿಧಿಗಳು

೧. ಅಡಿಪಾಯದ ರಚನೆ

ಶ್ಲೋಕ : ಕುರ್ಯಾತ್ ಗೃಹಾಯ ಕೃತವಾಸ್ತುಪದಂ ಸಮಸ್ತಮ್
ಮಾತಂಗಭಾಸ್ಕರ ನೃಪಾಂಗುಲಮಾತ್ರತುಂಗಮ್
ಬಾಹ್ಯಾಂತರಾಂಕಣಸಮುದ್ಗಮನಾಯ ಮಧ್ಯ
ನಿಮ್ನತ್ವದೋಷವಿರಹಾಯ ಚ ಮೃಚ್ಛಿಲಾದ್ಯೈಃ ॥೧॥

ತಾತ್ಪರ್ಯ :

ಮನೆಯ ಅಡಿಸ್ಥಳದ ಹೊರಗಿನ ಮತ್ತು ಒಳಗಿನ ಅಂಗಣವನ್ನು ನೀರು ನಿಲ್ಲದಂತೆ ಎತ್ತರಿಸುವ ಸಲುವಾಗಿ ಮತ್ತು ಒಳಾಂಗಣದ ತಗ್ಗನ್ನು ನಿವಾರಿಸುವ ಸಲುವಾಗಿ ಇಡೀ ಸ್ಥಳವನ್ನು (ನಿವೇಶನವನ್ನು) ಮಣ್ಣು, ಶಿಲೆ ಮೊದಲಾದವುಗಳನ್ನು ಹಾಕಿ 8, 12 ಅಥವಾ 16 ಅಂಗುಲದಷ್ಟು ಎತ್ತರ ಮಾಡಬೇಕು.

ವಿ.ವಿ. :

ಕಟ್ಟಡ ನಿರ್ಮಾಣದಲ್ಲಿ ಅಡಿಪಾಯದ ಭಾಗ ಅತಿ ಮುಖ್ಯ. ಅದು ಭದ್ರವಾಗಿಲ್ಲದಿದ್ದರೆ ಅದರ ಮೇಲೆ ಕಟ್ಟಿದ ಕಟ್ಟಡವು ಯಾವಾಗ ಬೇಕಾದರೂ ಕುಸಿದು ಬೀಳಬಹುದು. ಅದಕ್ಕಾಗಿ ಬುನಾದಿಯು ಗಟ್ಟಿಯಾಗಿರಬೇಕು. ಆದುದರಿಂದ ನಿವೇಶನದ ಸ್ಥಳವು ಗಟ್ಟಿಯಾಗಿದ್ದರೂ ಅದನ್ನು ಸಮಗೊಳಿಸಿ ಅಂಗಳದ ಮಟ್ಟದಿಂದ 8, 12 ಅಥವಾ 16 ಅಂಗುಲುದಷ್ಟು ಎತ್ತರಕ್ಕೆ ಮಣ್ಣು ಕಲಸಿ ಹಾಕಿ ಅಥವಾ ಕಲ್ಲು ಹಾಸಿ ಗಟ್ಟಿ ಮಾಡಿ ಅನಂತರ ಅದರ ಮೇಲೆ ಗೃಹನಿರ್ಮಾಣ ಮಾಡಬೇಕು. ಈಗಿನ ಕಾಂಕ್ರೀಟು ಕಟ್ಟಡಗಳನ್ನು ರಚಿಸುವಾಗ ಅದನ್ನು ಹೊರುವ ಕಾಂಕ್ರಿಟ್ ಕಂಬಗಳಿಗೆ ಮಾತ್ರ ಮಹತ್ವವನ್ನು ಕೊಡಲಾಗಿದೆ. ಭಾರತೀಯ ವಾಸ್ತುತಜ್ಞರು ಗೋಡೆ ನಿಲ್ಲುವ ಸ್ಥಳ ಮಾತ್ರವಲ್ಲದೆ, ಇಡೀ ನಿವೇಶನವೇ ಭದ್ರವಾಗಿರಬೇಕೆಂದು ಹೇಳಿದುದು ಮಹತ್ವದ ವಿಷಯವಾಗಿದೆ.

೨. ಉಪಪೀಠದ ರಚನೆ ಮತ್ತು ನಿವೇಶನದ ನೀರು ಹರಿದು ಹೋಗುವ ದಿಕ್ಕು

ಶ್ಲೋಕ : ರಕ್ಷಾಶೋಭೋಚ್ಛ್ರಾಯಾರ್ಥಂ ಸಕಲನಿಲಯ ಮಾಸೂರತೋಽಧಃ ಸಮಂತಾತ್
ಕುರ್ಯಾದೇಕ ದ್ವಿಹಸ್ತಪ್ರವಿತತ ಮುಪಪೀಠಂ ಗಜಾದ್ಯಂಗುಲಾಢ್ಯಮ್
ಅಂತರ್ಭಾಗೇ ತು ಗರ್ತಾಂಗಣಮಥ ವೃಷಜಂ ಕೇತುಜಂ ವಾಯತಾಢ್ಯಮ್
ದಿಶ್ಯೈಶಾನ್ಯಾಮಥೋದಙ್ಮುಖಮಪಿ ರಚಯೇತ್ ಪ್ರಾಙ್ಮುಖಂ ವಾಽಂಬುಮಾರ್ಗಮ್ ॥೨॥

ತಾತ್ಪರ್ಯ :

ಎಲ್ಲ ಗೃಹಗಳ ಪಂಚಾಂಗದ ಕೆಳಗೆ ಮನೆಯ ರಕ್ಷಣೆ, ಸೌಂದರ್ಯ ಮತ್ತು ಉನ್ನತಿಗಾಗಿ ಎಂಟೆಂಟಂಗುಲ ಸೇರಿಸಿ ಒಂದು ಅಥವಾ ಎರಡು ಕೋಲುಗಳ ಅಗಲದ (ಒಂದು ಕೋಲು ಎಂಟು ಅಂಗುಲ, ಎರಡು ಕೋಲು ಎಂಟಂಗುಲ) ಉಪಪೀಠವನ್ನು ರಚಿಸಬೇಕು. ಒಳಗೆ ಗರ್ತಾಂಗಣದಲ್ಲಿ ದಕ್ಷಿಣೋತ್ತರದ ಉದ್ದಕ್ಕೂ ವೃಷಭಯೋನಿ ಅಥವಾ ಧ್ವಜಯೋನಿಯಿದ್ದು ನಿವೇಶನದ ನೀರು ಈಶಾನ್ಯದಲ್ಲಿ ಹರಿದು ಹೋಗುವಂತೆ ಉತ್ತರ ಅಥವಾ ಪೂರ್ವಕ್ಕೆ ನೀರಿಗೆ ದಾರಿ ಮಾಡಿಕೊಡಬೇಕು.

ಶ್ಲೋಕ : ಗೇಹಾಧಿಷ್ಠಾನೋಚ್ಚತುಲ್ಯೋ ರಸಾದ್ರ್ಯ
ಷ್ಟಾಂಕಾಶಾಂಶೈರೂನಿತೋ ವಾ ಯಥೇಷ್ಟಮ್
ಮರ್ತ್ಯಾಗಾರಸ್ಯೋಪಪೀಠೋಚ್ಛ್ರಯಃ ಸ್ಯಾತ್
ತತ್ತದ್ಭಾಗೈಃ ಪಾದುಕಾದ್ಯಾ ವಿಧೇಯಾಃ ॥೩॥

ತಾತ್ಪರ್ಯ :

ಮನುಷ್ಯಾಲಯದ ಉಪಪೀಠದ (ಸುತ್ತಣ ಜಗಲಿ) ಎತ್ತರವು ಪಂಚಾಂಗದ ಎತ್ತರಕ್ಕೆ ಸಮವಾಗಿರಬೇಕು. ಅಥವಾ ಪಂಚಾಂಗದ ಎತ್ತರದ 6, 7, 8, 9, 10 ಇವುಗಳ ಒಂದಂಶ ಕಡಿಮೆ ಮಾಡಿದಷ್ಟು ಅಂದರೆ ಪಂಚಾಂಗದ ಎತ್ತರದ $\frac{5}{6}$, $\frac{6}{7}$, $\frac{7}{8}$, $\frac{8}{9}$ ಅಥವಾ $\frac{9}{10}$ರಷ್ಟು ಉಪಪೀಠದ ಎತ್ತರವು ಇರಬೇಕು. ಪಾದುಕಾದಿ ಇತರ ಅವಯವಗಳನ್ನು ಅದರದರ ಎತ್ತರವನ್ನು ಭಾಗಿಸಿ ರಚಿಸಬೇಕು. ಇತರ ಅವಯವಗಳೆಂದರೆ ಪಾದುಕಾ, ಜಗತಿ, ಕುಮುದ, ಗಳ ಇತ್ಯಾದಿ.

೩. ಮಲ್ಲಿಕಾಕುಟ್ಟಿಮ (ತುಳಸಿಯ ಕಟ್ಟೆ)

ಶ್ಲೋಕ : ಗರ್ತಪ್ರಾಙ್ಗಣ ತಾರತೋಽಧಿಕ ಕೃತಾಯಾಮಾರ್ಧಮಪ್ಯುತ್ತರೇ
ನಿಕ್ಷಿಪ್ಯೇವಮವಾಕ್ ಚ ಮಧ್ಯಚತುರಶ್ರೇಽಷ್ಟಾಷ್ಟಕೋಷ್ಠಾತ್ಮಕೇ
ಮಲ್ಲೀಕುಟ್ಟಿಮಮಾಪವತ್ಸ ಪದಯೋಃ ಕುರ್ಯಾತ್ ಪದೇ ದಕ್ಷಿಣೇ
ಯದ್ವಾ ತತ್ಪುನರಾಪಸಂಜ್ಞಪದಯೋಶ್ಶ್ಯೋದಕ್ಪದೇಽಂತರ್ವೃತೌ ॥೪॥

ತಾತ್ಪರ್ಯ :


ಚತುಶ್ಶಾಲೆಯ ಒಳಗಿನ ಪ್ರಾಂಗಣದ ಅಗಲದಿಂದ ಹೆಚ್ಚು ಇರುವ ಉದ್ದವನ್ನು ಅರ್ಧಮಾಡಿ ಒಂದು ಅರ್ಧಭಾಗವನ್ನು ಉತ್ತರಕ್ಕೂ ಮತ್ತೊಂದು ಅರ್ಧಭಾಗವನ್ನು ದಕ್ಷಿಣಕ್ಕೂ ಬಿಟ್ಟು ಅವುಗಳ ಮಧ್ಯದಲ್ಲಿರುವ ಚತುರಶ್ರ ಭಾಗವನ್ನು 8x8 ಪದಗಳನ್ನಾಗಿ ವಿಂಗಡಿಸಬೇಕು. ಅನಂತರ ಮಲ್ಲಿಕಾ ಕುಟ್ಟಿಮವನ್ನು ಆಪವತ್ಸ ಪದಗಳ ದಕ್ಷಿಣ ಭಾಗದ ಅಥವಾ ಆಪ ಪದಗಳ ಉತ್ತರಭಾಗದ ಕೇಂದ್ರ ಸ್ಥಳದಲ್ಲಿ ರಚಿಸಬೇಕು.

ವಿ.ವಿ. :

ಪ್ರಾಂಗಣವು ಆಯತಾಕಾರದಲ್ಲಿದ್ದಾಗ ಅದನ್ನು ಚತುರಶ್ರವನ್ನಾಗಿ ಮಾಡಲು ಅಂಗಣದ

ಅಗಲದಿಂದ ಅಧಿಕವಿರುವ ಉದ್ದದ ಭಾಗವನ್ನು ಸಮ ಅರ್ಧಗೊಳಿಸಿ ಒಂದು ಅರ್ಧವನ್ನು ಉತ್ತರಕ್ಕೂ ಇನ್ನೊಂದು ಅರ್ಧಭಾಗವನ್ನು ದಕ್ಷಿಣಕ್ಕೂ ಬಿಟ್ಟು ಉಳಿದ ಚತುರಶ್ರದಲ್ಲಿ 8x8=64 ಪದಗಳ ವಿನ್ಯಾಸವನ್ನು ಮಾಡಬೇಕು. ಆ ಪದವಿನ್ಯಾಸದಲ್ಲಿ ಆಪ ಮತ್ತು ಆಪವತ್ಸ ಪದಗಳನ್ನು ಗುರುತಿಸಿ ಆಪ ಅಥವಾ ಆಪವತ್ಸ ಪದದಲ್ಲಿ ಸೂತ್ರವೇಧವಾಗದಂತೆ ಮಲ್ಲಿಕಾಕುಟ್ಟಿಮವನ್ನು ರಚಿಸಬೇಕು. ಆಗ ಪೂರ್ವ ಮುಖದ ಮನೆಯಲ್ಲಿ ಮನೆಯಿಂದ ನಿಷ್ಕ್ರಮಿಸುವಾಗ ನಮ್ಮ ಎಡಭಾಗದಲ್ಲಿಯೂ, ಉತ್ತರ ಮುಖದ ಮನೆಯಲ್ಲಿ ಬಲಭಾಗದಲ್ಲಿಯೂ ಕಟ್ಟೆಯಿರುವಂತಾಗುತ್ತದೆ. ಕಟ್ಟೆಯು ಮನೆಯ ಪಂಚಾಂಗದಿಂದ ಒಂದು ದಂಡ ಪ್ರಮಾಣ (ನಾಲ್ಕು ಕೋಲು)ದಷ್ಟು ದೂರದಲ್ಲಿರಬೇಕು.

ಮಲ್ಲಿಕಾಕುಟ್ಟಿಮದ ಸ್ಥಾನ



ಕ - ಬಿಟ್ಟ ಸ್ಥಳ. ಪದ 8x8=64

ಚಿ. ೭೩, ಅ. ೫, ಶ್ಲೋ. ೪.

ಶ್ಲೋಕ : ಕೇತೂತ್ಥಂ ತುಲ್ಯತಾರಾತತಿಜಲನಿಧಿಕೋಣಂ ಚ ವಸ್ವಷ್ಟಿಕೋಣಮ್
ವೃತ್ತಂ ವಾ ಸೋಪಪೀಠಾದ್ಯವಯವಸಹಿತಂ ಕೈರವಾದ್ಯನ್ವಿತಂ ವಾ
ಗೇಹಾಧಿಷ್ಠಾನತುಂಗಂ ಕುಹಚಿದಪಿ ತದೂರ್ಮ್ಯಾದಿರುದ್ರಾಂತಭಾಗೈ -
ರ್ಹೀನಂ ವಾ ರಜ್ಜುವೇಧಾದ್ಯಪಗತಮುದಿತಂ ಮಲ್ಲಿಕಾಕುಟ್ಟಿಮಂ ತತ್ ||೫||


ತಾತ್ಪರ್ಯ :

ಮಲ್ಲಿಕಾಕುಟ್ಟಿಮವು ಧ್ವಜಯೋನಿಯಲ್ಲಿರಬೇಕು. ಅದರ ಆಕಾರವು ಚಚ್ಚೌಕ, ಅಷ್ಟಕೋಣ, ಅಷ್ಟಿಕೋಣ (ಹದಿನಾರು ಮೂಲೆ) ಅಥವಾ ವೃತ್ತವಾಗಿರಬೇಕು. ಉಪಪೀಠ ಮೊದಲಾದ ಅವಯವಗಳಿರಬೇಕು. ಅಥವಾ ಕುಮುದಾದಿಗಳಿಂದ ಕೂಡಿರಬೇಕು. ಕಟ್ಟೆಯ ಎತ್ತರವು ಮನೆಯ ಅಧಿಷ್ಠಾನಕ್ಕೆ (ಪಂಚಾಂಗ) ಸಮವಾಗಿರಬೇಕು. ಅಥವಾ ಅಧಿಷ್ಠಾನದ ಎತ್ತರವನ್ನು 6, 7, 8, 9 10 ಅಥವಾ 11 ಭಾಗಮಾಡಿ ಒಂದು ಭಾಗ ಕಡಿಮೆಯಾಗುವಂತೆ ಎತ್ತರವನ್ನು ಕಲ್ಪಿಸಬೇಕು. ಅಲ್ಲದೆ, ಕರ್ಣಸೂತ್ರ ಭೇದವಾಗದಂತೆ ಇರಬೇಕು.

ವಿ.ವಿ. :


ಮಲ್ಲಿಕಾಕುಟ್ಟಿಮದ ರಚನಾವಿಧಾನವನ್ನು ಇಲ್ಲಿ ಹೇಳಲಾಗಿದೆ. ಆ ಕಟ್ಟೆಯು ಧ್ವಜಾಯದಲ್ಲಿರಬೇಕೆಂಬುದು ಮೊದಲನೆಯ ನಿಯಮ. ಎರಡನೆಯದು ಕಟ್ಟೆಯ ಆಕಾರ. ಇಲ್ಲಿ ನಾಲ್ಕು ರೀತಿಯ ಆಕಾರವನ್ನು ಸೂಚಿಸಲಾಗಿದೆ. (೧) ಸಮಚತುರಶ್ರ (ನಾಲ್ಕು ಮೂಲೆ), (೨) ಅಷ್ಟಕೋಣ (ಎಂಟು ಮೂಲೆ) (೩) ಅಷ್ಟಿಕೋಣ (ಹದಿನಾರು ಮೂಲೆ) ಅಥವಾ (೪) ವೃತ್ತಾಕಾರದಿಂದ ಆ ಕಟ್ಟೆಯನ್ನು ರಚಿಸಬೇಕು. ಮೂರನೆಯದಾಗಿ ಉಪಪೀಠಾದಿ ಅವಯವಗಳಿರಬೇಕು. (ಪಾದುಕಾ, ಜಗತಿ, ಕುಮುದ, ಗಲ, ಪ್ರತಿ ಮೊದಲಾದವುಗಳು ಕಟ್ಟೆಯ ಅವಯವಗಳಾಗಿವೆ) ಅಥವಾ ಕುಮುದಾದಿ ಪುಷ್ಪರಚನೆಯಿಂದ ಕೂಡಿರಬೇಕು. ನಾಲ್ಕನೆಯದಾಗಿ ಅದರ ಎತ್ತರ ಅಥವಾ ಉನ್ನತಿ. ಕಟ್ಟೆಯ ಎತ್ತರ ವಾಸಗೃಹದ ಅಧಿಷ್ಠಾನದಷ್ಟು ಇರಬೇಕು. ಅಥವಾ ಅಧಿಷ್ಠಾನದ ಎತ್ತರದ $\frac{5}{6}$, $\frac{6}{7}$, $\frac{7}{8}$, $\frac{8}{9}$, $\frac{9}{10}$ ಅಥವಾ $\frac{10}{11}$ ಅಂಶದಷ್ಟು ಇರಬೇಕು. ಐದನೆಯದಾಗಿ ಕಟ್ಟೆಯನ್ನು ರಚಿಸುವಾಗ ರಜ್ಜುವೇಧಾದಿಗಳು ಬರದಂತಿರಬೇಕು.

ಮಲ್ಲಿಕಾ ಎಂದರೆ ನಿರ್ದಿಷ್ಟವಾದ ಆಕಾರದ ಮಣ್ಣಿನ ಪಾತ್ರೆಯೆಂಬ ಅರ್ಥ ಬರುತ್ತದೆ. ಪಾತ್ರೆಯ ಆಕಾರದ ಈ ಕಟ್ಟೆಯಲ್ಲಿ ತುಳಸಿಯ ಗಿಡವನ್ನು ನೆಡುವ ಕ್ರಮ ಆಚರಣೆಯಲ್ಲಿ ಬಂದಿರಬೇಕು.



ಕಟ್ಟೆಯ ಆಕಾರಗಳು

ಚಿ. ೭೪, ಅ. ೫, ಶ್ಲೋ. ೫



ಕಟ್ಟೆಯ ರಚನೆ
ಚಿ. ೭೫, ಅ. ೫, ಶ್ಲೋ. ೫

೪. ಉಪಾನಹ

ಶ್ಲೋಕ : ಉಪಪೀಠೋಚ್ಚಸಮೋಚ್ಚಂ ಮಾಸೂರೋಪಾನಹಂ ಕರೋತು ದೃಢಮ್
ತದುಪರಿ ಪರಿತಃ ಪಾದುಕಮಥ ಕುರ್ಯಾದುಕ್ತಪತ್ರಮಾನಾಂತಮ್ ॥೬॥

ತಾತ್ಪರ್ಯ :

ಉಪಪೀಠದಷ್ಟೇ ಎತ್ತರವಾದ ಉಪಾನಹವನ್ನು ಪಂಚಾಂಗದ ತಳಭಾಗದಿಂದ ದೃಢವಾಗಿರುವಂತೆ ರಚಿಸಬೇಕು. ಅದರ ಮೇಲೆ ಸುತ್ತಲೂ ಪಾದುಕೆಯನ್ನು ಪತ್ರಮಾನದವರೆಗೆ ನಿರ್ಮಿಸಬೇಕು.

೫. ಪತ್ರಮಾನ (offset)

ಶ್ಲೋಕ : ಸರ್ವತ್ರೋತ್ತರಬಾಹ್ಯಪಾರ್ಶ್ವವಿಹಿತಾಲ್ಲಂಬಾತ್ ಬಹಿಃ ಕುಟ್ಟಿಮ -
ಸ್ಯಾಷ್ಟಾಷ್ಟಾಂಗುಲನಿಷ್ಕ್ರಮೋ ಯ ಉದಿತಸ್ತತ್ ಪತ್ರಮಾನಂ ವಿದುಃ
ಯದ್ವಾ ತದ್ವಿಗುಣಂ ಚ ತತ್ತ್ರಿಗುಣತಂ ವಾ ತದ್ವಿಧೇಯಂ ತಥೈ
ವಾವಾಚ್ಯುತ್ತರಯೋಃ ಷಡಂಗುಲಮತೋ ದ್ವಂದ್ವಂ ಪ್ರತೀಚ್ಯಾಂ ಕ್ವಚಿತ್ ॥೭॥

ತಾತ್ಪರ್ಯ :

ಎಲ್ಲ ಕಡೆಯೂ ಉತ್ತರದ ಹೊರಗಿನ ಪಾರ್ಶ್ವಕ್ಕೆ ಸಮಾನಾಂತರವಾಗಿ ಎಂಟು ಅಂಗುಲ ಅಗಲದ ಬಹಿಃಕುಟ್ಟಿಮ (ಮನೆಯ ಸುತ್ತಲೂ ಹೊರಗೆ ಇರುವ ಕಟ್ಟೆ)ವನ್ನು ರಚಿಸಬೇಕು. ಮನೆಯ ತಳಭಾಗದ ಈ ಕಟ್ಟೆಗೆ ಪತ್ರಮಾನ (offset)ವೆಂದು ಹೆಸರು. ಇದನ್ನು ಎಂಟು ಅಂಗುಲ ಅಥವಾ

ಅದರ ಇಮ್ಮಡಿಯಾದ ಹದಿನಾರು ಅಂಗುಲ ಅಥವಾ ಮುಮ್ಮಡಿಯಾದ ಇಪ್ಪತ್ತನಾಲ್ಕು ಅಂಗುಲದಷ್ಟು ಕಟ್ಟಬಹುದು. ಅದನ್ನು ದಕ್ಷಿಣ ಮತ್ತು ಉತ್ತರದಲ್ಲಿ ಆರು ಅಂಗುಲ ಪಶ್ಚಿಮದಲ್ಲಿ ಹನ್ನೆರಡು ಅಂಗುಲದಷ್ಟನ್ನು ಸೇರಿಸಿಯೂ ರಚಿಸಬಹುದು.

ವಿ.ವಿ. :

ಪತ್ರಮಾನದ (offset) ರಚನೆಯಲ್ಲಿ ಗೋಡೆ ಅಥವಾ ಕಂಭದಿಂದ ಹೊರಗೆ 8 ಅಂಗುಲದಿಂದ ತೊಡಗಿ 24 ಅಂಗುಲದವರೆಗೆ ಅಗಲವನ್ನು ತೆಗೆದುಕೊಳ್ಳುವ ಸೌಲಭ್ಯವನ್ನು ಇಲ್ಲಿ ಶಾಸ್ತ್ರಕಾರರು ಹೇಳಿರುತ್ತಾರೆ. ಅಲ್ಲದೆ ದಕ್ಷಿಣ, ಉತ್ತರ ಮತ್ತು ಪಶ್ಚಿಮದ ಕಡೆಯೂ ನಿರ್ದಿಷ್ಟವಾದ ಪ್ರಮಾಣದಲ್ಲಿ ಸೇರಿಸುವ ಅವಕಾಶವನ್ನೂ ಕಲ್ಪಿಸಲಾಗಿದೆ. ಈ ವಿಸ್ತಾರನಿಯಮದಿಂದ ಅದಕ್ಕಿರುವ ಯೋನಿಯನ್ನು (ಉತ್ತರದ ಹೊರಭಾಗದ ಯೋನಿಯೇ ಪತ್ರಮಾನದ ಹೊರಭಾಗದ ಯೋನಿಯಾಗಿರಬೇಕು) ಅಳವಡಿಸಲು ಅನುಕೂಲವಾಗಿದೆ.

ಇಲ್ಲಿ ಶಾಸ್ತ್ರಕಾರರ ಭೌಗೋಳಿಕ ಪ್ರಜ್ಞೆಯ ಸೂಕ್ಷ್ಮವಿಚಾರವನ್ನು ಗಮನಿಸಬೇಕು. ಪತ್ರಮಾನದ ಅಗಲವನ್ನು ನಾಲ್ಕು ದಿಕ್ಕುಗಳ ಭಾಗಗಳಿಗೆ ಒಂದೇ ರೀತಿಯಾಗಿ ಹೇಳದೆ ಇರುವುದು ಔಚಿತ್ಯಪೂರ್ಣವಾಗಿದೆ. ದಕ್ಷಿಣ ಮತ್ತು ಉತ್ತರ ಭಾಗಗಳಿಗೆ ಆರು ಅಂಗುಲಗಳ ಅಗಲವನ್ನು ಸೇರಿಸಬೇಕೆಂದೂ, ಪಶ್ಚಿಮಕ್ಕೆ ಅದರ ಇಮ್ಮಡಿಯ ಅಂದರೆ ಹನ್ನೆರಡು ಅಂಗುಲಗಳ ಅಗಲವನ್ನು ಸೇರಿಸಬೇಕಂದೂ, ಸೂಚಿಸಲಾಗಿದೆ. ಈ ವ್ಯತ್ಯಾಸಕ್ಕೆ ಭಾರತದ ಭೌಗೋಳಿಕ ಪರಿಸರದ ಪ್ರಜ್ಞಾವಂತಿಕೆಯೇ ಕಾರಣವಾಗಿದೆ. ಗಾಳಿ ಮತ್ತು ಮಳೆಯ ಹೊಡೆತ ಇಲ್ಲಿನ ಮನೆಗಳ ಪಶ್ಚಿಮ ಭಾಗಕ್ಕೆ ಹೆಚ್ಚು. ಅಲ್ಲದೆ ಮನೆಯ ಪಶ್ಚಿಮದ ಭೂಭಾಗ ಇತರ ದಿಕ್ಕುಗಳಿಗಿಂತ ಎತ್ತರವಾಗಿರುವ ಕಾರಣ (ಉತ್ತಮ ನಿವೇಶನದಲ್ಲಿ) ಆ ಭಾಗದ ನೆಲದಲ್ಲಿ ತೇವಾಂಶದ ಸುಳಿವು ಅಧಿಕವಾಗಿರುತ್ತದೆ. ಅದರಿಂದಾಗಿ ಮನೆಯ ಅಡಿಪಾಯಕ್ಕೆ ಧಕ್ಕೆಯೊದಗದಂತೆ ಪಶ್ಚಿಮದ ಪತ್ರಮಾನದ ಅಗಲವು ದಕ್ಷಿಣೋತ್ತರಗಳಿಗಿಂತ ಇಮ್ಮಡಿಯಾಗಿರಬೇಕೆಂದು ನಿಗದಿ ಪಡಿಸಲಾಗಿದೆ. ಪೂರ್ವದ ಭಾಗಕ್ಕೆ ಅಂತಹ ಬಾಧೆಯಿರುವುದಿಲ್ಲ.

ಶ್ಲೋಕ : ತತ್ಪತ್ರಮಾನಮಸಮಂ ಚ ಸಮಂ ಚ ಬಾಹ್ಯೇऽ
ಪ್ಯಂತಶ್ಚ ತದ್ವಿಹಿತಯೋನಿಕನಾಹಯುಕ್ತಮ್
ಮರ್ತ್ಯಾಲಯೇಷು ವಿಹಿತಂ ಸುರಮಂದಿರಾಂತ -
ಹಾರಾಪ್ರದೀಪನಿಲಯೇಷು ಚ ಗೋಪುರೇಷು ॥೮॥

ತಾತ್ಪರ್ಯ :

ಮನುಷ್ಯಾಲಯಗಳಲ್ಲಿಯೂ, ದೇವಾಲಯಗಳಲ್ಲಿಯೂ ಅಂತಹಾರಗಳಲ್ಲಿಯೂ, ದೀಪಾಲಯಗಳಲ್ಲಿಯೂ ಮತ್ತು ಗೋಪುರಗಳಲ್ಲಿಯೂ ಅವುಗಳ ಹೊರಗಡೆ ಮತ್ತು ಒಳಗಡೆ ಸಮ ಅಥವಾ ಅಸಮ ಪ್ರಮಾಣದಲ್ಲಿ ಅಲ್ಲಿಗೆ ವಿಹಿತವಾದ ಯೋನಿ ಮತ್ತು ಪರಿಧಿ ಸಹಿತ ಪತ್ರಮಾನವನ್ನು ರಚಿಸಬೇಕು.

೬. ಅಂಕಣವಿಧಿ (ಅಂಗಳದ ರಚನೆ)

ಶ್ಲೋಕ : ಪ್ರಾಹುರ್ಗೇಹಚತುಷ್ಕಪಾದುಕಬಹಿರ್ಭಾಗಂ ಬುಧಾಃ ಪ್ರಾಂಗಣಮ್
ಯಾಮ್ಯೋದಗ್ವಿಹಿತಾಯತಂ ಚ ಚತುರಶ್ರಂ ಕೇತುಯೋನ್ಯನ್ವಿತಮ್
ಭೂಮ್ಯಶ್ವ್ಯಂಬುಧಿನಾಗರಂಧ್ರದಿನನಾಥಾಷ್ಟದ್ವಿಸಂಖ್ಯಾಂಗುಲೈ -
ರೇಕದ್ವಿತ್ರಿಕರೈಸ್ತಥೈವ ಗುಣವಿಸ್ತಾರಾದಿಭಿರ್ವಾ ಯುತಿಃ ॥೯॥

ತಾತ್ಪರ್ಯ :

ಚತುಶ್ಶಾಲೆಗಳ ಪಾದುಕದ ಹೊರಭಾಗದ ಸ್ಥಳವನ್ನು ಶಿಲ್ಪಶಾಸ್ತ್ರಜ್ಞರು ಪ್ರಾಂಗಣ ಎನ್ನುತ್ತಾರೆ. ಅದು ದಕ್ಷಿಣೋತ್ತರವಾಗಿ ಉದ್ದವಾಗಿರಬೇಕು. ಅದು ಚತುರಶ್ರವಾಗಿದ್ದು (ಆಯತಾಕಾರ) ಧ್ವಜಯೋನಿಯುಳ್ಳದ್ದಾಗಿರಬೇಕು. ಅದರ ಉದ್ದವು ಅಗಲಕ್ಕಿಂತ 1, 2, 4, 8, 9, 12 ಅಥವಾ 16 ಅಂಗುಲ ಹೆಚ್ಚಾಗಿರಬೇಕು. ಅಥವಾ 1, 2 ಅಥವಾ 3 ಕೋಲಿನಷ್ಟು ಅಧಿಕವಾಗಿರಬೇಕು. ಅಥವಾ ಅದನ್ನು ಗುಣವಿಸ್ತಾರ (ಗುಣಾಂಶ)ದ ನಿಯಮಕ್ಕೆ ಅನುಗುಣವಾಗಿಯೂ ರಚಿಸಬಹುದು. (ಅಧ್ಯಾಯ ೪, ಶ್ಲೋಕ ಸಂಖ್ಯೆ ೬, ೭ ಮತ್ತು ೮ರ ವಿವರಣೆಯನ್ನು ನೋಡಬಹುದು).

೭. ಮನೆಗಳ ಗಮನ (ಸರಿಸುವಿಕೆ) ದ ವಿಧಿ

ಶ್ಲೋಕ : ಸೂತ್ರೈಃ ಪ್ರಾಂಗಣಗೇಹಮಧ್ಯವಿಹಿತ್ಯೈರನ್ಯೋನ್ಯವಿದ್ಧೈರ್ಭವೇತ್
ತದ್ಗೇಹಸ್ಥಿತಪುತ್ರಪೌತ್ರವಿಲಯಸ್ತಸ್ಮಾದ್ ಗೃಹಾಣಾಂ ಕ್ರಮಾತ್
ಕರ್ತವ್ಯಂ ಗಮನಂ ಪ್ರದಕ್ಷಿಣತಯಾ ಪ್ರಾಗಾದಿತೋ ವಹ್ನಿರಂ -
ಧ್ರಾದ್ರೀಷ್ವಂಗುಲಕೈಃ ಸ್ವಯೋನಿಜನಕೈರಾವಶ್ಯಕೇ ವಾ ಯವೈಃ ॥೧೦॥

ತಾತ್ಪರ್ಯ :


ಪ್ರಾಂಗಣ ಮತ್ತು ಮನೆಯ ಮಧ್ಯದ ಸೂತ್ರಗಳು ಪರಸ್ಪರ ಸಂಧಿಸುವಂತಿದ್ದರೆ ಆ ಮನೆಯಲ್ಲಿ ವಾಸಿಸುವ ಯಜಮಾನನ ಪುತ್ರ ಪೌತ್ರರು ನಾಶಹೊಂದುತ್ತಾರೆ. ಆದುದರಿಂದ ಅದನ್ನು ತಪ್ಪಿಸುವ ಸಲುವಾಗಿ ಪೂರ್ವದಿಂದ ಪ್ರದಕ್ಷಿಣಾಕಾರವಾಗಿ (ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ) ಗಮನವನ್ನು ಇಡಬೇಕು. ಆಯಾಯ ಮನೆಯ ಯೋನಿಗೆ ಅನುಗುಣವಾಗಿ ಈ ಗಮನವನ್ನು ಪೂರ್ವಾದಿ ದಿಕ್ಕುಗಳ ಮನೆಗಳಿಗೆ ಕ್ರಮವಾಗಿ 3, 9, 7 ಮತ್ತು 5 ಅಂಗುಲ ವಿಸ್ತಾರಗಳಿಂದ ಅಥವಾ ಅಗತ್ಯವಿದ್ದರೆ ಯವಗಳಿಂದ ನಿಶ್ಚಯಿಸಬೇಕು.

ವಿ.ವಿ. :

ಪೂರ್ವದ ಮನೆಯನ್ನು ಮಧ್ಯಸೂತ್ರದಿಂದ ಮೂರು ಅಂಗುಲ ದಕ್ಷಿಣಕ್ಕೆ, ದಕ್ಷಿಣದ

ಮನೆಯನ್ನು ಒಂಬತ್ತು ಅಂಗುಲದಷ್ಟು ಪಶ್ಚಿಮಕ್ಕೆ, ಪಶ್ಚಿಮದ ಮನೆಯನ್ನು ಏಳು ಅಂಗುಲದಷ್ಟು ಉತ್ತರಕ್ಕೆ ಮತ್ತು ಉತ್ತರ ದಿಕ್ಕಿನ ಮನೆಯನ್ನು ಐದು ಅಂಗುಲದಷ್ಟು ಪೂರ್ವಕ್ಕೆ ಸರಿಸಿ ಕಟ್ಟಬೇಕು. ಹೀಗೆ ಮಾಡುವುದರಿಂದ ಸೂತ್ರವೇಧ ತಪ್ಪಿಸಿದಂತಾಗುತ್ತದೆ. ಅಷ್ಟು ಅಂಗುಲ ಬಿಡಲು ಸಾಧ್ಯವಿಲ್ಲದೇ ಹೋದರೆ ಅದೇ ಸಂಖ್ಯೆಯ ಯವವನ್ನು ಉಪಯೋಗಿಸಬಹುದು. ಈ ನಿರ್ದಿಷ್ಟವಾದ ಅಂಗುಲ ಅಥವಾ ಯವ ವಿಸ್ತಾರದಿಂದ ಯೋನಿಯಲ್ಲಿ ಬದಲಾವಣೆಯಾಗುವುದಿಲ್ಲ. ಇಲ್ಲಿ ಕೊಟ್ಟಿರುವ 3, 9, 7 ಮತ್ತು 5 ಈ ಸಂಖ್ಯೆಗಳು ಕ್ರಮವಾಗಿ ಧ್ವಜ, ಸಿಂಹ, ವೃಷಭ ಮತ್ತು ಗಜಯೋನಿಗಳಿಗೆ ಸಂಬಂಧಿಸಿದವುಗಳು. ಉದಾಹರಣೆಗೆ 3 ಅಂಗುಲಕ್ಕೆ 3ರಿಂದ ಗುಣಿಸಿ ಎಂಟರಿಂದ ಭಾಗಿಸಿದಾಗ ಶೇಷ 1. ಆದ ಕಾರಣ ಅದು ಧ್ವಜಯೋನಿ. ಅದು ಪೂರ್ವದಿಕ್ಕಿನ ಮನೆಗೆ ಸರಿಯಾದುದು. 9ರ ಸಂಖ್ಯೆಗೆ 3ರಿಂದ ಗುಣಿಸಿ ಎಂಟರಿಂದ ಭಾಗಿಸಿದಾಗ 3 ಶೇಷ. ಶೇಷ ಸಂಖ್ಯೆಯಾದ 3 ಸಿಂಹಯೋನಿಯಾಗಿದೆ. ಅದು ದಕ್ಷಿಣ ದಿಕ್ಕಿನ ಮನೆಗೆ ಅನ್ವಯಿಸುತ್ತದೆ. ಇದೇ ರೀತಿ ಇನ್ನುಳಿದ ದಿಕ್ಕುಗಳ ಮನೆಗಳಿಗೂ ಕೂಡ. ಆದುದರಿಂದ ಆ ಸಂಖ್ಯೆಗೆ ಅನುಗುಣವಾಗಿ ಗಮನವನ್ನು ಇಡಬೇಕು. ಹಾಗೆ ಮಾಡಿದರೆ ಬ್ರಹ್ಮಸೂತ್ರ, ಯಮಸೂತ್ರ ಮತ್ತು ಮನೆಗಳ ಮಧ್ಯಸೂತ್ರಗಳು ಸಂಧಿಸುವುದಿಲ್ಲ.

ಚತುಶ್ಶಾಲೆಗಳಲ್ಲಿ ಮನೆಯನ್ನು ಸರಿಸುವ ವಿಧಿ



ಅ - ಪೂರ್ವದ ಮನೆ
ಆ - ದಕ್ಷಿಣದ ಮನೆ
ಇ - ಪಶ್ಚಿಮದ ಮನೆ
ಈ - ಉತ್ತರದ ಮನೆ

ಚಿ. ೭೬, ಅ. ೫, ಶ್ಲೋ. ೧೦.

ಶ್ಲೋಕ : ಗತ್ಯಂಗುಲಾನಿ ನಿಜದಿಗ್ವಿಹಿತಾನಿ ಯಾನಿ
ತಾನ್ಯಷ್ಟ ತದ್ವಿಗುಣಿತ ತ್ರಿಗುಣಾಂಗುಲೈಶ್ಚ
ಯುಕ್ತಾನಿ ತದ್ವಿಗುಚಿತಾನಿ ಭವಂತಿ ಯತ್ ತ -
ದಲ್ಪಾಂತರಾಲನಿಲಯಾದಿಷು ತಾನಿ ಯುಂಜ್ಯಾತ್ ||೧೧||

ತಾತ್ಪರ್ಯ :

ಆಯಾ ದಿಕ್ಕುಗಳಿಗೆ ಸರಿಯಾಗಿ ವಿಧಿಸಿದ ಗತ್ಯಂಗುಲಗಳಿಗೆ (ಗಮನದ ಅಂಗುಲ) ಎಂಟು, ಹದಿನಾರು ಅಥವಾ ಇಪ್ಪತ್ತನಾಲ್ಕು ಅಂಗುಲಗಳನ್ನು ಅನುಕ್ರಮವಾಗಿ ಸೇರಿಸಿ ಅವುಗಳನ್ನು ಅಲ್ಪಾಂತರಾಲವಿರುವ ಮನೆಗಳಿಗೆ ಹೊಂದಿಸಿಕೊಳ್ಳಬಹುದು.

ವಿ.ವಿ. :

ಇಲ್ಲಿ ಕೊಟ್ಟಿರುವ ಸಂಖ್ಯೆಗಳಾದ 8, 16 ಮತ್ತು 24ರ ಪೈಕಿ ಯಾವುದೇ ಒಂದನ್ನು ಶ್ಲೋಕ ೧೧ರಲ್ಲಿ ಆಯಾ ದಿಕ್ಕುಗಳ ಗಮನ ಸಂಖ್ಯೆಗಳಿಗೆ ಕೂಡಿಸಿದಾಗ ಯೋನಿ ವ್ಯತ್ಯಾಸವಾಗುವುದಿಲ್ಲವೆಂಬ ಅಂತರಾರ್ಥವನ್ನು ನಾವು ಗಮನಿಸಬೇಕು. ಆದುದರಿಂದಲೇ ಆ ಸಂಖ್ಯೆಗಳನ್ನು ನಿಗದಿಪಡಿಸಲಾಗಿದೆ. ಉದಾಹರಣೆಗೆ ಒಂದೆರಡು ದೃಷ್ಟಾಂತಗಳು.

೧. ಪೂರ್ವದಿಕ್ಕು - ಗಮನ ಸಂಖ್ಯೆ 3 + 8 = 11
11 x 3 ÷ 8 = 4 ಪೂರ್ಣಾಂಕ 1 ಶೇಷ. ಆದುದರಿಂದ ಧ್ವಜಯೋನಿ.

೨. ದಕ್ಷಿಣ ದಿಕ್ಕು - ಗಮನ ಸಂಖ್ಯೆ 9 + 8 = 17
17 x 3 ÷ 8 = 6 ಪೂರ್ಣಾಂಕ 3 ಶೇಷ. ಆದುದರಿಂದ ಸಿಂಹಯೋನಿ.

ಇದೇ ರೀತಿ ಉಳಿದ ದಿಕ್ಕುಗಳಿಗೂ ಅನ್ವಯಿಸುವುದು.

೮. ಅಂತರಾಳದ ನಿಯಮ (ಮಧ್ಯದ ಜಗಲಿಯ ರಚನೆ)

ಶ್ಲೋಕ : ದಿಕ್ಕೋಣಾಲಯಭೇದಕೃಂತಿ ಚ ಭವಂತ್ಯಪ್ಯಾಂತರಾಲಾನಿ ತದ್
ಬಾಹುಲ್ಯಂ ತು ಧನಕ್ಷಯಾಯ ಹಿ ಭವೇದತ್ಯಲ್ಪತಾ ವ್ಯಾಧಯೇ
ಮೃತ್ಯುರ್ಭಿತ್ತಿವಿರೋಧನೇಽಂತರವಿಹೀನತ್ವಾದತಃ ಪ್ರಾಯಶೋ
ನೇಷ್ಟಂ ಗೇಹರಸಾಂಶತೋಽಧಿಕತರಂ ದ್ವಿತ್ರ್ಯಂಗುಲಾಚ್ಚೋನಿತಮ್ ||೧೨||

ತಾತ್ಪರ್ಯ :

ನಾಲ್ಕು ದಿಕ್ಕುಗಳ ಪ್ರಧಾನ ಗೃಹಗಳನ್ನು ಮತ್ತು ನಾಲ್ಕು ವಿದಿಕ್ಕುಗಳ ಕೋಣಾಲಯಗಳನ್ನು ಬೇರ್ಪಡಿಸಲು ಅವುಗಳ ಮಧ್ಯದಲ್ಲಿ ಎಂಟು ಅಂತರಾಳಗಳು (ಜಗಲಿಗಳು) ಇರುತ್ತವೆ. ಆ ಅಂತರಾಳಗಳು ದೊಡ್ಡದಾಗಿದ್ದರೆ ಧನಕ್ಷಯವುಂಟಾಗುತ್ತದೆ. ಅವುಗಳು ಬಹಳ ಚಿಕ್ಕದಾಗಿದ್ದರೆ

ರೋಗವು ಸಂಭವಿಸುತ್ತದೆ. ಗೋಡೆಗೆ ಅವುಗಳು ತಾಗಿದರೆ (ಗೋಡೆಯನ್ನು ರಚಿಸಿ ಅಂತರಾಳವು ಇಲ್ಲದಂತೆ ಮಾಡಿದರೆ) ಆ ಮನೆಯು ಮರಣವನ್ನು ತಂದೊಡ್ಡುತ್ತದೆ. ಆದುದರಿಂದ ಅಂತರಾಳದ (ಮನೆಗಳ ಮಧ್ಯದ ಜಗಲಿಯ) ಅಗಲವು ಮನೆಯ ಉದ್ದದ $\frac{1}{6}$ ಅಂಶಕ್ಕಿಂತ ಹೆಚ್ಚು ಇರಬಾರದು. ಮತ್ತು 1/6 ಅಂಶಕ್ಕಿಂತ ಎರಡು ಅಥವಾ ಮೂರು ಅಂಗುಲ ಕಡಿಮೆ ಇರುವುದೂ ಯೋಗ್ಯವಲ್ಲ.

ವಿ.ವಿ. ಉದಾ :

ಮನೆಯ ಉದ್ದ - 21 ಕೋ. 14 ಅಂ.

ಅಂತರಾಳದ ಅಗಲ- 21 ಕೋ. 14 ಅಂ. ÷ 6

= 3 ಕೋ. 14 ಅಂ. 2.7 ಯವ

= 21 ಕೋ. 14 ಅಂ. ಉದ್ದವಿರುವ ಮನೆಯ ಅಂತರಾಳದ ಅಗಲವು 3 ಕೋ. 14 ಅಂ. 2.7 ಯವಕ್ಕಿಂತ ಹೆಚ್ಚಿರಬಾರದು ಮತ್ತು ಇದಕ್ಕಿಂತ 2 ಅಥವಾ 3 ಅಂಗುಲ ಕಡಿಮೆಯಿರಲೂ ಬಾರದು.

ಈ ಶ್ಲೋಕದ ಪ್ರಕಾರ ಮನೆಯ ಅಂತರಾಳದ ಅಗಲವನ್ನು ನಮಗೆ ಇಷ್ಟಬಂದ ರೀತಿಯಲ್ಲಿ ರಚಿಸಬಾರದೆಂದು ಹೇಳಬೇಕಾಗುತ್ತದೆ. ಅದು ಮನೆಯ ಉದ್ದಕ್ಕೆ ಅನುಗುಣವಾಗಿಯೇ ಇರಬೇಕು.

೯. ಪಾದಮಾನದ ನಿಯಮ

ಶ್ಲೋಕ : ನೃಣಾಂ ಧಾಮನಿ ಪಾದಮಾನಮುದಿತಂ ಸ್ವಸ್ಯೋತ್ತರೋಪಾನಹೋ
ಮಧ್ಯಂ ಸಾಂಘ್ರಿಕರತ್ರಿಕೋನ್ಮಿತಮಿದಂ ತ್ವಲ್ಪಾಲಯೇ ದೃಶ್ಯತೇ
ಗೇಹವ್ಯಾಸಸಮಂ ತದರ್ಧಸಹಿತಂ ವ್ಯಾಸಾಬ್ಧಿಷಟ್‌ಸಪ್ತವ -
ಸ್ವಂಕಾಶಾಂಶಯುತಂ ಚ ತೈರ್ವಿರಹಿತಂ ಚೈವಂ ಮುನೀಂದ್ರಾ ಜಗುಃ ||೧೩||

ತಾತ್ಪರ್ಯ :

ಮನುಷ್ಯಾಲಯಗಳಲ್ಲಿ ಉತ್ತರದಿಂದ ತೊಡಗಿ ಉಪಾನಹದ (ಪಂಚಾಂಗದ ಕೆಳ ಭಾಗದ)ವರೆಗಿನ ಭಾಗವನ್ನು ಪಾದಮಾನ ಎನ್ನುತ್ತಾರೆ. ಸಣ್ಣ ಮನೆಗಳಲ್ಲಿ ಇದು ಮೂರು ಕೋಲು ಆರು ಅಂಗುಲದಷ್ಟು ಇರುತ್ತದೆ. ಶಿಲ್ಪಶಾಸ್ತ್ರ ನಿಪುಣರಾದ ಋಷಿಗಳು ಪಾದಮಾನವು ಮನೆಯ ಅಗಲದಷ್ಟೇ ಇರಬೇಕೆಂದೂ, ಅಥವಾ ಅಗಲದ $1\frac{1}{2}$, $1\frac{1}{4}$, $1\frac{1}{6}$, $1\frac{1}{7}$, $1\frac{1}{8}$, $1\frac{1}{9}$, $1\frac{1}{10}$ ಇವುಗಳಲ್ಲಿ ಯಾವುದಾದರೂ ಒಂದು ಭಾಗದಷ್ಟು ಇರಬೇಕು. ಇಲ್ಲವೇ ಅಗಲದ $\frac{1}{4}$, $\frac{1}{6}$, $\frac{1}{7}$, $\frac{1}{8}$, $\frac{1}{9}$ ಅಥವಾ $\frac{1}{10}$ ಪಾಲನ್ನು ಅಗಲದಿಂದ ಕಳೆದಾಗ ಲಭ್ಯವಾಗುವಷ್ಟು ಇರಬೇಕೆಂದೂ ಹೇಳುತ್ತಾರೆ.

ವಿ.ವಿ. :

ಇದನ್ನು ಉದಾಹರಣೆಯ ಮೂಲಕ ಕೆಳಗಿನಂತೆ ವಿವರಿಸಬಹುದು.

ಉದಾಹರಣೆಗಳು :

ಧ್ವಜಯೋನಿ - 80 ಕೋ. 8 ಅಂ. - ಹೊರಗಿನ ಸುತ್ತಳತೆ

ಉದ್ದ - 20 ಕೋ. 22 ಅಂ.

ಅಗಲ - 19 ಕೋ. 6 ಅಂ.

ಧ್ವಜಯೋನಿ - 43 ಕೋ. ಒಳಗಿನ ಸುತ್ತಳತೆ

ಉದ್ದ - 11 ಕೋ. 10 ಅಂ.

ಅಗಲ - 10 ಕೋ. 2 ಅಂ.

ಕಟ್ಟಡದ ಅಗಲ = (ಹೊರಗಿನ ಉದ್ದ – ಒಳಗಿನ ಉದ್ದ) ÷ 2

= (20 ಕೋ. 22 ಅಂ. – 11ಕೋ. 10 ಅಂ.) ÷ 2

= 4 ಕೋ. 18 ಅಂ.

∴ ಪಾದಮಾನ 4ಕೋ. 18ಅಂ.

ಕಟ್ಟಡದ ಎತ್ತರ - (ಉಪಾನಹದಿಂದ ಉತ್ತರದವರೆಗೆ)

ಉದಾ : ೧. 4 ಕೋ. 18 ಅಂ. ದ 1½ ಪಾಲು

= 7 ಕೋ. 3 ಅಂ.

∴ ಪಾದಮಾನ 7ಕೋ. 3ಅಂ.

ಉದಾ : ೨. 4 ಕೋ. 18 ಅಂ.ದಿಂದ ಅದರ ¼ ಅಂಶವನ್ನು ಕಳೆದಾಗ

= 4 ಕೋ. 18 x ¾ = 3 ಕೋ. 13 ಅಂ. 4 ಯವ


∴ ಪಾದಮಾನ 3ಕೋ. 13ಅಂ. 4 ಯವ

ಉದಾ : ೩. 4 ಕೋ. 18 ಅಂ.ದಿಂದ 1/10 ಅಂಶವನ್ನು ಕಳೆದಾಗ

= 4 ಕೋ. 18 ಅಂ. x 9/10 = 4 ಕೋ. 6 ಅಂ. 4.8 ಯವ.

∴ ಪಾದಮಾನ 4ಕೋ. 6ಅಂ. 4.8 ಯವ.

ಈ ರೀತಿಯಾಗಿ ಶ್ಲೋಕದಲ್ಲಿ ತೋರಿಸಿದಂತಹ ಯಾವುದೇ ಒಂದು ಅಂಶದಿಂದ ಗುಣಿಸಿ ಕಟ್ಟಡದ ಪಾದಮಾನವನ್ನು (ಎತ್ತರವನ್ನು) ಕಂಡುಹಿಡಿಯಬಹುದು. ಇಲ್ಲಿ ಕಟ್ಟಡದ ಅಗಲವನ್ನು ಅನುಸರಿಸಿ ನಮಗೆ ಬೇಕಾದ ಎತ್ತರವನ್ನು ಪಡೆಯುವ ಅವಕಾಶವನ್ನು ಋಷಿಗಳು ಕಲ್ಪಿಸಿದ್ದಾರೆ.



ಚಿ. ೭೭, ಅ. ೫, ಶ್ಲೋ. ೧೩

೧೦. ಪಂಚಾಂಗದ ರಚನೆ

ಶ್ಲೋಕ : ಭಕ್ತೇಽಸ್ಮಿನ್ ಪಾದಮಾನೇ ಗುಣಚತುರಿಷು ಷಟ್ಸಪ್ತನಾಗಾಂಕದಿಗ್ಭಿ -
ಸ್ತೇಷ್ವೇಕಾಂಶೋ ಭವೇತ್ ಕುಟ್ಟಿಮಮಪಿ ಚ ತಥೇಧ್ಮಾಂಶಿತೇ ವಾ ರಸಾಂಶಃ
ನಂದ ದ್ವಂದ್ವೇ ಶರಾಂಶೋ ದಿನಕರಯುಗಭಕ್ತೇಽದ್ರಿಭಾಗೋ ಮುನೀಂದ್ರೈ -
ರ್ದ್ವ್ಯಂಶಸ್ತಿಥ್ಯಂಶಿತೇ ಸ್ಯಾಜ್ಜಲಧಿಪರಿಮಿತೋ ವಿಶ್ವಭಕ್ತೇಽಪಿ ಚೈವಮ್ ||೧೪||

ತಾತ್ಪರ್ಯ :

ಮನೆಯ ಪಾದಮಾನವನ್ನು 3, 4, 5, 6, 7, 8, 9ರಿಂದ ಅಥವಾ 10ರಿಂದ ಭಾಗಿಸಿದಾಗ ಸಿಗುವ ಅದರದರ ಒಂದಂಶವು ಆ ಮನೆಯ ಪಂಚಾಂಗದ ಎತ್ತರವಾಗುತ್ತದೆ. ಅದೇ ರೀತಿ ಆ ಪಾದಮಾನವನ್ನು 21ರಿಂದ ಭಾಗಿಸಿದಾಗ 6 ಅಂಶವೂ, 18ರಿಂದ ಭಾಗಿಸಿದಾಗ 5 ಅಂಶವೂ, 24ರಿಂದ ಭಾಗಿಸಿದಾಗ 7 ಅಂಶವೂ, 7ರಿಂದ ಭಾಗಿಸಿದಾಗ 2 ಅಂಶವೂ, 15ರಿಂದ ಅಥವಾ 14ರಿಂದ ಭಾಗಿಸಿದಾಗ 4 ಅಂಶವೂ ಪಂಚಾಂಗದ ಎತ್ತರವಾಗುತ್ತದೆ.

ವಿ.ವಿ. :

ಯಾವುದೇ ಮನೆಯ ಪಂಚಾಂಗದ ಎತ್ತರವನ್ನು ನಮಗೆ ಇಷ್ಟಬಂದ ರೀತಿಯಲ್ಲಿ ಇಡಬಾರದು. ಅದಕ್ಕೊಂದು ನಿಯಮವಿದೆ. ಮನೆಯ ಪಾದಮಾನದಿಂದ (ಉತ್ತರದಿಂದ ಪಂಚಾಂಗದ ಕೆಳಭಾಗದ ವರೆಗಿನ ಅಳತೆ) ಆಯಾ ಮನೆಯ ಪಂಚಾಂಗದ ಎತ್ತರ ನಿರ್ಧರಿತವಾಗುತ್ತದೆ. ಈ ಶ್ಲೋಕದ ಪ್ರಕಾರ ಹದಿನಾಲ್ಕು ವಿಧದಲ್ಲಿ ಪಂಚಾಂಗದ ಎತ್ತರವನ್ನು ನಿರ್ಧರಿಸಬಹುದಾಗಿದೆ. ಆದರೆ ಎಲ್ಲ ಲೆಕ್ಕಾಚಾರಕ್ಕೂ ಪಾದಮಾನವೇ ಮೂಲಾಧಾರ. ಹದಿನಾಲ್ಕು ವಿಧಗಳಲ್ಲಿ ಪಾದಮಾನದ ಎತ್ತರವನ್ನು ಮೂರು ಮೊದಲಾದ ಸಂಖ್ಯೆಗಳಿಂದ ಭಾಗಿಸಿ ಅದರ ಒಂದಂಶವನ್ನು ಸ್ವೀಕರಿಸುವ ಕ್ರಮದಲ್ಲಿ ಎಂಟು ವಿಧ. ಹಾಗೆಯೇ 21ರಿಂದ ಭಾಗಿಸಿ 6 ಅಂಶವನ್ನು ಸ್ವೀಕರಿಸುವ ಬಹ್ವಂಶ ಗಣನೆಯ ಕ್ರಮದಲ್ಲಿ ಆರು ವಿಧಗಳಿವೆ.

1. ಪಾದಮಾನ 7 ಕೋ. 3 ಅಂ. ಇದ್ದಾಗ ಪಂಚಾಂಗದ ಎತ್ತರ

ಉದಾ : ೧. 7 ಕೋ. 3 ಅಂ. ÷ 3 = 2 ಕೋ. 9 ಅಂ.

∴ ಪಂಚಾಂಗದ ಎತ್ತರ = <u>2 ಕೋ. 9 ಅಂ.</u>

ಉದಾ : ೨. (7ಕೋ. 3 ಅಂ. x 6) ÷ 21 = 2 ಕೋ. 6 ಅಂ. 6.8 ಯವ

∴ ಪಂಚಾಂಗದ ಎತ್ತರ = <u>2 ಕೋ. 6 ಅಂ. 6.8 ಯವ</u>

2. ಪಾದಮಾನ 3 ಕೋ. 23 ಅಂ. ಇದ್ದಾಗ ಪಂಚಾಂಗದ ಎತ್ತರ

ಉದಾ : ೧. 3 ಕೋ. 23 ಅಂ. ÷ 5 = 0 ಕೋ. 19 ಅಂ.

∴ ಪಂಚಾಂಗದ ಎತ್ತರ = <u>0 ಕೋ. 19 ಅಂ.</u>

ಉದಾ : ೨. (3ಕೋ. 23 ಅಂ. x 7) ÷ 24 = 1 ಕೋ. 3 ಅಂ. 5.6 ಯವ

∴ ಪಂಚಾಂಗದ ಎತ್ತರ = <u>1 ಕೋ. 3 ಅಂ. 5.6 ಯವ</u>

ಶ್ಲೋಕ : ಮಾಸೂರಮಾನಾನಿ ಚತುರ್ದಶೈವಮ್
ಭವಂತಿ. ತೇಭ್ಯಃ ಪೃಥಗೂನಿತಾಶ್ಚೇತ್
ರಸಾದ್ರಿನಾಗಾಂಕದಶೇಶ ಭಾಗಾ -
ಶ್ಚತುರ್ಯುತಾಶೀತಿ ಮಿತಾನಿ ಸಂತಿ ||೧೫||

ತಾತ್ಪರ್ಯ :

ಮಾಸೂರಮಾನ ಎಂದರೆ ಪಂಚಾಂಗದ ಅಳತೆ (ಎತ್ತರ) ಎಂದು ಅರ್ಥ. (ಶ್ಲೋಕ ೧೪ರಲ್ಲಿ ವಿವರಿಸಿದ ಪ್ರಕಾರ) ಪಂಚಾಂಗದ ಎತ್ತರದ ಅಳತೆ ಹದಿನಾಲ್ಕು ವಿಧವಾಗುತ್ತದೆ. ಅವುಗಳನ್ನು 6, 7, 8, 9, 10 ಅಥವಾ 11 - ಈ ಆರು ಸಂಖ್ಯೆಗಳಿಂದ ಭಾಗಿಸಿ ಒಂದೊಂದು ಅಂಶವನ್ನು ಪ್ರತ್ಯೇಕವಾಗಿ ಕಳೆದಾಗ ಪಂಚಾಂಗದ ಎತ್ತರ ಎಂಬತ್ತನಾಲ್ಕು ವಿಧವಾಗುತ್ತದೆ.

ವಿ.ವಿ. :

ಶ್ಲೋಕ ೧೪ರಲ್ಲಿ ಹದಿನಾಲ್ಕು ವಿಧವಾದ ಪಂಚಾಂಗದ ಎತ್ತರದ ಕ್ರಮವನ್ನು ತಿಳಿಸಲಾಗಿದೆ.

ಇಲ್ಲಿ, ಅಂದರೆ ಈ ೧೫ನೇ ಶ್ಲೋಕದಲ್ಲಿ ವಿವರಿಸಿದ ಪ್ರಕಾರ ಆ ಹದಿನಾಲ್ಕರಲ್ಲಿ ಪ್ರತಿಯೊಂದೂ ಆರು ವಿಧವಾಗುತ್ತದೆ. ಆದುದರಿಂದ ಪಂಚಾಂಗವು (14x6=84) ಎಂಬತ್ತನಾಲ್ಕು ವಿಧವಾಗುತ್ತದೆ.

೧೧. ಪಾದುಕದ ರಚನೆ

ಶ್ಲೋಕ : ಇಷ್ಟಾಧಿಷ್ಠಾನಮಾನೇ ನವಭಿರಥ ವಿಭಕ್ತೇ ತ್ರಿಭಿಃ ಪಾದುಕೋಚ್ಚಮ್
ಷಡ್ಭಿಃ ಕುರ್ಯಾಜ್ಜಗತ್ಯುಚ್ಛ್ರಯಮಥ ನಯನಾದ್ರ್ಯಂಶಕೈರ್ವಾ ಕ್ರಮೇಣ
ದ್ವೇಧೈವಂ ಮಂಚಕಂ ಸ್ಯಾತ್ ಪ್ರತಿಗಲರಹಿತಂ ಸರ್ವತಃ ಪಾದುಕಸ್ಯ
ಸ್ವೋಚ್ಚಾಂಘ್ರ್ಯೂನಾರ್ಧ ವಹ್ನ್ಯಂಶತ ಇಹ ಶರಭಕ್ತೇ ತ್ರಿಭಿರ್ನಿಷ್ಕ್ರಮೋವಾ ॥೧೬॥

ತಾತ್ಪರ್ಯ :

ನಾವು ಬಯಸಿದ ಅಧಿಷ್ಠಾನ (ಪಂಚಾಂಗ)ದ ಎತ್ತರವನ್ನು ಒಂಬತ್ತರಿಂದ ಭಾಗಿಸಿದಾಗ ಅದರಲ್ಲಿ ಬರುವ ಮೂರು ಅಂಶವನ್ನು ಪಾದುಕದ ಎತ್ತರವೆಂದೂ, ಆರು ಅಂಶವನ್ನು ಜಗತಿಯ ಎತ್ತರವೆಂದೂ ತಿಳಿಯಬೇಕು ಅಥವಾ ಎರಡು ಅಂಶಗಳ ಪಾದುಕೆಯನ್ನೂ ಏಳು ಅಂಶಗಳಷ್ಟು ಜಗತಿಯನ್ನೂ ರಚಿಸಬೇಕು. ಈ ರೀತಿ ಪ್ರತಿ ಮತ್ತು ಗಲ ರಹಿತವಾದ ಪಂಚಾಂಗ ಎರಡು ವಿಧವಾಗುತ್ತದೆ. ಪಾದುಕದ ಎತ್ತರದ ¾, ½ ಅಥವಾ 1/3 ಅಂಶದಷ್ಟು ಅಥವಾ ಎತ್ತರವನ್ನು 5ರಿಂದ ಭಾಗಿಸಿದಾಗ ಅದರ ಮೂರು ಅಂಶದಷ್ಟು ಅಗಲವು ಪಾದುಕದ ಹೊರಗಿನ ನಿಷ್ಕ್ರಮಣವಾಗುತ್ತದೆ.

ವಿ.ವಿ. :

ಪಂಚಾಂಗ ರಚನೆಯಲ್ಲಿ ಮಂಚಕ, ಗಳಮಂಚಕ, ಪ್ರತಿಮಂಚಕ, ವಾಜನಸಹಿತಗಳ ಮಂಚಕವೆಂಬ ಭೇದಗಳಿವೆ. ಅವುಗಳ ವಿವರಣೆಯನ್ನು ಮುಂದಿನ ಶ್ಲೋಕಗಳಲ್ಲಿ ಕೊಡಲಾಗುತ್ತದೆ. ಇಲ್ಲಿ ಗಳ ಮತ್ತು ಪ್ರತಿ ಎಂಬ ಭಾಗಗಳಿಲ್ಲದ ಬರೇ ಮಂಚಕದ ವಿವರಣೆಯನ್ನು ಕೊಡಲಾಗಿದೆ. ಇದು ಸರ್ವೇಸಾಮಾನ್ಯವಾದ ಪಂಚಾಂಗವಾಗಿದೆ. ಆದುದರಿಂದ ಪಾದುಕಾ ಮತ್ತು ಜಗತಿಯ ರಚನೆಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ. ಇಂತಹ ಗಳ ಮತ್ತು ಪ್ರತಿರಹಿತವಾದ ಪಂಚಾಂಗಗಳು ಎರಡು ವಿಧ. ಪಾದುಕದ ಭಾಗದಲ್ಲಿ ನಿಷ್ಕ್ರಮಣವು ಸೇರುವುದರಿಂದ ಅದರ ಅಗಲದ ಪ್ರಮಾಣವನ್ನು ಸಹ ಇಲ್ಲಿ ತಿಳಿಸಲಾಗಿದೆ.

ಉದಾ : ಪಾದುಕದ ಎತ್ತರ ಕಂಡು ಹಿಡಿಯುವ ಕ್ರಮ

೧. ಪಂಚಾಂಗದ ಎತ್ತರ = 0 ಕೋ. 19 ಅಂ.

೨. ಪಾದುಕದ ಎತ್ತರ = (0 ಕೋ. 19 ಅಂ. x 3) ÷ 9

= 6 ಅಂ. 2.7 ಯವ

ಜಗತಿಯ ಎತ್ತರ ಕಂಡುಹಿಡಿಯುವ ಕ್ರಮ

೧. ಪಂಚಾಂಗದ ಎತ್ತರ = 0 ಕೋ. 19 ಅಂ.

೨. ಜಗತಿಯ ಎತ್ತರ = (0 ಕೋ. 19 ಅಂ. x 6) + 9


= 12 ಅಂ. 5.3 ಯವ

ವಿ.ಸೂ. : ಪಂಚಾಂಗದ ಎತ್ತರದಿಂದ ಪಾದುಕದ ಎತ್ತರವನ್ನು ಕಳೆದರೂ ಜಗತಿಯ ಎತ್ತರ ಸಿಗುತ್ತದೆ.

ನಿಷ್ಕ್ರಮಣ (Offset)ವನ್ನು ಕಂಡು ಹಿಡಿಯುವುದಕ್ಕೆ ಒಂದು ಉದಾಹರಣೆ

೧. ಪಾದುಕದ ಎತ್ತರ - 6 ಅಂ. 2.7 ಯವ

೨. ನಿಷ್ಕ್ರಮಣ - 6 ಅಂ. 2.7 ಯವ + $\frac{3}{4}$ = 4 ಅಂ. 6 ಯವ



ಮಂಚಕದ ವಿಧಗಳು


ಚಿ. ೭೮, ೭೯ ಅ. ೫, ಶ್ಲೋ. ೧೬

೧೨. ಗಳಮಂಚಕ (ಆರು ಪಾಲು ಮಾಡಿದ ಗಳಮಂಚಕ)

ಶ್ಲೋಕ : ರಸಾಂಶಿತೇ ವಾಂಛಿತಕುಟ್ಟಿಮೋಚ್ಚೇ
ಪ್ರಕಲ್ಪಯೇತ್ ಪಾದುಕಮೇಕತೋಽಥ
ತ್ರಿಭಿರ್ಜಗತ್ಯುಚ್ಛ್ರಯಮೇಕತಸ್ತದ್
ಗಲಂ ಪ್ರತಿಂ ತದ್ವದಿಹೈಕತೋಽಪಿ ॥೧೭॥

ತಾತ್ಪರ್ಯ :

ನಮಗೆ ಬೇಕಾದ ಪಂಚಾಂಗದ ಎತ್ತರವನ್ನು ಆರು ಪಾಲು ಮಾಡಿದಾಗ ಅದರಲ್ಲಿ ಒಂದು ಪಾಲು ಪಾದುಕದ ಎತ್ತರವಾಗುತ್ತದೆ. ಮೂರು ಪಾಲು ಜಗತಿಯ ಎತ್ತರವಾಗುತ್ತದೆ. ಒಂದು ಪಾಲು ಗಳದ ಎತ್ತರ. ಉಳಿದ ಒಂದು ಪಾಲು ಪ್ರತಿಯ ಎತ್ತರವಾಗುತ್ತದೆ.




ಆರು ಪಾಲು ಮಾಡಿದ ಮಂಚಕ
ಚಿ. ೮೦, ಅ. ೫, ಶ್ಲೋ. ೧೭

ಐದು ಪಾಲು ಮಾಡಿದ ಗಳ ಮಂಚಕ

ಶ್ಲೋಕ : ಸಾಯಕಾಂಶಿನಿ ತು ಕುಟ್ಟಿಮೋಚ್ಛ್ರಯೇ
ಪಾದುಕೋಚ್ಛ್ರಯ ಮಿಹೈಕಭಾಗತಃ
ದ್ವ್ಯಂಶತೋಽಥ ಜಗತಿಂ ಗಳಂ ಪ್ರತಿಂ
ಚೈಕತೋ ವಿರಚಯೇದಥೇತಿ ವಾ ||೧೮||

ತಾತ್ಪರ್ಯ :

ಪಂಚಾಂಗದ ಎತ್ತರವನ್ನು 5ರಿಂದ ಭಾಗಿಸಿದಾಗ ಅದರ ಒಂದು ಭಾಗವು ಪಾದುಕವೂ, ಎರಡು ಭಾಗವು ಜಗತಿಯೂ, ಒಂದು ಭಾಗವು ಗಳವೂ, ಇನ್ನೊಂದು ಭಾಗವು ಪ್ರತಿಯೂ ಆಗುತ್ತವೆ. ಈ ರೀತಿ ವಿಭಾಗಿಸುವ ಇನ್ನೊಂದು ಕ್ರಮವೂ ಇದೆ.



ಐದು ಪಾಲು ಮಾಡಿದ ಮಂಚಕ
ಚಿ. ೮೧, ಅ. ೫, ಶ್ಲೋ. ೧೮

ಉತ್ತಮಗಳಮಂಚಕ (ವಾಜನಸಹಿತ)

ಶ್ಲೋಕ : ದೇವೇಂದ್ರಾಂಶಿನಿ ಕುಟ್ಟಿಮೇ ದ್ವಿತಯತಃ ಸಂಪಾದಯೇತ್ ಪಾದುಕಮ್
ಷಡ್ಭಾಗೈರ್ಜಗತೀಂ ಗಲಾಂಶಮಿಲಯಾ ಕುರ್ಯಾದಧೋ ವಾಜನಮ್
ಅಶ್ವಿಭ್ಯಾಂ ಗಲಮೂರ್ಧ್ವವಾಜನಮವನ್ಯಂಶೇನ ನೇತ್ರಾಂಶತಃ
ಪ್ರತ್ಯುಚ್ಚಂ ಗಲಮಂಚಕಾಭಿಧಮಿದಂ ಸದ್ವಾಜನಂ ಭೂತಿಕೃತ್ ॥೧೯॥

ತಾತ್ಪರ್ಯ :


ಪಂಚಾಂಗದ ಎತ್ತರವನ್ನು 14 ಭಾಗ ಮಾಡಿ ಅವುಗಳಲ್ಲಿ ಕೆಳಗಿನ ಎರಡು ಭಾಗಗಳನ್ನು ಪಾದುಕವನ್ನಾಗಿಯೂ ಆರು ಭಾಗಗಳಷ್ಟನ್ನು ಜಗತಿಯನ್ನಾಗಿಯೂ, ಒಂದು ಭಾಗದಷ್ಟನ್ನು ಗಳದ ಕೆಳಗಿನ ವಾಜನವನ್ನಾಗಿಯೂ, ಎರಡು ಭಾಗಗಳಷ್ಟನ್ನು ಗಳವನ್ನಾಗಿಯೂ ಮತ್ತೆ ಒಂದು ಭಾಗದಷ್ಟನ್ನು ಗಳದ ಮೇಲಿನ ವಾಜನವನ್ನಾಗಿಯೂ ಇನ್ನುಳಿದ ಎರಡು ಭಾಗಗಳಷ್ಟನ್ನು ಪ್ರತಿಯ ಎತ್ತರವನ್ನಾಗಿಯೂ ಸ್ವೀಕರಿಸಬೇಕು. ಈ ರೀತಿಯ ಪಂಚಾಂಗಕ್ಕೆ ವಾಜನಸಹಿತ ಗಳಮಂಚಕವೆಂದು ಹೆಸರು.

ವಿ.ವಿ. :

ಮನೆಯ ಈ ರೀತಿಯ ಪಂಚಾಂಗವು ಅತ್ಯಂತ ಉತ್ತಮವಾದುದು. ಕಾರಣ ಪಾದುಕದಿಂದ ಪ್ರತಿಯವರೆಗೆ ಆರು ಬಗೆಯ ನೆಲೆಯಲ್ಲಿ ಇಂತಹ ಪಂಚಾಂಗ ಗಟ್ಟಿಗೊಳ್ಳುತ್ತದೆ. ವಾಜನ ಮತ್ತು ಗಳಗಳು ಇದರಲ್ಲಿ ಸೇರುವುದರಿಂದ ವಾಜನಸಹಿತ ಗಳಮಂಚಕವೆಂದು ಇದನ್ನು ವಾಸ್ತುವಿನ ಪರಿಭಾಷೆಯಲ್ಲಿ ಕರೆಯಲಾಗುತ್ತದೆ.

ಪಂಚಾಂಗದ ಭಾಗಗಳು (ಅವಯವಗಳು)

ಭಾಗ	ಅವಯವದ ಹೆಸರು	ಪ್ರಮಾಣ
6	ಪ್ರತಿ	- $\frac{2}{14}$ ಅಂಶ ಎತ್ತರ
5	ಮೇಲಿನ ವಾಜನ	- $\frac{1}{14}$ ಅಂಶ ಎತ್ತರ
4	ಗಳ	- $\frac{2}{14}$ ಅಂಶ ಎತ್ತರ
3	ಕೆಳಗಿನ ವಾಜನ	- $\frac{1}{14}$ ಅಂಶ ಎತ್ತರ
2	ಜಗತಿ	- $\frac{6}{14}$ ಅಂಶ ಎತ್ತರ
1	ಪಾದುಕ	- $\frac{2}{14}$ ಅಂಶ ಎತ್ತರ



ಉತ್ತಮ ಗಳ ಮಂಚಕ
ಚಿ. ೮೨, ಅ. ೫, ಶ್ಲೋ. ೧೯

ಶ್ಲೋಕ : ಏವಂ ತ್ರಿಧೋಕ್ತಂ ಗಲಮಂಚಕಾಖ್ಯಂ
ಪ್ರತೇರ್ಜಗತ್ಯಾಸಮನಿಷ್ಕ್ರಮತ್ವಂ
ತೇಷಾಂ ಗಲಾಂತರ್ಗಮನಂ ಗಲೋಽತ್ಸೇ -
ಧಾಂಘ್ರ್ಯಂಶತಃ ಸ್ಯಾತ್ ಗಲಮಂಚಕಾನಾಮ್ ||೨೦||

ತಾತ್ಪರ್ಯ :

ಈ ರೀತಿ ಮೂರು ವಿಧವಾದ ಮಂಚಕವನ್ನು ಹೇಳಲಾಗಿದೆ. ಪ್ರತಿಯ (ಪಂಚಾಂಗದ ಅತಿ ಮೇಲಿನ ಭಾಗ) ಹೊರಗಿನ ನಿಷ್ಕ್ರಮಣ ಜಗತಿಗೆ ಸಮವಾಗಿರಬೇಕು. ಗಳ ಮಂಚಕಗಳ ಗಳದ ಒಳಗಿನ ಗಮನವು (ಸರಿಸುವಿಕೆ) ಗಳದ ಎತ್ತರದ $\frac{1}{4}$ ಅಂಶದಷ್ಟು ಇರಬೇಕು.

ವಿ.ವಿ. :

ಗಳ ಇತ್ಯಾದಿ ಆರು ಭಾಗಗಳು ಪಂಚಾಂಗದ ಅವಯವಗಳಾಗಿವೆ. ಸಾಮಾನ್ಯವೆನಿಸುವ ಮನೆಗೆ ಗಳ ಮತ್ತು ಪ್ರತಿರಹಿತವಾದ ಪಂಚಾಂಗವಿರುತ್ತದೆ. ಕೆಲವು ಪ್ರಮುಖವಾದ ಮನೆಗಳಲ್ಲಿ ಎಲ್ಲ ಆರು ಭಾಗಗಳನ್ನೂ ಅಳವಡಿಸುತ್ತಾರೆ. ಇದು ಮನೆಯ ಬುನಾದಿಯ ಭದ್ರತೆಯ ದೃಷ್ಟಿಯಿಂದ ಮತ್ತು ಸೌಂದರ್ಯಪ್ರಜ್ಞೆಯ ದೃಷ್ಟಿಯಿಂದ ಬಹಳ ಯೋಗ್ಯವಾಗಿದೆ. ದೇವಸ್ಥಾನಗಳಲ್ಲಿಯಂತೂ ಈ ಎಲ್ಲ ಅವಯವಗಳೂ ಬಹಳ ಅಲಂಕಾರಬದ್ಧವಾಗಿ ಇರುತ್ತವೆ.

ಈ ಶ್ಲೋಕದಲ್ಲಿ (೧)ಮಂಚಕ, (೨) ಗಳಮಂಚಕ ಮತ್ತು (೩) ಪ್ರತಿಮಂಚಕವೆಂಬ ಮೂರು ಬಗೆಯ ಪಂಚಾಂಗವನ್ನು ಉಲ್ಲೇಖಿಸಿರುತ್ತಾರೆ. ಅಲ್ಲದೆ ಪ್ರತಿ ಮತ್ತು ಗಳ ಈ ಎರಡು ಅವಯವಗಳ ನಿಷ್ಕ್ರಮ ಮತ್ತು ಗಮನಗಳ ವಿವರವಿದೆ. ಪ್ರತಿಯನ್ನು ಅದರ ನಿಷ್ಕ್ರಮವು (ಹೊರಬರುವಿಕೆ) ಜಗತಿಗೆ ಸಮವಾಗಿರುವಂತೆ ರಚಿಸಬೇಕು. ಗಳವು ಒಳಗೆ ಸರಿಯುವ ಭಾಗ. ಆ ಭಾಗವು ಅದರ ಎತ್ತರದ ನಾಲ್ಕನೆಯ ಒಂದಂಶದಷ್ಟು ಮಾತ್ರ ಒಳಗೆ ಸರಿಯಬೇಕು.

ಈ ರೀತಿಯ ಮಂಚಕರಚನೆಯಿಂದ ಪಂಚಾಂಗದ ಸೌಂದರ್ಯ ವರ್ಧಿಸುತ್ತದೆ.

೧೩. ಕಂಬದ ಉದ್ದ (ಎತ್ತರ)ದ ನಿಯಮ

ಶ್ಲೋಕ : ಕೃತ್ವಾಧಿಷ್ಠಾನಮೇವಂ ದೃಢತರಮಥ ತಚ್ಛೇಷಿತಂ ಪಾದಮಾನಮ್
ವಿದ್ಯಾದಂಘ್ರ್ಯುಚ್ಚಮಸ್ಮಿನ್ನೃತು ತುರಗಭುಜಂಗಾಂಕ ಪಂಕ್ತೀಶಭಕ್ತೇ
ಏಕಾಂಶೇನಾನ್ವಿತಂ ವಾ ವಿರಹಿತ ಮಥವೇತೀಪ್ಸಿತಾತ್ಮಾಂಘ್ರಿದೀರ್ಘಾ -
ದೋಮಾಸಂಜ್ಞಾಂಘ್ರಿ ಪೀಠೋಚ್ಚಯಮಪನಯತಾ ಪೋತಿಕಾಯಾ ಘನಂ ಚ ॥೨೧॥

ತಾತ್ಪರ್ಯ :

ಮೇಲೆ ಹೇಳಿದಂತೆ ಪಂಚಾಂಗವನ್ನು ದೃಢತರವಾಗುವಂತೆ ಮಾಡಿ ಆ ಪಂಚಾಂಗದ ಎತ್ತರವನ್ನು ಬಿಟ್ಟು ಉಳಿದ ಪಾದಮಾನದ ಎತ್ತರವೇ ಕಂಬದ ಎತ್ತರವಾಗುತ್ತದೆ. ಆ ಎತ್ತರವನ್ನು 6, 7, 8, 9, 10 ಅಥವಾ 11ರಿಂದ ಭಾಗಿಸಿ ಅವುಗಳ ಒಂದಂಶವನ್ನು (ಅಂದರೆ ಕ್ರಮವಾಗಿ $\frac{1}{6}$, $\frac{1}{7}$, $\frac{1}{8}$, $\frac{1}{9}$, $\frac{1}{10}$, $\frac{1}{11}$ ಅಂಶವನ್ನು) ಆ ಎತ್ತರಕ್ಕೆ ಕೂಡಿಸಿ ಅಥವಾ ಕಳೆದು ಕಂಬದ ಉದ್ದವನ್ನು ನಿರ್ಧರಿಸಬಹುದು. ಅಲ್ಲದೆ ಕಂಬದ ಕೆಳಗಿರುವ 'ಓಮಾ' ಎಂಬ ಪಾದಪೀಠದ ಎತ್ತರವನ್ನೂ ಮೇಲಿನ ಬೋದಿಗೆಯ ದಪ್ಪವನ್ನೂ ಕಳೆಯಬೇಕು. (ಹೀಗೆ ಕಳೆದು ಉಳಿದ ಅಳತೆಯೇ ಕಂಬದ ಎತ್ತರ ಅಥವಾ ಉದ್ದ)

ವಿ.ವಿ. :

ಮಾಡಿನ ಏರಿಳಿತವನ್ನು ಬೇಕಾದ ರೀತಿಯಲ್ಲಿ ಹೊಂದಿಸುವ ಸಲುವಾಗಿ ಇಲ್ಲಿ ಕಂಬದ ಉದ್ದ ಅಥವಾ ಎತ್ತರವನ್ನು ನಿರ್ಧರಿಸಲು ಹಲವಾರು ಕ್ರಮಗಳನ್ನು ಸೂಚಿಸಿರುತ್ತಾರೆ. ಪಂಚಾಂಗದ ಎತ್ತರ, ಕಂಬದ ಎತ್ತರ ಮತ್ತು ಮಾಡಿನ ಏರಿಳಿತಗಳು ಪ್ರಮಾಣಬದ್ಧವಾಗಿದ್ದರೆ ಮನೆಯ ರಚನೆಯು ಅಂದವಾಗಿ ಕಾಣುತ್ತದೆ. ಈ ಮೂರರ ಜೋಡಣೆಯ ಸೌಂದರ್ಯವನ್ನು ಹೆಚ್ಚಿಸಲು ವಾಸ್ತುಶಾಸ್ತ್ರಜ್ಞರು ಇಲ್ಲಿ ಅವಕಾಶ ಕಲ್ಪಿಸಿರುತ್ತಾರೆ. ಅಲ್ಲದೆ ಪಾದಮಾನದ ಎತ್ತರಕ್ಕೆ ಅನುಗುಣವಾಗಿ ಕಂಬದ ಎತ್ತರವನ್ನು ನಿಗದಿಪಡಿಸಿರುವುದರಿಂದ ಮನೆಯ ಭದ್ರತೆಗೆ ಹೆಚ್ಚಿನ ಪ್ರಾಧ್ಯಾನವನ್ನು ಕೊಟ್ಟಂತಾಗಿದೆ.

ಉದಾ : ೧.	(1) ಪಾದಮಾನದ ಎತ್ತರ	-	3 ಕೋ. 23 ಅಂ.
	(2) ಪಂಚಾಗದ ಎತ್ತರ	-	0 ಕೋ. 19 ಅಂ.
	(3) ಕಂಬದ ಎತ್ತರ	-	3 ಕೋ. 23 ಅಂ. – 0 ಕೋ. 19 ಅಂ.
		=	3 ಕೋ. 4 ಅಂ.
ಉದಾ : ೨ :	ಕಂಬದ ಒಟ್ಟು ಎತ್ತರ	-	3 ಕೋ. 4 ಅಂ. + (3 ಕೋ. 4 ಅಂ. ÷ 6)
		=	3 ಕೋ. 16 ಅಂ. 5.3 ಯವ
ಉದಾ : ೩ :	ಕಂಬದ ಒಟ್ಟು ಎತ್ತರ	-	3 ಕೋ. 4 ಅಂ. – (3 ಕೋ. 4 ಅಂ. ÷ 6)
		=	2 ಕೋ. 15 ಅಂ. 2.7 ಯವ

೧೪. ಪಾದಪೀಠ

ಶ್ಲೋಕ : ವಿನ್ಯಸ್ಯೇತ್ ಪಾದಪೀಠಂ ಸುದೃಢತರಶಿಲಾದಾರುಸಾರಪ್ರಕ್ಲಪ್ತಮ್
ಮಾಸೂರೋಪರ್ಯಥಾಬ್ಧ್ಯಶ್ರಕ ವಸುನೃಪಕೋಣಂ ಕ್ವಚಿದ್ವರ್ತುಲಂ ವಾ
ಸ್ತಂಭಾಧೋ ಭಾಗ ಕರ್ಣೋನ್ಮಿತ ವಿತತ ತದರ್ಧೋಚ್ಛ್ರಯಂ ವಾ ತದಂಘ್ರ್ಯ
ಗ್ನ್ಯರ್ಧಾಂಶೋನಂ ಚ ಪದ್ಮೋಪಮಮಪಿ ಕುಹಚಿದ್ ವಾಜನಾದ್ಯನ್ವಿತಂ ಚ ॥೨೨॥

ತಾತ್ಪರ್ಯ :

'ಓಮಾ' ಎಂಬ ಪಾದಪೀಠವನ್ನು ಕಠಿಣವಾದ ಶಿಲೆಯಿಂದ ಅಥವಾ ಗಟ್ಟಿಯಾದ ಮರದ ತಿರುಳಿನಿಂದ ಚತುರಶ್ರವಾಗಿ ಅಥವಾ ಅಷ್ಟಕೋಣವಾಗಿ ಇಲ್ಲವೇ ಹದಿನಾರು ಕೋಣವಾಗಿ ಅಥವಾ ವರ್ತುಲಾಕಾರವಾಗಿ ರಚಿಸಿ ಪಂಚಾಂಗದ ಮೇಲೆ ಇಡಬೇಕು. ಆ ಪಾದಪೀಠದ ಅಗಲವು ಕಂಭದ ಕೆಳ ಭಾಗದ ಅಗಲದ ಕರ್ಣಕ್ಕೆ ಸಮವಾಗಿರಬೇಕು ಮತ್ತು ಅದರ ಎತ್ತರವು (ದಪ್ಪ) ಕಂಭದ ಕೆಳಭಾಗದ ಕರ್ಣದ ಅರ್ಧದಷ್ಟು ಇರಬೇಕು. ಇಲ್ಲವೇ ಆ ಅರ್ಧದ ಎತ್ತರದ $\frac{1}{3}$, $\frac{1}{4}$ ಅಥವಾ $\frac{1}{2}$ ಅಂಶ ಕಡಿಮೆಯಾಗಿದ್ದು ಪದ್ಮಾಕಾರದ ರಚನೆಯಿಂದ ಕೂಡಿರಬೇಕು. ಕೆಲವೆಡೆ ವಾಜನದಿಂದ ಕೂಡ ಕೂಡಿರಬೇಕು.

ವಿ.ವಿ. :

ಪಾದಪೀಠದ ಅಗಲ ಮತ್ತು ದಪ್ಪದ ಲೆಕ್ಕಾಚಾರ.

ಪಾದಪೀಠದ ಅಗಲವನ್ನು ಕಂಡುಹಿಡಿಯುವುದು

೧. ಕಂಬದ ಬುಡದ ಗಾತ್ರ - 12 ಅಂ. 5.3 ಯವ
೨. ಕಂಬದ ಬುಡದ ಕರ್ಣ - 17 ಅಂ. 7.3 ಯವ
೩. ಪಾದಪೀಠದ ಅಗಲ - <u>17 ಅಂ. 7.3 ಯವ</u>

ಪಾದಪೀಠದ ದಪ್ಪವನ್ನು ಕಂಡುಹಿಡಿಯುವುದು

೧. ಕಂಬದ ಬುಡದ ಗಾತ್ರ - 12 ಅಂ. 5.3 ಯವ
೨. ಅದರ ಕರ್ಣ - 17 ಅಂ. 7.3 ಯವ
೩. ಆ ಕರ್ಣದ ಅರ್ಧ - 8 ಅಂ. 7.65 ಯವ
೪. ಆ ಕರ್ಣಾರ್ಧದ $\frac{2}{3}$ ಅಂಶ - 5 ಅಂ. 7.8 ಯವ

ಆದುದರಿಂದ ಪಾದಪೀಠದ ದಪ್ಪ - <u>5 ಅಂ. 7.8 ಯವ</u>

ಶ್ಲೋಕ : ಸ್ತಂಭಾಃ ಸ್ವವಿಸ್ತಾರಹುತಾಶಭಾಗ
ಪ್ರಕ್ಲ್ಪ್ತತುರ್ಯಶ್ರ ಶಿಖಾಸಮೇತಾಃ
ಸ್ಥಾಪ್ಯಾ ಯಥಾರ್ಹಂ ನಿಜಪೀಠಿಕೋರ್ಧ್ವಂ
ತದ್ಗರ್ತಸಂಲಗ್ನಶಿಖಾಃ ಸಮಸ್ತಾಃ ॥೨೩॥

ತಾತ್ಪರ್ಯ :

ಎಲ್ಲ ಕಂಬಗಳನ್ನು ಅವುಗಳ ಅಗಲದ ಮೂರನೇ ಒಂದಂಶಕ್ಕೆ ಸಮನಾಗಿ ಚತುರಶ್ರದ ಮೊಳೆಯನ್ನು ನಿರ್ಮಿಸಿ ಅವುಗಳ ಪಾದಪೀಠಗಳ ಮೇಲುಭಾಗದ ಹೊಂಡದಲ್ಲಿ ಮೊಳೆಯು ತಳವೂರಿ ಗಟ್ಟಿಯಾಗಿ ನಿಲ್ಲುವಂತೆ ಕೂರಿಸಬೇಕು.

೧೫. ಕಂಬದ ಅಗಲ

ಶ್ಲೋಕ : ಸ್ತಂಭೋಚ್ಚಾಬ್ಧೀಷು ಷಡ್ಭೂಧರ ವಸುನವದಿಗ್ರುದ್ರಭಾಗೈಕತಃ ಸ್ಯಾತ್
ಸ್ತಂಭಾಧೋ ವಿಸ್ತೃತಿಸ್ತದ್ವಸುನವ ದಶರುದ್ರಾಂಶ ಹೀನೋಽಗ್ರತಾರಃ
ದಂಡಾಪ್ಯಶ್ಚಾಯಮೇತೇನ ಚ ಕುಹಚಿದಥೋ ಮೀಯತೇ ದಾರುಕ್ಲಪ್ತೌ
ಕುಡ್ಯಸ್ತಂಭಾಗ್ರತಾರೋಽಪ್ಯಥ ತದವಯವಾಕಲ್ಪನೇ ದಂಡಸಂಜ್ಞಃ ॥೨೪॥

ತಾತ್ಪರ್ಯ :

ಕಂಬದ ಕೆಳಭಾಗದ (ಬುಡ) ಅಗಲವು ಆ ಕಂಭದ ಎತ್ತರದ $\frac{1}{4}$, $\frac{1}{5}$, $\frac{1}{6}$, $\frac{1}{7}$, $\frac{1}{8}$, $\frac{1}{9}$, $\frac{1}{10}$ ಅಥವಾ $\frac{1}{11}$ ಅಂಶದಷ್ಟು ಇರಬೇಕು. ಮತ್ತು ಕಂಭದ ಕೆಳಭಾಗದ ಅಗಲದಿಂದ ಅದರ $\frac{1}{8}$, $\frac{1}{9}$, $\frac{1}{10}$ ಅಥವಾ $\frac{1}{11}$ ಅಂಶವನ್ನು ಕಳೆದಾಗ ಸಿಗುವುದೇ ಆ ಕಂಭದ ಮೇಲುಭಾಗದ (ತುದಿ) ಅಗಲ. ಕಂಬದ ತುದಿಯ ಈ ಅಗಲಕ್ಕೆ "ದಂಡ"ವೆಂದು ಹೆಸರು. ಈ ದಂಡವನ್ನು ಕೆಲವು ಕಡೆ ಮರದ ಅಳತೆಗೆ ಉಪಯೋಗಿಸಬೇಕು. ದಂಡ ಎಂಬ ಕಂಭದ ತುದಿಯ ಈ ಅಳತೆಯನ್ನು ಅದರ ಅವಯವಗಳ ಕೆತ್ತನೆಗೆ ಸ್ವೀಕರಿಸಬೇಕು.

ವಿ.ವಿ. ;

ಇಲ್ಲಿ ಹೇಳಿದ 'ದಂಡ' ಭಾಗವು ಭಾರವನ್ನು ಹೊರುವ ಅಂಗವಾಗಿದೆ. ಕಂಬದ ತಳಭಾಗದ ಅಗಲವು ಆ ಕಂಬದ ಉದ್ದದ $\frac{1}{11}$ ಅಂಶದಿಂದ ತೊಡಗಿ $\frac{1}{4}$ ಅಂಶದ ವರೆಗಿನ ಎಂಟು ವಿಧದ ಅಂಶವನ್ನು ಇಲ್ಲಿ ವಾಸ್ತುಶಾಸ್ತ್ರಜ್ಞರು ಸೂಚಿಸಿರುತ್ತಾರೆ. ಹಾಗೆಯೇ ಕಂಭದ ಕೆಳಭಾಗದ ಅಗಲಕ್ಕೆ ಅನುಗುಣವಾಗಿ ಅದರ ಮೇಲಿನ ಭಾಗದ ಅಗಲವನ್ನು ನಿರ್ಧರಿಸಲು ಸೂಚಿಸಿರುತ್ತಾರೆ. ಕಂಬಗಳನ್ನು ಮರ, ಕಲ್ಲು, ಇಟ್ಟಿಗೆ, ಮುರಕಲ್ಲು ಮತ್ತು ಮಣ್ಣುಗಳಿಂದ ಸಿದ್ಧಗೊಳಿಸುವ ಕಾರಣ ಈ ವಿಧದ ಅಳತೆಗಳಲ್ಲಿ ಬೇಕಾದುದನ್ನು ಆಯಾಯ ವಸ್ತುಗಳ ಕಂಬಗಳಿಗೆ ಉಪಯೋಗಿಸಬಹುದು. ಕಂಬಗಳು ಮನೆಯನ್ನು ಹೊರುವ ಆಧಾರವಾದುದರಿಂದ ಇಲ್ಲಿ ಹೇಳಿದ ಪ್ರಮಾಣ ಅತ್ಯಂತ ಸೂಕ್ತವೂ ವೈಜ್ಞಾನಿಕವಾಗಿ ಪ್ರಾಯೋಗಿಕವೂ ಆಗಿದೆ. ಕಂಬದ ಬುಡದ ಮತ್ತು ತುದಿಯ ಲೆಕ್ಕಾಚಾರದ ವಿಷಯದಲ್ಲಿ ಒಂದು ಉದಾಹರಣೆ :

(ಅ) ೧. ಕಂಬದ ಎತ್ತರ (ಉದ್ದ) = 3 ಕೋ. 4 ಅಂ.

೨. ಎತ್ತರದ $\frac{1}{6}$ ಅಂಶ ಅಂದರೆ 3 ಕೋ. 4 ಅಂ. ÷ 6 = 12 ಅಂ. 5.3 ಯವ

೩. ಆದ್ದರಿಂದ ಕಂಭದ ಬುಡದ ಅಗಲ : 12 ಅಂ. 5.3 ಯವ

(ಆ) ೧. ಕಂಭದ ಬುಡದ ಅಗಲ : 12 ಅಂ. 5.3 ಯವ

೨. ಬುಡದ ಅಗಲದ $\frac{7}{8}$ ಅಂಶ ತುದಿಯ ಅಗಲವಾದಾಗ : 12 ಅಂ. 5.3 ಯವ x $\frac{7}{8}$

೩. ಆದುದರಿಂದ ಕಂಬದ ತುದಿಯ ಅಗಲ : 11 ಅಂ. 0.6 ಯವ

೧೬. ಕಂಬದ ಅಲಂಕಾರ

ಶ್ಲೋಕ : ಸ್ತಂಭಾಸ್ತನ್ಮೂಲತಾರ ಶ್ರುತಿಮಿತಚತುರಶ್ರೋರ್ಧ್ವಭಾಗಾಃ ಸಮಸ್ತಾ
ಮೂಲೇಽಧ್ಯರ್ಧಾಗ್ನಿ ವೇದಾಶುಗರಸತತಿ ಕರ್ಣೋನ್ನಿತಾಬ್ಧ್ಯಶ್ರರೂಪಾಃ
ಮಧ್ಯೇ ವ್ಯಾಸಶ್ರುತಿಪ್ರೋನ್ನಿತ ಕೃತಚತುರಶ್ರಾಸ್ತದೂರ್ಧ್ವಾಧರೋದ್ಯದ್
ವಸ್ವಶ್ರಾಃ ಸರ್ವತೋ ವರ್ತುಲನೃಪವಸುಕೋಣಾಶ್ಚ ಯದ್ವಾ ವಿಧೇಯಾಃ ॥೨೫॥


ತಾತ್ಪರ್ಯ :

ಕಂಬಗಳು ತುದಿಯಲ್ಲಿ ಚತುರಶ್ರಾಕಾರದಲ್ಲಿರಬೇಕು. ಆ ಭಾಗ ಕಂಬದ ಬುಡದ ಕರ್ಣಪ್ರಮಾಣದಷ್ಟು ಇರಬೇಕು. ಬುಡವು ಚತುರಶ್ರವಾಗಿದ್ದು ಕರ್ಣಪ್ರಮಾಣದ $3\frac{1}{2}$, 3, 5 ಅಥವಾ 6 ಪಾಲು ಅಧಿಕತೆಯ ಎತ್ತರ ಅಥವಾ ಉದ್ದವನ್ನು ಹೊಂದಿರಬೇಕು. ಕಂಬದ ಮಧ್ಯಭಾಗವು ಚತುರಶ್ರವಾಗಿದ್ದು ಅದರ ಕರ್ಣಪ್ರಮಾಣದಷ್ಟು ಉದ್ದವಿರಬೇಕು. ಅಲ್ಲದೆ ಅದರ ಮೇಲುಭಾಗ ಮತ್ತು ಕೆಳಗಿನ ಭಾಗ ಎಂಟು ಪಟ್ಟಿಗಳಿಂದ ಕೂಡಿರಬೇಕು. ಅಥವಾ ವೃತ್ತಾಕಾರದಲ್ಲಿರಬೇಕು. ಇಲ್ಲವೇ ಹದಿನಾರು ಕೋಣಗಳ ಆಕೃತಿಯಲ್ಲಿರಬೇಕು.

ವಿ.ವಿ. :


ಈ ಶ್ಲೋಕದಲ್ಲಿ ಕಂಭದ ಅಲಂಕಾರರಚನೆಯನ್ನು ತಿಳಿಸಲಾಗಿದೆ. ಅದರ ಪ್ರಕಾರ ಕಂಬವನ್ನು ಮೂರು ಭಾಗ ಮಾಡಬೇಕು. ಒಂದನೆಯದು ಮೂಲಭಾಗ (ಬುಡ). ಎರಡನೆಯದು ಮಧ್ಯಭಾಗ ಮತ್ತು ಮೂರನೆಯದು ಅಗ್ರಭಾಗ (ತುದಿ). ಅಲಂಕಾರ ರಚನೆಯ ಪ್ರಮಾಣಕ್ಕೆ ಬುಡದ ಕರ್ಣರೇಖೆಯ ಪ್ರಮಾಣವನ್ನು ತೆಗೆದುಕೊಳ್ಳಲಾಗಿದೆ. ಕರ್ಣ ಎಂದರೆ ಚತುರಶ್ರದ ಒಂದು ಮೂಲೆಯಿಂದ ಅದರ ಎದುರಿಗಿರುವ ಮೂಲೆಯ ಉದ್ದ. ಕರ್ಣಪ್ರಮಾಣ ಎಂದರೆ ಆ ಕರ್ಣರೇಖೆಯ ಉದ್ದ.

ಕಂಬದ ಬುಡ ಮತ್ತು ತುದಿಗಳು ಚತುರಶ್ರಾಕಾರದಲ್ಲಿರುತ್ತವೆ. ಆದರೆ ಮಧ್ಯಭಾಗ ಅದರ ಕರ್ಣ ಪ್ರಮಾಣದಲ್ಲಿದ್ದು ಮೂರು ರೀತಿಯ ರಚನೆಗಳ ಕೆತ್ತನೆಯನ್ನು ಹೊಂದಿರುತ್ತದೆ. (೧) ಮಧ್ಯದ ಕರ್ಣಪ್ರಮಾಣದ ಚತುರಶ್ರಾಕಾರದ ಮೇಲೆ ಮತ್ತು ಕೆಳಗಿನ ಭಾಗಗಳು ಎಂಟು ಪಟ್ಟಿಗಳಿಂದ ಕೂಡಿರುತ್ತವೆ. (೨) ವೃತ್ತಾಕಾರದಲ್ಲಿರುತ್ತವೆ ಅಥವಾ (೩) ಹದಿನಾರು ಕೋಣಗಳ ಆಕೃತಿಯಲ್ಲಿರುತ್ತವೆ.




ಕಂಬ

ಚಿ. ೮೩, ಅ. ೫, ಶ್ಲೋ. ೨೫




ಕಂಬದ ಆಕಾರ - ವಿಧಗಳು

ಚಿ. ೮೩, (ಅ)




ಚಿ. ೮೩, (ಅ)



ಚಿ. ೮೩, (ಇ)

ಹಳೆಯ ಕಂಬದ ಮಾದರಿಗಳು



ಚಿ. ೮೩, (ಈ) ಅ. ೫. ಶ್ಲೋ. ೨೫

ಶ್ಲೋಕ : ವೃತ್ತಾದಯಸ್ತೇ ಚರಣಾಸ್ತ್ರಯೋಽಮೀ
ಮಧ್ಯಾದಧಸ್ತಾಚ್ಚತುರಶ್ರಕಾ ವಾ
ಯದ್ವಾ ವಿತಾನಶ್ರವಣೋಪಕ್ಲಪ್ತ
ತುರ್ಯಾಶ್ರಮೂಲಾಶ್ಚ ತಥಾ ವಿಧೇಯಾಃ ॥೨೬॥

ತಾತ್ಪರ್ಯ :

ವೃತ್ತಾಕಾರ, ಅಷ್ಟಪಟ್ಟಿಯ ಆಕಾರ ಮತ್ತು ಹದಿನಾರು ಪಟ್ಟಿಗಳ ಆಕಾರದ ಮೂರು ವಿಧವಾದ ಕಂಬಗಳನ್ನು ಮಧ್ಯದಿಂದ ಕೆಳಗೆ ಮತ್ತು ಬುಡದಲ್ಲಿ ಕರ್ಣಮಾನದ ಉದ್ದದಷ್ಟು ಚತುರಶ್ರಾಕಾರವಾಗಿ ಇರುವಂತೆಯೂ ರಚಿಸಬಹುದು.

ಶ್ಲೋಕ : ಅತ್ಯುಚ್ಚ್ರೇsಂಘ್ರೌತು ತತ್ತ್ರ್ಯಧಿಚರಣದಲದ್ವಿಘ್ನ ವಿಸ್ತಾರಮಾಸೂ
ರೋಚ್ಚ್ರೋಚ್ಚ್ರಾದ್ಯರ್ಧತುಂಗಂ ರಚಯತು ಚರಣಂ ಕುತ್ರಚಿನ್ಮಧ್ಯತೋsಧಃ
ಕುರ್ಯಾದೇವಂ ಶಿಲಾಭಿಃ ಪ್ರಣಗದಿತ ಸುಧಾಭೇದಸಂಮೇಲಿತಾಭಿ -
ರ್ಯದ್ವಾ ಸಾರೇಷ್ಟಕಾಭಿಃ ಕ್ವಚಿದಖಿಲಸಮುತ್ಸೇಧಮರ್ಧೋಚ್ಛ್ರಯಂ ವಾ ॥೨೭॥

ತಾತ್ಪರ್ಯ :

ಕಂಬದ ಎತ್ತರ (ಉದ್ದ) ಬಹಳ ಹೆಚ್ಚಾಗಿದ್ದರೆ ಪಂಚಾಂಗದ ಎತ್ತರಕ್ಕೆ ಸಮವಾದ ಅಥವಾ ಅದರ $1\frac{1}{2}$ ಪಾಲಿನಷ್ಟು ಇಲ್ಲವೇ ಕೆಲವು ಕಡೆ ಮಧ್ಯದಿಂದ ಕೆಳಗಿನ ಭಾಗದಷ್ಟು ಎತ್ತರವನ್ನು ಅದಕ್ಕೆ ನಿಗದಿತವಾದ ಅಗಲದ $1\frac{1}{4}$ ಅಥವಾ $1\frac{1}{2}$ ಪಾಲು ಹೆಚ್ಚಿನ ಅಗಲದೊಂದಿಗೆ ರಚಿಸಬೇಕು. ಹಾಗೆ ರಚಿಸುವಾಗ ಅದನ್ನೂ ಶಿಲೆಯಿಂದ ಸುಣ್ಣದ ಮಿಶ್ರಣದ ಗಾರೆಯಿಂದ ಅಥವಾ ಗಟ್ಟಿಯಾದ ಇಟ್ಟಿಗೆಗಳಿಂದ ನಿರ್ಮಿಸಬೇಕು.

ಉದಾ : (೧) ಕಂಬದ ಎತ್ತರ - 3 ಕೋ. 4 ಅಂ.

(೨) ಪಂಚಾಂಗದ ಎತ್ತರ - 0 ಕೋ. 19 ಅಂ.

(೩) ಶಿಲೆ ಅಥವಾ ಇಟ್ಟಿಗೆಯಿಂದ ರಚಿಸುವ ಭಾಗ : ಪಂಚಾಂಗದ ಎತ್ತರದ $1\frac{1}{2}$ ಪಾಲು
= 0 ಕೋ. 19 ಅಂ. x $1\frac{1}{2}$
= <u>1 ಕೋ. 4 ಅಂ. 4 ಯವ</u>

(೪) ಆ ಶಿಲಾರಚನೆಯ ದಪ್ಪ - ಕರ್ಣದ $1\frac{1}{4}$ರಷ್ಟು ಕೋ
ಕರ್ಣ - 17 ಅಂ. 7.3 ಯವ
= 17 ಅಂ. 7.3 ಯವ x $1\frac{1}{4}$
= <u>0 ಕೋ. 22 ಅಂ. 3.1 ಯವ</u>

ಶ್ಲೋಕ : ಏಕಂ ವಾಜನಮುತ್ತರಸ್ಯ ಯದಿ ತತ್ ಸ್ತಂಭಾಂತರಾಬ್ಧ್ಯಶ್ರಕಮ್
ನೇಷ್ಟಂ ಸಂಮತಮಲ್ಪವಾಜನಯುತೇ ಪತ್ರಾನ್ವಿತೇ ಚೋತ್ತರೇ
ಸ್ತಂಭಾ ಮೌಕ್ತಿಕದಾಮಶುಂಡವಲಯಾದ್ಯಾಢ್ಯಾಸ್ತ್ರಥೇಷ್ಟಾಸ್ತ್ರಯೋ -
ರ್ಗೇಹಾಂಗಂ ಚ ಸಮಸ್ತಮುತ್ತರವಶಾದೂರ್ಧ್ವಾಧರಸ್ಥಂ ಭವೇತ್ ॥೨೮॥

ತಾತ್ಪರ್ಯ :

ಉತ್ತರಕ್ಕೆ ಒಂದು ವಾಜನವಿದ್ದರೆ ಕಂಭದ ಮಧ್ಯಭಾಗ ಚತುರಶ್ರವಾಗಿರುವುದು ಉಚಿತವಲ್ಲ. ಒಂದು ವೇಳೆ ಉತ್ತರವು ಸಣ್ಣದಾದ ವಾಜನದಿಂದ ಕೂಡಿದ್ದರೆ ಮತ್ತು ಪತ್ರಾನ್ವಿತವಾಗಿದ್ದರೆ ಚತುರಶ್ರ ಒಳ್ಳೆಯದು. ಅಂತಹ ಕಂಭವು ಮುತ್ತಿನ ಹಾರ, ಆನೆಯ ಸೊಂಡಿಲು, ಬಳೆ ಮೊದಲಾದ ಮಂಗಲಪ್ರದವಾದ ಚಿತ್ರಗಳ ಕೆತ್ತನೆ ಕೆಲಸಗಳಿಂದ ಕೂಡಿದರೆ ತುಂಬ ಪ್ರಶಸ್ತ. ಉತ್ತರದ ಮೇಲಿನ ಮತ್ತು ಕೆಳಗಿನ ಮನೆಯ ಎಲ್ಲ ಅವಯವಗಳೂ ಉತ್ತರಕ್ಕೆ ಅನುಗುಣವಾಗಿ ಇರಬೇಕು.

೧೭. ಕಂಬದ ಮೇಲಿನ ಬೋದಿಗೆ

ಶ್ಲೋಕ : ಸ್ತಂಭಾಗ್ರೋತ್ತರತಾರಯೋಗದಲವಿಸ್ತಾರಂ ತಥಾ ಸ್ತಂಭಮ -
ಧ್ಯೋದ್ಯದ್ವ್ಯಾಸತತಾಂ ಚ ತದ್ದಲಘನಾಂ ರೂಪೋತ್ತರೇ ಪೋತಿಕಾಮ್
ಸ್ತಂಭಾಗ್ರೋದಿತ ದಂಡವಹ್ನ್ಯುದಧಿಬಾಣಾಯಾಮಿನೀಂ ವೋತ್ತರ -
ವ್ಯಾಸತ್ರಿಘ್ನಸಮಾಯತಾಂ ಕಲಯತು ಸ್ತಂಭೇ ಲಸದ್ವ್ಯಾಜನಾಮ್ ॥೨೯॥

ತಾತ್ಪರ್ಯ :

ಕಂಬದ ತುದಿಯಲ್ಲಿ ರೂಪೋತ್ತರಕ್ಕೆ ಆಧಾರವಾಗಿರುವ ಬೋದಿಗೆಯ ಅಗಲವು ಕಂಬದ ತುದಿಯ ಮತ್ತು ಉತ್ತರದ ಅಗಲ ಸೇರಿದುದರ ಅರ್ಧದಷ್ಟಿರಬೇಕು. ಅಥವಾ ಕಂಬದ ಮಧ್ಯದ ಅಗಲದಷ್ಟಿರಬೇಕು. ಅದರ ದಪ್ಪವು ಅದರ ಅಗಲದ ಅರ್ಧದಷ್ಟಿರಬೇಕು. ಅದರ ಉದ್ದವು ಕಂಬದ ತುದಿಯ 'ದಂಡ'ದ 3, 4 ಅಥವಾ 5 ಪಾಲು ಅಧಿಕವಾಗಿರಬೇಕು. ಅಥವಾ ಬೋದಿಗೆಯ ಅಗಲದ ಮೂರು ಪಾಲು ಅಧಿಕವಾಗಿರಬೇಕು.

ವಿ.ವಿ. :

ಬೋದಿಗೆಯು ಕಂಬದ ತುದಿಯಲ್ಲಿ ಇರುವಂತಹ ಒಂದು ಸಾಧನ. ಅದರ ಮುಖ್ಯ ಪಾತ್ರ ಮನೆಯ ಉತ್ತರದ ಮೇಲಿನ ಎಲ್ಲ ಭಾರವನ್ನು ಕಂಬದ ಮೇಲೆ ಹೊರಿಸುವುದಾಗಿದೆ. ಅದಲ್ಲದೆ, ಅದು 'ದಂಡ'ದ 3, 4 ಅಥವಾ 5 ಪಾಲು ಹೆಚ್ಚು ಉದ್ದವಿರುವುದರಿಂದ ಉತ್ತರಕ್ಕೆ ಆಧಾರವೂ ಆಗಿದೆ.

ಅ. ಕಂಬದ ತುದಿಯ ಬೋದಿಗೆಯ ಅಗಲ :


(೧) ಕಂಬದ ತುದಿಯ ಅಗಲ - 11 ಅಂ. 0.6 ಯವ
(೨) ಉತ್ತರದ ಅಗಲ - 0 ಕೋ. 7 ಅಂ.
(೩) ಕಂಬದ ತುದಿಯ ಮತ್ತು ಉತ್ತರದ ಒಟ್ಟು ಅಗಲ - 18 ಅಂ. 0.6 ಯವ
(೪) ಎರಡರ ಒಟ್ಟು ಅಗಲದ ಅರ್ಧ = 9 ಅಂ. 0.3 ಯವ
(೫) ಆದುದರಿಂದ ಬೋದಿಗೆಯ ಅಗಲ - <u>0 ಕೋ. 9 ಅಂ. 0.3 ಯವ</u>

ಆ. ಬೋದಿಗೆಯ ದಪ್ಪ :

ಬೋದಿಗೆಯ ಅಗಲದ ಅರ್ಧ = 9 ಅಂ. 03ಯ $\div \frac{1}{2}$
ಆದ್ದರಿಂದ ಬೋದಿಗೆಯ ದಪ್ಪ 0ಕೋ. 4ಅಂ. 4.15ಯವ.

ಇ. ಬೋದಿಗೆಯ ಉದ್ದ :

ಉದಾ : ದಂಡದ ಮೂರು ಪಾಲು ಅಧಿಕ
ದಂಡ x 3 = (11 ಅಂ. 0.6 ಯವ x3) = 1 ಕೋ. 9 ಅಂ. 1.8 ಯವ
ಅಥವಾ - ಬೋದಿಗೆಯ ಅಗಲದ ಮೂರು ಪಾಲು ಅಧಿಕ.
ಉದಾ : ಬೋದಿಗೆಯ ಅಗಲ = 9 ಅಂ. 0.3 ಯವ
= 9 ಅಂ. 0.3 ಯವ x 3
∴ ಬೋದಿಗೆಯ ಉದ್ದ - <u>1 ಕೋ. 3 ಅಂ. 0.9 ಯವ</u>



ಬೋದಿಗೆಯ ಜೋಡಣೆ
ಚಿ. ೮೪, ಅ. ೫, ಶ್ಲೋ. ೨೯

೧೮. ಉತ್ತರ - ಅದರ ವಿಧಗಳು

ಶ್ಲೋಕ : ಪತ್ರೋತ್ತರೇ ಚೇದ್ ವಿತತಾಂಘ್ರಿಹೀನ
ತೀವ್ರಾ ವಿಧೇಯಾ ಖಲು ಪೋತಿಕೇಯಮ್
ಖಂಡೋತ್ತರೇ ತುಲ್ಯವಿತಾನತೀವ್ರಾ
ಸರ್ವಶ್ಚ ಸರ್ವೇಷು ಯಥೋಪಶೋಭಮ್ ||೩೦||

ತಾತ್ಪರ್ಯ :

ಪತ್ರೋತ್ತರಕ್ಕಾದರೆ ಬೋದಿಗೆಯ ಅಗಲದ $\frac{3}{4}$ ಅಂಶ ದಪ್ಪವಿರಬೇಕು. ಖಂಡೋತ್ತರಕ್ಕಾದರೆ ಅಗಲದಷ್ಟೇ ದಪ್ಪವಿರಬೇಕು. ಕಂಬದ ಎಲ್ಲ ಅವಯವಗಳನ್ನು ಅವುಗಳ ಶೋಭೆ ಹೆಚ್ಚುವಂತೆ ರಚಿಸಬೇಕು.

ವಿ.ವಿ. :

ಪತ್ರೋತ್ತರ ಮತ್ತು ಖಂಡೋತ್ತರಗಳು ಉತ್ತರಗಳ ಪ್ರಭೇದಗಳು. ಅವುಗಳ ವಿವರ ಮುಂದಿನ ಶ್ಲೋಕದಲ್ಲಿ ಬರುತ್ತದೆ.

ಶ್ಲೋಕ : ಸ್ತಂಭಾಧಸ್ತಾರಭೇದಪ್ರಕಥನವಿಧಿನೈವೋತ್ತರಾಣಾಂ ಚ ತಾರಮ್
ಸ್ವಾಭೀಷ್ಟಂ ಕಲ್ಪಯೇದ್ವಾ ವಸುವಸುಯುಗಲಾರ್ಕೋರ್ಮಿಸಂಖ್ಯಾಂಗುಲೈರ್ವಾ
ಶ್ರೇಷ್ಠಂ ಖಂಡೋತ್ತರಂ ತದ್ವಿತತಿಸಮಘನಂ ಮಧ್ಯಮಂ ಪತ್ರಸಂಜ್ಞಂ
ಪಾದೋನೋಚ್ಚಂ ಕನಿಷ್ಠಂ ವಿತತಿದಲಘನಂ ತತ್ತುರೂಪೋತ್ತರಾಖ್ಯಮ್ ||೩೧||

ತಾತ್ಪರ್ಯ :

ಉತ್ತರಗಳ ಅಗಲವನ್ನು ಹಿಂದೆ ಹೇಳಿದ ರೀತಿಯಲ್ಲಿ ಕಂಬಗಳ ಬುಡದ ಅಗಲಕ್ಕೆ ಅನುಗುಣವಾಗಿ ನಿಶ್ಚಯಿಸಬೇಕು. ಅಥವಾ 8, 16, 12, ಇಲ್ಲವೇ 6 ಅಂಗುಲಗಳಲ್ಲಿ ಬೇಕಾದುದನ್ನು ಆರಿಸಿಕೊಳ್ಳಬೇಕು. ಅಗಲದಷ್ಟೇ ದಪ್ಪವಿದ್ದರೆ ಅಂತಹ ಉತ್ತರವನ್ನು ಖಂಡೋತ್ತರ' ಎನ್ನುತ್ತಾರೆ. ಅದು ಅತಿ ಶ್ರೇಷ್ಠವಾದುದು. ಅಗಲದ $\frac{3}{4}$ ಅಂಶ ದಪ್ಪವಿರುವ ಉತ್ತರಕ್ಕೆ ಪತ್ರೋತ್ತರ ಎಂದು ಹೆಸರು. ಇದು ಮಧ್ಯಮತರದ್ದು. ಅಗಲದ $\frac{1}{2}$ ದಷ್ಟು ದಪ್ಪವಿರುವ ಉತ್ತರವು ರೂಪೋತ್ತರವೆನಿಸುತ್ತದೆ. ಇದು ಕನಿಷ್ಠತರವಾದುದು.

ವಿ.ವಿ. :

ಉತ್ತರಗಳಲ್ಲಿ ಮೂರು ವಿಧ (೧) ಖಂಡೋತ್ತರ (೨) ಪತ್ರೋತ್ತರ (೩) ರೂಪೋತ್ತರ

1.	ಖಂಡೋತ್ತರ	(೧) ಕಂಬದ ಬುಡದ ಅಗಲದಷ್ಟೇ ದಪ್ಪವಿರುವ ಉತ್ತರ ಅಥವಾ (೨) 8, 16, 12 ಅಥವಾ 6 ಅಂಗುಲ ದಪ್ಪವಿರುವ ಉತ್ತರ }	ಅತ್ಯುತ್ತಮ
2.	ಪತ್ರೋತ್ತರ	ಕಂಬದ ಬುಡದ ಅಗಲದ $\frac{3}{4}$ ಅಂಶ ದಪ್ಪವಿರುವ ಉತ್ತರ ಉದಾ : ಕಂಬದ ಬುಡದ ಅಗಲ : 12 ಅಂ. 5.3 ಯವ ಅಗಲದ $\frac{3}{4}$ ಅಂಶ ಅಂದರೆ 9 ಅಂ. 3.9 ಯವ	ಮಧ್ಯಮ
3.	ರೂಪೋತ್ತರ	ಕಂಬದ ಬುಡದ ಅಗಲದ $\frac{1}{2}$ ಅಂಶದಷ್ಟು ದಪ್ಪವಿರುವ ಉತ್ತರ ಉದಾ : ಕಂಬದ ಬುಡದ ಅಗಲ 12 ಅಂ. 5.3 ಯವ ಅಗಲದ $\frac{1}{2}$ ಅಂಶ ಅಂದರೆ 6 ಅಂ. 2.6 ಯವ	ಕನಿಷ್ಠ

ಉತ್ತರಗಳಲ್ಲಿ ಮೂರು ವಿಧವನ್ನು ಹೇಳಿದರೂ ಅವುಗಳನ್ನು ಉತ್ತಮ, ಮಧ್ಯಮ ಮತ್ತು ಕನಿಷ್ಠಗಳೆಂದು ವರ್ಗೀಕರಿಸಿದುದರಿಂದ ಶಾಸ್ತ್ರಕಾರರು ಉತ್ತರಕ್ಕೆ ಬಹಳ ಪ್ರಾಧಾನ್ಯವನ್ನು ಕೊಟ್ಟಂತೆ ತೋರುತ್ತದೆ. ಇಡೀ ಕಟ್ಟಡದ ಮಾಡಿಗೆ ಮತ್ತು ಮಾಳಿಗೆಗೆ ಉತ್ತರವೇ ಆಧಾರವಾಗಿದೆ. ಅದು ದುರ್ಬಲವಾದರೆ ಕಟ್ಟಡ ಬಾಳಿಕೆ ಬರಲಾರದು. ಉತ್ತರದ ಉದ್ದಗಲಕ್ಕೂ ಮನೆಯ ಭಾರ ಹಂಚಿ ನಿಲ್ಲುವುದರಿಂದ ಅದರ ಕೆಳಗಿರುವ ಗೋಡೆ ಅಥವಾ ಕಂಬಗಳಿಗೂ ಭಾರವನ್ನು ಹೊರುವ ವಿಷಯದಲ್ಲಿ ಉತ್ತರ ಸಹಾಯಕವಾಗುತ್ತದೆ. ಇಲ್ಲಿ ಮೂರು ವಿಧದ ಉತ್ತರಗಳನ್ನು ಹೇಳಿದ ಕಾರಣ ಮನೆಯ ಗಾತ್ರ, ಅಂತಸ್ತುಗಳಿಗೆ ಅನುಗುಣವಾಗಿ ಉತ್ತರವನ್ನು ಬಳಸಬಹುದಾಗಿದೆ.

ಶ್ಲೋಕ : ಉತ್ತರವಿಸ್ತಾರಘನೇ ವ್ಯತ್ಯಾಸೇನೆ ಪ್ರಕಲ್ಪಯೇದ್ವಾಪಿ
ತತ್ರ ತು ಚೂಲೀತಿ ಮತಾ ತಸ್ಯಾಮೇವಾರ್ಪಯೇತ ಲುಪಾಃ ||೩.೨||

ತಾತ್ಪರ್ಯ :

ಕೆಲವು ಕಡೆಗಳಲ್ಲಿ ಉತ್ತರದ ಅಗಲ ಮತ್ತು ದಪ್ಪವನ್ನು ವ್ಯತ್ಯಾಸಗೊಳಿಸಬಹುದು. ಅಂತಹದನ್ನು "ಚೂಲೀ" ಎನ್ನುತ್ತಾರೆ. ಆಗ ಅದರಲ್ಲಿಯೇ ಪಕಾಸುಗಳನ್ನು ಜೋಡಿಸಬೇಕು.

ಶ್ಲೋಕ : ಏಕಮೇವ ಯದಿ ವಾಜನಂ ಭವತ್ಯುತ್ತರಸ್ಯ ಶರಭಾಜಿತೇ ಘನೇ
ಉಚ್ಚಮಂಶಯುಗಲೇನ ನಿಷ್ಕ್ರಮೋಽಪ್ಯಸ್ಯ ಪಟ್ಟಮುಪಶಿಷ್ಟಭಾಗತಃ ||೩೨||

ತಾತ್ಪರ್ಯ :

ಉತ್ತರಕ್ಕೆ ಒಂದೇ ವಾಜನವನ್ನು ಮಾಡುವಾಗ ಉತ್ತರದ ದಪ್ಪವನ್ನು 5 ಭಾಗ ಮಾಡಿ ಅವುಗಳಲ್ಲಿ ಎರಡು ಭಾಗಗಳನ್ನು ಮೇಲಿನ ಪಟ್ಟಿಯನ್ನಾಗಿಯೂ ಉಳಿದ ಮೂರು ಭಾಗಗಳನ್ನು ಕೆಳಗಿನ ಪಟ್ಟಿಯನ್ನಾಗಿಯೂ ಮಾಡಿಕೊಳ್ಳಬೇಕು.

ಶ್ಲೋಕ : ಅಲ್ಪವಾಜನಯುತೋತ್ತರೇ ಘನೇ ನಾಗಭಾಗಿನಿ ಮಹತ್ ತ್ರಿಭಾಗತಃ
ಏಕತೋಽಲ್ಪಮುಭಯಾಶ್ಚ ನಿಷ್ಕ್ರಮಃ ಸ್ವೋಚ್ಚತೋ ಭವತಿ ಪಟ್ಟಮಬ್ಧಿಭಿಃ ||೩೪||

ತಾತ್ಪರ್ಯ :

ಅಲ್ಪವಾಜನವಿರುವ ಉತ್ತರದ ದಪ್ಪವನ್ನು 8 ರಿಂದ ಭಾಗಿಸಿದಾಗ ಬರುವ ಅಂಶಗಳಲ್ಲಿ ಮೂರು ಅಂಶಗಳನ್ನು (ಭಾಗಗಳನ್ನು) ಮಹಾವಾಜನವೆಂದೂ, ಒಂದು ಭಾಗವನ್ನು ಅಲ್ಪವಾಜನವೆಂದೂ, ಉಳಿದ ನಾಲ್ಕು ಅಂಶ ಭಾಗವನ್ನು ಪಟ್ಟಿಯಾಗಿಯೂ ಸ್ವೀಕರಿಸಿ ರೂಪಿಸಬೇಕು. ಅಲ್ಲದೆ ಅದರ ಎತ್ತರವು ಹೊರಗೆ ಹೋಗುವ ಅಂಶವೆಂದೂ ಗ್ರಹಿಸಬೇಕು.

ಶ್ಲೋಕ : ಬಾಣಾಂಶಿನ್ಯಖಿಲೋತ್ತರಸ್ಯ ತು ಘನೇ ದ್ವಾಭ್ಯಾಂ ಮಹದ್ ವಾಜನಮ್
ಚೈಕೇನಾಲ್ಪಮಥಾತನೋತು ಮಹಿತಂ ಪಟ್ಟಂಚ ಶಿಷ್ಟಾಂಶತಃ
ಅಬ್ಧ್ಯಾದೀಶ್ವರಪಶ್ಚಿಮಾಂಶಿನಿ ಘನೇ ಸರ್ವೋತ್ತರಸ್ಯೈಕತೋ
ಯುಕ್ತ್ಯಾ ವಾಜನಯೋಶ್ಚ ನಿಷ್ಕ್ರಮಮಥಾನ್ಯತ್ರಾಪಿ ಚೈವಂ ವಿಧಿಃ ||೩೫||

ತಾತ್ಪರ್ಯ :

ಎಲ್ಲ ಉತ್ತರಗಳ ದಪ್ಪವನ್ನು 5ರಿಂದ ಭಾಗಿಸಿ ಎರಡು ಭಾಗ ತೆಗೆದುಕೊಂಡರೆ ಅದು ಮಹಾವಾಜನವಾಗುತ್ತದೆ. ಒಂದು ಭಾಗದಿಂದ ಅಲ್ಪವಾಜನವೂ ಉಳಿದ ಎರಡು ಅಂಶಗಳ ಭಾಗದಿಂದ ಪಟ್ಟಿಯೂ ಆಗುತ್ತದೆ. ಎಲ್ಲ ಉತ್ತರಗಳ ದಪ್ಪವನ್ನು 4ರಿಂದ 11ರ ವರೆಗಿನ ಸಂಖ್ಯೆಗಳಿಂದ ಭಾಗಿಸಿದಾಗ ಒಂದು ಅಂಶಭಾಗದಿಂದ ಎರಡು ವಾಜನಗಳ ನಿಷ್ಕ್ರಮವೂ (ಹೊರಗೆ ಚಾಚುವ ಭಾಗ) ದೊರೆಯುತ್ತದೆ. ಬೇರೆ ಕಡೆ ಕೂಡ ವಾಜನ ರಚನೆಗೆ ಇದೇ ನಿಯಮವಿರುತ್ತದೆ.

ಶ್ಲೋಕ : ಸ್ತಂಭಮೂರ್ಧನಿ ನಿಧಾಯ ಪೋತಿಕಾಮುತ್ತರಂ ತದುಪರಿ ಪ್ರಕಲ್ಪಯೇತ್
ಪೋತಿಕಾವಿವರತಃ ಸಮುದ್ಗತಸ್ತಂಭಮಸ್ತಕಶಿಖಾಹಿತಾವಟಮ್ ||೩೬||

ತಾತ್ಪರ್ಯ :

ಕಂಬದ ತುದಿಯಲ್ಲಿ ಬೋದಿಗೆಯನ್ನು ಕೂರಿಸಿ ಆ ಬೋದಿಗೆಯ ವಿವರದ ಮೂಲಕ (ತೂತಿನ ಮೂಲಕ) ಹೊರ ಬಂದ ಕಂಬದ ಮೊಳೆಗಾಗಿ (ಕುಟ್ಟಿ) ರಚಿಸಿದ ಗರ್ತವಿರುವ ಉತ್ತರವನ್ನು ಭದ್ರವಾಗಿ ಕುಳಿತುಕೊಳ್ಳಿಸಬೇಕು.

ವಿ.ವಿ. :

ಕಂಬದ ತುದಿಯಲ್ಲಿ ಕೆತ್ತಿ ಮೂಡಿಸಿದ ಕುಟ್ಟಿಯು ಬೋದಿಗೆಯ ಮಧ್ಯದ ತೂತಿನಿಂದ ಹಾದು ಹೋದಾಗ ಕಂಬದ ಮೇಲೆ ಇರುವ ಬೋದಿಗೆಯು ಅಲುಗಾಡದೆ ಬಿಗಿಯಾಗಿ ಕುಳಿತುಕೊಳ್ಳುತ್ತದೆ. ಅನಂತರ ಬೋದಿಗೆಯ ಮೂಲಕ ಹಾದು ಹೋದ ಕುಟ್ಟಿಯಲ್ಲಿ ಉತ್ತರವು ಭದ್ರವಾಗಿ ನೆಲೆಗೊಂಡಾಗ ಕಂಬದ ಕೆಳಭಾಗದಿಂದ ಉತ್ತರದವರೆಗೆ ಭದ್ರವಾದಂತಾಗುತ್ತದೆ.

೧೯. ಕ್ಷುದ್ರೋತ್ತರ


ಶ್ಲೋಕ : ಅಥೋತ್ತರೋಚ್ಚೋಚ್ಚತದರ್ಧತಾರಾಂ ಕ್ಷುದ್ರೋತ್ತರಾಖ್ಯೋತ್ತರಪಟ್ಟಿಕಾಂ ಚ
ಸಂಕೀಲಯೇದುತ್ತರ ಬಾಹ್ಯಪಾರ್ಶ್ವಾದೂರ್ಧ್ವಂ ವೃಢ್ಯೆ: ಸ್ವೋಚಿತದಾರುಕೀಲೈ: ॥೩೭॥

ತಾತ್ಪರ್ಯ :

ಅನಂತರ, ಉತ್ತರದಷ್ಟೇ ದಪ್ಪವಿರುವ ಮತ್ತು ಉತ್ತರದ ಅರ್ಧದಷ್ಟು ಅಗಲವಿರುವ ಕ್ಷುದ್ರೋತ್ತರವನ್ನು (ಉತ್ತರಪಟ್ಟಿಕೆ) ಉತ್ತರದ ಮೇಲೆ ಲಂಬವಾಗಿ ಇಡಬೇಕು. (ಅಗಲದ ಭಾಗ ಲಂಬವಾಗಿರಬೇಕು.) ಅದರ ಹೊರಗಿನ ಭಾಗವು ಉತ್ತರದಲ್ಲಿ ನುಗ್ಗಿದಂತಿದ್ದು ಮರದ ತಕ್ಕುದಾದ ಕೀಲುಗಳನ್ನು ಬಡಿದು ಎರಡೂ ಉತ್ತರಗಳನ್ನು (ಉತ್ತರ ಮತ್ತು ಉತ್ತರಪಟ್ಟಿಕೆ) ಭದ್ರಗೊಳಿಸಬೇಕು.

ವಿ.ವಿ. :

ಕ್ಷುದ್ರೋತ್ತರವೆಂದರೆ ಉತ್ತರಪಟ್ಟಿಕೆ, ಇದು ಉತ್ತರದಷ್ಟೇ ದಪ್ಪವಿರುತ್ತದೆ. ಮತ್ತು ಇದರ ಅಗಲವು ಉತ್ತರದ ಅಗಲದ ಅರ್ಧದಷ್ಟು ಇರುತ್ತದೆ. ಇದರ ಅಗಲದ ಭಾಗವು ನೆಟ್ಟಗೆ ನಿಲ್ಲುವುದರಿಂದ ಭಾರವನ್ನು ಹೊರಲು ಇದು ಬಹಳ ಸಮರ್ಥವಾಗುತ್ತದೆ. ಪ್ರಧಾನ ಉತ್ತರ ಮತ್ತು ಕ್ಷುದ್ರೋತ್ತರ ಎರಡನ್ನೂ ಸೇರಿಸಿದಾಗ ಉತ್ತರದ ಭಾಗ ಅತ್ಯಂತ ಭದ್ರವಾಗಿ ಎಂತಹ ಭಾರವನ್ನು ಕೂಡ ಹೊರುವ ಸಾಮರ್ಥ್ಯವನ್ನು ಪಡೆಯುತ್ತದೆ.



ಕ್ಷುದ್ರೋತ್ತರವನ್ನು ಕೀಲು ಸಹಿತ ಜೋಡಿಸಿದ ಕ್ರಮ

ಚಿ. ೮೪, ಅ. ೫, ಶ್ಲೋ. ೩೭

೨೦. ಕೀಲು ಮತ್ತು ಪಕಾಸುಗಳ ಸಂಖ್ಯೆ

ಶ್ಲೋಕ : ಕೀಲಾಸ್ತ್ವೇಕೂಟಸೂತ್ರೇಷ್ವಖಿಲನಿಲಯಮಧ್ಯೇಽಪಿ ಚ ದ್ವಾರಮಧ್ಯೇ
ಕರ್ತವ್ಯಾಸ್ತೇ ಸಮಸ್ತಾಯವಮಿತಗತಿಭಿಃ ಸೂತ್ರತೋಽತೀತಮಧ್ಯಾಃ
ಯುಕ್ತ್ಯಾ ಪಂಕ್ತಿಂ ಲುಪಾನಾಂ ಸಮಮಪಿ ಪರಿಕಲ್ಪ್ಯಾಥ ಮಧ್ಯೇ ಚ ತಾಸಾಮ್
ಕಾರ್ಯಾಃ ಕೀಲಾಸ್ತ್ವಯುಗ್ಮಾಃ ಖಲು ಸಕಲಲುಪಾಯುಗ್ಮಸಂಖ್ಯಾ ವಿಧೇಯಾಃ ॥೩೮॥

ತಾತ್ಪರ್ಯ :

ಉತ್ತರಗಳಿಗೆ ಕೀಲುಗಳನ್ನು ಮನೆಯ ಮಧ್ಯಸೂತ್ರದ ಕೂಟದಲ್ಲಿಯೂ ಮನೆಗಳ ಮಧ್ಯದಲ್ಲಿಯೂ, ಬಾಗಿಲುಗಳ ಮಧ್ಯದಲ್ಲಿಯೂ ಸಿಕ್ಕಿಸಬೇಕು. ಆದರೆ ಎಲ್ಲ ಕೀಲುಗಳನ್ನು ಮನೆಯ ಮಧ್ಯಸೂತ್ರದಿಂದ ಒಂದು ಯವದಷ್ಟು ಬಲಕ್ಕೆ ಸರಿಸಿ ಸಿಕ್ಕಿಸಬೇಕು. ಸ್ಥಳಾವಕಾಶವನ್ನು ನೋಡಿಕೊಂಡು ಪಕಾಸುಗಳನ್ನು ಸರಿಹೊಂದಿಸಿಕೊಳ್ಳಬೇಕು. ಆದರೆ ಉತ್ತರದ ಕೀಲುಗಳನ್ನು ಪಕಾಸುಗಳೆರಡರ ಮಧ್ಯದಲ್ಲಿಯೇ ಸಿಕ್ಕಿಸಬೇಕು. ಅಲ್ಲದೆ, ಕೀಲುಗಳು ಮುಗುಳಿ ಸಂಖ್ಯೆಯಲ್ಲಿಯೂ (ವಿಷಮ ಸಂಖ್ಯೆ), ಪಕಾ ಸುಗಳು ಸಮಸಂಖ್ಯೆಯಲ್ಲಿಯೂ ಇರಬೇಕು.

ಶ್ಲೋಕ : ಏಕಾಂಘ್ರ್ಯೂನಾದಿ ದಂಡೋಚ್ಛ್ರಯಮುಪರಿ ನಿಧಾಯೋತ್ತರೇ ವಾಜನಂ ಪ್ರಾಕ್
ತಿರ್ಯಗ್ದಂಡೋಚ್ಛ್ರಯಾಂಘ್ರ್ಯೂನಿತ ಬಹಲತುಲಾಸ್ವಾಸು ವಂಶಾನುವೃತ್ಯಾ
ಸ್ವಾರ್ಧಾಕ್ರಾಂತಾ ಜಯಂತೀ ತದುಪರಿ ಸುಸಮೀಕೃತ್ಯ ಕೃತ್ವಾನುಮಾರ್ಗಂ
ನಿಶ್ಛಿದ್ರಂ ಛಾದಯೇತ್ ಸ್ವೋಚಿತಘನಫಲಕಾ ಪ್ರಸ್ತರೇಣೋರ್ಧ್ವಭಾಗಮ್ ॥೩೯॥

ತಾತ್ಪರ್ಯ :

ಮುಕ್ಕಾಲು ($\frac{3}{4}$) ದಂಡ ಪ್ರಮಾಣದ ದಪ್ಪವಿರುವ ವಾಜನೋತ್ತರವನ್ನು ಉತ್ತರದ ಮೇಲೆ ಅದರ ಅರ್ಧದಷ್ಟಾಗಿ ಇಡಬೇಕು. ಅನಂತರ ಒಂದು ದಂಡ ಎತ್ತರವೂ, ಮುಕ್ಕಾಲು ದಂಡ ದಪ್ಪವೂ ಇರುವ ತೊಲೆಗಳನ್ನು (ಅಡ್ಡ)ವಂಶವನ್ನು (ಬೆರಿತೋಳು) ಇಟ್ಟ ದಿಕ್ಕುಗಳಿಗೆ ಅನುಗುಣವಾಗಿ ಇಟ್ಟು, ಅದರ ಅರ್ಧದ ವರೆಗೆ ಅದರ ಮೇಲಿನ ಭಾಗವನ್ನು ಪಟ್ಟಿಗಳಿಂದ ಸಮಗೊಳಿಸಬೇಕು. ಅಲ್ಲದೆ ಅದಕ್ಕೆ ಸರಿಹೊಂದುವ ದಪ್ಪವಿರುವ ಹಲಗೆಗಳಿಂದ ಮೇಲಿನ ಭಾಗದಲ್ಲಿ ತೂತುಗಳಿರದಂತೆ ಮುಚ್ಚಬೇಕು.

ವಿ.ವಿ. :

ಇಲ್ಲಿ ದಂಡವೆಂದರೆ ಕಂಭದ ಮೇಲ್ಭಾಗದ ಅಳತೆಯಾಗಿದೆ.

ಶ್ಲೋಕ : ಯದ್ವಾ ಕಪೋತವಲಭೀವಿಲಸತ್ತುಲಾಪಾ -
ದೋದ್ಯತ್ಪ್ರಧಾನ ಫಲಕಾದಿತುಲಾವಿಶೇಷೈ:
ಯುಕ್ತಂ ಚ ಖಂಡಫಲಕಾದಿ ವಿಚಿತ್ರಚಿತ್ರ
ಮೂರ್ತಿಪ್ರಭೇದಸಹಿತಂ ಮಹಿತಂ ವಿದಧ್ಯಾತ್ ॥೪೦॥

ಇತಿ ಮನುಷ್ಯಾಲಯಚಂದ್ರಿಕಾಯಾಂ ಪಂಚಮೋಧ್ಯಾಯಃ

ತಾತ್ಪರ್ಯ :

ಅಥವಾ ಅದನ್ನು ಮಾಡಿನ ನೀರನ್ನು ಹೊರ ಹಾಕುವ ಕಪೋತಾಕಾರದ ಸೂರು (ಕಪೋತವಲಭಿ), ತುಲಾಪಾದ (ಅಡ್ಡ ಕುಳಿತುಕೊಳ್ಳುವ ಸ್ಥಳ), ಖಂಡ ಫಲಕ (ತುಂಡು ಹಲಿಗೆ), ಮೊದಲಾದವುಗಳಿಂದ ಅಂದವಾಗಿ ಕಾಣುವಂತೆ ಮಾಡಬೇಕು. ಅಲ್ಲದೆ ಆ ಹಲಗೆಗಳು ಚಿತ್ರವಿಚಿತ್ರವಾದ ಕೆತ್ತನೆಗಳಿಂದಲೂ, ನಾನಾ ರೀತಿಯ ಮೂರ್ತಿಗಳ ರಚನೆಯಿಂದಲೂ ಶೋಭಿಸುವಂತೆ ಮಾಡಬೇಕು.

ಈ ರೀತಿ ಮನುಷ್ಯಾಲಯಚಂದ್ರಿಕೆಯಲ್ಲಿ ಐದನೆಯ ಅಧ್ಯಾಯವು ಮುಗಿದುದು.

ಅಥ ಷಷ್ಠೋಽಧ್ಯಾಯಃ
ಆರನೆಯ ಅಧ್ಯಾಯ


ಶಿಖರದ ನಿಯಮ

೧. ವಿಷ್ಕಂಭ - ವಿಷ್ಕಂಭಪಾದ

ಶ್ಲೋಕ : ಅಲ್ಪೇ ಧಾಮನಿ ಬಾಹ್ಯಮೇವ ಮಹತಿ ತ್ವಾರೂಢಮಪ್ಯುತ್ತರಮ್
ವಿಷ್ಕಂಭೇ ತನುಯಾತ್ ಸ್ವಗೇಹವಿಹಿತ್ಯೈಯೋರ್ನಾದಿಭಿಃ ಸಂಯುತಮ್
ವಸ್ವಷ್ಟ್ಯರ್ಕ ಯುಗಾಂಗುಲಾದಿಗತಿರಂತಃ ಸ್ಯಾದಲಿಂದಂ ತು ತತ್
ತಾವತ್ ಸ್ಯೋಚ್ಛ್ರಯಮಸ್ಯಕರ್ಣಸದೃಶೀ ವಿಷ್ಕಂಭಪಾದಾಯತಿಃ ॥೧॥

ತಾತ್ಪರ್ಯ :

ಸಣ್ಣ ಮನೆಗಳಲ್ಲಿ ಹೊರಗಿನ ಉತ್ತರಗಳೇ (ಬಾಹ್ಯೋತ್ತರ) ಸಾಕು. (ಆರೂಢೋತ್ತರ ಬೇಕಾಗಿಲ್ಲ). ಆದರೆ ದೊಡ್ಡಮನೆಗಳಿಗೆ ಆರೂಢೋತ್ತರ ಬೇಕಾಗಿದೆ. ಈ ಆರೂಢೋತ್ತರವು ವಿಷ್ಕಂಭದ ಮೇಲೆ ಕುಳಿತುಕೊಳ್ಳುವಂಥಾದ್ದಾಗಿದೆ. ಇದು ಆ ಮನೆಯ ಯೋನ್ಯಾದಿಗಳನ್ನು ಒಳಗೊಂಡಿರಬೇಕು. ಅಲ್ಲದೆ ಬಾಹ್ಯೋತ್ತರದಿಂದ 8, 16 ಅಥವಾ 24 ಇತ್ಯಾದಿ ಅಂಗುಲ ಒಳಭಾವದಿಂದ (ಗತಿಯಿಂದ) ಕೂಡಿರಬೇಕು. ಬಾಹ್ಯೋತ್ತರದಿಂದ ಆರೂಢೋತ್ತರದ ಗತಿ ಎಷ್ಟಿದೆಯೋ ಅಷ್ಟೇ ಎತ್ತರದಲ್ಲಿ ಅದನ್ನು ಇರಗೊಳಿಸಬೇಕು. ಈ ಆರೂಢೋತ್ತರವನ್ನು ಆಧರಿಸುವ ವಿಷ್ಕಂಭಪಾದದ ಉದ್ದವು ಅದರ ಕರ್ಣರೇಖೆಯ ಉದ್ದಕ್ಕೆ ಸಮವಾಗಿರಬೇಕು.



ಉತ್ತರ - ಆರೂಢೋತ್ತರ ಸ್ಥಾನಗಳು
ಚಿ. ೮೫, ಅ. ೬, ಶ್ಲೋ. ೧

ಶ್ಲೋಕ : ವಿಷ್ಕಂಭಪಾದಂತು ತದಂಗಭೇದ್ಯೈ
ರ್ಯುಕ್ತಂ ತಥಾ ಕಲ್ಪಲತಾದಿಚಿತ್ರೈಃ
ಮಹಾತರಂಗಾಂತರುದೀರ್ಣಚೂಚುಕ
ಪ್ರಸೂನಸಂಶೋಭಿತಮಾತನೋತು ॥೨॥

ತಾತ್ಪರ್ಯ :

ವಿಷ್ಕಂಭಪಾದವು ಅದರ ಅವಯವಭೇದಗಳಿಂದ ಕೂಡಿರಬೇಕು. ಕಲ್ಪಲತಾದಿ ಚಿತ್ರಗಳಿಂದ ಕೂಡಿರಬೇಕು. ದೊಡ್ಡ ದೊಡ್ಡ ಅಲೆಗಳ ಮಧ್ಯದಿಂದ ಮೊಗ್ಗುಗಳು ಮತ್ತು ಹೂಗಳು ಇಣುಕಿ ನೋಡುವಂತೆ ಕೆತ್ತನೆ ಅಂದವಾಗಿರಬೇಕು.

ವಿ.ವಿ. :

ಈ ಶ್ಲೋಕದಲ್ಲಿ ವಿಷ್ಕಂಭ ಪಾದವನ್ನು ಚಿತ್ರ ವಿಚಿತ್ರವಾದ ಕೆತ್ತನೆಗಳಿಂದ ಅಂದಗೊಳಿಸುವ ಕ್ರಮವನ್ನು ಹೇಳಿದ್ದಾರೆ.

೨. ಲುಪಾಲಂಬ (ಸೂರಿನ ಇಳಿತ)

ಶ್ಲೋಕ : ಕುರ್ಯಾದುತ್ತರಪಟ್ಟಿತೋಽಖಿಲಲುಪಾಲಂಬಂ ತದೌಚಿತ್ಯತಃ
ಸ್ತಂಭೋಚ್ಚೇ ಶರಭಾಜಿತೇ ದ್ವಿತಯತೋ ಯದ್ವಾಂಕಭಕ್ತೇಽಬ್ಧಿಭಿಃ
ಅದ್ರ್ಯಂಶಿನ್ಯುರಗಾಂಶಿತೇ ಚ ಹುತಭುಗ್ಭಾಗೈಸ್ತಥಾಂಘ್ರ್ಯುಚ್ಛ್ರಯ
ತ್ರ್ಯಂಶಾರ್ಧಾಂಶತ ಏವ ವಾಭಿಲಷಿತಂ ಷೋಢೋದಿತೇಷ್ವೇಷು ಹಿ ॥೩॥

ತಾತ್ಪರ್ಯ :

ಈ ಶ್ಲೋಕದಲ್ಲಿ ಉತ್ತರದ ಕೆಳಗೆ ಇಳಿಯುವ ಸೂರಿನ (ಲುಪಾಲಂಬ) ಭಾಗವನ್ನು ವಿವರಿಸಲಾಗಿದೆ. ಸೂರಿನ ಪಕಾಸಿನ ಇಳಿತವನ್ನು ಉತ್ತರದ ಪಟ್ಟಿಯಿಂದ ಗಣನೆಗೆ ತೆಗೆದುಕೊಳ್ಳಬೇಕು. ಅದನ್ನು ಆರು ವಿಧಗಳಲ್ಲಿ ರಚಿಸಬಹುದು. ಆ ಆರು ವಿಧಗಳಲ್ಲಿ ಬೇಕಾದುದನ್ನು ಸ್ವೀಕರಿಸಬಹುದು. ಆ ಆರು ವಿಧ : (೧) ಕಂಬದ ಎತ್ತರವನ್ನು 5 ಪಾಲು ಮಾಡಿ ಅವುಗಳಲ್ಲಿ ಎರಡು ಪಾಲುಗಳನ್ನು ತೆಗೆದುಕೊಳ್ಳಬೇಕು (೨) ಆ ಎತ್ತರವನ್ನು 9 ಭಾಗ ಮಾಡಿ ನಾಲ್ಕು ಭಾಗವನ್ನು ಸ್ವೀಕರಿಸಬೇಕು. (೩) 7 ಇಲ್ಲವೇ (೪) 8 ಭಾಗ ಮಾಡಿ ಮೂರು ಭಾಗವನ್ನು ತೆಗೆದುಕೊಳ್ಳಬೇಕು. (೫) ಮೂರು ಪಾಲು ಮಾಡಿ ಒಂದು ಪಾಲನ್ನು ಸ್ವೀಕರಿಸಬೇಕು (೬) ಎರಡು ಪಾಲು ಮಾಡಿ ಒಂದು ಪಾಲನ್ನು ತೆಗೆದುಕೊಳ್ಳಬೇಕು.

ವಿ.ವಿ. :

ಮೇಲೆ ಹೇಳಿದ ಸೂರಿನ ಇಳಿತದ ನಿಯಮಗಳನ್ನು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ಕೊಡಬಹುದು.

	ವಿಧ	ಸೂರು ಪಕಾಸಿನ ಇಳಿತ
(1)	ಕಂಬದ ಎತ್ತರ x $\frac{2}{5}$ = 3 ಕೋ. 4 ಅಂ. x $\frac{2}{5}$ =	1 ಕೋ. 6 ಅಂ. 3.2 ಯವ
(2)	ಕಂಬದ ಎತ್ತರ x $\frac{4}{9}$ = 3 ಕೋ. 4 ಅಂ. x $\frac{4}{9}$ =	1 ಕೋ. 9 ಅಂ. 6.2 ಯವ
(3)	ಕಂಬದ ಎತ್ತರ x $\frac{3}{7}$ = 3 ಕೋ. 4 ಅಂ. x $\frac{3}{7}$ =	1 ಕೋ. 8 ಅಂ. 4.6 ಯವ
(4)	ಕಂಬದ ಎತ್ತರ x $\frac{3}{8}$ = 3 ಕೋ. 4 ಅಂ. x $\frac{3}{8}$ =	1 ಕೋ. 4 ಅಂ. 4 ಯವ
(5)	ಕಂಬದ ಎತ್ತರ x $\frac{1}{3}$ = 3 ಕೋ. 4 ಅಂ. x $\frac{1}{3}$ =	1 ಕೋ. 1 ಅಂ. 2.6 ಯವ
(6)	ಕಂಬದ ಎತ್ತರ x $\frac{1}{2}$ = 3 ಕೋ. 4 ಅಂ. x $\frac{1}{2}$ =	1 ಕೋ. 14 ಅಂ.

ಇಲ್ಲಿ ಮನೆಯ ಮಾಡಿನ ಸೂರಿನ ಲಂಬದ (ಇಳಿತದ) ಲೆಕ್ಕಾಚಾರವನ್ನು ಕೊಡಲಾಗಿದೆ. ಮಾಡಿನ ಸೂರಿನ ಭಾಗ ಎಂದರೆ ಪ್ರಧಾನ ಉತ್ತರದಿಂದ ಕೆಳಗೆ ಇಳಿಬಿಟ್ಟ ಮಾಡಿನ ಭಾಗವಾಗಿದೆ. ಆ ಭಾಗ ಮುಖ್ಯವಾಗಿ ಮನೆಯ ಗೋಡೆಗೆ ಬೀಳುವ ಮಧ್ಯಾಹ್ನದ ಬಿಸಿಲಿನ ಪೆಟ್ಟನ್ನು ತಡೆಯುತ್ತದೆ. ಅಲ್ಲದೆ, ಮಳೆ ಬೀಳುವ ಪ್ರದೇಶಗಳಲ್ಲಿ ಮಳೆ ನೀರಿನ ಪೆಟ್ಟಿನಿಂದ ರಕ್ಷಿಸುತ್ತದೆ. ಈ ಉದ್ದೇಶಗಳನ್ನು ನೆರವೇರಿಸಲು ಕಂಬದ ಅಥವಾ ಗೋಡೆಯ ಎತ್ತರವನ್ನು ಸೂರಿನ ಇಳಿತದ ಲೆಕ್ಕಾಚಾರಕ್ಕೆ ಮೂಲವಾಗಿ ತೆಗೆದುಕೊಳ್ಳಲಾಗಿದೆ. ಮೇಲೆ ಶಾಸ್ತ್ರದಲ್ಲಿ ಹೇಳಿದ ಆರು ವಿಧದ ಇಳಿತಗಳಲ್ಲಿ $\frac{1}{3}$ ಭಾಗವು ಬಹಳ ಚಿಕ್ಕದು. $\frac{1}{2}$ ಭಾಗವು ಅತಿ ದೊಡ್ಡದು. ಮಲೆನಾಡಿನ ಪ್ರದೇಶಗಳಲ್ಲಿ ಸೂರಿನ ಭಾಗ ಸ್ವಲ್ಪ ಹೆಚ್ಚು ಇಳಿತದಲ್ಲಿದ್ದರೆ ಒಳ್ಳೆಯದು. ಅನುಕೂಲಕ್ಕೆ ತಕ್ಕಂತೆ ಆರು ವಿಧಗಳಲ್ಲಿ ಯಾವುದನ್ನೂ ಸ್ವೀಕರಿಸಬಹುದು.

ಶ್ಲೋಕ : ಲಂಬೋಽಯಂ ವಿಹಿತಾದಧಸ್ಥ ಚರಣೋಚ್ಚೇಽಂಗಾದಿರುದ್ರಾಂತಿಮೈ -
ರ್ಭಕ್ತೇ ತೇಷ್ವಿಲಯಾ ಯುತೋ ವಿರಹಿತೋ ವಾಂಘ್ರುರ್ಯ್ಯುಚ್ಚವಿಧ್ಯಧ್ವನಾ
ಯದ್ವಾ ಚಂದ್ರದಿಗಗ್ನಿವಾರಿಧಿಶರೋರ್ಮ್ಯದ್ರ್ಯಂಗುಲೈರೂನಿತೋ
ಲಂಬೋಽಸೌ ಕ್ವಚಿದನ್ವಿತೋಽಪ್ಯುಭಯ ತಸ್ತುಲ್ಯೋಽಪ್ಯತುಲ್ಯೋಽಥವಾ ॥೪॥

ತಾತ್ಪರ್ಯ :

ಕಂಬದ ಎತ್ತರವನ್ನು 6ರಿಂದ 11ರ ವರೆಗಿನ ಯಾವುದಾದರೂ ಒಂದು ಸಂಖ್ಯೆಯಿಂದ ಭಾಗಿಸಿ, ಅವುಗಳಲ್ಲಿ ಒಂದು ಅಂಶದಷ್ಟು ಆ ಸೂರಿನ ಭಾಗವನ್ನು ಹೆಚ್ಚು ಮಾಡಲೂಬಹುದು. ಅಥವಾ ಕಡಿಮೆ ಮಾಡಲೂ ಬಹುದು. ಅಥವಾ ಕಂಬದ ಎತ್ತರದಿಂದ ನಿಯಮಾನುಸಾರ 1, 2, 3, 4, 5, 6 ಅಥವಾ 7 ಅಂಗುಲದಷ್ಟು ಹೆಚ್ಚಿಸಲೂ ಬಹುದು. ಇಲ್ಲವೇ ಕಡಿಮೆಮಾಡಲೂ ಬಹುದು. ಸೂರಿನ (ಸೂರು ಪಕಾಸಿನ) ಇಳಿತವು ಮನೆಯ ಮುಂದೆ ಮತ್ತು ಹಿಂದೆ ಸರಿಸಮವಾಗಿಯೂ ಇರಬಹುದು. ಅಥವಾ ಸರಿಸಮವಿಲ್ಲದೆಯೂ ಇರಬಹುದು.

ಶ್ಲೋಕ : ವಿಸ್ತಾರೇಣ ಘನೇನ ವಾಽಪಿ ಚ ಲುಪಾಲಂಬೋ ಭವೇದುತ್ತರ -
ಸ್ತ್ವೈಕೇನಾಧಿದಲದ್ವಯತ್ರಯಚತುರ್ಬಾಣೋರ್ಮಿಶೈಲೋನ್ಮಿತೈಃ

ಯೋಗೇ ಸತ್ಯಪರಾಲಯೈರಪಿ ಲುಪಾಶ್ಶೇದ್ಯಾಶ್ಚ ನೀಪ್ರಾದಯೋ
ಗೇಹಾಂಗೇಷ್ವಖಿಲೇಷು ಚೋತ್ತಮಮತೋ ನಚ್ಛೇದಯೇದುತ್ತರಮ್ ||೫||

ತಾತ್ಪರ್ಯ :

ಉತ್ತರವನ್ನು ಅದರ ದಪ್ಪ ಅಥವಾ ಅಗಲದ 1, $1\frac{1}{2}$, 2, 3, 4, 5, 6 ಅಥವಾ 7 ಪಾಲು ಹೆಚ್ಚಿಸಿ ಲುಪಾಲಂಬವನ್ನು (ಸೂರಿನ ಪಕಾಸಿನ ಇಳಿತ) ಹೊಂದಿಸಿಕೊಳ್ಳಬಹುದು. ಬೇರೆ ಮನೆಗಳೊಡನೆ ಸೇರಿಸುವಾಗ ಪಕಾಸುಗಳು, ಲೋವೆಗಳು ಮೊದಲಾದವುಗಳನ್ನು ಕೆತ್ತಿ, ಕತ್ತರಿಸಿ ಸರಿಗೊಳಿಸಬಹುದು. ಆದರೆ ಉತ್ತರವು ಮನೆಯ ಎಲ್ಲ ಅಂಗಗಳಲ್ಲಿ ಉತ್ತಮಾಂಗವಾದುದರಿಂದ ಅದನ್ನು ತುಂಡುಮಾಡಬಾರದು.

ವಿ.ವಿ. :

ಹಿಂದಿನ ಶ್ಲೋಕಗಳಲ್ಲಿ ಕಂಬದ ಎತ್ತರವನ್ನು ಆಧರಿಸಿ ಸೂರಿನ ಮಿೂರಿಸುವಿಕೆಯನ್ನು ತಿಳಿಸಲಾಗಿದ್ದರೆ, ಇಲ್ಲಿ ಉತ್ತರವನ್ನು ಆಧರಿಸಿ ಅದರ ಮಿೂರಿಸುವಿಕೆಯನ್ನು ಸೂಚಿಸಲಾಗಿದೆ. ಇಲ್ಲಿನ ನಿರ್ದೇಶನದಂತೆ ಮಳೆ ಕಡಿಮೆ ಬೀಳುವಂತಹ ಬೆಂಗಳೂರು, ಉತ್ತರ ಕರ್ನಾಟಕದ ಕೆಲವು ಊರುಗಳಲ್ಲಿ ಸೂರಿನ ಇಳಿತವನ್ನು ಶಾಸ್ತ್ರಸಮ್ಮತವಾಗಿ ಕಡಿಮೆಗೊಳಿಸಬಹುದಾಗಿದೆ.

ಉದಾ : ಉತ್ತರದ ಅಗಲ 8 ಅಂ.

ಸೂರಿನ ಇಳಿತ (ಲಂಬ) : 8 x 2 = 16 ಅಂ. (ಇಲ್ಲಿ ಉತ್ತರದ ಅಗಲದ ಎರಡು ಪಾಲುಗಳನ್ನು ತೆಗೆದುಕೊಳ್ಳಲಾಗಿದೆ)

೩. ಪಕಾಸುಗಳ ವಿಧ

ಶ್ಲೋಕ : ಋಜುಮಂಚಾಖ್ಯಾಸ್ತುಲ್ಯಾಃ ಪ್ರಕೃತಿಲುಪಾಃ ಪಾರ್ಶ್ವಸಂಸ್ಥಿತಾಃ ಸರ್ವಾಃ
ಕೋಟ್ಯುಪಕೋಟ್ಯಾದ್ಯಾಃ ಸ್ಯುರ್ವಿಕೃತಿಲುಪಾಸ್ತ್ವಸ್ತುತುಲ್ಯದೀರ್ಘತತಾಃ ||೬||

ತಾತ್ಪರ್ಯ :

ಸಮಾನವಾದ ಮತ್ತು ನೇರವಾದ ಪಕಾಸುಗಳಿಗೆ 'ಋಜುಮಂಚ'ವೆಂದು ಹೆಸರು. ಅವುಗಳನ್ನು ಮನೆಯ ಎರಡು ಬದಿಗಳಲ್ಲಿಯೂ ಜೋಡಿಸಲಾಗುತ್ತದೆ. ಅಸಮಾನ ದೀರ್ಘವಿರುವ (ಉದ್ದದಲ್ಲಿ ಹೆಚ್ಚು ಕಮ್ಮಿಯಿರುವ) ಕೋರೆ ಪಕಾಸುಗಳು ಕೋಟಿ, ಉಪಕೋಟಿ ಎನಿಸುತ್ತವೆ.

ವಿ.ವಿ. :

ಪಕಾಸುಗಳಲ್ಲಿ ಮೂರು ವಿಧ

೧. ಋಜುಮಂಚ : ಮಾಮೂಲು ಪಕಾಸು (ಒಂದೇ ರೀತಿಯ ಉದ್ದವುಳ್ಳದ್ದು)

೨. ಕೋಟಿ : ಮೂಲೆ ಪಕಾಸು


೩. ಉಪಕೋಟಿ : ತುಂಡುಪಕಾಸು

೪. ಪಕಾಸುಗಳನ್ನು ಜೋಡಿಸುವ ಕ್ರಮ


ಶ್ಲೋಕ : ಕಾರ್ಯಾ ಲುಪಾಶ್ಚೋತ್ತರ ಪಟ್ಟಿಕೋರ್ಧ್ವಂ
ಕೂಟಾಹಿತಾಗ್ರಾ ವಿಕೃತಾಃ ಸಮಸ್ತಾಃ
ಪಾರ್ಶ್ವಾ ಹಿತಾಸ್ತಾಃ ಖಲು ನಿರ್ವಿಕಾರಾ
ನಿವೇಶಿತಾಗ್ರಾಃ ಪುನರಗ್ರಧಾನ್ಯಾಮ್ ॥೭॥

ತಾತ್ಪರ್ಯ :

ಮಾಮೂಲು ಪಕಾಸುಗಳನ್ನೆಲ್ಲ (ಋಜುಮಂಚ) ಮಾಡಿನ ಎರಡೂ ಬದಿಗಳಲ್ಲಿ ಉತ್ತರಪಟ್ಟಿಕೆಯ ಅಂದರೆ ಕ್ಷುದ್ರೋತ್ತರದ ಮೇಲೆ ನಿಲ್ಲುವಂತೆ ಜೋಡಿಸಿ ಅವುಗಳ ತುದಿಗಳೆಲ್ಲ ವಂಶದಲ್ಲಿ ಸ್ಥಿರಗೊಳ್ಳುವಂತೆ ಮಾಡಬೇಕು. ಎಲ್ಲ ಮೂಲೆ ಪಕಾಸುಗಳ ತುದಿಗಳು ಕೂಟದಲ್ಲಿಯೇ ನಿಲ್ಲುವಂತೆ ಇರಬೇಕು.



(ಅ)



(ಆ)

ಪಕಾಸುಗಳ ಜೋಡಣೆಯ ಕ್ರಮ
ಚಿ. ೮೬, ಅ. ೬, ಶ್ಲೋ. ೭

೫. ವಂಶರಚನೆ (ಬೆನ್ನುಹುರಿತೋಳು)

ಶ್ಲೋಕ : ಪಾರ್ಶ್ವಪ್ರಾಪ್ತಲುಪಾಗ್ರಯೋಗವಶತೋ ವಂಶಾಖ್ಯಯಾ ಸಾಗ್ರಯಾ
ಯುಕ್ತಾ ಚೋತ್ತರತಾರಪಾದರಹಿತವ್ಯಾಸೋಚ್ಛ್ರಯಂ ಚಾಥವಾ
ಅರ್ದ್ಧ್ಯಾರ್ಮ್ಯಂಗುಲತಾರತೀವ್ರಸಹಿತಾ ಪತ್ರ್ಯೈರ್ಲುಪಾತೀವ್ರವ -
ಹ್ಯುಬ್ಧ್ಯಂಶ ಪ್ರಮಿತ್ಯೈರ್ಲುಪಾಪದಗತ್ಯೆರ್ಯುಕ್ತಾ ಲಸದ್ವಾಜನಾ ॥೮॥


ತಾತ್ಪರ್ಯ :

ಎರಡೂ ಪಾರ್ಶ್ವಗಳಲ್ಲಿರುವ ಪಕಾಸುಗಳ ತುದಿಗಳನ್ನು ಜೋಡಿಸಿದ ಮಾಡಿನ ಬೆನ್ನುಹುರಿತೋಳಿಗೆ ವಂಶ ಎಂದು ಹೆಸರು. ಆ ವಂಶದ ಅಗಲ ಮತ್ತು ದಪ್ಪವು ಉತ್ತರದ

ಅಗಲದ $\frac{3}{4}$ ಅಂಶವಿರಬೇಕು. ಅಥವಾ 7 ಇಲ್ಲವೇ 6 ಅಂಗುಲ ಚೌಕವಾಗಿರಬೇಕು. ಅಲ್ಲದೆ ವಂಶಕ್ಕೆ ಪಕಾಸನ್ನು ಸೇರಿಸುವಲ್ಲಿ ಪಕಾಸಿನ ದಪ್ಪದ ಮೂರು ಅಥವಾ ನಾಲ್ಕು ಪಾಲು ಅಧಿಕದ ಪತ್ರ ಅಥವಾ ವಾಜನವನ್ನು ಮಾಡಬೇಕು.

ವಿ.ವಿ. :

ವಂಶವು ಪಕಾಸುಗಳನ್ನೆಲ್ಲ ಸಿಕ್ಕಿಸುವ ಸಾಧನ. ಈ ಸಾಧನವು ಅತಿ ಗಟ್ಟಿಯಾಗಿರಬೇಕು. ಅದಕ್ಕಾಗಿ ಶಿಲ್ಪಶಾಸ್ತ್ರದಲ್ಲಿ ಅದಕ್ಕೆ ಮಹತ್ವವನ್ನು ಕೊಟ್ಟು ಅದರ ದಪ್ಪ ಮತ್ತು ಅಗಲವನ್ನು ನಿಗದಿಗೊಳಿಸಿರುತ್ತಾರೆ. ಈ ಬಗ್ಗೆ ಮೂರು ವಿಧದ ವಂಶವನ್ನು ಹೇಳುತ್ತಾರೆ. ಎಲ್ಲ ವಿಧದಲ್ಲಿಯೂ ಅದು ಚೌಕಾಕಾರದಲ್ಲಿರಬೇಕೆಂಬುದು ಮುಖ್ಯ. ಒಂದನೆಯದಾಗಿ ಅದರ ದಪ್ಪ ಮತ್ತು ಅಗಲ ಪ್ರಧಾನೋತ್ತರದ ಅಗಲದ $\frac{3}{4}$ ಅಂಶವಿರಬೇಕು. ಇಲ್ಲಿ ದಪ್ಪ ಮತ್ತು ಅಗಲ ಒಂದೇ ರೀತಿ ಇರಬೇಕೆಂದು ಹೇಳಿದುದರಿಂದ ವಂಶವು ಚೌಕಾಕಾರದ ತೋಳಾಗಿದೆಯೆಂದು ತಿಳಿಯಬೇಕು. ಎರಡನೆಯದಾಗಿ, ಏಳು ಅಂಗುಲ ದಪ್ಪ ಮತ್ತು ಅಗಲವಿರುವ ಚೌಕಾಕಾರದ ತೋಳು. ಮೂರನೆಯದಾಗಿ ಆರು ಅಂಗುಲ ದಪ್ಪ ಮತ್ತು ಅಗಲವಿರುವ ಚೌಕಾಕಾರದ ತೋಳು. ಈ ಮೂರು ವಿಧಗಳಲ್ಲಿ ಮಾಡಿನ ಗಾತ್ರಕ್ಕೆ ಅನುಗುಣವಾಗಿ ಯಾವುದನ್ನೂ ಸ್ವೀಕರಿಸಬಹುದು. ಅಲ್ಲದೆ ಪಕ್ಕಾಸನ್ನು ಸೇರಿಸುವಲ್ಲಿ ಕೂಡ ಭದ್ರತೆಯ ದೃಷ್ಟಿಯಿಂದ ಪತ್ರ ಮತ್ತು ವಾಜನವಿರುವುದು ಅಗತ್ಯ.



ವಂಶದ ಜೋಡಣೆ
ಚಿ. ೮೭, ಅ. ೬, ಶ್ಲೋ. ೮

೬. ಕೂಟರಚನೆ

ಶ್ಲೋಕ : ಕೂಟಃ ಕೋಟಿಲುಪಾಗ್ರಕಲ್ಪಿತಶಿಖಾ ಸಂಪ್ರಾಪ್ತಪಾರ್ಶ್ವಾವಟಃ
ಪಾರ್ಶ್ವಾಕ್ರಾಂತಲುಪಾಗ್ರರಂಧ್ರನಿಹಿತಾ ಯಃ ಕೀಲಸಂಕೀಲಿತಃ
ಆಧಾರೋಽಸ್ಯ ಲುಪಾಗ್ರಕಲ್ಪಿತಶಿಖಾಸ್ತಸ್ಮಾದಧೋ ಮೂಲ ಏ -
ವೋಕ್ತೋಽಸೌ ವಿಕೃತಾ ಲುಪಾಶ್ಚ ಸಕಲಾ ಗೇಹೇ ಸಮಾಬ್ಧ್ಯಶ್ರಕೇ ॥೯॥

ತಾತ್ಪರ್ಯ :

ಮೂಲೆ ಪಕಾಸುಗಳನ್ನು ಎರಡೂ ಬದಿಗಳಲ್ಲಿ ಸಿಕ್ಕಿಸುವ ಗೂಟವೇ ಕೂಟವಾಗಿದೆ. ಬೆರಿತೋಳಿನ (ವಂಶ) ಆ ಕಡೆ ಈ ಕಡೆಯ ತುದಿಗಳಲ್ಲಿ ಆ ಕೂಟಗಳಿರುತ್ತವೆ. ಕೂಟದ ಎರಡು

ಬದಿಗಳಲ್ಲಿರುವ ಪಕಾಸುಗಳ ತುದಿಗಳನ್ನು ಅದರಲ್ಲಿ ಮಾಡಿದ ರಂಧ್ರಗಳಲ್ಲಿ ಸಿಕ್ಕಿಸಿ ಮರದ ಕೀಲುಗಳನ್ನು ಹೊಡೆದು ಭದ್ರಗೊಳಿಸಬೇಕು. ಪಕಾಸಿನ ತುದಿಯಲ್ಲಿರುವ ಮೊಳೆಯು ಕೂಟಕ್ಕೆ ಆಧಾರವಾಗಿದೆ. ಅಲ್ಲದೆ, ಅದರಿಂದಾಗಿ ಪಕಾಸುಗಳ ಬುಡದ ಭಾಗ ಕೆಳಗಾಗುವಂತಾಗುತ್ತದೆ. ಚೌಕಾಕಾರದ ಮನೆಯಲ್ಲಿ ಈ ಎಲ್ಲ ಪಕಾಸುಗಳು ಓರೆಯಾಗಿಯೇ ಇರುತ್ತವೆ.

ಕೂಟದ ವಿವರ


ಶ್ಲೋಕ : ಧುರ್ಧೂರಪ್ರಸವೋಪಮೋಽಷ್ಟನೃಪಕೋಣೋ ವಾ ತಥಾ ವರ್ತುಲಃ
ಸಂಪುಲ್ಲಾಬ್ಜಯುತೋಽಥವಾಥ ಗುಲಿಕಾರೂಪಃ ಸ್ವಮಧ್ಯಾದಧಃ
ವಿಸ್ತಾರದ್ವಿಗುಣಾಯತಸ್ತದುರಗಾದ್ಯಂಶೋನ ದೀರ್ಘೋಽಥವಾ
ಕೂಟೋಽಬ್ಧ್ಯಾದಿಯವೋತ್ಥಪತ್ರವಿಲಸನ್ಮಧ್ಯಪ್ರದೇಶೋ ಭವೇತ್ ॥೧೦॥

ತಾತ್ಪರ್ಯ :

ಕೂಟವನ್ನು ಉಮ್ಮತ್ತನ (ದತ್ತೂರ) ಹೂವಿನ ಆಕಾರದಲ್ಲಿ ರಚಿಸಬೇಕು. ಅದರಲ್ಲಿ 8 ಅಥವಾ 16 ಮೂಲೆಗಳಿರಬೇಕು. ಅಥವಾ ಅದು ವರ್ತುಲಾಕಾರದ್ದಾಗಿರಬೇಕು. ಇಲ್ಲವೇ ಚೆನ್ನಾಗಿ ಅರಳಿದ ತಾವರೆ ಹೂವಿನಂತಿರಬೇಕು. ಅದರ ಮಧ್ಯಕ್ಕಿಂತ ಕೆಳಗಿನ ಭಾಗವು ಗೋಲಾಕಾರದಲ್ಲಿರಬೇಕು. ಅದರ ಉದ್ದವು ಅಗಲಕ್ಕಿಂತ ಇಮ್ಮಡಿಯಾಗಿರಬೇಕು. ಈ ಇಮ್ಮಡಿ ಉದ್ದದಲ್ಲಿ ಅದರ ಎಂಟರಿಂದ ಹನ್ನೊಂದರವರೆಗಿನ ಭಾಗಗಳಲ್ಲಿ ಒಂದು ಭಾಗವನ್ನು ಕಡಿಮೆಗೊಳಿಸಿಯೂ ಇಟ್ಟುಕೊಳ್ಳಬಹುದು. ಅದರ ಮಧ್ಯ ಪ್ರದೇಶವನ್ನು ನಾಲ್ಕು ಅಥವಾ ಹೆಚ್ಚು ಯವ ಪ್ರಮಾಣಗಳ ಪಟ್ಟಿಯನ್ನು ಮಾಡಿ ಅಂದಗೊಳಿಸಬೇಕು.

ವಿ.ವಿ. :

ಕೂಟರಚನೆಯಲ್ಲಿ ಮೂರು ವಿಧದ ಕೂಟವನ್ನು ಇಲ್ಲಿ ಹೇಳಿದ್ದಾರೆ. (೧) ಎಂಟು ಮೂಲೆ (೨) ಹದಿನಾರು ಮೂಲೆ ಮತ್ತು (೩) ವರ್ತುಲಾಕಾರದ ಕೂಟಗಳು ಅವುಗಳು.



ಕೂಟ
ಚಿ. ೮೮, ಅ. ೬, ಶ್ಲೋ. ೧೦

ಶ್ಲೋಕ : ಪ್ರಾಯಃ ಸರ್ವಲುಪಾಘನೋನ್ಮಿತಪರೀಣಾಹಂ ಕರೋತೂತ್ತರ -
ವ್ಯಾಸಪ್ರಾಯತತಂ ತಥಾಂಗುಲಕೃತ್ಯೈಯೋನ್ಯಾದಿಭಿಃ ಸಂಯುತಮ್
ಪಟ್ಟಿಂ ಕೋಟಿಲುಪಾವಿತಾನಸದೃಶಾಯಾಮಂ ಲುಪಾಸಂಗಮ -
ಸ್ಥಾನಂ ಪತ್ರಪದೋರ್ಧ್ವಮಿತ್ಥಮುದಿತಂ ಕೂಟಸ್ವರೂಪಾದಿಕಮ್ ॥೧೧॥

ತಾತ್ಪರ್ಯ :

ಹೆಚ್ಚಾಗಿ ಕೂಟದ ಸುತ್ತಳತೆಯು ಅದಕ್ಕೆ ಸೇರುವ ಎಲ್ಲ ಪಕಾಸುಗಳ ದಪ್ಪಕ್ಕೆ ಸಮವಾಗಿರುತ್ತದೆ. ಅಥವಾ ಅಂಗುಲದ ಲೆಕ್ಕಾಚಾರದಿಂದ ಉಚಿತವಾದ ಯೋನಿಸಹಿತ ಉತ್ತರದ ಅಗಲಕ್ಕೆ ಸಮವಾಗಿರುತ್ತದೆ. ಪಕಾಸುಗಳನ್ನು ಸೇರಿಸುವ ಕೂಟದ ಮಧ್ಯದ ಪಟ್ಟಿಯ ಅಗಲವು ಮೂಲೆ ಪಕಾಸಿನ ವಿತಾನರೇಖೆಯಷ್ಟು ಇರಬೇಕು. ಅಲ್ಲದೆ ಅದರಲ್ಲಿ ಪತ್ರಾದಿಗಳ ಕೆತ್ತನೆ ಇರಬೇಕು. ಇವೇ ಕೂಟದ ಸ್ವರೂಪಾದಿಗಳಾಗಿವೆ.

ಆಯತಾಕಾರದ ಮನೆಯಲ್ಲಿ ಪಕಾಸು ಜೋಡಿಸುವ ಕ್ರಮ

ಶ್ಲೋಕ : ಆಯತ ಚತುರಶ್ರಗೃಹೇ ವಿಕೃತಿಲುಪಾ ವಂಶಬದ್ಧಕೂಟಗತಾಃ
ವಂಶಸ್ಥಾಗ್ರಾಸ್ತ್ವನ್ಯಾಃ ಪ್ರಕೃತಿಲುಪಾಃ ಕೀಲಿತಾ ಹ್ಯಯಃ ಕೀಲೈಃ ॥೧೨॥

ತಾತ್ಪರ್ಯ :

ಆಯತಾಕಾರದ ಮನೆಗಳಲ್ಲಿ ಮೂಲೆ ಪಕಾಸುಗಳು ವಂಶದಲ್ಲಿ ಬದ್ಧವಾದ ಕೂಟದಲ್ಲಿ ಹೋಗಿ ಸೇರಬೇಕು. ಇತರ ಸಾಮಾನ್ಯ ಪಕಾಸುಗಳ ತುದಿಗಳು ವಂಶದಲ್ಲಿ (ಬೆರಿತೋಳು) ಸೇರಿ ಕೀಲುಗಳಿಂದ ಬಿಗಿ ಪಡೆಯಬೇಕು.

೭. ವಂಶಕ್ಕೆ ಕೂಟದ ಜೋಡಣೆ


ಶ್ಲೋಕ : ವಂಶಾಗ್ರಮೂಲಶಿಖಯಾ ಯದಿ ಕೂಟಪಾರ್ಶ್ವ
ರಂಧ್ರಪ್ರವೇಶಕೃತಸಂಧಿರಿಹಾಜಯುದ್ಧಃ
ಆಧಾರಭೇದಕೃತಸಂಧಿವಶೇನ ಕೂಟ -
ಸ್ಯಾಧೋಗತಂ ಭವತಿ ಮೂಲಮಿಹಾಪಿ ನಿತ್ಯಮ್ ॥೧೩॥

ತಾತ್ಪರ್ಯ :

ಕೂಟಗಳ ಪಾರ್ಶ್ವಗಳಲ್ಲಿ ಮಾಡಿದ ತೂತುಗಳಿಗೆ (ರಂಧ್ರ) ವಂಶದ (ಬೆರಿತೋಳಿನ) ಎರಡೂ ತುದಿಗಳನ್ನು ಸೇರಿಸಿ ಜೋಡಿಸಬೇಕು. ಈ ರೀತಿಯ ಸಂಧಿಗೆ (ಜೋಡಣೆಗೆ) 'ಅಜಯುದ್ಧ' ಎಂದು ಹೆಸರು. ಆಧಾರ ಮತ್ತು ಆಧೇಯ ಭೇದದಿಂದ ಮಾಡುವ ಈ ಸಂಧಿಯಿಂದಾಗಿ ಕೂಟದ ಬುಡವು ಕೆಳಗೆಯೇ ಇರುತ್ತದೆ.

ವಿ.ವಿ. :

ಕೂಟದಲ್ಲಿ ರಂಧ್ರ ಕೊರೆದು ಅದನ್ನು ವಂಶಕ್ಕೆ ಜೋಡಿಸುವ ಕಾರಣ ವಂಶವು ಕೂಟಕ್ಕೆ ಆಧಾರವಾಗುತ್ತದೆ. ವಂಶ ಇಲ್ಲದಿದ್ದರೆ ಕೂಟ ನಿಲ್ಲಲಾರದು. ಕೂಟಕ್ಕೆ ವಂಶವು ಆಧಾರವಾಗುವಾಗ ಕೂಟವು ಆಧೇಯವಾಗುತ್ತದೆ.




ವಂಶಕ್ಕೆ ಕೂಟವನ್ನು ಜೋಡಿಸಿದ ಮಾಡಿನ ಮಾದರಿ
ಚಿ. ೮೯, ಅ. ೬, ಶ್ಲೋ. ೧೩


ಶ್ಲೋಕ : ಮುಖಸಹಿತಾಯತಭವನೇ
ಮುಖಪರ್ಯಂತಾಯತೋ ಭವೇದ್ವಂಶಃ
ಗೇಹವದೇವ ಮುಖಾನಾ -
ಮುತ್ತರಮೂಲಾಗ್ರಯೋಗವಿಧಿನಿಯಮಃ ॥೧೪॥

ತಾತ್ಪರ್ಯ :


ಮೊಗಸಾಲೆ (ಮುಖಮಂಟಪ)ಯಿರುವ ಆಯತಾಕಾರದ ಮನೆಯಲ್ಲಿ ವಂಶವು (ಬೆರಿ ತೋಳು) ಮೊಗಸಾಲೆಯ ಕೊನೆಯವರೆಗೆ ಮುಂದುವರಿಯಬೇಕು. ಮೊಗಸಾಲೆಯಲ್ಲಿ ಆ ಕಡೆ ಈ ಕಡೆಗಳ ಉತ್ತರಗಳ ಕೊನೆಯ ಜೋಡಣೆಯ ಕ್ರಮ ಮನೆಗಳಿಗೆ ಹೇಳಿದ ರೀತಿಯಲ್ಲಿಯೇ ಇರುತ್ತದೆ.



ಚಿ. ೯೦, ಅ. ೬, ಶ್ಲೋ. ೧೪



(ಅ)




(ಆ)

ಕೂಟ - ಜೋಡಣೆ


ಶ್ಲೋಕ : ಮೂಲಪ್ರದೇಶವಿಲಸತ್ಕಬಲೀಸುಲಗ್ನ
ವಂಶಾಗ್ರಮೂಲಪರಿಕೀಲಿತದಾರುಕೀಲಃ
ವಂಶಾವಲಂಬಿತವಶಾದಯಮೂರ್ಧ್ವಮೂಲಃ
ಕೂಟೋ ಯಥೋರ್ಧ್ವಮವಲಂಬತಿ ಬಾಲಕೂಟಃ ||೧೫||

ತಾತ್ಪರ್ಯ :

ವಂಶದ ಎರಡು ಕಡೆಗಳ ತುದಿಗಳನ್ನು ಕೂಟಗಳ ತೂತುಗಳೊಳಗೆ ಸರಿಯಾಗಿ ಸಿಕ್ಕಿಸಿ ಮರದ ಕೀಲುಗಳನ್ನು ಹಾಕಿ ಬಿಗಿಗೊಳಿಸಬೇಕು. ಕೂಟವು ವಂಶಾವಲಂಬಿತವಾಗಿದೆ. ಅಂದರೆ ಕೂಟಕ್ಕೆ (ಗೂಟಕ್ಕೆ) ವಂಶವೇ ನಿಲ್ಲಲು ಆಧಾರವಾಗಿದೆ. ಅದರ ಬುಡವೂ ಮೇಲುಮುಖವುಳ್ಳದ್ದಾಗುತ್ತದೆ. ಕೂಟದಂತೆ ಸಣ್ಣ ಕೂಟವೂ (ಬಾಲಕೂಟ) ಇರುತ್ತದೆ. ಅದು ಮೇಲಿನ ಭಾಗದಲ್ಲಿ ವಂಶಕ್ಕೆ ಸೇರಿಕೊಂಡು ಇರುತ್ತದೆ.



(ಅ)



(ಆ)

ಬಾಲ ಕೂಟ

ಚಿ. ೯೧, ಅ. ೬, ಶ್ಲೋ. ೧೫

೮. ಪಕಾಸಿನ ರಚನೆ


ಶ್ಲೋಕ : ಸರ್ವತ್ರೇಷ್ಟಾಬ್ಧ್ಯಶ್ರೇ ತಿರ್ಯಗಧಃ ಕಲ್ಪಿತಾऽತ್ರ ರೇಖಾ ಯಾ
ಸಾ ಹಿ ಭುಜಾऽಥೋರ್ಧ್ವಾಗ್ರಾ ಕೋಟಿಃ ಸ್ಯಾತ್ ಕೋಣಗಾಮಿನೀ ಕರ್ಣಃ ||೧೬||

ತಾತ್ಪರ್ಯ :

ಎಲ್ಲ ಕಡೆಗಳಲ್ಲೂ ನಮಗೆ ಇಷ್ಟವಾದ ಸಮಚತುಷ್ಕೋಣವನ್ನು ರಚಿಸಬೇಕು. ಆ ಚತುಷ್ಕೋಣದಲ್ಲಿ ಕೆಳಗೆ ಸಮತಲವಾಗಿ ಎಳೆದ ಕಲ್ಪಿತರೇಖೆಯೇ 'ಭುಜ' ಎನಿಸುತ್ತದೆ. ಆ ಭುಜರೇಖೆಯಿಂದ ಮೇಲ್ತುದಿಯಾಗಿ ನೆಟ್ಟಗೆ ಎಳೆದ ಗೆರೆಗೆ 'ಕೋಟಿ' ಎಂದು ಹೆಸರು. ಅನಂತರ ಕೋಟಿಯ ಮೇಲ್ತುದಿಯ ಮೂಲೆಯಿಂದ (ಕೋಣ) ಅದರ ಎದುರಿಗಿರುವ ಮೂಲೆಗೆ (ಕೋಣಕ್ಕೆ) ಎಳೆದ ಗೆರೆಯೇ 'ಕರ್ಣ'ವೆನಿಸುತ್ತದೆ.

ವಿ.ವಿ. :

ಪಕ್ಕಾಸಿನ ರಚನೆಯ ಲೆಕ್ಕಾಚಾರವನ್ನು ತ್ರಿಕೋಣದ ರಚನೆಯಿಂದ ಮಾಡಬೇಕು. ಅದಕ್ಕೆ ಸಮಚತುಷ್ಕೋಣದ ರಚನೆ ಸಹಾಯ ಮಾಡುತ್ತದೆ. ಮೊತ್ತಮೊದಲು ಒಂದು ಕಲ್ಪಿತ (ಇಷ್ಟಬಂದ) ಸಮಚತುಷ್ಕೋಣವನ್ನು ರಚಿಸಬೇಕು. ಆ ಚತುಷ್ಕೋಣದಲ್ಲಿ ಕೆಳಗಿನ ಸಮತಲದ ರೇಖೆಯೇ 'ಭುಜ' ಎನಿಸುತ್ತದೆ. ಇದು ಉಳಿದ ರೇಖೆಗಳಿಗೆ ಮೂಲವಾದುದರಿಂದ ಅದಕ್ಕೆ ಭುಜವೆಂಬ ಹೆಸರು ಔಚಿತ್ಯಪೂರ್ಣವಾಗಿದೆ. ಆ ಭುಜರೇಖೆಗೆ ಲಂಬವಾಗಿ ನೆಟ್ಟಗೆ ಮೇಲಕ್ಕೆ ಎಳೆದ ರೇಖೆಗೆ ವಾಸ್ತುವಿನಲ್ಲಿ ಕೋಟಿ ಎಂದು ಹೆಸರು. ಆ ಕೋಟಿ ರೇಖೆಯ ಮೇಲುತುದಿಯ ಮೂಲೆಯಿಂದ ಅದರ ವಿರುದ್ಧದಿಕ್ಕಿನ ಇನ್ನೊಂದು ಮೂಲೆಗೆ ಎಳೆದ ರೇಖೆಯೇ ಕರ್ಣ. ಕರ್ಣ ರೇಖೆಯನ್ನು ಎಳೆದಾಗ ತ್ರಿಕೋಣ ರಚನೆ ಪೂರ್ಣವಾಗುತ್ತದೆ (ಆ ಕರ್ಣ ರೇಖೆಯ ಬಾಗುವಿಕೆಯೇ ಪಕಾಸಿನ ಬಾಗುವಿಕೆಯಾಗುತ್ತದೆ ಅಲ್ಲದೆ, ಆ ಬಾಗುವಿಕೆ ವಂಶದಿಂದ ಉತ್ತರದವರೆಗೆ ಇರುವ ಮಾಡಿನ ಇಳಿಜಾರನ್ನು ತಿಳಿಸುತ್ತದೆ)



1. ಭುಜ ರೇಖೆ
2. ಕೋಟಿ ರೇಖೆ
3. ಕರ್ಣ ರೇಖೆ


ಚಿ. ೯೨, ಅ. ೬, ಶ್ಲೋ. ೧೬

೯. ಪಕಾಸು ಬರೆಯುವ ಕ್ರಮ

ಶ್ಲೋಕ : ಸುಶ್ಲಕ್ಷ್ಣೇ ಫಲಕಾತಲೇ ಕ್ಷಿತಿತಲೇ ವಾ ಗೇಹತಾರಾರ್ಧಮಾ -
ನಾಬ್ಧ್ಯಶ್ರಂ ತದಧೋಭುಜಾಪರಿಮಿಲತ್ಸ್ವದ್ರೋತ್ತರೋಚ್ಚೋನ್ಮಿತಮ್
ತಸ್ಯಾಧೋ ಘನಮುತ್ತರಸ್ಯ ಚ ಲುಪಾಲಂಬಂ ಚ ತಿರ್ಯಗ್ಗತೈಃ
ಸೂತ್ರೈಃ ಕಲ್ಪಯತೂತ್ತರೋಪರಿ ಲುಪಾಪಂಕ್ತಿಂ ಚ ಯುಂಜ್ಯಾತ್ ತತಃ ||೧೭||

ತಾತ್ಪರ್ಯ :

ಸಮತಟ್ಟಾದ ಹಲಗೆಯ ಮೇಲೆ ಅಥವಾ ನೆಲದ ಮೇಲೆ ಮನೆಯ ಉನ್ನತಿಯ ಅರ್ಧಕ್ಕೆ ಸಮವಾಗಿ ಒಂದು ಸಮಚತುರಶ್ರವನ್ನು ರಚಿಸಬೇಕು. ಭುಜರೇಖೆಯನ್ನು ಮುಟ್ಟುವಂತೆ ಕ್ಷುದ್ರೋತ್ತರದ ಎತ್ತರವನ್ನೂ ಅದರ ಕೆಳಗಡೆ ಉತ್ತರದ ದಪ್ಪವನ್ನೂ, ಉತ್ತರದಿಂದ ಕೆಳಗಡೆ ಇಳಿಯುವ ಸೂರುಪಕಾಸಿನ ಇಳಿತವನ್ನೂ ಸಮಮಟ್ಟದ ಗೆರೆಗಳಿಂದ ಗುರುತಿಸಬೇಕು. ಆಮೇಲೆ ಬಹಳ ಬುದ್ಧಿವಂತಿಕೆಯಿಂದ ಪಕಾಸುಗಳ ಸ್ಥಾನವನ್ನು ಗುರುತಿಸಬೇಕು.



ಮಾಮೂಲು, ಓರೆ ಹಾಗೂ
ಮೂಲೆ ಪಕಾಸುಗಳ ಉದ್ದ,
ಹಲಗೆ ಬರೆಯುವ ಕ್ರಮ
ಚಿ. ೯೩, ಅ. ೬, ಶ್ಲೋ. ೧೬

ಶ್ಲೋಕ : ಸಂಖ್ಯಾಃ ಕೋಟ್ಯುಪಕೋಟಿಕಾದಿವಿಕೃತಾನಾಂ ಯಾ ಲುಪಾನಾಂ ತತ
ಸ್ತಾಃ ಸಂಖ್ಯಾ ದ್ವಿಗುಣ್ಯೈಕಸಂಖ್ಯರಹಿತಾಃ ಕಲ್ಪ್ಯಾಸ್ತು ಸರ್ವತ್ರ ಚ
ದ್ವೇ ದ್ವೇ ಕೋಟ್ಯುಪಕೋಟಿಕಾದಿವಿಕೃತಾನಾಮಂತರಾಲೇ ಪೃಥಕ್
ತತ್ರೈಕಾ ಗೃಹತಾರಮಧ್ಯನಿಕಟೇಽಪ್ಯೇವಂ ವಿಭಾಗೋ ಮತಃ ॥೧೮॥

ತಾತ್ಪರ್ಯ :

ಕೋಟಿ, ಉಪಕೋಟಿ ಮೊದಲಾದ ಪಕಾಸುಗಳ ಸಂಖ್ಯೆಯನ್ನು ದ್ವಿಗುಣಗೊಳಿಸಿ ಅಥವಾ ಕಡಿಮೆ ಮಾಡಿ ಬೇಕಾದ ರೀತಿಯಲ್ಲಿ ಎಲ್ಲ ಕಡೆ ಪಕಾಸುಗಳನ್ನು ಸರಿಗೊಳಿಸಬೇಕು. ಆ ಪಕಾಸುಗಳ ಮಧ್ಯದಲ್ಲಿ ಪ್ರತ್ಯೇಕವಾದ ಎರಡು ಭಾಗಗಳನ್ನು ಮಾಡಬೇಕು. ಹಾಗೆ ಮಾಡುವಾಗ ಮನೆಯ ಮಧ್ಯದ ರೇಖೆಯನ್ನು ಸೇರಿಸಿಕೊಂಡು ಒಂದು ಭಾಗವನ್ನು ಕಲ್ಪಿಸಿ ಪಕಾಸುಗಳನ್ನು ಸಮವಾಗಿ ಹಂಚಬೇಕು.

ಶ್ಲೋಕ : ಇತಿ ವಿಕೃತಿಲುಪಾನಾಂ ಪಂಕ್ತಿಮಾಕಲ್ಪ್ಯ ತತ್ತತ್
ಸ್ಥಿತಿನಿಯತಕೃತಾಂಕಂ ಯತ್ತದಾಕ್ರಾಂತಕರ್ಣಮ್
ನಿಯತಕೃತಲುಪಾಲಂಬಾದಥಾಕೂಟಪಾರ್ಶ್ವಮ್
ಭವತಿ ಪೃಥಗಮೀಷಾಂ ದೀರ್ಘಮಾನಂ ಲುಪಾನಾಮ್ ॥೧೯॥

ತಾತ್ಪರ್ಯ :

ಈ ರೀತಿ ಪಕಾಸುಗಳ ಪಂಕ್ತಿಗಳನ್ನು ಕಲ್ಪಿಸಿಕೊಂಡು ಆ ಪಂಕ್ತಿಗಳನ್ನು ಉತ್ತರದ ಮೇಲೆ ಗುರುತಿಸಿಕೊಳ್ಳಬೇಕು. ಹಾಗೆ ಗುರುತಿಸಿದ ಪಕಾಸುಗಳ ಕೆಳತುದಿಯಿಂದ ಆಕ್ರಮಿತ ಕರ್ಣದ ಮೇಲೆ ಕೂಟದ ಪಾರ್ಶ್ವದ ವರೆಗೆ ಇರುವ ಅಳತೆಯು ಆಯಾ ಪಕಾಸಿನ ಉದ್ದವಾಗುತ್ತದೆ.

ಶ್ಲೋಕ : ಸರ್ವತ್ರೋತ್ತರ ತಾರತುಲ್ಯಮೃಜುಮಂಚಾನಾಂ ಲುಪಾನಾಂ ತತಮ್
ತದ್ವಸ್ವದ್ರಿರಸಾಶುಗಾಬ್ಧ್ಯನಲಭಾಗೈಕೋನಿತಂ ವಾನ್ವಿತಮ್
ದ್ವಿಘ್ನಂ ಚೋತ್ತರತಾರತೋಽಂಘ್ರಿರಹಿತಾದ್ವಿಘ್ನಂ ಚ ಸಾರ್ಧಂ ಪುನಃ
ಕಾರ್ಯಂ ತದ್ಘನಮಂಗುಲೇನ ಯವವೃದ್ಧ್ಯಾ ಯಾವದೃತ್ವಂಗುಲಮ್ ॥೨೦॥

ತಾತ್ಪರ್ಯ :

ಎಲ್ಲ ಮನೆಗಳಲ್ಲಿ ನೇರವಾದ ಪಕಾಸಿನ ಮತ್ತು ಓರೆಪಕಾಸಿನ ಅಗಲವು ಉತ್ತರದ ಅಗಲಕ್ಕೆ ಸಮವಾಗಿರಬೇಕು ಅಥವಾ ಉತ್ತರದ ಅಗಲವನ್ನು 8, 7, 6, 5, 4 ಅಥವಾ 3ರಿಂದ ಭಾಗಿಸಿ ಅವುಗಳಲ್ಲಿ ಒಂದು ಭಾಗವನ್ನು ಸೇರಿಸಿ ಅಥವಾ ಬಿಟ್ಟು ಅದರಂತೆ ಮಾಡಬಹುದು. ಅಥವಾ ಉತ್ತರದ ಅಗಲದ 2, 1¾ ಇಲ್ಲವೇ 1½ ಪಾಲಿನಷ್ಟರ ಅಳತೆಯನ್ನು ತೆಗೆದುಕೊಂಡು ಪಕಾಸಿನ ಅಗಲವನ್ನು ಇಟ್ಟುಕೊಳ್ಳಬಹುದು. ಅಲ್ಲದೆ ಅದರ ದಪ್ಪವು ಒಂದು ಅಂಗುಲದಿಂದ ಆರು ಅಂಗುಲದವರೆಗೆ ಒಮ್ಮೊಮ್ಮೆ ಯವ ಸೇರಿಸಿಕೊಂಡು ಇರಬೇಕು.

ವಿ.ವಿ. :

ಈ ಶ್ಲೋಕದಲ್ಲಿ ಪಕಾಸಿನ ಅಗಲ ಮತ್ತು ದಪ್ಪವನ್ನು ಹೇಳಿರುತ್ತಾರೆ. ಮುಖ್ಯವಾಗಿ ಪಕಾಸಿನ ಅಗಲದ ಬಗ್ಗೆ ಶಾಸ್ತ್ರಕಾರರು ಹೆಚ್ಚು ಗಮನಹರಿಸಿರುತ್ತಾರೆ. ಪಕಾಸಿನ ಅಗಲವು ಉತ್ತರದ ಅಗಲಕ್ಕೆ ಸಮವಾಗಿರಬೇಕೆಂಬುದು ಒಂದು ನಿಯಮ. ಎರಡನೆಯದಾಗಿ ಉತ್ತರದ ಅಗಲವನ್ನು 8, 7, 6, 5, 4 ಅಥವಾ 3 ಭಾಗಮಾಡಿ ಆಯಾಯ ಭಾಗದಲ್ಲಿ ಒಂದು ಅಂಶವನ್ನು ಉತ್ತರದ ಅಗಲಕ್ಕೆ ಸೇರಿಸಿಯೂ ಅಗಲವನ್ನು ಸ್ವೀಕರಿಸಬಹುದು. ಇಲ್ಲವೇ ಆಯಾಯ ಒಂದು ಅಂಶವನ್ನು ಬಿಟ್ಟು ಸಹ ಸ್ವೀಕರಿಸಬಹುದು. ಅಲ್ಲದೆ, ಉತ್ತರದ ಅಗಲದ 2 ಪಾಲು 1¾ ಪಾಲು ಅಥವಾ 1½ ಪಾಲಿನ ಅಳತೆಯನ್ನೂ ಸ್ವೀಕರಿಸಬಹುದು. ಮರಗಳ ಗಟ್ಟಿತನದಲ್ಲಿ ವ್ಯತ್ಯಾಸವಿರುವುದರಿಂದ ಮತ್ತು ಮಾಡಿನ ಗಾತ್ರದಲ್ಲಿಯೂ ವ್ಯತ್ಯಾಸವಿರುವುದರಿಂದ ಅದನ್ನು ಸರಿಹೊಂದಿಸಿ ಮಾಡಿನ ಭದ್ರತೆಯನ್ನು ಕಾಪಾಡುವ ಉದ್ದೇಶದಿಂದ ಇಲ್ಲಿ ಪಕಾಸಿನ ಅಗಲವನ್ನು ಹೆಚ್ಚು ಕಡಿಮೆ ಮಾಡಲು ಬಹಳ ಅವಕಾಶವನ್ನು ಕಲ್ಪಿಸಲಾಗಿದೆ. ಅದೇ ರೀತಿ ದಪ್ಪದ ವಿಷಯದಲ್ಲಿ ಒಂದು ಅಂಗುಲದಿಂದ ಆರು ಅಂಗುಲದವರೆಗೆ ಒಂದೊಂದು ಯವ ಪ್ರಮಾಣವನ್ನು ಸೇರಿಸಿಕೊಂಡು ರಚಿಸುವ ನಿಯಮವನ್ನು ತಿಳಿಸಲಾಗಿದೆ.

ಪಕಾಸಿನ ಅಗಲವನ್ನು ಕಂಡುಹಿಡಿಯುವುದು

ಉತ್ತರದ ಅಗಲ - 12 ಅಂ. 5.3 ಯವ
(ಕಂಬದ ಬುಡದ ಅಗಲ)

ಪಕಾಸಿನ ಅಗಲ

ಉದಾ ೧. ಉತ್ತರದ ಅಗಲದಷ್ಟೇ ಅಗಲ - 12 ಅಂ. 5.3 ಯವ

ಉದಾ ೨. ಉತ್ತರದ ಅಗಲದಿಂದ $\frac{1}{8}$ ಅಂಶವನ್ನು ಕಳೆದಷ್ಟು

= 12 ಅಂ. 5.3 ಯವ x $\frac{7}{8}$ = 11 ಅಂ. 0.64 ಯವ

ಉದಾ ೩. ಉತ್ತರದ ಅಗಲಕ್ಕೆ ಅದರ $\frac{1}{8}$ ಅಂಶವನ್ನು ಕೂಡಿಸಿದಷ್ಟು

12 ಅಂ. 5.3 ಯವ x $\frac{9}{8}$ = 14 ಅಂ. 1.96 ಯವ

ಪಕಾಸಿನ ದಪ್ಪ

೧ ಅಂಗುಲದಿಂದ ತೊಡಗಿ ಒಂದೊಂದು ಯವ ಪ್ರಮಾಣವನ್ನು ಸೇರಿಸಿಕೊಂಡು 6 ಅಂಗುಲ ಆಗುವಲ್ಲಿ ವರೆಗೆ ಯಾವುದಾದರೂ ಒಂದು ಅಳತೆ.

ಶ್ಲೋಕ : ಅಬ್ಧ್ಯಶ್ರಂ ಮಂಚಕಸ್ಯ ಪ್ರತತಿಮಿತಮಥಾಕಲ್ಪ್ಯ ತತ್ಕರ್ಣಮಾನಮ್ -
ಕೋಟ್ಯಾಂ ತಾರಂ ಭುಜಾಯಾಮಥ ವಿಕೃತಿಲುಪಾಪಂಕ್ತಿಮತ್ರೈವ ಕುರ್ಯಾತ್
ತತ್ತತ್ಕರ್ಣಪ್ರಮಾಣಂ ಖಲು ವಿಕೃತಿಲುಪಾನಾಂ ಪೃಥಗ್ವಿಸ್ಕೃತಿಃ ಸ್ಯಾತ್
ಪಾರ್ಶ್ವೇ ಕಾರ್ಯಂ ಧ್ವಜಾದಿತ್ರಿತಯಮಪಿ ವಿತಾನಂ ಚ ಲಂಬಂ ಚ ಸೂತ್ರಮ್ ॥೨೧॥

ತಾತ್ಪರ್ಯ :

ಮಂಚು ಪಕಾಸಿನ ಅಗಲಕ್ಕೆ (ವಿಸ್ತಾರ) ಸಮವಾದ ಒಂದು ಚತುರಶ್ರವನ್ನು ಗುರುತಿಸಬೇಕು. ಅದರ ಕರ್ಣವನ್ನು ಭುಜರೇಖೆಯಲ್ಲಿ ಗುರುತಿಸಬೇಕು. ಆ ಗುರುತಿನ ಒಳಗಿನಿಂದ ಓರೆ ಪಕಾಸಿನ ಪಂಕ್ತಿಯನ್ನು ಗುರುತಿಸಬೇಕು. ಆ ಕರ್ಣಪ್ರಮಾಣದಷ್ಟೇ ಓರೆಪಕಾಸುಗಳ ಪ್ರತಿಯೊಂದರ

ಅಗಲವಿರಬೇಕು. ಧ್ವಜರೇಖೆ ಸಹಿತ ಮೂರು ರೇಖೆಗಳನ್ನು ಅದರ ಪಾರ್ಶ್ವಗಳಲ್ಲಿ ಎಳೆಯಬೇಕು. ಅಲ್ಲದೆ ಅವುಗಳಿಂದ ನೇರವಾದ ಮತ್ತು ಅಡ್ಡವಾದ ಗೆರೆಗಳನ್ನೂ ಎಳೆಯಬೇಕು.

ಶ್ಲೋಕ : ವ್ಯಾಸೇಽಂಕಾಂಶಿನ್ಯಧೋಽಬ್ಧಿಪ್ರಮಿತಮುಪರಿ ಬಾಣೋನ್ನಿತಂ ಕಲ್ಪಯಿತ್ವಾ
ಮಧ್ಯೇ ಸೂತ್ರಂ ಧ್ವಜಾಖ್ಯಂ ವಿರಚಯತು ಲುಪಾಪಾರ್ಶ್ವಯುಗ್ಮೇ ಸಮಂತಾತ್
ಅದ್ರ್ಯಂಶಿನ್ಯಪ್ಯಧಸ್ತಾದನಲಮಿತಮುದಧ್ಯುನ್ನಿತಂ ಚೋರ್ಧ್ವಭಾಗಂ
ಯದ್ವಾ ಬಾಣಾಂಶಿತೇಽಗ್ನಿ ಪ್ರಮಿತಮುಪರಿ ದಸ್ರೋನ್ನಿತಂ ಚಾಪ್ಯಧಸ್ತಾತ್ ॥೨೨॥


ತಾತ್ಪರ್ಯ :

ಪಕಾಸಿನ ಅಗಲವನ್ನು ಒಂಬತ್ತು ಪಾಲು ಮಾಡಿ ನಾಲ್ಕು ಪಾಲನ್ನು ಪಕಾಸಿನ ಕೆಳಭಾಗದಲ್ಲಿಯೂ ಐದು ಪಾಲನ್ನು ಮೇಲು ಭಾಗದಲ್ಲಿಯೂ ಗುರುತು ಮಾಡಬೇಕು. ಅನಂತರ ಪಕಾಸಿನ ಮಧ್ಯಭಾಗದಲ್ಲಿ ಅದರ ಎರಡು ಪಾರ್ಶ್ವಗಳಲ್ಲಿ ಧ್ವಜಸೂತ್ರವನ್ನು ಎಳೆಯಬೇಕು. ಅದಲ್ಲದೆ, ಪಕಾಸಿನ ಅಗಲವನ್ನು 7 ಪಾಲುಮಾಡಿ 3 ಅಂಶ ಕೆಳಗೆಯೂ, ನಾಲ್ಕು ಅಂಶ ಮೇಲುಭಾಗದಲ್ಲಿ ಇರುವಂತೆಯೂ ಮಾಡಬಹುದು. ಇಲ್ಲವೇ ಐದು ಭಾಗ ಮಾಡಿ ಮೇಲೆ ಮೂರು ಭಾಗ ಮತ್ತು ಕೆಳಗೆ ಎರಡು ಭಾಗ ಇರುವಂತೆಯೂ ಗುರುತಿಸಬೇಕು.

ವಿ.ವಿ. :

ಈ ಶ್ಲೋಕದಲ್ಲಿ ಹೇಳಿದಂತೆ ಮೂರು ವಿಧದಲ್ಲಿ ಅಂಶರೇಖೆಗಳನ್ನು ಎಳೆದು ಯಾವುದಾದರೊಂದನ್ನು ಸ್ವೀಕರಿಸಬಹುದು. ಆ ಮೂರು ವಿಧ ಈ ರೀತಿಯಾಗಿದೆ.

	ಮೇಲೆ	ಕೆಳಗೆ
೧ನೇ ವಿಧ	5/9	4/9
೨ನೇ ವಿಧ	4/7	3/7
೩.ನೇ ವಿಧ	3/5	2/5



ಚಿ. ೯೪, ಅ. ೬, ಶ್ಲೋ. ೨೨

ಶ್ಲೋಕ : ಧ್ವಜಸೂತ್ರಸ್ಯೋಭಯತೋ ದ್ವ್ಯಂಗುಲಮಾನೇನ ಕಲ್ಪಯೇತ್ ಸೂತ್ರಮ್
ತದಧಸ್ತಾದಪ್ಯೂರ್ಧ್ವಂ ತತ್ತದ್ವಿಸ್ತಾರ ಮಾನನಿಯಮಃ ಸ್ಯಾತ್ ॥೨೩॥


ತಾತ್ಪರ್ಯ :

ಪಕಾಸಿನ ಎರಡೂ ಬದಿಗಳಲ್ಲಿ ಧ್ವಜ ಸೂತ್ರದಿಂದ ಮೇಲೆ ಹಾಗೂ ಕೆಳಗೆ ಎರಡೆರಡು ಅಂಗುಲಗಳಿಗೆ ಗೆರೆಯನ್ನು ಎಳೆಯಬೇಕು. ಮೇಲೆ ಮತ್ತು ಕೆಳಗೆ ಎಳೆದ ರೇಖೆಗಳ ಅಗಲವೇ ಮಾನನಿಯಮವಾಗುತ್ತದೆ.

ಶ್ಲೋಕ : ಕೃತ್ವಾ ವೇದಾಂಗುಲಾಬ್ಧ್ಯಶ್ರಕಮಖಿಲಲುಪಾಪಾರ್ಶ್ವಯೋರ್ಮಧ್ಯಸೂತ್ರೇ
ತದ್ವೇದಾಶ್ರೋತ್ಥಕರ್ಣದ್ವಿತಯಮಿಹ ವಿತಾನಂ ಚ ಲಂಬಂ ಚ ವಿದ್ಯಾತ್
ಸರ್ವತ್ರೈತದ್ವಿಧೇಯಂ ದ್ವಯಮಪಿ ವಲಯಸ್ಥಾನ ಕೂಟಾವಸಾನ
ಸ್ಥಾನೇಷ್ವಪ್ಯುತ್ತರಾದ್ಯರ್ಪಣನಿಯಮಪದೇ ನೀಪ್ರಲಂಬಾಂತತೋಽಪಿ ॥೨೪॥

ತಾತ್ಪರ್ಯ :

ಎಲ್ಲ ಪಕ್ಕಾಸುಗಳ ಎರಡೂ ಪಾರ್ಶ್ವಗಳಲ್ಲಿ ನಾಲ್ಕು ಅಂಗುಲ ಪ್ರಮಾಣದ ಚತುರಶ್ರವನ್ನು ರಚಿಸಬೇಕು. ಚತುರಶ್ರದ ಎರಡು ಕರ್ಣ ರೇಖೆಗಳಲ್ಲಿ ಒಂದನ್ನು ಸಮತಲ ರೇಖೆಯನ್ನಾಗಿಯೂ (ವಿತಾನ) ಇನ್ನೊಂದನ್ನು ಲಂಬವನ್ನಾಗಿಯೂ ತಿಳಿಯಬೇಕು. ಈ ಎರಡು ಕರ್ಣರೇಖೆಗಳನ್ನು ವಲಯಸ್ಥಾನದಲ್ಲಿಯೂ, ಕೂಟಕ್ಕೆ ಸೇರುವ ತುದಿಯಲ್ಲಿಯೂ ಉತ್ತರದ ಮೇಲೆ ಕುಳಿತುಕೊಳ್ಳುವ ಸ್ಥಾನದಲ್ಲಿಯೂ ಮತ್ತು ಲುಪಾಲಂಬದ ಅಂತ್ಯಸ್ಥಾನದಲ್ಲಿಯೂ ಗುರುತಿಸಬೇಕು.



ಪಕಾಸಿನಲ್ಲಿ ಗುರುತು ಬರೆಯುವುದು
ಚಿ. ೯೫, ಅ. ೬, ಶ್ಲೋ. ೨೪

ಶ್ಲೋಕ : ಚೂಲೀ ವಾ ಕ್ವಚಿದಲ್ಪಮಂದಿರವಿಧೌ ತತ್ರಾಪಿ ಯುಗ್ಮಾಃ ಸ್ಮೃತಾ
ವಿಷ್ಕಂಭಾಶ್ಚ ತದರ್ಧಸಮ್ಮಿತ ತದಂಘ್ರ್ಯಗ್ರೇಷು ವಂಶೋಽಪಿ ಚ
ತಸ್ಮಾದಂಘ್ರಿಸಮುಚ್ಛ್ರಯಾತ್ ತ್ಯಜತು ವಾ ಕ್ವಾಪ್ಯದ್ರಿನಾಗಾಂಕ ದಿಕ್
ರುದ್ರಾಂಶಂ ತ್ವಿಹ ಚೂಲಿಕೋಪರಿ ಬುಪಾಶ್ಚಾಪ್ಯಗ್ರಧಾನ್ಯಾಚಿತಾಃ ॥೨೫॥

ತಾತ್ಪರ್ಯ :

ಕೆಲವು ಸಣ್ಣ ಮನೆಗಳಲ್ಲಿ ಚೂಲಿಯನ್ನು ಉಪಯೋಗಿಸಬಹುದು. ಅಲ್ಲಿಯು ಕೂಡ ವಿಷ್ಕಂಭಗಳು (ಕುತ್ತಿಕೋಲು) ಸಮಸಂಖ್ಯೆಯಲ್ಲಿ ಇರಬೇಕು. ಅವುಗಳ ತುದಿಯಲ್ಲಿ ಬೆರಿತೋಳನ್ನು (ವಂಶವನ್ನು) ಕೂರಿಸಬೇಕು. ಕೆಲವು ಕಡೆ ಆ ಕುತ್ತಿಕೋಲಿನ ಉದ್ದವನ್ನು 7, 8, 9, 10 ಅಥವಾ 11ರಿಂದ ಭಾಗಿಸಿ ಒಂದು ಭಾಗವನ್ನು ಬಿಟ್ಟು ಉಳಿದ ಉದ್ದದ ಅಳತೆಯನ್ನು ಇಡಬೇಕು. ಇಲ್ಲಿ ವಂಶಸಹಿತ ಪಕಾಸುಗಳನ್ನು ಚೂಲಿಯ ಮೇಲೆ ಕುಳಿತುಕೊಳ್ಳಿಸಬೇಕು.

ವಿ.ವಿ. :

ಚೂಲೀ ಎಂದರೆ ಕುತ್ತಿಕೋಲನ್ನು ನಿಲ್ಲಿಸಲು ಮನೆಯ ಮಧ್ಯದಲ್ಲಿ ಹಾಕುವ ಅಡ್ಡತೋಳು.

೧೦. ನೀಪ್ರಫಲಕದ ರಚನೆ

ಶ್ಲೋಕ : ವಿಸ್ತಾರೇ ಪುನರುತ್ತರಸ್ಯ ದಶಧಾ ಭಕ್ತೇ ರಸಾದ್ಯಷ್ಟದಿಕ್
ಭಾಗೈರ್ವೋತ್ತರತಾರತೋಽಂಘ್ರಿರಹಿತಂ ವಾದ್ರ್ಯಂಶಿತೇತ್ರ್ಯಂಶಕೈಃ
ವಿಸ್ತಾರಂ ಪ್ರಕರೋತು ನೀಪ್ರಫಲಕಸ್ಯೈತತ್ ತ್ರಿಭಾಗಂ ಘನಮ್
ವಿಸ್ತಾರೇ ಶರಭಾಜಿತೇಽಪಿ ಚ ಘನಂ ದ್ವಾಭ್ಯಾಂ ಪ್ರಕುರ್ಯಾತ್ ಕ್ವಚಿತ್ ॥೨೬॥

ತಾತ್ಪರ್ಯ :

ಉತ್ತರದ ಅಗಲವನ್ನು 10 ಭಾಗಮಾಡಿ ಅವುಗಳಲ್ಲಿ 6, 7, 8, 9 ಅಥವಾ 10ನೇ ಭಾಗದ ಅಗಲದಷ್ಟು ಸೂರಿನ ಪಕಾಸುಗಳ ಮೇಲೆ ಜೋಡಿಸುವ ನೀಪ್ರಫಲಕದ ಅಗಲವಿರಬೇಕು. ಅಥವಾ ಉತ್ತರದ ಅಗಲದ $\frac{3}{4}$ ಭಾಗವನ್ನು ಸ್ವೀಕರಿಸಬಹುದು ಅಥವಾ 7 ಪಾಲು ಮಾಡಿ 3 ಪಾಲನ್ನು ತೆಗೆದುಕೊಳ್ಳಬಹುದು. ಅದರ ದಪ್ಪವು ಫಲಕದ ಅಗಲದ $\frac{1}{3}$ರಷ್ಟು ಇರಬೇಕು ಅಥವಾ 5 ಪಾಲು ಮಾಡಿ ಅದರ ಎರಡು ಪಾಲಿನಷ್ಟು ($\frac{2}{5}$) ಇರಬೇಕು.

ವಿ.ವಿ. :

ನೀಪ್ರಫಲಕ ಎಂಬುದು ಸೂರಿನ ಎಲ್ಲ ಪಕಾಸುಗಳ ತುದಿಯ ಮೇಲುಭಾಗದಲ್ಲಿ ಅಡ್ಡವಾಗಿ ಹೊಡೆದು ಜೋಡಿಸುವ ಹಲಗೆಯ ಪಟ್ಟಿ. ಅದು ಪಕಾಸುಗಳ ತುದಿಯಲ್ಲಿ ಅವುಗಳ ಮೇಲೆ ಹೊದೆಸಿದಂತೆ ಇರುವುದರಿಂದ ಪಕಾಸುಗಳ ತುದಿಗಳನ್ನು ಮಳೆಯಿಂದ ಅಕಸ್ಮಾತ್ತಾಗಿ ನೆನೆಯದಂತೆ ಮಾಡುತ್ತದೆ. ಅಲ್ಲದೆ, ಪಕಾಸುಗಳು ಆ ಕಡೆ ಈ ಕಡೆ ಜಾರಿ ಸರಿಯದಂತೆ ಭದ್ರಗೊಳಿಸುತ್ತದೆ.

ಫಲಕದ ರಚನೆಗೆ ಒಂದೆರಡು ಉದಾಹರಣೆಗಳು

ಉತ್ತರದ ಅಗಲ - 12 ಅಂ. 5.3 ಯವ

ಉದಾ ೧. ಉತ್ತರದ ಅಗಲದ $\frac{6}{10}$ ಆದಾಗ ನೀಪ್ರಫಲಕದ ಅಗಲ

12 ಅಂ. 5.3 ಯವ x $\frac{6}{10}$ = 7 ಅಂ. 4.8 ಯವ

∴ ಫಲಕದ ಅಗಲ - 7 ಅಂ. 4.8 ಯವ

ಫಲಕದ ದಪ್ಪ - ಅಗಲದ $\frac{1}{3}$ ಅಂಶ = 7 ಅಂ. 4.8 ಯವ x $\frac{1}{3}$

= 2 ಅಂ. 4.3 ಯವ

∴ ಫಲಕದ ದಪ್ಪ - 2 ಅಂ. 4.3 ಯವ

ಉದಾ ೨ : ಉತ್ತರದ ಅಗಲದ $\frac{3}{7}$ ಅಂಶ ಆದಾಗ ನೀಪ್ರಫಲಕದ ಅಗಲ

12 ಅಂ. 5.3 ಯವ x $\frac{3}{7}$ = 5 ಅಂ. 3.4 ಯವ

∴ ಫಲಕದ ಅಗಲ - 5 ಅಂ. 3.4 ಯವ

ಫಲಕದ ದಪ್ಪ : ಅಗಲದ $\frac{2}{5}$ ಅಂಶ ಆದಾಗ

= 5 ಅಂ. 3.4 ಯವ x $\frac{2}{5}$ = 2 ಅಂ. 1.4 ಯವ

∴ ನೀಪ್ರಫಲಕದ ದಪ್ಪ - 2 ಅಂ. 1.4 ಯವ

ಶ್ಲೋಕ : ನೀಪ್ರವ್ಯಾಸೇ ಶರಾಂಶಿನ್ಯಥ ತದುಭಯತಸ್ತೂರ್ಧ್ವಪಟ್ಟಂ ತಲಂ ಚ
ದ್ವಾಭ್ಯಾಮೇಕೇನ ಪಟ್ಟಂ ಚರಮಮಪಿ ವಿಧೇಯಂ ತಥಾ ಷಡ್ವಿಭಕ್ತೇ
ದ್ವಾಭ್ಯಾಂ ತಸ್ಯೋರ್ಧ್ವಪಟ್ಟಂ ತ್ರಿಭಿರಪಿ ಚ ತಲಂ ಸ್ಯಾಧಧಃ ಪಟ್ಟಮೇಕೇ -
ನೈವಂ ವಾ ನಾಗಭಕ್ತೇ ಜ್ವಲನನಿಗಮಭೂಮ್ಯಂಶತಃ ಕಲ್ಪನೀಯಂ ॥೨೭॥


ತಾತ್ಪರ್ಯ :

ನೀಪ್ರವ್ಯಾಸದ (ನೀಪ್ರಪಟ್ಟಿಯ ಅಗಲದ) $\frac{2}{5}$ ಅಂಶದ ಅಳತೆಯಿಂದ ಊರ್ಧ್ವಪಟ್ಟವನ್ನೂ, $\frac{2}{5}$ ಭಾಗದಿಂದ ತಲವನ್ನೂ (Groove), $\frac{1}{5}$ ಭಾಗದ ಅಗಲದಿಂದ ಚರಮಪಟ್ಟನ್ನೂ ರಚಿಸಬೇಕು. ಅದೇ ರೀತಿ $\frac{2}{6}$ ಭಾಗದಿಂದ ಊರ್ಧ್ವಪಟ್ಟವನ್ನೂ $\frac{3}{6}$ ಭಾಗದಿಂದ ತಲವನ್ನೂ ಮತ್ತು $\frac{1}{6}$ ಭಾಗದಿಂದ ಚರಮ ಪಟ್ಟವನ್ನೂ ರಚಿಸಬಹುದು. ಅಲ್ಲದೆ, ನೀಪ್ರವ್ಯಾಸವನ್ನು 8ರಿಂದ ಭಾಗಿಸಿದಾಗ ಕ್ರಮವಾಗಿ $\frac{3}{8}$, $\frac{4}{8}$ ಮತ್ತು $\frac{1}{8}$ ಭಾಗಗಳ ಅಗಲವನ್ನು ಇಟ್ಟು ಮೂರು ಪಟ್ಟಗಳನ್ನು ರಚಿಸಬಹುದು.


ವಿ.ವಿ. :

ನೀಪ್ರಫಲಕದಲ್ಲಿ ಮೂರು ಭಾಗಗಳಿರುತ್ತವೆ. ಒಂದನೆಯದು ಊರ್ಧ್ವಪಟ್ಟ, ಎರಡನೆಯದು ತಲಪಟ್ಟ ಮತ್ತು ಮೂರನೆಯದು ಚರಮ ಪಟ್ಟ. ಊರ್ಧ್ವಪಟ್ಟವು ಹೆಸರೇ ಸೂಚಿಸುವಂತೆ ಪಕಾಸಿನ ತುದಿಯಲ್ಲಿ ಅತ್ಯಂತ ಮೇಲೆ ಇರುತ್ತದೆ. ಅದಕ್ಕಿಂತ ಕೆಳಗೆ ತಲಪಟ್ಟವಿರುತ್ತದೆ. ಮತ್ತು ತಲ ಪಟ್ಟದಿಂದ ಕೆಳಗೆ ಚರಮ ಪಟ್ಟವಿರುತ್ತದೆ. ಈ ಮೂರು ಪಟ್ಟಗಳು ಅಥವಾ ಫಲಕಗಳು ಸೇರಿ ಪಕಾಸಿನ ತುದಿಯನ್ನು ಆವರಿಸಿ ರಕ್ಷಿಸುತ್ತವೆ. ಆ ಮೂರು ಫಲಕಗಳು ಕೆಳಗೆ ನಮೂದಿಸಿದ ಅಳತೆಯ ಪ್ರಮಾಣದಲ್ಲಿ ಇರುತ್ತವೆ.

	ಫಲಕದ ಹೆಸರು	ಪ್ರಮಾಣದ ಮೂಲ	ಫಲಕದ ಅಗಲ		
1.	ಊರ್ಧ್ವ	ನೀಪ್ರದ ಅಗಲದ	$\frac{2}{5}$	$\frac{2}{6}$	$\frac{3}{8}$
2.	ತಲ	" "	$\frac{2}{5}$	$\frac{3}{6}$	$\frac{4}{8}$
3.	ಚರಮ	" "	$\frac{1}{5}$	$\frac{1}{6}$	$\frac{1}{8}$



ನೀಪ್ರ ಫಲಕದ ಜೋಡಣೆ
ಚಿ. ೯೬, ಅ. ೬, ಶ್ಲೋ. ೨೬



ನೀಪ್ರ ಫಲಕಗಳು

ಶ್ಲೋಕ : ನೀಪ್ರವ್ಯಾಸೇ ವಿಭಕ್ತೇ ಶರಗಿರಿನವಭಿಃ ಸರ್ವತೋ ವಹ್ನಿಭಾಗಮ್
ನೀಪ್ರಸ್ಥಾನಾತ್ ವಿತಾನಾದುಪರಿ ತದುಚಿತಂ ಕೋಟಿಕರ್ಣಾಧ್ವನಾಽತ್ರ
ನೀತ್ವಾ ನೀಪ್ರಂ ಲುಪಾಸು ಸ್ವಯಮಿಹ ವಿಧಿನಾ ಧೂಲಿಸಂರೋಧಯೋಗ್ಯಮ್
ಕೃತ್ವಾ ವಾಯವ್ಯಹೋಮಾದ್ಯವಹಿತಹೃದಯಃ ಕಾರುಭಿಃ ಕೀಲಯೇತ್ ತತ್ ॥೨೮॥

ತಾತ್ಪರ್ಯ :

ಸೂರು ಪಕಾಸಿನ ಅಗಲವನ್ನು 5, 7 ಅಥವಾ 9ರಿಂದ ಭಾಗಿಸಿ ಅದರ ಮೂರು ಭಾಗವನ್ನು ತೆಗೆದುಕೊಂಡು ನೀಪ್ರಫಲಕವನ್ನು ಕೋಟಿ ಪಕಾಸಿನ ಕರ್ಣಮಾರ್ಗವಾಗಿ ಪಕಾಸಿಗೆ ಹೊಂದುವ

ರೀತಿಯಲ್ಲಿ ಅದರ ಮೇಲೆ ಸೇರಿಸಿ ಕುಳಿತುಕೊಳ್ಳಿಸಬೇಕು. ಅಲ್ಲದೆ, ವಾಯವ್ಯ ಹೋಮಾದಿಗಳನ್ನು ಮಾಡಿ ಧೂಳನ್ನು ತಡೆಯಲು ಯೋಗ್ಯವಾದ ಆ ಫಲಕವನ್ನು ಶಿಲ್ಪಿಗಳಿಂದ ಕೀಲಿಸಿ ಭದ್ರಗೊಳಿಸಬೇಕು.

ವಿ.ವಿ. :

ಮಾಡಿನ ರಚನೆಯಲ್ಲಿ ನೀಪ್ರಫಲಕವನ್ನು ಜೋಡಿಸುವ ಕೆಲಸ ಕೊನೆಯದಾಗಿದೆ. ಆದುದರಿಂದ ಅದಕ್ಕೆ ಗೃಹವಾಸ್ತುವಿನಲ್ಲಿ ತುಂಬ ಪ್ರಾಧಾನ್ಯವಿದೆ. ವಾಸ್ತುವಿಗೆ ಸಂಬಂಧಿಸಿದ ಯಾವುದೇ ಪ್ರಧಾನ ಕಾರ್ಯದ ಆದಿ ಮತ್ತು ಅಂತ್ಯದಲ್ಲಿ ಪೂಜಾದಿಗಳನ್ನು ನೆರವೇರಿಸುವುದು ಶಾಸ್ತ್ರವಿಧಿ. ಆ ಪ್ರಕಾರ ಇಲ್ಲಿ ವಾಯವ್ಯಹೋಮಾದಿಗಳ ಕರ್ಮಾಂಗವನ್ನು ವಿಧಿಸಿರುತ್ತಾರೆ. ಮನೆಯ ಮಾಡು ಗಾಳಿಯ ಹೊಡೆತದ ಹಾನಿಗೆ ಒಳಗಾಗದಂತಾಗಲು ವಾಯುದೇವತೆಯನ್ನು ಆರಾಧಿಸುವುದು ಶಾಸ್ತ್ರಸಮ್ಮತವಾದ ವಿಷಯವಾಗಿದೆ.

೧೧. ವಲಯ (Coller pin)

ಶ್ಲೋಕ : ಮನುಯವಚತುರಶ್ರಂ ದ್ವ್ಯಂಗುಲಂ ತತ್ರ ತು ದ್ವಿ -
ದ್ವಯಯವಪರಿವೃದ್ಧ್ಯಾ ತ್ರ್ಯಂಗುಲಾಂತಂ ಕ್ರಮೇಣ
ವಲಯಮಿತಿ ಮುನೀಂದ್ರೈಃ ಷಡ್ವಿಧಂ ದರ್ಶಿತಂ ತೇ -
ಷ್ವಿಹ ವಿತತ ಲುಪೌಚಿತ್ಯೇನ ತತ್ ಕಲ್ಪನೀಯಮ್ ॥೨೯॥

ತಾತ್ಪರ್ಯ :

ಹದಿನಾಲ್ಕು ಯವಗಳ ($1\frac{3}{4}$ ಅಂಗುಲ) ಚತುರಶ್ರದಿಂದ ಆರಂಭಿಸಿ ಕ್ರಮವಾಗಿ ಎರಡೆರಡೇ ಯವಗಳನ್ನು ಸೇರಿಸುತ್ತ ಮೂರು ಅಂಗುಲವಾಗುವ ವರೆಗೆ ವೃದ್ಧಿಸಿದಾಗ ಆರು ವಿಧವಾದ ವಲಯಗಳಾಗುತ್ತವೆಯೆಂಬುದನ್ನು ಮುನೀಂದ್ರರು (ವಾಸ್ತುಶಿಲ್ಪತಜ್ಞರು) ತೋರಿಸಿಕೊಟ್ಟಿರುತ್ತಾರೆ. ಅವುಗಳ ಪೈಕಿ ಆಯಾಯ ಗಾತ್ರದ ಪಕಾಸಿಗೆ ಉಚಿತವಾದುದನ್ನು ಆರಿಸಿಕೊಳ್ಳಬೇಕು.

ವಿ.ವಿ. :

ಆರು ವಿಧದ ವಲಯಗಳು

1.	ಯವ 14 - $1\frac{3}{4}$ ಅಂಗುಲ (1 ಅಂ. 6 ಯವ)	ಚತುರಶ್ರ
2.	ಯವ 16 - 2 ಅಂಗುಲ	ಚತುರಶ್ರ
3.	ಯವ 18 - 2¼ ಅಂಗುಲ (2 ಅಂ. 2 ಯವ)	ಚತುರಶ್ರ
4.	ಯವ 20 - 2½ ಅಂಗುಲ (2 ಅಂ. 4 ಯವ)	ಚತುರಶ್ರ
5.	ಯವ 22 - 2¾ ಅಂಗುಲ (2 ಅಂ. 6 ಯವ)	ಚತುರಶ್ರ
6.	ಯವ 24 - 3 ಅಂಗುಲ	ಚತುರಶ್ರ

೧೨. ಪಟ್ಟಿಕಾ ವಿಧಿ (ರೀಪಿನ ರಚನೆ)

ಶ್ಲೋಕ : ತತ್ರ ಸಪ್ತದಶಭಿರ್ಯವೈಃ ಸ್ಮೃತಾ ಪಟ್ಟಿಕಾವಿತತಿರಂಕಸಮ್ಮಿತೈಃ
ತದ್ಘನಂ ಘನಪದೋನಮಂತರಂ ಸಂದಧೀತ ಚ ಲುಪಾಸು ಕೀಲಕೈಃ ॥೩೦॥

ತಾತ್ಪರ್ಯ :

ಪಟ್ಟಿಯ (ರೀಪು) ಅಗಲ 17 ಯವ ಮಾನದ್ದಾಗಿರಬೇಕು. ಅಲ್ಲದೆ ಅದರ ದಪ್ಪವು 9 ಯವದಷ್ಟು ಇರಬೇಕು. ಪಟ್ಟಿಕೆಯ ದಪ್ಪದ $\frac{3}{4}$ ಅಂಶದಷ್ಟು ಅಂತರವಿಟ್ಟು ಪಟ್ಟಿಕೆಗಳನ್ನು ಪಕಾಸಿನ ಮೇಲೆ ಅಡ್ಡವಾಗಿ ಇಟ್ಟು ಕೀಲು ಹೊಡೆದು ಭದ್ರಗೊಳಿಸಬೇಕು.

ವಿ.ವಿ. :

ಈ ಶ್ಲೋಕದಲ್ಲಿ ರೀಪಿನಿಂದ ರೀಪಿಗೆ ಇರುವ ಅಂತರ 6.75 ಯವ. ಅಂದರೆ 2.68 ಸೆಂಟಿಮೀಟರ್. ಇದು ಹಿಂದಿನ ಕಾಲದ ಹಂಚುಗಳಿಗೆ ಸರಿಯಾದುದು. ಈಗಿನ ಕಾಲದ ಮಂಗಳೂರು ಹಂಚಿನಂತಹ ಹಂಚುಗಳಿಗೆ ಇದು ಸರಿಹೊಂದಲಾರದು. ನಾವು ಉಪಯೋಗಿಸುವ ಕಾರ್ಖಾನೆಗಳ ಹಂಚುಗಳ ಗಾತ್ರಕ್ಕೆ ಅನುಗುಣವಾಗಿ ರೀಪುಗಳ ದೂರ ಹಾಗೂ ಗಾತ್ರವನ್ನು ಹೊಂದಿಸಿಕೊಳ್ಳುವುದು ಸೂಕ್ತ.

ಶ್ಲೋಕ : ಲೋಷ್ಟೈರಾಚ್ಛಾದ್ಯತೇ ಚೇದಖಿಲನಿಲಯನೇ ಪಟ್ಟಿಕಾಪ್ರಸ್ತರಃ ಸ್ಯಾತ್
ತತ್ಸ್ಥಾನೇ ಕ್ವಾಪಿ ಕಾರ್ಯೋಽಪಿ ಚ ಘನಫಲಕಾ ಪ್ರಸ್ತರೋ ಬದ್ಧಕೀಲಃ
ಲೋಷ್ಟಾಧಾರಾಯ ಕಿಂಚಿತ್ ತಲಮಪಿ ಚ ಖನೇಚ್ಛಂಚು ಸಂಧಾರಣಾರ್ಥಮ್
ತಾಮ್ರೈರಾಚ್ಛಾದ್ಯತೇ ಚೇನ್ನತು ತಲರಚನಾ ದೇವಗೇಹಾದಿಕೇಷು ॥೩೧॥

ತಾತ್ಪರ್ಯ :

ಹಂಚುಗಳನ್ನು ಹೊದೆಸುವ ಎಲ್ಲ ಮನೆಗಳಲ್ಲಿ ರೀಪುಗಳ (ಪಟ್ಟಿಕೆಗಳ) ಸಾಲು ಇರಬೇಕು. ಕೆಲವು ಕಡೆಗಳಲ್ಲಿ ದಪ್ಪದ ಹಲಗೆಗಳ ಸಾಲಿಗೇ ಕೀಲುಗಳನ್ನು ಜಡಿದು ಇರಗೊಳಿಸಬೇಕು. ಕೆಲವು ಸಂದರ್ಭಗಳಲ್ಲಿ ಹಂಚಿನ ಆಧಾರಕ್ಕಾಗಿ ಅದರ ಕುಟ್ಟಿಗಳು ನಿಲ್ಲುವ ಸಲುವಾಗಿ ಸಣ್ಣ ತಲ (ಗುಳಿ)ಗಳನ್ನು ರಚಿಸಬೇಕು. ದೇವಸ್ಥಾನಾದಿಗಳಲ್ಲಿ ತಾಮ್ರದ ಹೊದಿಕೆ ಹೊದೆಸುವಲ್ಲಿ ತಲರಚನೆಯ ಅಗತ್ಯವಿಲ್ಲ.

ವಿ.ವಿ. :

ಈ ರೀತಿಯ ರಚನೆಯು ಹಿಂದಿನ ಕಾಲದ ಮಾಡುಗಳಲ್ಲಿ ಕಾಣಲು ಸಿಗುತ್ತದೆ.

ಶ್ಲೋಕ : ಶಿರಃ ಪ್ರದೇಶಸ್ತ್ವಭಿಧಾನ ಮುಕ್ತಮ್
ವೇಶ್ಮಾಖ್ಯಪುಂಸಸ್ತದಧೋಮುಖಂ ಸ್ಯಾತ್
ವಿಸ್ತಾರಮಸ್ಯೋತ್ತರ ತಾರತುಲ್ಯಂ
ಕರ್ತವ್ಯಮಾದ್ಯಂಗಘನಾದ್ಘನಂಚ ॥೩೨॥

ತಾತ್ಪರ್ಯ :

ಮನೆಯೆಂಬ ಪುರುಷನ ಶಿರಪ್ರದೇಶವನ್ನು "ಅಭಿಧಾನ" ಎನ್ನಲಾಗುತ್ತದೆ. ಆ ಅಭಿಧಾನವು ಕೆಳಮೊಗವಾಗಿರುತ್ತದೆ. ಅದರ ಅಗಲವು ಉತ್ತರದ ಅಗಲದಷ್ಟು ಇರಬೇಕು. ಅಲ್ಲದೆ, ಅದರ ದಪ್ಪವು ಮನೆಯ ಪಾದುಕದ ದಪ್ಪದಷ್ಟು (ಎತ್ತರ) ಇರಬೇಕು.

ವಿ.ವಿ. :

ಈ ಶ್ಲೋಕದಲ್ಲಿ ಮನೆಯನ್ನು ಪುರುಷನೆಂದು ಪರಿಗಣಿಸಲಾಗಿದೆ. ಮನೆಯೆಂಬ ಪುರುಷನಿಗೆ ಅಭಿಧಾನವೇ ಶಿರವಾಗಿದೆ. ಅಭಿಧಾನವು ಮನೆಯ ಮೇಲಿನ ಕೊನೆಯ ಭಾಗ. ಬೆರಿತೋಳಿನ ಮೇಲೆ ಕುಳಿತ ಪಕಾಸುಗಳ ತುದಿಗಳು ಮುಚ್ಚುವಂತೆ ಹಲಗೆಗಳನ್ನು ಹೊಡೆಯಲಾಗುತ್ತದೆ. ಆ ಹಲಗೆಗಳ ಮೇಲೆ ಹಂಚು ಮೊದಲಾದವುಗಳನ್ನು ಇಡುವುದಾಗಿದೆ. ಹಾಗೆ ಹೊಡೆಯುವ ಪಕಾಸುಗಳ ತುದಿಯ ಮೇಲಿನ ಮುಚ್ಚು ಹಲಗೆಗಳೇ ಅಭಿಧಾನ. ಆ ಅಭಿಧಾನದ ಅಗಲವು ಮನೆಯ ಉತ್ತರದ ಅಗಲದಷ್ಟು ಇರಬೇಕು.

ಅಲ್ಲದೆ ಅದರ ದಪ್ಪವು ಆ ಮನೆಯ ಪಾದುಕದ ದಪ್ಪದಷ್ಟು ಇರಬೇಕು. ಹೀಗೆ ಅಭಿಧಾನ ಸರಿಯಾದ ಅಗಲ ಮತ್ತು ದಪ್ಪವಿರುವುದರಿಂದ ಮಾಡಿನ ಶಿಖರ ಭಾಗಕ್ಕೆ ಒಳ್ಳೆಯ ರಕ್ಷಣೆ ಸಿಕ್ಕಿದಂತಾಗುತ್ತದೆ

ಇತಿ ಮನುಷ್ಯಾಲಯಚಂದ್ರಿಕಾಯಾಂ ಷಷ್ಠೋಽಧ್ಯಾಯಃ

ಇಲ್ಲಿಗೆ ಮನುಷ್ಯಾಲಯಚಂದ್ರಿಕೆಯಲ್ಲಿ ಆರನೆಯ ಅಧ್ಯಾಯವು ಮುಗಿದುದು.

ಅಥ ಸಪ್ತಮೋಧ್ಯಾಯಃ
ಕವಾಟ ಬಾಹ್ಯಗೇಹಕೂಪಾದಿವಿಧಯಃ

ಏಳನೆಯ ಅಧ್ಯಾಯ
ಕವಾಟ ಬಾಹ್ಯಗೇಹಕೂಪಾದಿಗಳ ವಿಧಿ

೧. ಬಾಗಿಲುಗಳ ರಚನೆ

ಶ್ಲೋಕ : ದ್ವಾರಾಣ್ಯಂಗಣಗೇಹ ಮಧ್ಯಸಿರಯೋರ್ಮಧ್ಯೇ ಚ ಮಧ್ಯಂ ತತಃ
ಕುರ್ಯಾದಂಗುಲಕಲ್ಪಿತಾಗಮವಯೋ ಯೋನೀನಿ ಪೂರ್ವಾದಿತಃ
ಯೋಗಾವುತ್ತರತಾರತುಲ್ಯವಿತತೌ ವಿಸ್ತಾರತುಲ್ಯಾಂಘ್ರಿವ -
ಹ್ಯರ್ಧಾಂಶೋನ ಘನೌ ಭುವಂಗಮಪತಂಗಾಢ್ಯೌ ಲಸದ್ವಾಜನೌ ॥೧॥

ತಾತ್ಪರ್ಯ :

ಅಂಗಳ ಮತ್ತು ಮನೆಯ ಮಧ್ಯದಲ್ಲಿರುವ ಸೂತ್ರಗಳ ಮಧ್ಯವನ್ನು ಕೇಂದ್ರವಾಗಿ ಇಟ್ಟುಕೊಂಡು ಅಂಗುಲಗಳ ಗಣನೆಯಿಂದ ಆದಾಯ, ವಯಸ್ಸು ಮತ್ತು ಯೋನಿಯನ್ನು ಒಳಗೊಂಡ ಬಾಗಿಲುಗಳನ್ನು ಪೂರ್ವದಿಕ್ಕು ಮೊದಲ್ಗೊಂಡು ನಾಲ್ಕು ಕಡೆಯೂ ಇಡಬೇಕು. ಅಲ್ಲದೆ ಆ ಬಾಗಿಲುಗಳ ದ್ವಾರಬಂಧದ ಅಗಲ ಮತ್ತು ದಪ್ಪವು ಉತ್ತರದ ಅಗಲ ಮತ್ತು ದಪ್ಪದಷ್ಟು ಇರಬೇಕು. ಅಥವಾ ಉತ್ತರದ ಅಗಲದ $\frac{3}{4}$, $\frac{2}{3}$ ಇಲ್ಲವೇ $\frac{1}{2}$ಕ್ಕೆ ಸಮವಾದ ಅಗಲ ಮತ್ತು ದಪ್ಪವಿದ್ದು ಅಲಂಕಾರಯುಕ್ತವಾದ ಮೇಲಿನ ಮತ್ತು ಕೆಳಗಿನ ವಾಜನಗಳನ್ನು (ಹೊಸ್ತಿಲು) ಹೊಂದಿರಬೇಕು.

ವಿ.ವಿ. :

ಬಾಗಿಲುಗಳನ್ನು ಇಡುವಾಗ ಅಂಗಳ ಮತ್ತು ಮನೆಯ ಸೂತ್ರವೇಧವಾಗದಂತೆ ಜಾಗ್ರತೆ ವಹಿಸಬೇಕು. ಅದಕ್ಕಾಗಿ ಗಮನವಿಟ್ಟು ದ್ವಾರವನ್ನು ನಿರ್ಧರಿಸಬಹುದು. ಬಾಗಿಲಿನ ಚೌಕಟ್ಟನ್ನು ಅಂಗುಲಮಾನದಿಂದ ಪರಿಧಿಯ ಲೆಕ್ಕಾಚಾರ ಹಾಕಿ ಆಯಾ ದಿಕ್ಕಿನ ಯೋನ್ಯಾದಿಗಳಿಗೆ ಅನುಗುಣವಾಗಿ ರಚಿಸಿ ಪೂರ್ವಾದಿದಿಕ್ಕುಗಳಲ್ಲಿ ಇಡಬೇಕು. ದ್ವಾರದ ಆ ಕಡೆ ಈ ಕಡೆಯ ಚೌಕಟ್ಟಿನ ಭಾಗಗಳು (ಹೊಡೆ ಮರಗಳು) ಮನೆಯ ಉತ್ತರದ ಅಗಲ ಮತ್ತು ದಪ್ಪಗಳನ್ನು ಹೊಂದಿರಬೇಕು. ಇಲ್ಲದೇ ಹೋದರೆ ಉತ್ತರದ $\frac{3}{4}$, $\frac{2}{3}$ ಅಥವಾ $\frac{1}{2}$ಕ್ಕೆ ಸಮವಾಗಿರಬೇಕು. ಅಂತಹ ದ್ವಾರಬಂಧಗಳು ಮೇಲೆ ಕೆಳಗೆ ಅಂದವಾಗಿ ಚಿತ್ರಿತವಾದ ವಾಜನಗಳನ್ನು ಒಳಗೊಂಡಿರಬೇಕು. ಅಂದರೆ ಹೊಸ್ತಿಲು ಮತ್ತು ದಾರಂದಗಳಿಂದ ಶೋಭಿಸಬೇಕು.

೨. ದ್ವಾರದ ಚೌಕಟ್ಟಿನ ರಚನೆ

ಶ್ಲೋಕ : ಯೋಗಾದಂಘ್ರ್ಯಗ್ನಿಭಾಗಾಧಿಕ ಘನಯುತ ನಿರ್ವಾಜನಾಧಃ ಪಟೀಸ್ಯಾ-
ದೂರ್ಧ್ವಸ್ಥಾ ಯೋಗತುಲ್ಯೋತ್ತರ ಮಿಲಿತನಿಜಾಗ್ರೌ ಚ ಯೋಗೌ ವಿಧೇಯೌ
ಯೋಗಾಂತರ್ಭಾಗನಾಹೋ ನಿಜದಿಗುಚಿತಯೋನ್ಯಾಯವೃದ್ಧ್ಯಾದಿಯುಕ್ತ -
ಸ್ವೇಷ್ಟಾಯಾಮೋನ ನಾಹಾರ್ಧತ ಇಹ ವಿತತಿಃ ಸ್ಯಾದ್ ಗುಣವ್ಯಾಸತೋ ವಾ ॥೨॥

ತಾತ್ಪರ್ಯ :

ದ್ವಾರದ ಕೆಳಗಿನ ಹೊಸ್ತಿಲಿನ ದಪ್ಪವು ದ್ವಾರಬಂಧದ (ದ್ವಾರದ ಎಡಬಲಗಳ ಹೊಡೆಮರಗಳು) ದಪ್ಪದ $\frac{1}{4}$ ಅಥವಾ $\frac{1}{3}$ ಪಾಲಿನಷ್ಟು ಅಧಿಕವಾಗಿರಬೇಕು. ಅದಕ್ಕೆ ವಾಜನವಿರಬಾರದು. ದ್ವಾರಬಂಧದ ಮೇಲಿನ ಭಾಗದ ದಾರಂದವು ದ್ವಾರಬಂಧದ ಅಗಲ ಮತ್ತು ದಪ್ಪದಷ್ಟಿರಬೇಕು. ಅಲ್ಲದೆ ದ್ವಾರಬಂಧದ ತುದಿ ಉತ್ತರಕ್ಕೆ ತಾಗಿ ನಿಲ್ಲಬೇಕು. ಅಂತಹ ದ್ವಾರದ ಚೌಕಟ್ಟಿನ ಒಳಗಿನ ಸುತ್ತಳತೆಯು ಆಯಾ ದ್ವಾರದ ದಿಕ್ಕಿಗೆ ಉಚಿತವಾದ ಅಂದರೆ ನಿಗದಿತವಾದ ಯೋನಿ, ಆಯ ವೃದ್ಧಿ ಮೊದಲಾದವುಗಳಿಗೆ ಅನುಗುಣವಾಗಿರಬೇಕು. ಒಳಗಿನ ಸುತ್ತಳತೆಯ ಅರ್ಧದಿಂದ ನಮಗೆ ಇಷ್ಟವಿರುವ ದೀರ್ಘದಿಂದಾಗಲೀ, ಗುಣಾಂಶದಿಂದಾಗಲೀ ದ್ವಾರದ ಅಗಲವನ್ನು ನಿಶ್ಚಯಿಸಬೇಕು.

ವಿ.ವಿ. :

ಹಿಂದಿನ ಶ್ಲೋಕದಲ್ಲಿ ದ್ವಾರಬಂಧದ ಅಗಲ ಮತ್ತು ದಪ್ಪವನ್ನು ತಿಳಿಸಲಾಗಿದೆ. ಇಲ್ಲಿ ದ್ವಾರಬಂಧಗಳ ಕೆಳಗೆ ಮತ್ತು ಮೇಲೆ ಇರತಕ್ಕ ಹೊಸ್ತಿಲು ಮತ್ತು ದಾರಂದಗಳ ಅಗಲ ಮತ್ತು ದಪ್ಪಗಳನ್ನು ತಿಳಿಸಲಾಗಿದೆ. ಹೊಸ್ತಿಲಿನ ದಪ್ಪವು ದ್ವಾರಬಂಧದ ದಪ್ಪಕ್ಕಿಂತ $\frac{1}{4}$ ಅಥವಾ $\frac{1}{3}$ ಪಾಲು ಹೆಚ್ಚಾಗಿರಬೇಕು. ಮತ್ತು ಅದಕ್ಕೆ ವಾಜನವಿರಬಾರದು. ಮೇಲಿನ ದಾರಂದದ ಭಾಗವು ದ್ವಾರಬಂಧದ ಅಗಲ ಮತ್ತು ದಪ್ಪದಷ್ಟಿರಬೇಕೆಂದು ನಿಗದಿಪಡಿಸಲಾಗಿದೆ. ಈ ರೀತಿ ನಿಗದಿಪಡಿಸಿದುದರಿಂದ ದ್ವಾರದ ಚೌಕಟ್ಟಿನ ಭದ್ರತೆಗೆ ಪ್ರಾಧಾನ್ಯ ಕೊಟ್ಟಂತೆ ಆಗುತ್ತದೆ. ಇಂತಹ ದ್ವಾರಬಂಧದ ಚೌಕಟ್ಟಿಗೂ ಆಯಾ ದಿಕ್ಕಿನ ಯೋನಿಯಿರಬೇಕೆಂಬುದನ್ನು ಮರೆಯಲಾಗದು. ದ್ವಾರಬಂಧದಲ್ಲಿ ಹೊಸ್ತಿಲಿನ ಭಾಗ ಕೆಳಗೆ ನೆಲದಲ್ಲಿ ಕುಳಿತುಕೊಳ್ಳುತ್ತದೆ. ಆದುದರಿಂದ ಆ ಭಾಗ ಇತರ ಭಾಗಗಳಿಗಿಂತ ಬೇಗ ಹಾಳಾಗಿ ಹೋಗುತ್ತದೆ. ಅದನ್ನು ಗಮನಿಸಿ ಶಾಸ್ತ್ರಕಾರರು ಮೇಲಿನ ದಾರಂದದ ದಪ್ಪಕ್ಕಿಂತ ಹೊಸ್ತಿಲಿನ ದಪ್ಪವು ಉಚಿತ ಪ್ರಮಾಣಕ್ಕನುಗುಣವಾಗಿ ಅಧಿಕವಾಗಿರಬೇಕೆಂದು ವಿಧಿಸಿರುತ್ತಾರೆ.

ಶ್ಲೋಕ : ದ್ವಾರೋರ್ಧ್ವಪಟ್ಟ್ಯೋರ್ಧ್ವಮಥೋ ಗಣೇಶ ಪದ್ಮಾಲಯಾಯಾದವಮೂರ್ತಿಭೇದಾನ್
ಯಥೇಷ್ಟಮಾಪಾದ್ಯ ವಿಚಿತ್ರಪತ್ರಿಪ್ರಭೇದಯುಕ್ತಾಂ ಫಲಕಾಂ ವಿದಧ್ಯಾತ್ ॥೩॥

ತಾತ್ಪರ್ಯ :

ದ್ವಾರದ ಮೇಲು ಚೌಕಟ್ಟಿನ ಮೇಲೆ ಉತ್ತರದ ಕೆಳಗಿನ ಭಾಗದಲ್ಲಿರುವ ಹಲಗೆಯಲ್ಲಿ,

ಗಣಪತಿ, ಲಕ್ಷ್ಮಿ, ಕೃಷ್ಣ ಮೊದಲಾದ ದೇವ ದೇವತೆಗಳ ವಿಗ್ರಹಗಳನ್ನು ಯಥೇಷ್ಟವಾಗಿ ಕೆತ್ತಿಸಬೇಕು. ಅಲ್ಲದೆ, ಆ ಫಲಕದಲ್ಲಿ ವಿವಿಧ ಜಾತಿಯ ಪಕ್ಷಿಗಳ ಕೆತ್ತನೆಯನ್ನು ಮಾಡಬೇಕು.

ವಿ.ವಿ. :

ದ್ವಾರದ ಚೌಕಟ್ಟಿನ ಮೇಲ್ಭಾಗ ಮತ್ತು ಉತ್ತರದ ಕೆಳಭಾಗದ ಆ ಪ್ರದೇಶವು ಖಾಲಿಯಾಗಿರುತ್ತದೆ. ದ್ವಾರಬಂಧವು ಉತ್ತರಕ್ಕೆ ಸಂಧಿಸುತ್ತಿದ್ದರೂ ಬಾಗಿಲು ಉತ್ತರವನ್ನು ಸಂಧಿಸುವುದಿಲ್ಲ. ಅಥವಾ ಉತ್ತರಕ್ಕೆ ತಗಲುವಂತೆ ಅಷ್ಟು ಎತ್ತರಕ್ಕೆ ಹೋಗಿರುವುದಿಲ್ಲ. ಈ ಭಾಗವು ಬಾಗಿಲಿನ ಮೇಲು ಚೌಕಟ್ಟಿನ ಮೇಲ್ಭಾಗವಾಗಿದೆ. ಮತ್ತು ಉತ್ತರದ ಕೆಳಗಿನ ಭಾಗವಾಗಿದೆ. ಅಲ್ಲದೆ ಬಾಗಿಲಿನ ಹೊಡೆಮರಗಳ ಮಧ್ಯಭಾಗವಾಗಿದೆ. ಇಲ್ಲಿ ಖಾಲಿಯಾಗಿರುವ ಅವಕಾಶವನ್ನು ಫಲಕವನ್ನು ಜೋಡಿಸುವುದರ ಮೂಲಕ ತುಂಬಲಾಗುತ್ತದೆ. ಆ ಫಲಕ ಗಣೇಶಾದಿ ದೇವಮೂರ್ತಿಗಳಿಂದ ಹಾಗೂ ಹಕ್ಕಿಗಳ ಕೆತ್ತನೆಗಳಿಂದ ಅಲಂಕೃತಗೊಳ್ಳಬೇಕು. ಆ ಫಲಕದ ಒಳಗಿನ ಭಾಗವನ್ನು ಸಾಮಾನ್ಯವಾಗಿ ದಾರಂದ ಎನ್ನುತ್ತಾರೆ. ಅದು ಒಳಗಡೆಯಿಂದ ಗೂಡಿನ ಹಾಗಿದ್ದು ಚಿಕ್ಕಪುಟ್ಟ ವಸ್ತುಗಳನ್ನು ಇಟ್ಟುಕೊಳ್ಳಲು ಅನುಕೂಲವಾಗುತ್ತದೆ.

೩. ಬಾಗಿಲಿನ ಚೌಕಟ್ಟನ್ನು ಇಡುವ ಕ್ರಮ

ಶ್ಲೋಕ : ಕುಡ್ಯೇ ಭೂಯಿಷ್ಠವಿಸ್ತಾರಿಣಿ ದಿವಸ ಕರೈರ್ಭಾಜಿತೇಽಂತರ್ಬಹಿಶ್ಚಾ
ಪ್ಯದ್ರೀಷ್ವಂಶಾನ್ ವಿಧಾಯಾಂತರವಿಹಿತಸಿರಾಮಧ್ಯಲಗ್ನೌ ಚ ಯೋಗೌ
ಕೃತ್ವಾಕ್ವಾಪ್ಯೇತಯೋರ್ಮೂರ್ಧನಿ ಸುದೃಢತರಾಮೂರ್ಧ್ವಪಟ್ಟೀಂ ತದೂರ್ಧ್ವಂ
ಭಿತ್ಯಂಗಾದೀನಿ ಕುರ್ಯಾತ್ ದೃಢತರಶಿಲಯಾ ಮೃತ್ಸುಧಾಯೋಗಭೇದ್ಯೈಃ ||೪||

ತಾತ್ಪರ್ಯ :

ಗೋಡೆಯು ಬಹಳ ದಪ್ಪವಿದ್ದಲ್ಲಿ ಆ ಗೋಡೆಯ ದಪ್ಪವನ್ನು 12 ಪಾಲು ಮಾಡಿ, 7 ಪಾಲು ಒಳಗೆ ಮತ್ತು 5 ಪಾಲು ಹೊರಗೆ ಇರುವಂತೆ ಲೆಕ್ಕಾಚಾರ ಮಾಡಿ ಒಳಗೆ ಇರುವ ರೇಖೆಯ ಮಧ್ಯದಲ್ಲಿ ದ್ವಾರಬಂಧಗಳು ನಿಲ್ಲುವಂತೆ ಅವುಗಳನ್ನು ಇಡಬೇಕು. ಕೆಲವೊಮ್ಮೆ ಈ ಹೊಡೆ ಮರಗಳಲ್ಲಿ ಸಿಕ್ಕಿಸಿದ ಬಾಗಿಲಿನ ಚೌಕಟ್ಟಿನ ಮೇಲ್ಭಾಗದಲ್ಲಿ ಗಟ್ಟಿಮರದ ಊರ್ಧ್ವಪಟ್ಟಿಯನ್ನು ಮಾಡಿ ಇಡಬೇಕು. ಅದರ ಮೇಲೆ ದ್ವಾರಬಂಧಗಳ ಮಧ್ಯದಲ್ಲಿ ಸ್ಥಳಾವಕಾಶವಿದ್ದರೆ ಆ ಖಾಲಿ ಸ್ಥಳದಲ್ಲಿ ದೃಢತರವಾದ ಶಿಲೆ, ಮಣ್ಣು, ಸುಣ್ಣ ಮೊದಲಾದವುಗಳಿಂದ ಗೋಡೆಯನ್ನು ರಚಿಸಬೇಕು.

ವಿ.ವಿ. :

ಇಲ್ಲಿ ತಾಂತ್ರಿಕತೆಗೆ ಒತ್ತುಕೊಟ್ಟ ಅಂಶವನ್ನು ನಾವು ಗಮನಿಸಬೇಕು. ಗೋಡೆಯ ದಪ್ಪವನ್ನು ಹನ್ನೆರಡು ಪಾಲು ಮಾಡಿ ಏಳು ಪಾಲು ಒಳಗೆ ಮತ್ತು ಐದು ಪಾಲು ಹೊರಗೆ ಇರುವಂತೆ ಲೆಕ್ಕಾಚಾರ ಹಾಕಿ ಒಳಗೆ ಇರುವ ರೇಖೆಯ ಮಧ್ಯದಲ್ಲಿ ದ್ವಾರಬಂಧ ನಿಲ್ಲುವಂತೆ ಮಾಡಬೇಕು

ಎಂದು ವಾಸ್ತುಶಾಸ್ತ್ರಜ್ಞರು ನಿರ್ದೇಶಿಸುತ್ತಾರೆ. ಗೋಡೆಯ ದಪ್ಪದಲ್ಲಿ ಹೊರಗಿನದಕ್ಕಿಂತ ಒಳಗಿನ ಭಾಗ ಅಧಿಕವಾಗಿರುವುದರಿಂದ ಚೌಕಟ್ಟಿಗೆ ಹೆಚ್ಚಿನ ಭದ್ರತೆ ಸಿಕ್ಕಿದಂತಾಗುತ್ತದೆ. ಕಳ್ಳತನ ಮೊದಲಾದ ಸಂದರ್ಭಗಳಲ್ಲಿ ಬಾಗಿಲನ್ನು ಮೆಟ್ಟಿ ದೂಡುವುದು ಹೊರಗಿನಿಂದ. ಆಗ ಒಳಗಿನ ದಪ್ಪ ಹೆಚ್ಚಿರುವ ಕಾರಣ ಬಾಗಿಲನ್ನು ಸುಲಭದಲ್ಲಿ ಬೀಳಿಸಲು ಸಾಧ್ಯವಾಗುವುದಿಲ್ಲ.

ಶ್ಲೋಕ : ಅಂತರ್ನಾಹಜಮಂದಿರೇ ಘನತರೇ ಕಾರ್ಯೇ ಚ ಕುಡ್ಯೇ ಕ್ವಚಿತ್
ಗೇಹೇ ಪ್ರಾಂಗಣಪಾದುಕಾವಧಿ ಕರೋತು ಸ್ವಾಂಗಕುಡ್ಯಂ ಘನಮ್
ತತ್ತತ್ ಪ್ರಾಂಗಣಗೇಹಸೂತ್ರಮನುಸೃತ್ಯೈವೇಷ್ಟ ಕುಡ್ಯಪ್ರಥಾ -
ನೋಚೇತ್ ಪೃಷ್ಠತ ಏವ ನೇಯಮುದಿತಂ ದ್ವಾರೋತ್ತರಾದ್ಯಂ ತಥಾ ॥೫॥

ತಾತ್ಪರ್ಯ :

ಒಳಗಿನ ಸುತ್ತಳತೆಗೆ ಅನುಗುಣವಾಗಿ ಬಹಳ ಘನತರವಾದ ಗೋಡೆಗಳನ್ನು ನಿರ್ಮಿಸುವಾಗ ಕೆಲವು ಕಡೆಗಳಲ್ಲಿ ಮನೆಯ ಪ್ರಾಂಗಣದ ಪಾದುಕದ ವರೆಗಿನ ದಪ್ಪವನ್ನು ತೆಗೆದುಕೊಳ್ಳಬೇಕು. ಬಾಗಿಲುಗಳು, ಉತ್ತರಗಳು, ಅಂಗಣ ಮತ್ತು ಮನೆಯ ಸೂತ್ರವನ್ನು ಅನುಸರಿಸಿ ತಮಗೆ ಬೇಕಾದ ಗೋಡೆಯ ಅಗಲವನ್ನು ನಿಶ್ಚಯಿಸಬೇಕು.

ವಿ.ವಿ. :

ಒಳಗಿನ ಸುತ್ತಳತೆಯನ್ನು ತೆಗೆದುಕೊಂಡು ಅದಕ್ಕೆ ಅನುಗುಣವಾಗಿ ಗೋಡೆಯನ್ನು ನಿರ್ಮಿಸುವ ಕಾರಣ ಅಂತಹ ಮನೆಗೆ ಅಂತರ್ನಾಹಮಂದಿರ ಎಂದು ಹೆಸರು.

೪. ಬಾಗಿಲಿನ ಪಡಿಗಳ ನಿಯಮ

ಶ್ಲೋಕ : ಕವಾಟಯುಗ್ಮಂ ನಿಜತೀವ್ರಯುಕ್ತದ್ವಾರಪ್ರಥಾರ್ಧಪ್ರತತಂ ವಿಧೇಯಮ್
ಮಾತ್ರಾಂಗುಲೈರ್ನೇತ್ರಹುತಾಶಸಂಖ್ಯೈಃ ಸಾರ್ಧೈಶ್ಚ ಯದ್ವಾಬ್ಧಿಮಿತೈರ್ಘನಂ ಚ ॥೬॥

ತಾತ್ಪರ್ಯ :

ದ್ವಾರದ ಅಗಲವನ್ನು ಮುಚ್ಚುವಂತೆ ದ್ವಾರದ ಸಮ ಅರ್ಧಾಂಶವನ್ನು ಹೊಂದಿದ ಎರಡು ಪಡಿಗಳನ್ನು (ಹಲಗೆ) ಉಪಯೋಗಿಸಬೇಕು. ಅಲ್ಲದೆ, $2\frac{1}{2}$, $3\frac{1}{2}$ ಅಥವಾ 4 ಮಾತ್ರಾಂಗುಲ ಪ್ರಮಾಣಗಳ ಪೈಕಿ ಇಷ್ಟಬಂದುದನ್ನು ಆ ಹಲಗೆಗಳ ದಪ್ಪವನ್ನಾಗಿ ಸ್ವೀಕರಿಸಬೇಕು.

ವಿ.ವಿ. :

ಈ ಶ್ಲೋಕದ ಮುಖ್ಯ ವಿಷಯವೆಂದರೆ ಬಾಗಿಲಿನ ಪಡಿಗಳ (ಕವಾಟ) ಸಂಖ್ಯೆ ಮತ್ತು ಆ ಪಡಿಗಳ ದಪ್ಪದ ವಿಷಯವನ್ನು ತಿಳಿಸುವುದಾಗಿದೆ. ಬಾಗಿಲಿಗೆ ಎರಡು ಪಡಿಗಳು ಅಂದರೆ ಕವಾಟಗಳಿರಬೇಕು. ಆ ಪಡಿಗಳ ದಪ್ಪವು $2\frac{1}{2}$, $3\frac{1}{2}$ ಅಥವಾ 4 ಮಾತ್ರಾಂಗುಲದಷ್ಟು ಇರಬೇಕು. ಪ್ರತಿಯೊಂದು ಪಡಿಯ ಅಗಲವು ದ್ವಾರದ ಅಗಲದ ಸಮ ಅರ್ಧಾಂಶವಾಗಿದೆ.

೫. ಪಡಿಗಳ (ಕವಾಟ) ಅಲಂಕಾರಗಳು

ಶ್ಲೋಕ : ಊರ್ಧ್ವಾಧರಭ್ರಮಣಕಾರ್ಗಲಸಂಧಿಪಾಲ -
ಪ್ರಕ್ಷೇಪಣೀಯವಲಯಾನ್ಯಪಿ ಪತ್ರಕಾಣಿ
ತಿರ್ಯಂಚ್ಯುದಂಚಿ ಪುಲಕಾರ್ತವಕುಡ್ಮಲಾನಿ
ಸಶ್ರೀಮುಖೇಂದುಶಕಲಾನಿ ಕವಾಟಯೋಃ ಸ್ಯುಃ ॥೭॥

ತಾತ್ಪರ್ಯ :

ಬಾಗಿಲಿನ ಎರಡೂ ಪಡಿಗಳಲ್ಲಿ ಮೇಲೆ ಕೆಳಗೆ ಹೋಗುವ ಚಿಲಕಗಳು, ಸೂತ್ರಪಟ್ಟಿ, ಪಡಿಗಳನ್ನು ಮುಚ್ಚಲು ಬೇಕಾದ ಬಳೆಗಳು, ಉದ್ದಕ್ಕೂ ಅಡ್ಡಕ್ಕೂ ಕೆತ್ತಿದ ಅಲಂಕಾರದ ಪತ್ರಗಳು (ಎಲೆಗಳು), ಮೊಗ್ಗುಗಳು, ಶ್ರೀಮುಖ, ಚಂದ್ರರೇಖೆ ಇತ್ಯಾದಿಗಳೆಲ್ಲ ಇರಬೇಕು.

೬. ಸೂತ್ರಪಟ್ಟಿಯ ನಿಯಮ

ಶ್ಲೋಕ : ದ್ವಾರವ್ಯಾಸಾಬ್ಧಿಬಾಣೋರ್ಮ್ಯವನಿಧರಭುಜಂಗಾಂಶಿತೈಕಾಂಶ ತೀವ್ರ
ವ್ಯಾಸಾ ವ್ಯಾಸಾರ್ಧಪಾದೋನಿತಬಹಲಮಿತಾ ದ್ವಾರತುಲ್ಯಾಯತಿಶ್ಚ
ಕರ್ತವ್ಯಾ ಸೂತ್ರಪಟ್ಟೀ ಜ್ವಲನಶರಮಹೀಧ್ರಾದಿಕೌಜಸ್ತನಾಢ್ಯಾ
ಮುಕ್ತಾದಾಮಾದಿಪದ್ಮಸ್ಥಿತ ಮಹಿತರಮಾಕೃಷ್ಣ ವಿಘ್ನೇಶಯುಕ್ತಾ ॥೮॥

ತಾತ್ಪರ್ಯ :

ಸೂತ್ರಪಟ್ಟಿಯು ದ್ವಾರದ ಅಗಲದ $\frac{1}{4}$, $\frac{1}{5}$, $\frac{1}{6}$, $\frac{1}{7}$ ಅಥವಾ $\frac{1}{8}$ ಅಂಶದಷ್ಟು ಅಗಲವುಳ್ಳದ್ದಾಗಿರಬೇಕು. ಸೂತ್ರಪಟ್ಟಿಯ ಅಗಲದ ಅರ್ಧದ $\frac{3}{4}$ ಅಂಶದಷ್ಟು ಅದರ ದಪ್ಪವಿರಬೇಕು. ಅದರ ಉದ್ದವು ದ್ವಾರದ ಉದ್ದದಷ್ಟೇ ಇರಬೇಕು. 3, 5, 7 ಈ ರೀತಿಯ ವಿಷಮ ಸಂಖ್ಯೆಯಲ್ಲಿ ಸ್ತನದಂತಿರುವ ಉಬ್ಬುಗಳಿಂದ ಕೂಡಿದ, ಮುತ್ತಿನ ಹಾರದಿಂದ ರಂಜಿಸುವ, ಅರಳಿದ ತಾವರೆಯಲ್ಲಿ ಆಸೀನಳಾದ ಲಕ್ಷ್ಮೀದೇವಿಯ, ಶ್ರೀಕೃಷ್ಣನ, ಶ್ರೀ ಗಣೇಶನ ಚಿತ್ರಗಳ ಕೆತ್ತನೆಗಳಿರಬೇಕು.

ವಿ.ವಿ. :

ಸೂತ್ರ ಪಟ್ಟಿಯ ರಚನೆಯನ್ನು ಸೂಕ್ಷ್ಮವಾಗಿ ಈ ರೀತಿ ನಿರೂಪಿಸಬಹುದು.

1. ಅಗಲ - ದ್ವಾರದ ಅಗಲದ $\frac{1}{4}$, $\frac{1}{5}$, $\frac{1}{6}$, $\frac{1}{7}$ ಅಥವಾ $\frac{1}{8}$ ಅಂಶದಷ್ಟು
2. ದಪ್ಪ - ಸೂತ್ರ ಪಟ್ಟಿಯ ಅಗಲದ ಅರ್ಧದ 3/4 ಅಂಶದಷ್ಟು
3. ಉದ್ದ - ದ್ವಾರವ ಉದ್ದದಷ್ಟು

೭. ಅರಮಾದ ನಿಯಮ


ಶ್ಲೋಕ : ಮಾತಾ ವಾಮಗತಾ ಕವಾಟಫಲಕಾ ಸಾ ಸೂತ್ರಪಟ್ಯಾಶ್ರಯಾ
ಪುತ್ರೀ ದಕ್ಷಿಣಗಾಮಿನೀತಿ ಸಕಲದ್ವಾರೇಷು ಸಂಪ್ರೇಕ್ಷ್ಯತಾಮ್
ದ್ವಾರೋಚ್ಚಾನಲವೇದಬಾಣರಸಭಾಗೋಚ್ಚಾಂ ತದುಚ್ಚಾಬ್ಧಿಬಾ -
ಣೋರ್ಮ್ಯದ್ರ್ಯಂಶಘನಪ್ರತಾನಸಹಿತಾಮಾಕಲ್ಪಯೇತಾರಮಾಮ್ ॥೯॥

ತಾತ್ಪರ್ಯ :

ನಮ್ಮ ಎಡಬದಿಯ ಬಾಗಿಲ ಪಡಿಯು ತಾಯಿಯಾಗಿದೆ. ಅದು ಸೂತ್ರಪಟ್ಟಿಯನ್ನು ಹೊಂದಿಕೊಂಡಿರುತ್ತದೆ. ದಕ್ಷಿಣ ಭಾಗದ (ಬಲಭಾಗದ) ಪಡಿಯು ಮಗಳಾಗಿದೆ. ಈ ಕ್ರಮವನ್ನು ಎಲ್ಲ ಬಾಗಿಲುಗಳಲ್ಲಿ ಪರಿಪಾಲಿಸಬೇಕು. ದ್ವಾರದ ಉದ್ದದ $\frac{1}{3}$, $\frac{1}{4}$, $\frac{1}{5}$ ಅಥವಾ $\frac{1}{6}$ ಅಂಶದಷ್ಟು ಉದ್ದದ ಅರಮಾವನ್ನು ರಚಿಸಬೇಕು. ಪ್ರತಾನಸಹಿತವಾದ ಆ ಅರಮಾದ ಅಗಲ ಮತ್ತು ದಪ್ಪವು ಅದರ ಉದ್ದದ $\frac{1}{4}$, $\frac{1}{5}$, $\frac{1}{6}$ ಅಥವಾ $\frac{1}{7}$ ಅಂಶದಷ್ಟು ಇರಬೇಕು.

ವಿ.ವಿ. :

ನಮ್ಮ ಎಡಬದಿ ಎಂದರೆ ನಾವು ಒಳಗಿನಿಂದ ಹೊರಬರುವಾಗ ಸಿಗುವ ಎಡಬದಿ ಎಂದರ್ಥ. ಅರಮಾದ ವಿಶೇಷ ವಿವರಣೆಯನ್ನು ಶ್ಲೋಕ ೧೧ರ ಕೆಳಗೆ ಕೊಡಲಾಗಿದೆ.



ಹಳೆಯ ಬಾಗಿಲಿನ ಒಂದು ಮಾದರಿ
ಚಿ. ೯೭, ಅ. ೭, ಶ್ಲೋ. ೯

೮. ಅರ್ಗಲದ ನಿಯಮ (ಅರಮಾದ ಕೀಲು)

ಶ್ಲೋಕ : ದ್ವಾರವ್ಯಾಸಪಯೋಧಿಬಾಣರಸಸಪ್ತಾಷ್ಟಾಂಶಕಾತ್ತಾಯತಮ್
ಕುರ್ಯಾದರ್ಗಲಮಾಯತೋರ್ಮಿಗಿರಿಮಾತಂಗಾಂಶತಾರಾನ್ವಿತಮ್
ವಿಸ್ತಾರಾರ್ಧಘನಂ ಘನೋನ್ಮಿತಲಸತ್ಖಂಡದ್ವಯಂ ಚಾರಮಾ -
ಮೂಲಾಗ್ರಾಂತಿಕಸಂಪ್ರಕ್ಲಪ್ತಕಬಲೀ ಸಂಪ್ರಾಪ್ತಖಂಡಾಂತರಮ್ ॥೧೦॥

ತಾತ್ಪರ್ಯ :

ಅರ್ಗಲದ ಉದ್ದವು ದ್ವಾರದ ಅಗಲದ $\frac{1}{4}$, $\frac{1}{5}$, $\frac{1}{6}$, $\frac{1}{7}$ ಅಥವಾ $\frac{1}{8}$ ಭಾಗದಷ್ಟು ಇರಬೇಕು. ಅದರ ಅಗಲವು ಅದರ ಉದ್ದದ $\frac{1}{6}$, $\frac{1}{7}$ ಅಥವಾ $\frac{1}{8}$ರಷ್ಟು ಇರಬೇಕು. ಮತ್ತು ದಪ್ಪವು ಅಗಲದ $\frac{1}{2}$ದಷ್ಟು ಇರಬೇಕು. ಅಲ್ಲದೆ, ದಪ್ಪಕ್ಕೆ ಅನುಗುಣವಾಗಿ ಚತುರಶ್ರವಾದ ಎರಡು ಪಟ್ಟಿಗಳನ್ನು ರಚಿಸಬೇಕು. ಆ ಅರ್ಗಲಗಳನ್ನು ಅರಮಾಗಳ ಮೇಲುಭಾಗ ಮತ್ತು ಕೆಳಗಿನ ಭಾಗಗಳಲ್ಲಿರುವ ಚಡಿಯ ತೂತುಗಳಿಗೆ ಸೇರಿಸಬೇಕು.

ವಿ.ವಿ. :

೧. ಅರಮಾ : ಉದ್ದ - ದ್ವಾರದ ಉದ್ದದ $\frac{1}{3}$, $\frac{1}{4}$, $\frac{1}{5}$ ಅಥವಾ $\frac{1}{6}$ ಅಂಶ.
ಅಗಲ - ಅರಮಾದ ಉದ್ದದ $\frac{1}{4}$, $\frac{1}{5}$, $\frac{1}{6}$ ಅಥವಾ $\frac{1}{7}$ ಅಂಶ.
ದಪ್ಪ - ಅರಮಾದ ಉದ್ದದ $\frac{1}{4}$, $\frac{1}{5}$, $\frac{1}{6}$ ಅಥವಾ $\frac{1}{7}$ ಅಂಶ.

೨. ಅರ್ಗಲ : ಉದ್ದ - ದ್ವಾರದ ಅಗಲದ $\frac{1}{4}$, $\frac{1}{5}$, $\frac{1}{6}$, $\frac{1}{7}$ ಅಥವಾ $\frac{1}{8}$ ಅಂಶ.
ಅಗಲ - ಅರ್ಗಲದ ಉದ್ದದ $\frac{1}{6}$, $\frac{1}{7}$ ಅಥವಾ $\frac{1}{8}$. ಭಾಗ.
ದಪ್ಪ - ಅಗಲದ $\frac{1}{2}$ ಭಾಗ.

ಇಡೀ ಬಾಗಿಲಿನ ಲೆಕ್ಕಾಚಾರದ ಒಂದು ಮಾದರಿ

೧. (1) ಪಶ್ಚಿಮ ದಿಕ್ಕಿನ ಪೂರ್ವಮುಖದ ಮನೆ - ಯೋನಿ - ವೃಷಭ
(2) ಬಾಗಿಲಿನ (ದ್ವಾರ) ಯೋನಿ - ವೃಷಭ : 7 ಕೋ. 0 ಅಂ.
(3) ಬಾಗಿಲಿನ ಅಗಲ - 1 ಕೋ. 2 ಅಂ.
(4) ಬಾಗಿಲಿನ ಎತ್ತರ - 2 ಕೋ. 10 ಅಂ.

೨. ಬಾಗಿಲಿನ ಚೌಕಟ್ಟಿನ ಅಳತೆ
(1) ಬಾಗಿಲಿನ ಹೊಡೆಮರದ ಅಗಲವು ಮನೆಯ ಉತ್ತರದ ಅಗಲದಷ್ಟು = 0 ಕೋ. 7 ಅಂ.
(2) ಹೊಡೆಮರದ ದಪ್ಪ = ಅಗಲದ $\frac{2}{3}$ ರಷ್ಟು = 0 ಕೋ. 7 ಅಂ. x $\frac{2}{3}$

= <u>0 ಕೋ. 4 ಅಂ. 5.3 ಯವ</u>

(3) ಹೊಸ್ತಿಲಿನ ದಪ್ಪ - ಹೊಡೆಮರದ ದಪ್ಪಕ್ಕಿಂತ $\frac{1}{4}$ ಅಂಶ ಹೆಚ್ಚು.

= 4 ಅಂ. 5.3 ಯವ x $\frac{5}{4}$

= <u>5 ಅಂ. 6.7 ಯವ</u>

(4) ದಾರಂದದ ದಪ್ಪ - ಹೊಡೆಮರದ ದಪ್ಪದಷ್ಟು ಇರುವುದು.

= <u>4 ಅಂ. 5.3 ಯವ</u>

೩. ಸೂತ್ರಪಟ್ಟಿಯ ಅಳತೆ

(1) ಸೂತ್ರಪಟ್ಟಿಯ ಅಗಲ - ಬಾಗಿಲಿನ ಅಗಲದ $\frac{1}{6}$ ಆದಾಗ

= 1 ಕೋ. 2 ಅಂ. x $\frac{1}{6}$

= <u>4 ಅಂ. 2.7 ಯವ</u>

(2) ಸೂತ್ರ ಪಟ್ಟಿಯ ದಪ್ಪ - ಅಗಲದ ಅರ್ಧದ ಮುಕ್ಕಾಲು ಪಾಲು

4 ಅಂ. 2.7 ಯವ x $\frac{1}{2}$ x $\frac{3}{4}$

= <u>1 ಅಂ. 5 ಯವ</u>

೪. (1) ಅರಮಾದ ಉದ್ದ - ಬಾಗಿಲಿನ ಎತ್ತರದ $\frac{1}{4}$ ಅಂಶ ಇದ್ದಾಗ

= 2 ಕೋ. 10 ಅಂ. x $\frac{1}{4}$

= <u>14 ಅಂ. 4 ಯವ</u>

(2) ಅರಮಾದ ಅಗಲ ಮತ್ತು ದಪ್ಪ - ಉದ್ದದ $\frac{1}{5}$ ಅಂಶ ಇದ್ದಾಗ

= 14 ಅಂ. 4 ಯವ x $\frac{1}{5}$

= <u>2 ಅಂ. 7.2 ಯವ</u>

೫. (1) ಅರ್ಗಳದ ಉದ್ದ - ಬಾಗಿಲಿನ ಅಗಲದ $\frac{1}{5}$ ಅಂಶ ಆದಾಗ

= 1 ಕೋ. 2 ಅಂ. x $\frac{1}{5}$

= <u>8 ಅಂ. 5.3 ಯವ</u>

(2) ಅರ್ಗಲದ ಅಗಲ - ಅರ್ಗಳದ ಉದ್ದದ $\frac{1}{6}$ ಅಂಶ ಆದಾಗ


= 8 ಅಂ. 5.3 ಯವ x $\frac{1}{6}$

= <u>1 ಅಂ. 3.6 ಯವ</u>

(3) ಅರ್ಗಳದ ದಪ್ಪ - ಅಗಲದ ಅರ್ಧ ಆದಾಗ

= 1 ಅಂ. 3.6 ಯವ x $\frac{1}{2}$

= <u>0 ಅಂ. 5.6 ಯವ</u>



ಅರಮಾ ಮತ್ತು ಅರ್ಗಲಗಳಿರುವ ಬಾಗಿಲಿನ ಒಂದು ಮಾದರಿ
ಚಿ. ೯೮, ಅ. ೭, ಶ್ಲೋ. ೧೦

ಶ್ಲೋಕ : ಅಧೋಽರ್ಗಲಂ ಮಾತೃಕವಾಟಸಂಸ್ಥಂ ಪುತ್ರೀಗತಂ ಚಾರ್ಗಲಮೂರ್ಧ್ವಸಂಗಿ
ಅಥಾರಮಾಂ ಮಧ್ಯಮತೀತ್ಯ ಮಧ್ಯಾತ್ ಸುಕೀಲಯೇತ್ತತ್ರ ಕವಾಟಪೃಷ್ಠೇ ||೧೧||


ತಾತ್ಪರ್ಯ :

ಕೆಳಗಿನ ಅರ್ಗಲವನ್ನು (ಚಿಳಕ) ಮಾತೃಕವಾಟದಲ್ಲಿ (ತಾಯಿ ಪಡಿ) ಇರುವಂತೆ ಸಿಕ್ಕಿಸಬೇಕು. ಮೇಲಿನ ಅರ್ಗಲವನ್ನು ಪುತ್ರೀ ಕವಾಟದಲ್ಲಿರುವಂತೆ ಸಿಕ್ಕಿಸಬೇಕು. ಬಾಗಿಲಿನ ಮಧ್ಯಭಾಗದಿಂದ ಸ್ವಲ್ಪ ಮೇಲಕ್ಕೆ ಅದರ ಹಿಂಭಾಗದಲ್ಲಿ ಅಂದರೆ ಬಾಗಿಲಿನ ಒಳಭಾಗದಲ್ಲಿ ಅರಮಾದ ಮಧ್ಯದಲ್ಲಿ ಅರ್ಗಲವನ್ನು ಸೇರಿಸಬೇಕು.

ವಿ.ವಿ. :

ಅರಮಾ ಮತ್ತು ಅರ್ಗಲ ಎಂಬುದು ಬಾಗಿಲಿನ ಒಳಬದಿಯಲ್ಲಿ ಎರಡೂ ಪಡಿಗಳನ್ನು ತೆರೆಯಲು ಸಾಧ್ಯವಿಲ್ಲದಂತೆ ಬಿಗಿಗೊಳಿಸಲು ಮಾಡುವ ಒಂದು ಚಿಳಕ. ಅರಮಾ ಎಂಬುದು ಬಾಗಿಲಿನ ಎಡದ ಮತ್ತು ಬಲದ ಪಡಿಗಳ ಒಳಗಿನ ಭಾಗದಲ್ಲಿ ಎರಡೂ ಪಡಿಗಳು ಸಂಧಿಸುವ ಮಧ್ಯರೇಖೆಯ ಆ ಕಡೆ ಈ ಕಡೆ ಸಮಾನಾಂತರವಾಗಿ ಸಿಕ್ಕಿಸುವ ಮರದ ಎರಡು ಪಟ್ಟಿಗಳು. ಆ

ಪಟ್ಟಿಗಳ ಒಳಭಾಗದಲ್ಲಿ ಮೇಲೆ ಮತ್ತು ಕೆಳಗೆ ಕಡಿದು ಮಾಡಿದ ಎರಡು ಚಡಿಗಳು ಇರುತ್ತವೆ. ಆ ಚಡಿಗಳು ಅರಮಾಗಳನ್ನು ಬಾಗಿಲ ಪಡಿಗಳಿಗೆ ಮುಖವಾಗುವಂತೆ ಸಿಕ್ಕಿಸಿದಾಗ ಆಯಾತಾಕಾರದ ತೂತುಗಳಂತಾಗುತ್ತವೆ. ಆ ತೂತುಗಳಿಗೆ ಅರ್ಗಲಗಳನ್ನು ಸಿಕ್ಕಿಸಬೇಕು. ಅರ್ಗಲವೆಂದರೆ ಅರಮಾಕ್ಕೆ ಅಡ್ಡವಾಗಿ ಸಿಕ್ಕಿಸುವ ಕೀಲು ಅಥವಾ ಚಿಳಕ. ಅರ್ಗಲಗಳು ಅಂತ್ಯದಲ್ಲಿ ಪಟ್ಟಿಯಿಂದ ಕೂಡಿದ ಕಾರಣ ಅವುಗಳನ್ನು ಸಿಕ್ಕಿಸಿದ ಅರಮಾಗಳನ್ನು ದಾಟಿ ಬಿದ್ದುಹೋಗಲು ಸಾಧ್ಯವಾಗುವುದಿಲ್ಲ. ಆದರೆ ಅವುಗಳನ್ನು ಸಿಕ್ಕಿಸುವಾಗ ಒಳ ಬದಿಯಲ್ಲಿ ಕೆಳಗಿನ ಅರ್ಗಲವನ್ನು ಎಡಬದಿಯಿಂದ ದೂಡಿ ಸರಿಸಿ ಹಾಕುವಂತೆಯೂ ಮೇಲಿನ ಅರ್ಗಲವನ್ನು ಬಲಬದಿಯಿಂದ ಸರಿಸಿ ಹಾಕುವಂತೆಯೂ ಇರಬೇಕು. ಆ ರೀತಿ ಸಿಕ್ಕಿಸಿದರೆ ಕೆಳಗಿನದು ಮಾತೃಕವಾಟದಲ್ಲಿ ಇರುವಂತೆಯೂ ಆಗುತ್ತದೆ. ಅಲ್ಲದೆ ಬಾಗಿಲಿನ ಎರಡೂ ಕದಗಳನ್ನು ಹೊರಗಡೆಯಿಂದ ದೂಡಿ ತೆರೆಯಲು ಸಾಧ್ಯವೇ ಇಲ್ಲದ ರೀತಿಯಲ್ಲಿ ಅವು ಭದ್ರಗೊಳ್ಳುತ್ತವೆ.



ಚಿ. ೯೯, ಅ. ೭, ಶ್ಲೋ. ೧೧

ಶ್ಲೋಕ : ಏಕಜಾತಿತರುಭಿಃ ಪ್ರಕಲ್ಪಿತಂ ದ್ವಾರಪಾದಫಲಕಾದಿಕಂ ಶುಭಮ್
ಅನ್ಯಥಾ ಯದಿ ವಧೂ ಕುಶೀಲತಾ ಸಂಭವೇದಿತಿ ವದಂತಿ ಕೇಚನ ||೧೨||

ತಾತ್ಪರ್ಯ :

ಒಂದೇ ಜಾತಿಯ ಮರದಿಂದ ದ್ವಾರಬಂಧ ಮತ್ತು ದ್ವಾರಫಲಕಾದಿಗಳನ್ನು ಮಾಡಿದರೆ ಶುಭಕರ. ಆದರ ಬದಲು ಬೇರೆ ಬೇರೆ ಜಾತಿಯ ಮರಗಳಿಂದ ಮಾಡಿದರೆ ಅಲ್ಲಿನ ಸ್ತ್ರೀಯರು ಶೀಲ ಕೆಟ್ಟವರಾಗುತ್ತಾರೆ ಎಂದು ಕೆಲವರು ಹೇಳುತ್ತಾರೆ.

ವಿ.ವಿ. :

ದ್ವಾರದ ಎರಡು ಕವಾಟಗಳಲ್ಲಿ ಒಂದನ್ನು ಮಾತೃ ಕವಾಟವೆಂದೂ ಇನ್ನೊಂದನ್ನು ಪುತ್ರೀ

ಕವಾಟವೆಂದೂ ರೂಪಿಸಲಾಗಿದೆ. ಕವಾಟಗಳಿಗೆ ಬೇರೆ ಬೇರೆ ಜಾತಿಯ ಮರಗಳನ್ನು ಉಪಯೋಗಿಸಿದರೆ ಆ ಮರಗಳನ್ನು ಉಪಯೋಗಿಸಿದರೆ ಆ ಮರಗಳ ಗುಣಕ್ಕೆ ಅನುಗುಣವಾಗಿ ಮಳೆಗಾಲ, ಚಳಿಗಾಲ ಮತ್ತು ಬೇಸಿಗೆಯ ಕಾಲಗಳಲ್ಲಿ ಅವುಗಳು ಹಿಗ್ಗುವ ಕುಗ್ಗುವ ಸಂಭವವಿರುವುದರಿಂದ ಕವಾಟಗಳನ್ನು ಹಾಕಿದರೂ ಅವುಗಳ ಮಧ್ಯೆ ಸೆರೆ ಉಳಿಯುವುದು ಅಥವಾ ಹಿಗ್ಗಿ ಬಾಗಿಲು ಹಾಕಲು ಬಾರದಿರುವುದು ಇಂತಹ ದೋಷಗಳು ಬರುತ್ತವೆ. ಆಗ ಸ್ತ್ರೀತ್ವವನ್ನು ಆರೋಪಿಸಿದ ಮಾತೃಕವಾಟ ಮತ್ತು ಪುತ್ರೀ ಕವಾಟಗಳು ತಮ್ಮ ಗುಣಶೀಲವಾದ ಸರಿಯಾಗಿ ಮುಚ್ಚುವ ಮತ್ತು ಸರಿಯಾಗಿ ತೆರೆಯುವ ಗುಣಗಳನ್ನು ಕಳೆದುಕೊಳ್ಳುತ್ತವೆ ಎಂದು ಅರ್ಥ. ಹಾಗೆ ಆದಾಗ ಕವಾಟಗಳ ಶೀಲ ಧರ್ಮವೇ ಕೆಟ್ಟು ಹೋದಂತಾಗುತ್ತದೆ. ಅದಕ್ಕಾಗಿ ಆ ಕವಾಟಗಳಿಗೆ ಒಂದೇ ಜಾತಿಯ ಮರಗಳನ್ನು ಉಪಯೋಗಿಸಬೇಕು.

೯. ಒಂದು ಪಡಿಯ ಬಾಗಿಲು

ಶ್ಲೋಕ : ಏಕಂ ಕವಾಟಂ ಯದಿ ವಾಮಭಾಗೇ ಮಧ್ಯಾದಧೋವೋಪರಿ ವಾರಮಾಸ್ಯಾತ್
ತದರ್ಗಲಂ ವರ್ತುಲಮಷ್ಟಕೋಣಂ ವೇದಾಶ್ರಕಂ ವಾ ದೃಢ ಶೃಂಖಲಂ ವಾ ||೧೩||

ತಾತ್ಪರ್ಯ :

ಒಂದೇ ಪಡಿಯ ಬಾಗಿಲನ್ನು ಮಾಡುವುದಾದರೆ ಅದನ್ನು ಎಡಭಾಗದಲ್ಲಿ ಇಡಬೇಕು. ಪಡಿಯ ಮಧ್ಯದಿಂದ ಕೆಳಗೆ ಅಥವಾ ಮೇಲೆ ಅರಮಾವನ್ನು ಇಡಬೇಕು. ಅದರ ಅರ್ಗಲವು (ಚಿಳಕ) ವರ್ತುಲಾಕಾರದ್ದಿರಬಹುದು. ಅಷ್ಟಕೋಣದ್ದಿರಬಹುದು. ಅಥವಾ ಚತುರಶ್ರದ್ದಾಗಿರಬಹುದು. ಇಲ್ಲವೇ ಗಟ್ಟಿಯಾದ ಸಂಕೋಲೆಯುಳ್ಳದ್ದಾಗಿರಬಹುದು.

ವಿ.ವಿ. :

ಒಂದೇ ಪಡಿಯ ಬಾಗಿಲಿಗೆ ಅರಮಾವನ್ನು ಸಿಕ್ಕಿಸುವಾಗ ಒಂದನ್ನು ಬಾಗಿಲ ಪಡಿಗೂ ಇನ್ನೊಂದನ್ನು ಬಲದ ದ್ವಾರಬಂಧಕ್ಕೂ ಸಿಕ್ಕಿಸಿ ಅರ್ಗಲವನ್ನು ಹಾಕಬೇಕು.

ಶ್ಲೋಕ : ಆಶಾಽಹಸ್ಪತಿ ಸೂತ್ರಭೇದಿನಿ ಗೃಹೇ ಷಷ್ಠೇಽಥವಾ ಸಪ್ತಮೇ
ಸೂತ್ರೇ ದ್ವಾರಮಥಾಪರಂ ಕ್ರಮವಶಾತ್ ಪೃಷ್ಠೇ ನಿಜೇಷ್ಟಂ ಪುನಃ
ಸವ್ಯಾರ್ಧೇ ಭವನಸ್ಯ ಕಾರ್ಯಮುಚಿತ್ಯೈರ್ಯೋರ್ಣ್ಯಾದಿಭಿಃ ಸಂಯುತಮ್
ಚೈಕಾಮಿಚ್ಛತಿ ಚೇತ್ ಕವಾಟಫಲಕಾಂ ವಾಮೇ ಭವೇನ್ನಿಷ್ಕ್ರಮೇ ||೧೪||


ತಾತ್ಪರ್ಯ :

ಮನೆಯ ಉದ್ದವನ್ನು 10 ಅಥವಾ 12 ರೇಖೆಗಳಿಂದ ವಿಭಾಗಿಸಬೇಕು. ಹಾಗೆ ವಿಭಾಗಿಸಿದಾಗ ಅನುಕ್ರಮವಾಗಿ 6 ಅಥವಾ 7ನೇ ರೇಖೆಯಲ್ಲಿ ಹಿಂದಿನ ಬಾಗಿಲಿನ ಮಧ್ಯವಿರಬೇಕು. ಅಲ್ಲದೆ ಮನೆಯ ಎಡದ ಅರ್ಧದಿಂದ ಈ ಕಡೆಯ ಬಲಭಾಗವನ್ನು ಮತ್ತು ಹಿಂದಿನ ಭಾಗವನ್ನು

ಕ್ರಮವಾಗಿ ಹೊಂದಿಸುವ ರೀತಿಯಲ್ಲಿ ತಮಗೆ ಇಷ್ಟವಾದ ಮತ್ತು ಉಚಿತವಾದ ಯೋನಿಯನ್ನು ಕಲ್ಪಿಸಬೇಕು. ಒಂದೇ ಪಡಿಯ ಬಾಗಿಲನ್ನು ಮಾಡುವುದಾದರೆ ನಾವು ಹೊರಗೆ ಹೋಗುವಾಗ ಪಡಿಯು ನಮ್ಮ ಎಡಕ್ಕೆ ಬರುವಂತೆ ಬಾಗಿಲನ್ನು ಇಡಬೇಕು.

ವಿ.ವಿ. :

ಮನೆಯ ಉದ್ದವನ್ನು 10 ಭಾಗ ಮಾಡಿದಾಗ 6ನೇ ಭಾಗದಲ್ಲಿಯೂ 12 ಭಾಗ ಮಾಡಿದಾಗ 7ನೇ ಭಾಗದಲ್ಲಿಯೂ ಹಿಂದಿನ ಬಾಗಿಲು ನಿಲ್ಲುತ್ತದೆ.



ಚಿ. ೧೦೦, ಅ. ೭, ಶ್ಲೋ. ೧೪

೧೦. ದ್ವಾರ - ಉಪದ್ವಾರಗಳು

ಶ್ಲೋಕ : ಕುರ್ಯಾತ್ ಪ್ರಾಂಗಣತೋ ಗಮಾಗಮಕೃತೇ ದ್ವಾರಂ ಮಹತ್ ಪಾದುಕೇ
ತದ್ಬಾಹ್ಯೇ ಪಥಿ ಪಾದುಕೋಪರಿ ಗತಂ ತ್ಯಕ್ತ್ವಾ ಮಸೂರೋಚ್ಛ್ರಯಮ್
ಮಾರ್ಗವ್ಯಾಸಚತುರ್ಗುಣೇನ ಪರಿಧಿಃ ಸ್ವಾಭೀಷ್ಟಯೋನಿರ್ಯಥಾ
ತದ್ವ್ಯಾಸಂ ತು ತಥಾ ಕರೋತು ಚ ವಿದಿಗ್ಧಾಮ್ನೋಽಸ್ತಿ ಚೇತ್ ಕುಟ್ಟಿಮಮ್ ॥೧೫॥

ತಾತ್ಪರ್ಯ :

ಮನೆಯ ಅಂಗಳದಿಂದ ಹೊರಗೆ ಹೋಗಲು ಮತ್ತು ಬರಲು ಇರುವ ನಡೆ ಬಾಗಿಲನ್ನು ಪಾದುಕದ ಮೇಲಿನ ಭಾಗದಲ್ಲಿ ಇಡಬೇಕು. ಒಂದು ವೇಳೆ ಕೋಣಾಲಯವಿದ್ದು ಅದರ ಗೋಡೆಯಿದ್ದರೆ ನಡೆಯ ಎತ್ತರವನ್ನು ಸಮಗೊಳಿಸಿ ಅದಕ್ಕೆ ಸಮವಾಗಿ ಬಾಗಿಲನ್ನು ಇಡಬೇಕು. ಪಾದುಕದ ಮೇಲಿರುವ ಅಧಿಷ್ಠಾನದ ಎತ್ತರವನ್ನು ನಡೆಯಲ್ಲಿ ಗಣನೆಗೆ ತೆಗೆದುಕೊಳ್ಳಬಾರದು. ಹಾಗೆ ಮಾಡುವಾಗ (ನಡೆಯ ಯೋನಿಯು ತಪ್ಪದ ಹಾಗೆ) ನಡೆಯ ಪರಿಧಿಯು ಬಯಸಿದ ಯೋನಿಯನ್ನು ಕೊಡುವಂತೆ ಅದರ ಅಗಲವನ್ನು ನಾಲ್ಕು ಪಾಲು ಹೆಚ್ಚಿಸಿಕೊಳ್ಳಬಹುದು.

ವಿ.ವಿ. :

ನಡೆಯ ಮತ್ತು ಜಗಲಿಯ ಎತ್ತರ ಒಂದೇ ಸಮವಾಗಿದ್ದರೆ ಅನುಕೂಲ. ಅದರ ಹೊಂದಾಣಿಕೆಗೆ ಈ ಮೇಲೆ ಹೇಳಿದ ಸೂತ್ರನಿಯಮ ವಿಹಿತವಾಗಿದೆ.

ಶ್ಲೋಕ : ದಂಡಾತ್ ಪ್ರಾಂಗಣಮಧ್ಯತೋಽಬ್ಧಿಶರಷಟ್ ಸಪ್ತಾದಿಸಂಖ್ಯಾನ್ ವ್ಯತೀ
ತ್ಯಾದಧ್ಯಾದಥ ಪೌಷ್ಪದಂತಿಕಪದೇ ದ್ವಾರಂ ಪ್ರಚಾರೋದಿತಮ್
ಭಲ್ಲಾಟೇಂದ್ರಗೃಹಕ್ಷತೇಷ್ವಪಿ ಮಹಾದ್ವಾರಾಣ್ಯುಪದ್ವಾರಕಾ
ಣ್ಯಷ್ಟಾಪ್ಯನ್ನತಭೂತಲೇ ದ್ವಿತಲ ತದ್ವಕ್ರಾದಿಯುಕ್ತಾನಿ ವಾ ॥೧೬॥

ತಾತ್ಪರ್ಯ :

ಅಂಗಳದ ಮಧ್ಯದಿಂದ 4, 5, 6, 7 ದಂಡದಷ್ಟು ಸ್ಥಳವನ್ನು ಬಿಟ್ಟು ಪುಷ್ಪದಂತ, ಭಲ್ಲಾಟ, ಇಂದ್ರ ಮತ್ತು ಗೃಹಕ್ಷತ ಪದಗಳಲ್ಲಿ ಮಹಾದ್ವಾರಗಳನ್ನು ಮಾಡಿ ಬಾಗಿಲುಗಳನ್ನು ಇಡಬೇಕು. ಅಲ್ಲದೆ, ಎಂಟು ಉಪದ್ವಾರಗಳನ್ನೂ ಮಾಡಬೇಕು. ಮಹಾದ್ವಾರಗಳು ಮತ್ತು ಉಪದ್ವಾರಗಳು ಮಾಳಿಗೆ ಮತ್ತು ಕರುಮಾಡದಿಂದ ಕೂಡಿ ಎತ್ತರವಾದ ಸ್ಥಳದಲ್ಲಿ ಇರಬೇಕು.

ವಿ.ವಿ. :

ಈ ಶ್ಲೋಕಗಳಲ್ಲಿ ಮಹಾದ್ವಾರಗಳ ಸ್ಥಾನವನ್ನು ನಿರ್ದೇಶಿಸಲಾಗಿದೆ. ಆ ಸ್ಥಾನನಿರ್ದೇಶ ಈ ಕೆಳಗಿನಂತಿದೆ.

ಮಹಾದ್ವಾರಗಳು - ೪

1.	ಪುಷ್ಪದಂತ ಪದಸ್ಥಾನ	-	20ನೇ ಪದಸ್ಥಾನ	-	ನೈಋತ್ಯ ಒತ್ತಿ ಪಶ್ಚಿಮ ದಿಕ್ಕು
2.	ಭಲ್ಲಾಟ ಪದಸ್ಥಾನ	-	28ನೇ ಪದಸ್ಥಾನ	-	ವಾಯುವ್ಯ ಒತ್ತಿ ಉತ್ತರ
3.	ಇಂದ್ರ ಪದಸ್ಥಾನ	-	4ನೇ ಪದಸ್ಥಾನ	-	ಈಶಾನ್ಯ ಒತ್ತಿ ಪೂರ್ವ ದಿಕ್ಕು
4.	ಗೃಹಕ್ಷತ ಪದಸ್ಥಾನ	-	12ನೇ ಪದಸ್ಥಾನ	-	ಆಗ್ನೇಯ ಒತ್ತಿ ದಕ್ಷಿಣ ದಿಕ್ಕು

ಶ್ಲೋಕ : ಪರ್ಜನ್ಯಕೋಷ್ಠೇ ಚ ಭೃಷೇ ಚ ಪೂಷ್ಣಿ ಭೃಂಗೇಽಪಿ ಚ ದ್ವಾರಪಶೋಷಯೋಶ್ಚ
ನಾಗೇಽಪ್ಯದಿತ್ಯುಕ್ತಪದೇ ತಥೇಚ್ಛಂತ್ಯಷ್ಟೇತ್ಯುಪದ್ವಾರಗೃಹಾಣಿ ನೃಣಾಮ್ ॥೧೭॥

ತಾತ್ಪರ್ಯ :


ಪರ್ಜನ್ಯ, ಭೃಶ, ಪೂಷ, ಭೃಂಗ, ದ್ವಾರಪಾಲ, ಶೋಷ, ನಾಗ ಮತ್ತು ಅದಿತಿ ಎಂಬ ಈ ಎಂಟು ವಾಸ್ತುಪದಸ್ಥಾನಗಳಲ್ಲಿ ಉಪದ್ವಾರಗಳನ್ನು ನಿರ್ಮಿಸಬೇಕು.

ವಿ.ವಿ. :

ಈ ಶ್ಲೋಕದಲ್ಲಿ ಉಪದ್ವಾರಗಳ ಸ್ಥಾನಗಳನ್ನು ಹೇಳಿರುತ್ತಾರೆ.

ಉಪದ್ವಾರಗಳು - ೮

1.	ಪರ್ಜನ್ಯ -	2ನೇ ಪದಸ್ಥಾನ -	ಈಶಾನ್ಯ ಬಿಟ್ಟು ಪೂರ್ವ
2.	ಭೃಶ -	7ನೇ ಪದಸ್ಥಾನ -	ಪೂರ್ವ-ಆಗ್ನೇಯಗಳ ಮಧ್ಯ
3.	ಪೂಷ -	10ನೇ ಪದಸ್ಥಾನ -	ಆಗ್ನೇಯ ಬಿಟ್ಟು ದಕ್ಷಿಣ
4.	ಭೃಂಗ -	15ನೇ ಪದಸ್ಥಾನ -	ದಕ್ಷಿಣ ಮತ್ತು ನೈಋತ್ಯದ ಮಧ್ಯ
5.	ದ್ವಾರಪಾಲ -	18ನೇ ಪದಸ್ಥಾನ -	ನೈಋತ್ಯ ಬಿಟ್ಟು ಪಶ್ಚಿಮ
6.	ಶೋಷ -	23ನೇ ಪದಸ್ಥಾನ -	ಪಶ್ಚಿಮ-ವಾಯುವ್ಯಗಳ ಮಧ್ಯ
7.	ನಾಗ -	26ನೇ ಪದಸ್ಥಾನ -	ವಾಯುವ್ಯ ಬಿಟ್ಟು ಉತ್ತರ
8.	ಅದಿತಿ -	31ನೇ ಪದಸ್ಥಾನ -	ಉತ್ತರ-ಈಶಾನ್ಯಗಳ ಮಧ್ಯ



ಚಿ. ೧೦೧, ಅ. ೭, ಶ್ಲೋ. ೧೬, ೧೭

೧೧. ವೇದಿ ರಚನೆ

ಶ್ಲೋಕ : ಸ್ತಂಭಾಧಸ್ತಾರತೋ ವೋಚ್ಛ್ರಯರಸತುರಗಾಷ್ಟಾಂಶತೋ ವಾ ಪ್ರತೇರ -
ಪ್ಯುತ್ಸೇಧೇನಾತ್ರ ಸಾರ್ಧಾವನಿಯುಗಲಹುತಾಶೋನ್ಮಿತೈಶ್ಚಾತ್ರ ವೇದೀ
ಕರ್ತವ್ಯಾ ಕುಟ್ಟಿಮೋರ್ಧ್ವಂ ತದುಪರಿ ಚರಣೈರ್ಯುಗ್ಮಸಂಖ್ಯೈಶ್ಚ ದಾರು
ಸ್ತಂಭಾರ್ಧಾಂಘ್ರ್ಯೂನತುಲ್ಯಪ್ರತತಿಭಿರಭಿತಃ ಸ್ಯೋತ್ತರಾದ್ಯೈಶ್ಚ ಭಿತ್ತಿಃ ॥೧೮॥

ತಾತ್ಪರ್ಯ :

ದ್ವಾರಸ್ತಂಭದ ಕೆಳಭಾಗದ ಅಗಲದಷ್ಟೇ ಎತ್ತರದಲ್ಲಿ ಪಂಚಾಂಗದ ಮೇಲೆ ಅಥವಾ ಕಂಭದ $\frac{1}{6}$, $\frac{1}{7}$ ಇಲ್ಲವೇ $\frac{1}{8}$ ಭಾಗದಷ್ಟು ಎತ್ತರದಲ್ಲಿ ಅಥವಾ ಪ್ರತಿಗೆ ಸಮವಾದ ಎತ್ತರದಲ್ಲಿ ಇಲ್ಲವೇ ಪ್ರತಿಯ $1\frac{1}{2}$, 2 ಅಥವಾ 3 ಪಾಲು ಎತ್ತರದಲ್ಲಿ ವೇದಿಯನ್ನು ರಚಿಸಬೇಕು. ಆ ವೇದಿಯ ಸುತ್ತಲೂ ಸಮ ಸಂಖ್ಯೆಯ ಕಂಭಗಳನ್ನೂ, ಆ ಕಂಭಗಳ ಮೇಲೆ ಕಂಭದಷ್ಟೇ ಅಗಲದ ಅಥವಾ ಅದರ ಅರ್ಧದಷ್ಟು ಅಗಲದ ಇಲ್ಲವೇ ಅದರ $\frac{3}{4}$ ಅಂಶದಷ್ಟು ಅಗಲದ ಉತ್ತರವನ್ನು ಇಟ್ಟು ಗೋಡೆಯನ್ನು ನಿರ್ಮಿಸಬೇಕು.

ಶ್ಲೋಕ : ಪತ್ರಮಾನವಶತೋಽಂಗುಲವೃದ್ಧ್ಯಾ ವೇದಿಕಾವಿಹಿತನಿಷ್ಕ್ರಮಣಂ ಸ್ಯಾತ್
ಸಾರ್ಧಯುಗ್ಮದಹನಾದಿಮಿತೈಸ್ತೈರಂಗುಲೈರ್ವಿಹಿತಮುತ್ತರಲಂಬಾತ್ ॥೧೯॥

ತಾತ್ಪರ್ಯ :

ಪತ್ರಮಾನಕ್ಕೆ ಅನುಗುಣವಾಗಿ ವೇದಿಕೆಯ ಹೊರಭಾಗವನ್ನು ಒಂದು ಅಂಗುಲದಷ್ಟು ವಿಸ್ತರಿಸಿದಾಗ ವೇದಿಕೆಗೆ ಯೋಗ್ಯವಾದ ನಿಷ್ಕ್ರಮಣದ ರಚನೆಯಾಗುತ್ತದೆ. ಹೊರಗಿನ ಈ ವಿಸ್ತಾರವನ್ನು $2\frac{1}{2}$, 3 ಇತ್ಯಾದಿ ಅಂಗುಲಮಾನದಿಂದ ಉತ್ತರಕ್ಕೆ ಸರಿಗೊಳಿಸಬಹುದು.

ಶ್ಲೋಕ : ಸ್ವದ್ರವ್ಯೈರೇವ ವೇದೀರಿಹ ಕತಿಚಿದುಶಂತೀಷ್ಟಕಾಮೃಚ್ಛಿಲಾದ್ಯೈ
ರ್ವೃಕ್ಷೈರ್ವಾ ಭಿನ್ನಜಾತ್ಯೈರಪಿ ಚ ವಿರಚಿತಾ ದೃಶ್ಯತೇ ಸರ್ವಗೇಹೇ
ಅಂತರ್ನಾಹೇನ ಯೋನ್ಯನ್ವಿತಭವನವಿಧೌ ಗರ್ಭಗೇಹೋಕ್ತನೀತ್ಯಾ
ದ್ವಾರಂ ತತ್ಪಾದುಕೋರ್ಧ್ವಂ ನ್ಯಸತು ಪುನರಧಸ್ತಾತ್ ಪ್ರತೇರ್ಗರ್ತಗೇಹೇ ॥೨೦॥

ತಾತ್ಪರ್ಯ :

ವೇದಿಕೆಯ ರಚನೆಯನ್ನು ಮನೆಗೆ ಉಪಯೋಗಿಸಿದ ಇಟ್ಟಿಗೆ, ಮಣ್ಣು, ಶಿಲೆ, ಮರ ಮೊದಲಾದ ಆಯಾ ದ್ರವ್ಯಗಳಿಂದಲೇ ಮಾಡಬೇಕೆಂದು ಕೆಲವು ಶಿಲ್ಪಶಾಸ್ತ್ರಜ್ಞರು ಬಯಸುತ್ತಾರೆ. ಆದರೂ ಎಲ್ಲ ಮನೆಗಳಲ್ಲಿಯೂ ಭಿನ್ನಜಾತಿಯ ವಸ್ತುಗಳಿಂದ ಮಾಡಿದುದು ಕಂಡು ಬರುತ್ತದೆ.

ಒಳಗಿನ ಸುತ್ತಳತೆಯನ್ನು ತೆಗೆದುಕೊಂಡು ಯೋನಿನಿರ್ಣಯ ಮಾಡಿದ ಮನೆಯ ಪಂಚಾಂಗವು ತಗ್ಗಾಗಿದ್ದರೆ ತಗ್ಗಿನ ಅಂತಹ ಮನೆಗೆ ಪಾದುಕದ ಮೇಲೆ ಅಥವಾ ಪ್ರತಿಯ ಕೆಳಗೆ ಬಾಗಿಲನ್ನು ಇಡಬೇಕು.

೧೨. ಅಡ್ಡ - ಕಂಬ - ಪಕಾಸುಗಳ ಸಂಖ್ಯೆ

ಶ್ಲೋಕ : ಯುಗ್ಮಾಸ್ತುಲಾಃ ಸ್ತಂಭಲುಪಾದಯಃ ಸ್ಯುಃ
ಸರ್ವಾಸ್ತ್ವಯುಗ್ಮಾಃ ಖಲು ಪಂಕ್ತಯಸ್ತಾಃ
ನೃಗೇಹನಿರ್ದಿಷ್ಟಕರಾಧಿಕಾಶ್ಚೇತ್
ವಿನಾಶದಾಸ್ತಾಃ ಖಲು ಪಂಕ್ತಯಃ ಸ್ಯುಃ ॥೨೧॥

ತಾತ್ಪರ್ಯ :

ಅಡ್ಡ, ಕಂಬ, ಪಕಾಸು ಮೊದಲಾದವುಗಳು ಸಮಸಂಖ್ಯೆಯಲ್ಲಿರಬೇಕು. ಅವುಗಳ ಎಲ್ಲ ಪಂಕ್ತಿಗಳು ವಿಷಮಸಂಖ್ಯೆಯಲ್ಲಿರಬೇಕು. ಆ ಪಂಕ್ತಿಗಳು ಮನುಷ್ಯಾಲಯಗಳಲ್ಲಿ ನಿರ್ದಿಷ್ಟವಾದ ಕೋಲಿನಿಂದ ಅಧಿಕ ಅವಕಾಶವುಳ್ಳವುಗಳಾದರೆ (ದೂರವುಳ್ಳವುಗಳಾದರೆ) ಅವುಗಳು ಖಂಡಿತ ವಿನಾಶಕಾರಿಗಳಾಗುತ್ತವೆ.

ವಿ.ವಿ. :

ಇಲ್ಲಿ ಪಂಕ್ತಿಯೆಂದರೆ ಒಂದು ಅಡ್ಡ ಅಥವಾ ಪಕಾಸಿನಿಂದ ಇನ್ನೊಂದು ಅಡ್ಡ ಅಥವಾ ಪಕಾಸಿನ ಮಧ್ಯದಲ್ಲಿರುವ ಸ್ಥಳಾವಕಾಶ. ಆ ಪಂಕ್ತಿಗಳು ವಿಷಮ ಸಂಖ್ಯೆಯಲ್ಲಿರಬೇಕು ಮಾತ್ರವಲ್ಲ ಆ ಪಂಕ್ತಿಯ ಸ್ಥಳಾವಕಾಶವು ಆಯಾ ಮನೆಗೆ ಉಪಯೋಗಿಸಿದ ಕೋಲಿನ ಅಳತೆಯಲ್ಲಿಯೇ ಇರಬೇಕು. ಅದಕ್ಕಿಂತ ಅಧಿಕವಾಗಿರಬಾರದು. ಉದಾಹರಣೆಗೆ ಮನೆಗೆ 24 ಅಂಗುಲದ ಕೋಲನ್ನು ಉಪಯೋಗಿಸಿದ್ದರೆ ಅದರ ಪಂಕ್ತಿಯ ಅವಕಾಶವು 24 ಅಂಗುಲವೇ ಇರಬೇಕು. ಮಾಳಿಗೆ ಭದ್ರವಾಗಿರಬೇಕಾದರೆ ಅದಕ್ಕೆ ಹಾಕಿದ ಅಡ್ಡಗಳು ಸರಿಯಾದ ಲೆಕ್ಕಾಚಾರದಲ್ಲಿರಬೇಕು. ಮನೆಯಲ್ಲಿರುವ ಅಡ್ಡಗಳು ಮತ್ತು ಪಕಾಸುಗಳು ಸರಿಯಾದ ದೂರದಲ್ಲಿ ಇಲ್ಲದೇ ಹೋಗಿ ದುರ್ಬಲವಾದರೆ ಮನೆಯು ಮುರಿದು ಬಿದ್ದು ವಿನಾಶಗೊಳ್ಳುವುದರಲ್ಲಿ ಸಂಶಯವಿಲ್ಲ.

ಇಲ್ಲಿ ಅಡ್ಡಗಳು, ಕಂಭಗಳು ಮೊದಲಾದವುಗಳು ಸಮಸಂಖ್ಯೆಯಲ್ಲಿ ಇರಬೇಕೆಂದು ನಿರ್ದೇಶಿಸಲಾಗಿದೆ. ಈ ಬಗ್ಗೆ ಶಿಲ್ಪಶಾಸ್ತ್ರಜ್ಞರಲ್ಲಿ ಮತಭೇದವಿದೆ. ಇಲ್ಲಿ ಮೊದಲಾದವುಗಳು ಎಂದು ಹೇಳಿದುದರಿಂದ ಒಂದಕ್ಕಿಂತ ಹೆಚ್ಚಿರುವ ಒಲೆ, ಮೆಟ್ಟಿಲು, ಬಾಗಿಲು, ಕಿಟಕಿ ಮುಂತಾದವುಗಳು ಸಮ ಸಂಖ್ಯೆಯಲ್ಲಿರಬೇಕೆಂದು ಹೇಳಬಹುದಾಗಿದೆ.

೧೩. ಕೋಣೆಗಳ ಉಪಯೋಗ

ಶ್ಲೋಕ : ಪ್ರಾಚೀನೇಽಗ್ನಿ ಸಮರ್ಚನಾದಿಕಮುದೀಚೀನೇ ಕುಟುಂಬಾದಿಕಮ್
ವ್ಯತ್ಯಸ್ಯ ಪ್ರಕರೋತು ವಾ ದ್ವಯಮಿದಂ ಯಾಮ್ಯೇಽತಿಥಿಪ್ರೀಣನಮ್
ಪಾಶ್ಚಾತ್ಯೇ ಧನಸನ್ನಿಧಾಪನಮದೋ ದ್ವಂದ್ವಂ ವಿಪರ್ಯಸ್ಯ ವಾ
ಶೇಷಾರ್ಧೇ ತು ತಯೋರ್ದ್ವಯೋಃ ಶಯನ ವಿದ್ಯಾಭ್ಯಾಸನಾದ್ಯಂ ಚರೇತ್ ॥೨೨॥

ತಾತ್ಪರ್ಯ :

ಚತುಶ್ಶಾಲೆಗಳಲ್ಲಿ ಪೂರ್ವದಿಕ್ಕಿನ ಮನೆಯು ಹೋಮ, ದೇವರ ಪೂಜೆ ಇತ್ಯಾದಿಗಳಿಗೂ, ಬಡಗುದಿಕ್ಕಿನ ಮನೆಯು ಪತ್ನೀಪುತ್ರಾದಿ ಕುಟುಂಬದ ವಸತಿಗೂ ಯೋಗ್ಯವಾಗಿದೆ. ಆದರೆ ಈ ಎರಡು ಮನೆಗಳ ಕಾರ್ಯಗಳಲ್ಲಿ ವ್ಯತ್ಯಾಸ ಅಥವಾ ಪರಸ್ಪರ ಬದಲಾವಣೆಯನ್ನು ಮಾಡಿಕೊಳ್ಳಬಹುದು. ದಕ್ಷಿಣ ದಿಕ್ಕಿನ ಮನೆಯು ಅತಿಥಿಗಳ ನಿವಾಸಕ್ಕೆ ಮೀಸಲಾಗಿರಬೇಕು. ಪಶ್ಚಿಮ ದಿಕ್ಕಿನ ಮನೆಯು ಖಜಾನೆಯನ್ನು ಇಡಲು ಯೋಗ್ಯವಾಗಿದೆ. ಈ ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳ ಮನೆಗಳ ಕಾರ್ಯಗಳಲ್ಲಿ ವ್ಯತ್ಯಾಸ ಅಥವಾ ಬದಲಾವಣೆಯನ್ನು ಮಾಡಿಕೊಳ್ಳಬಹುದಾಗಿದೆ. ಅಲ್ಲದೆ, ಎರಡು ಮನೆಗಳ (ದಕ್ಷಿಣ ಮತ್ತು ಪಶ್ಚಿಮ) ಉಳಿದ ಅರ್ಧಭಾಗಗಳನ್ನು ಶಯನಕ್ಕೂ, ವಿದ್ಯಾಭ್ಯಾಸಕ್ಕೂ ಉಪಯೋಗಿಸಬಹುದು.

ವಿ.ವಿ. :

ಇಲ್ಲಿ ಚತುಶ್ಶಾಲೆಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯವನ್ನು ನಿರ್ದೇಶಿಸಲಾಗಿದೆ. ಏಕಶಾಲೆಗಳಲ್ಲಿ ಚತುಶ್ಶಾಲೆಗೆ ಹೇಳಿದ ದಿಕ್ ಸ್ಥಾನಗಳನ್ನು ಸ್ವೀಕರಿಸಿ ಕಾರ್ಯನಿರ್ವಹಿಸಬಹುದು. ಆದುದರಿಂದ ಮನೆಯ ಅಥವಾ ಕೋಣೆಯ ಈಶಾನ್ಯ ಭಾಗವು ಪೂಜಾದಿಗಳಿಗೆ ಪ್ರಶಸ್ತ. ಇಲ್ಲಿ ದೇವ ವಿಗ್ರಹವನ್ನು ಪಶ್ಚಿಮಾಭಿಮುಖವಾಗುವಂತೆ ಇಡಬೇಕು. ಆಗ ಪೂಜೆ ಮಾಡುವವನು ಪೂರ್ವ ಅಥವಾ ಉತ್ತರ ಮುಖವಾಗಿ ಕುಳಿತುಕೊಳ್ಳಲು ಅನುಕೂಲವಾಗುತ್ತದೆ. ಅಲ್ಲದೆ, ವಾಹನವು ಪೂಜಿಸಲ್ಪಡುವ ವಸ್ತುವಾದುದರಿಂದ ಅದರ ಶೆಡ್ಡನ್ನು ಈಶಾನ್ಯ, ಉತ್ತರ ಭಾಗಗಳಲ್ಲಿ ರಚಿಸಬಹುದಾಗಿದೆ.

ಶ್ಲೋಕ : ಕೃತ್ವಾ ದಿಜ್ಞವನಾಗವರ್ಗಪದಭಿನ್ನೇ ಕ್ಷೇತ್ರಕೇಽಂತರ್ಗತೈ -
ರಷ್ಟ್ಯಂಕಾಬ್ಧಿಮಿತೈರ್ವಿಧಾತೃ ಪದಯುಕ್ತಂ ಪ್ರಾಂಗಣಂ ಮಧ್ಯತಃ
ಶಾಲಾಪಂಕ್ತಿಯುಜಾರ್ಯಕಾದಿಕಜುಷಸ್ತದ್ಬಾಹ್ಯತಸ್ತದ್ಬಹಿ -
ರ್ಗೋಷ್ಠೋಲೂಖಲವೇಶ್ಮಕಾದಿ ವಿಲಸತ್ಪಂಕ್ತ್ಯಾವೃತಂ ಕಲ್ಪಯೇತ್ ॥೨೩॥

ತಾತ್ಪರ್ಯ :

ಮನೆಕಟ್ಟುವ ಸ್ಥಳವು ಸಣ್ಣದಾದರೆ ಆ ಸ್ಥಳವನ್ನು 10x10=100, 9x9=81 ಮತ್ತು 8x8=64 ಪದಗಳನ್ನಾಗಿ ವಿಂಗಡಿಸಬೇಕು. ಆ ಪದಗಳ ಪೈಕಿ ಕ್ರಮವಾಗಿ ಒಳಗಿನ 16, 9, 4 ಪದಗಳನ್ನು ಅಂದರೆ ಬ್ರಹ್ಮಪದವನ್ನು ಪ್ರಾಂಗಣವನ್ನಾಗಿ ಮಾಡಬೇಕು. ಅದರ ಹೊರಗೆ ಆರ್ಯಕ ಮೊದಲಾದ ಎರಡು ಪದಗಳ ಸಾಲಿನಲ್ಲಿ ಮನೆಗಳನ್ನು ನಿರ್ಮಿಸಬೇಕು. ಅದರ ಹೊರಗೆ

ಇರುವ ಒಂದು ಪದದ ಸಾಲಿನಲ್ಲಿ ಗೋಶಾಲೆ, ಬತ್ತ ಕುಟ್ಟುವ ಶಾಲೆ ಮೊದಲಾದವುಗಳನ್ನು ನಿರ್ಮಿಸಬೇಕು.

೧೪. ಧಾನ್ಯಾಲಯ - ಧನಾಲಯಗಳ ಸ್ಥಾನ

ಶ್ಲೋಕ : ಕಾರ್ತಾಂತ್ಯಾಂ ಖಲಸದ್ಮಧಾನ್ಯಭವನಂ ತತ್ರಾಪಿ ವಾ ನೈಋತೇ
ಕುರ್ವೀತಾಥ ಧನಾಲಯಂ ಧನಪತೌ ಪ್ರಾಚ್ಯಾಂ ತಥಾಪಾಂಪತೌ
ಸಿಂಹೇ ವಾಲಿತುಲಾಕುಲೀರಭವನೇ ಧಾನ್ಯಾಲಯೋಕ್ತೇಷು ವಾ
ಧಾನ್ಯಾಗಾರವಿಧಿರ್ಧನೋದಿತಪದೇ ಕುತ್ರಾಪಿ ಚಾವಶ್ಯಕೇ ॥೨೪॥

ತಾತ್ಪರ್ಯ :


ದಕ್ಷಿಣ ದಿಕ್ಕಿನಲ್ಲಿ ಬತ್ತ ಬಡಿಯಲು ಉಪಯೋಗಿಸುವ ಮನೆಯನ್ನೂ, ಧಾನ್ಯಾಲಯವನ್ನೂ ಕಟ್ಟಬೇಕು. ಅಥವಾ ನೈಋತ್ಯ ಮೂಲೆಯಲ್ಲಿಯೂ ಆಗಬಹುದು. ಧನಾಲಯವನ್ನು ಉತ್ತರದಲ್ಲಿ, ಪೂರ್ವದಲ್ಲಿ, ಪಶ್ಚಿಮದಲ್ಲಿ ಅಥವಾ ಸಿಂಹ, ವೃಶ್ಚಿಕ, ತುಲಾ ಮತ್ತು ಕರ್ಕಟಕ ರಾಶಿಗಳ ಸ್ಥಾನಗಳಲ್ಲಿಯೂ ಅಥವಾ ಧಾನ್ಯಾಲಯಕ್ಕೆ ನಿರ್ದಿಷ್ಟವಾದ ಸ್ಥಾನಗಳಲ್ಲಿಯೂ (ದಕ್ಷಿಣ ಮತ್ತು ನೈಋತ್ಯ) ರಚಿಸಬಹುದು. ಕೆಲವು ಕಡೆ ಅಗತ್ಯ ಬಿದ್ದರೆ ಧಾನ್ಯಾಗಾರದ ಸ್ಥಳದಲ್ಲಿಯೇ ಧನಾಲಯವನ್ನೂ ಮಾಡಬಹುದು.

ವಿ.ವಿ. :

ಈ ಶ್ಲೋಕದಲ್ಲಿ ಬತ್ತ ಬಡಿದು ಸರಿ ಮಾಡುವ ಮನೆ, ಧಾನ್ಯಾಲಯ (ಬತ್ತವನ್ನು ಶೇಖರಿಸುವ ಸ್ಥಳ) ಮತ್ತು ಧನಾಲಯಗಳು ಇರಬೇಕಾದ ಸ್ಥಳಗಳನ್ನು ತಿಳಿಸಲಾಗಿದೆ. ಏಕಶಾಲೆಯಲ್ಲಿಯೂ ಇದರಲ್ಲಿ ನಿರ್ದೇಶಿಸಿದ ದಿಕ್ಕು ಮತ್ತು ಸ್ಥಳಗಳನ್ನು ಸ್ವೀಕರಿಸಬಹುದು.

ಖಜಾನೆಯನ್ನು ಉತ್ತರ ದಿಕ್ಕಿನ ಗೋಡೆಗೆ ತಾಗಿ ದಕ್ಷಿಣಮುಖವಾಗಿ ಪೂರ್ವದಲ್ಲಿ ಪಶ್ಚಿಮ ಮುಖವಾಗಿ ಪಶ್ಚಿಮದಲ್ಲಿ ಪೂರ್ವಮುಖವಾಗಿ ಇರುವಂತೆ ಇಡಬಹುದಾಗಿದೆ. ಅಲ್ಲದೆ ನೈಋತ್ಯ ದಿಕ್ಕು ಉತ್ತಮವಾಗಿದ್ದು ವಾಸ್ತುವಿನ ದೃಷ್ಟಿಯಲ್ಲಿ ಭಾರವನ್ನು ಹೊರುವ ಸಾಮರ್ಥ್ಯವನ್ನು ಹೊಂದಿರುವುದರಿಂದ ಆ ಭಾಗದಲ್ಲಿ ಮನೆಯ ಒಳಗೆ ಗ್ರೈಂಡರ್, ಫ್ರಿಜ್ ಲಿಫ್ಟ್ ಮೊದಲಾದ ಭಾರವಾದ ವಸ್ತುಗಳನ್ನು ಇಡಬಹುದು. ನೀರಿನ ಓವರ್ ಹೆಡ್ ಟ್ಯಾಂಕನ್ನೂ ನಿರ್ಮಿಸಬಹುದು.

1. ಬತ್ತ ಬಡಿಯುವ ಮನೆ 2. ಧಾನ್ಯಾಲಯ	} ದಕ್ಷಿಣ ದಿಕ್ಕು ಮತ್ತು ನೈಋತ್ಯ
3. ಧನಾಲಯ (ಖಜಾನೆ)	{ ಉತ್ತರ, ಪೂರ್ವ ಮತ್ತು ಪಶ್ಚಿಮ ದಿಕ್ಕುಗಳು ಕರ್ಕಟಕ, ಸಿಂಹ, ತುಲಾ ಮತ್ತು ವೃಶ್ಚಿಕ ರಾಶಿಸ್ಥಾನಗಳು.



1. ಪೂಜಾಲಯ 2. ಅತಿಥಿ ನಿವಾಸ
3. ಖಜಾನೆ 4. ಕುಟುಂಬದ ವಸತಿ
5. ಧಾನ್ಯಾಲಯ

ಚಿ. ೧೦೨, ಅ. ೭, ಶ್ಲೋ. ೨೨, ೨೪

೧೫. ಗೋಶಾಲೆಯ ಸ್ಥಾನ

ಶ್ಲೋಕ : ಕ್ಷೇತ್ರಸ್ಯ ಕೋಣಗತರಜ್ಜುಮತೀತ್ಯ ಯಾನಮ್
ನೇಚ್ಛಂತಿ ಕೇಚನ ಗವಾಮಖಿಲಾಸು ದಿಕ್ಷು
ಮುಖ್ಯಂ ವೃಷಂ ನ ಮೃಗರಾಟ್ ಕರಣೇಷು ಸಿಂಹ
ವ್ಯಾಘ್ರೌ ಸ್ಥಿರಂ ಚ ಕರಣಂ ಶುನಿಗರ್ದಭಾಖ್ಯೌ ॥೨೫॥

ತಾತ್ಪರ್ಯ :

ಎಲ್ಲ ದಿಕ್ಕುಗಳಲ್ಲಿಯೂ ದನಗಳು ಕೋಣಗತವಾದ ರಜ್ಜುಸೂತ್ರಗಳನ್ನು ದಾಟಿ ಹೋಗಬಾರದು. (ಆ ಸೂತ್ರಗಳನ್ನು ತಪ್ಪಿಸಿಯೇ ಗೋಶಾಲೆಯನ್ನು ನಿರ್ಮಿಸಬೇಕು) ಗೋಶಾಲೆಗಳಿಗೆ ವೃಷಭಯೋನಿ ಅತ್ಯಂತ ಪ್ರಶಸ್ತ. ಸಿಂಹಯೋನಿ ಆಗಲೇ ಬಾರದು. ಸಿಂಹ (ಬವ), ವ್ಯಾಘ್ರ (ಬಾಲವ), ಗಾರ್ದಭ (ತೈತಲ), ನಾಯಿ (ಶಕುನಿ) ಮತ್ತು ಸ್ಥಿರಕರಣಗಳು ಶುಭಕರವಲ್ಲ.

ವಿ.ವಿ. :

ಮನೆಯ ಅಡಿಸ್ಥಳದ ಸಮಚತುರಶ್ರಕ್ಕೆ ಕರ್ಣರೇಖೆಯಾಗಿ ಮೂಲೆಯಿಂದ ಮೂಲೆಗೆ ಎಳೆದ ಸೂತ್ರವೇ ರಜ್ಜುಸೂತ್ರವಾಗಿದೆ. ಈ ರಜ್ಜುಸೂತ್ರಗಳನ್ನು ದನಗಳು ದಾಟುವಂತೆ ಇರಬಾರದು.

ರಜ್ಜುಸೂತ್ರವನ್ನು ತಪ್ಪಿಸಿ ಗೋಶಾಲೆಯನ್ನು ನಿರ್ಮಿಸಬೇಕು. ಗೋಶಾಲೆಗೆ ವೃಷಭಯೋನಿ ಬಹಳ ಒಳ್ಳೆಯದು. ಸಿಂಹ ಯೋನಿಯಲ್ಲಿ ಗೋಶಾಲೆಯನ್ನು ಕಟ್ಟಲೇ ಬಾರದು. ಅಲ್ಲದೆ, ಬವ, ಬಾಲವ, ತೈತಲ, ಶಕುನಿ ಮತ್ತು ಸ್ಥಿರಕರಣಗಳು ಶುಭದಾಯಕಗಳಲ್ಲ.

ಶ್ಲೋಕ : ಗೋಶಾಲೇಂದ್ರಜಲೇ ಶಯೋರ್ವಿತಥ ಪೂಷಾಭ್ಯಂತರಾಲೇ ತಥಾ
ಪರ್ಜನ್ಯೈಂದ್ರಪದೇ ತಥಾ ಕುಸುಮದಂತ ದ್ವಾರಪಾಲಾಂತರೇ
ಭೃಂಗೇ ಶೋಷಪದೇಽಥವಾತ್ರ ಮಹಿಷಾಗಾರಂ ಯಮೇಽಪ್ಯುಕ್ಷಶಾ -
ಲಾಸ್ಮಿನ್ ಕ್ವಾಪ್ಯಥ ವಾಸ್ತುಮರ್ಮವಿಲಸಚ್ಛೂಲಂ ಸಮಸ್ತಂ ತ್ಯಜೇತ್ ॥೨೭॥

ತಾತ್ಪರ್ಯ :


ಗೋಶಾಲೆಯನ್ನು ಇಂದ್ರ ಮತ್ತು ವರುಣ ಪದಗಳಲ್ಲಿ, ವಿತಥ ಮತ್ತು ಪೂಷಪದಗಳ ಅಂತರಾಳದಲ್ಲಿ ಪರ್ಜನ್ಯ ಮತ್ತು ಜಯಂತ ಪದಗಳಲ್ಲಿ ಹಾಗೆಯೇ ಪುಷ್ಪದಂತ ಮತ್ತು ದ್ವಾರಪಾಲಪದಗಳ ಅಂತರಾಳದಲ್ಲಿ ಅಥವಾ ಭೃಂಗ ಮತ್ತು ಶೋಷಪದಗಳಲ್ಲಿ ನಿರ್ಮಿಸಬೇಕು. ಕೋಣಗಳ ಹಟ್ಟಿಯನ್ನು ಯಮಪದದಲ್ಲಿ ನಿರ್ಮಿಸಬೇಕು. ಎತ್ತುಗಳ ಹಟ್ಟಿಯನ್ನು ಯಮಪದದಲ್ಲಿ ರಚಿಸಬೇಕು ಅಥವಾ ಹಸುಗಳನ್ನು ಕಟ್ಟುವ ಸ್ಥಳಗಳಲ್ಲಿ ಎಲ್ಲಿಯೂ ಆಗಬಹುದು. ಆದರೆ ಹಟ್ಟಿಯನ್ನು (ಜಾನುವಾರುಗಳ ಕೊಟ್ಟಿಗೆ) ಕಟ್ಟುವಾಗ ಎಲ್ಲ ಕಡೆ ವಾಸ್ತುಮರ್ಮವನ್ನು ಬಿಡಲೇಬೇಕು.

ವಿ.ವಿ. :

ಗೋಶಾಲೆಯ ಅಂದರೆ ಹಸುಗಳ, ಎತ್ತುಗಳ ಮತ್ತು ಕೋಣ-ಎಮ್ಮೆಗಳ ಕೊಟ್ಟಿಗೆಯ ನಿರ್ಮಾಣ ಸ್ಥಾನಗಳನ್ನು ಈ ಶ್ಲೋಕದಲ್ಲಿ ತಿಳಿಯಪಡಿಸಲಾಗಿದೆ. ಆ ಸ್ಥಾನಗಳನ್ನು ಈ ಕೆಳಗಿನಂತೆ ಕ್ರೋಢೀಕರಿಸಿದರೆ ಸ್ಪಷ್ಟತೆ ಅಧಿಕವಾಗುತ್ತದೆ.

(1) ಗೋಶಾಲೆ : ವಾಸ್ತುಪದ		ಪದಸಂಖ್ಯೆ	ದಿಕ್ಕು
1.	ಇಂದ್ರಪದ	೪	ಪೂರ್ವ
2.	ವರುಣಪದ	೨೧	ಪಶ್ಚಿಮ
3.	ಪರ್ಜನ್ಯಪದ	೨	ಈಶಾನ್ಯ ಬಿಟ್ಟು ಪೂರ್ವ
4.	ಜಯಂತಪದ	೩	ಪೂರ್ವ
5.	ಭೃಂಗಪದ	೧೫	ದಕ್ಷಿಣ-ನೈಋತ್ಯಗಳ ಮಧ್ಯ
6.	ಶೋಷಪದ	೨೩	ಪಶ್ಚಿಮ-ವಾಯವ್ಯಗಳ ಮಧ್ಯ
7.	ವಿತಥಪದ } ಇವುಗಳ ಪೂಷಪದ } ಅಂತರಾಳ	೧೧ ೧೦	ಆಗ್ನೇಯ ಬಿಟ್ಟು ದಕ್ಷಿಣ
8.	ಪುಷ್ಪದಂತಪದ } ಇವುಗಳ ದ್ವಾರಪಾಲಪದ } ಅಂತರಾಳ	೨೦ ೧೮	ನೈಋತ್ಯ ಬಿಟ್ಟು ಪಶ್ಚಿಮ

(2) ಕೋಣಗಳ ಕೊಟ್ಟಿಗೆ :	ಯಮಪದ	೧೩	ದಕ್ಷಿಣ
(3) ಎತ್ತುಗಳ ಕೊಟ್ಟಿಗೆ :	ಯಮಪದ	೧೩	ದಕ್ಷಿಣ ಅಥವಾ ಹಸುಗಳ ಕೊಟ್ಟಿಗೆಯ ಸ್ಥಳ



ಚಿ. ೧೦೩, ಅ. ೭, ಶ್ಲೋ. ೨೬

೧೬. ಅಡಿಗೆ ಕೋಣೆ - ಭೋಜನಾಲಯ ಇತ್ಯಾದಿ

ಶ್ಲೋಕ : ಪರ್ಜನ್ಯೇ ಪಚನಾಲಯಂ ಶಿಖಿನಿ ವಾ ಮೇಷೇ ವೃಷೇ ವಾನಿಲೇ
ತತ್ರೈವಾಪಿ ಚ ಭುಕ್ತಿಸದ್ಮ ಮಕರೇ ಚಾಪಾಂಪತೌ ಚೇಷ್ಯತೇ
ಕುಂಭೇ ಸೌಖ್ಯಗೃಹಂ ತಥೈವ ಮಕರೇ ವಾಯೌ ತಥಾವಶ್ಯಕೇ
ಕರ್ತವ್ಯಂ ವೃಷಮೇಷಯೋರಿದಮಥೋ ವಾಯೌ ತಥೋಲೂಖಲಮ್ ॥೨೭॥

ತಾತ್ಪರ್ಯ :

ಅಡಿಗೆ ಕೋಣೆಯು ಪರ್ಜನ್ಯ ಪದದಲ್ಲಿ ಅಥವಾ ಅಗ್ನಿಕೋನದಲ್ಲಿ ಅಥವಾ ಮೇಷ ಮತ್ತು ವೃಷಭ ರಾಶಿಗಳಲ್ಲಿ ಅಥವಾ ವಾಯವ್ಯದಲ್ಲಿ ಇರಬೇಕು. ಆ ಸ್ಥಳಗಳಲ್ಲಿಯೇ ಭೋಜನಶಾಲೆಯೂ ಇರಬಹುದು. ಬೇಕಾದರೆ ಮಕರರಾಶಿಸ್ಥಾನದಲ್ಲಿಯೂ, ವರುಣಪದದಲ್ಲಿಯೂ ಭೋಜನಶಾಲೆ ಇರಬಹುದು. ವಿರಾಮದ ಮನೆಯನ್ನು ಕುಂಭರಾಶಿಸ್ಥಾನದಲ್ಲಿ, ಮಕರ ರಾಶಿಸ್ಥಾನದಲ್ಲಿ ಅಥವಾ ವಾಯವ್ಯದಲ್ಲಿ ಮಾಡಬೇಕು. ಅವಶ್ಯವಿದ್ದರೆ ವೃಷಭ ಮತ್ತು ಮೇಷ ರಾಶಿಸ್ಥಾನಗಳಲ್ಲಿಯೂ ಮಾಡಬಹುದು. ಅಲ್ಲದೆ, ಬತ್ತಕುಟ್ಟುವ ಸ್ಥಳವನ್ನು ವಾಯವ್ಯದಲ್ಲಿ ನಿರ್ಮಿಸಬೇಕು.

ವಿ.ವಿ. :

ಅಡಿಗೆ ಕೋಣೆ ಮೊದಲಾದವುಗಳ ಸ್ಥಳಗಳನ್ನು ಈ ರೀತಿ ನಮೂದಿಸಬಹುದು.


೧. ಅಡಿಗೆ ಕೋಣೆ : ಪರ್ಜನ್ಯಪದ (ಪೂರ್ವದಿಂದ ಎಡಬದಿಗೆ), ಆಗ್ನೇಯ ದಿಕ್ಕು, ವಾಯವ್ಯದಿಕ್ಕು, ಮೇಷ ಮತ್ತು ವೃಷಭ ರಾಶಿಸ್ಥಾನಗಳು (ಪೂರ್ವ). ಈಸ್ಥಾನಗಳಲ್ಲಿ ಒಲೆಗಳು ಸಮ ಸಂಖ್ಯೆಯಲ್ಲಿದ್ದು ಪೂರ್ವ ಪಶ್ಚಿಮ ಮುಖವಾಗಿ ಇರಬೇಕು. ದಕ್ಷಿಣೋತ್ತರವಾಗಿ ಇರಬಾರದು. ಆಗ್ನೇಯ ದಿಕ್ಕು

ಅಗ್ನಿ ದೇವತೆಯ ಸ್ಥಾನವಾದುದರಿಂದ ಅಗ್ನಿಗೆ ಸಂಬಂಧಿಸಿದ ಈಗಿನ ಟ್ರಾನ್ಸ್ ಫಾರ್ಮರ್, ಜನರೇಟರ್, ಬಾಯ್ಲರ್ ಮೊದಲಾದವುಗಳನ್ನು ಅಲ್ಲಿಯೇ ಇಡಬೇಕು.

೨. ಭೋಜನಾಲಯ : ಅಡಿಗೆ ಕೋಣೆ, ಮಕರ ರಾಶಿ (ವಾಯವ್ಯ - ಉತ್ತರಗಳ ಮಧ್ಯ) ವರುಣ ಪದ (ಪಶ್ಚಿಮ)

೩. ಸೌಖ್ಯಾಲಯ (ವಿರಾಮದ ಮನೆ) : ಕುಂಭರಾಶಿ (ಉತ್ತರ-ಈಶಾನ್ಯಗಳ ಮಧ್ಯ), ಮಕರ ರಾಶಿ (ವಾಯವ್ಯ-ಉತ್ತರಗಳ ಮಧ್ಯ) ವಾಯವ್ಯ ಮತ್ತು ಮೇಷ ಹಾಗೂ ವೃಷಭ ರಾಶಿಗಳು (ಪೂರ್ವ)

೪. ಬತ್ತುಕುಟ್ಟುವ ಮನೆ : ವಾಯವ್ಯ



ಪೂ

1. ಅಡುಗೆ ಕೋಣೆ 2. ಭೋಜನಾಲಯ
3. ಸೌಖ್ಯಾಲಯ 4. ಭತ್ತ ಕುಟ್ಟುವ ಸ್ಥಳ

ಚಿ. ೧೦೪, ಅ. ೭, ಶ್ಲೋ. ೨೭

೧೭. ಬಾವಿಯ ಸ್ಥಾನ

ಶ್ಲೋಕ : ಮೀನೇ ಕೂಪಮತೀವ ಮುಖ್ಯಮುದಿತಂ ಸರ್ವಾರ್ಥಪುಷ್ಟಿಪ್ರದಮ್
ಮೇಷೇ ಚಾಪಿ ಘಟೇ ಚ ಭೂತಿಕೃದಿದಂ ನಕ್ರೇ ವೃಷೇಽರ್ಥಪ್ರದಮ್
ಆಪೇ ಕೂಪಮಥಾಪವತ್ಸಕಪದೇ ಮುಖ್ಯಂ ತಥೈವೇಂದ್ರಜಿ -
ತ್ಕೋಷ್ಠೇ ದೃಷ್ಟಮಪಾಂಪತೌ ತು ಶುಭದಂ ನಾರೀಕ್ಷಯಂ ಮಾರುತೇ ॥೨೮॥

ತಾತ್ಪರ್ಯ :

ಮೀನರಾಶಿಯಲ್ಲಿ ಬಾವಿಯಿರುವುದು ಬಹಳ ಉತ್ತಮವೆಂದು ಹೇಳುತ್ತಾರೆ. ಅದು

ಸರ್ವಾರ್ಥಸಾಧಕವಾದುದಾಗಿದೆ. ಮೇಷ ಮತ್ತು ಕುಂಭ ರಾಶಿ ಸ್ಥಾನಗಳಲ್ಲಿ ತೋಡಿದ ಬಾವಿ ಉತ್ಕರ್ಷಕಾರಕವಾದುದಾಗಿದೆ. ಮಕರ ಮತ್ತು ವೃಷಭರಾಶಿ ಸ್ಥಾನಗಳಲ್ಲಿ ತೆಗೆದ ಬಾವಿ ಸಂಪತ್ಕಾರಕವಾದುದಾಗಿದೆ. ಹಾಗೆಯೇ ಆಪಪದ, ಆಪವತ್ಸಪದ, ಇಂದ್ರಜಿತ್‌ಪದ ಮತ್ತು ವರುಣಪದಗಳಲ್ಲಿ ತೋಡಿದ ಬಾವಿಯು ಶುಭಪ್ರದವಾದುದಾಗಿದೆ. ಆದರೆ ವಾಯವ್ಯ ದಿಕ್ಕಿನ ಬಾವಿ ತೀರ ಅಶುಭಕರವಾದುದಾಗಿದೆ. ಅದು ನಾರೀಕ್ಷಯಕ್ಕೆ ಕಾರಣವಾಗುತ್ತದೆ.


ವಿ.ವಿ. :

ಈ ಶ್ಲೋಕದಲ್ಲಿ ಮನೆಯ ಪರಿಸರದಲ್ಲಿ ಬಾವಿಯನ್ನು ತೋಡುವ ಸ್ಥಾನಗಳನ್ನು ನಿರ್ದೇಶಿಸಿರುತ್ತಾರೆ. ಅಲ್ಲದೆ ಆಯಾ ಸ್ಥಾನಗಳಲ್ಲಿ ತೋಡಿದ ಬಾವಿಯ ನೀರನ್ನು ಉಪಯೋಗಿಸುವುದರಿಂದಾಗುವ ಫಲವನ್ನೂ ತಿಳಿಸಿರುತ್ತಾರೆ. ಆ ಎಲ್ಲ ವಿಷಯವನ್ನು ಈ ಕೆಳಗೆ ಕ್ರೋಡೀಕರಿಸಿ ಕೊಡಲಾಗಿದೆ. ಇದರಿಂದ ಶ್ಲೋಕಾರ್ಥವನ್ನು ಸುಲಭದಲ್ಲಿ ತಿಳಿದುಕೊಳ್ಳಬಹುದಾಗಿದೆ.

ಇದಲ್ಲದೆ ಮನೆಯ ನಿವೇಶನದ ಈಶಾನ್ಯ ಭಾಗದಲ್ಲಿ ಬಾವಿಯನ್ನು ತೆಗೆಯುವಂತೆ ಕೊಳವೆ ಬಾವಿ, ಭೂಗತ ಟ್ಯಾಂಕ್ ಮೊದಲಾದವುಗಳನ್ನು ರಚಿಸಬಹುದು.

೧. ಬಾವಿಯ ಸ್ಥಾನ

	ರಾಶಿಸ್ಥಾನ/ಪದಸ್ಥಾನ	ದಿಕ್ಕುಗಳು	ಫಲ
೧.	ಮೀನ ರಾಶಿ	ಈಶಾನ್ಯ	ಸರ್ವಾರ್ಥಸಾಧಕ
೨.	ಮೇಷ ರಾಶಿ	ಈಶಾನ್ಯ-ಪೂರ್ವಗಳ ಮಧ್ಯ	ಉತ್ಕರ್ಷಕಾರಕ
೩.	ಕುಂಭ ರಾಶಿ	ಉತ್ತರ-ಈಶಾನ್ಯಗಳ ಮಧ್ಯ	
೪.	ಮಕರ ರಾಶಿ	ವಾಯವ್ಯ-ಉತ್ತರಗಳ ಮಧ್ಯ	ಸಂಪತ್ಕಾರಕ
೫.	ವೃಷಭ ರಾಶಿ	ಪೂರ್ವ-ಆಗ್ನೇಯಗಳ ಮಧ್ಯ	
೬.	ಆಪಪದ (ಪೈಶಾಚವೀಥಿಯಿಂದ ಒಳಗೆ)	ಈಶಾನ್ಯ	ಶುಭಪ್ರದ
೭.	ಆಪವತ್ಸಪದ (ಪೈಶಾಚವೀಥಿಯಿಂದ ಒಳಗೆ)	ಉತ್ತರ - ಈಶಾನ್ಯಗಳ ಮಧ್ಯ	
೮.	ಇಂದ್ರಜಿತ್‌ಪದ (ಪೈಶಾಚಿಕವೀಥಿಯಿಂದ ಒಳಗೆ)	ನೈಋತ್ಯ-ಪಶ್ಚಿಮಗಳ ಮಧ್ಯ	
೯.	ವರುಣಪದ	ಪಶ್ಚಿಮ	
೧೦.	ಮರುತ್ಪದ	ವಾಯುವ್ಯ	ನಾರೀಕ್ಷಯ



ಬಾವಿಯ ಸ್ಥಾನಗಳು
ಚಿ. ೧೦೫, ಅ. ೭, ಶ್ಲೋ. ೨೮, ೨೯

೧೮. ಕೆರೆಯ ಸ್ಥಾನ

ಶ್ಲೋಕ : ಕೂಪಂ ಶೋಭನಮಂತರಿಕ್ಷಕಪದೇsಪ್ಯೇವಂ ತಟಾಕಂ ಹಿತಮ್
ಮಾಹೇಂದ್ರೇ ಚ ಮಹೀಧರೇ ಚ ವರುಣೇ ಸೋಮೇ ಶಿವೇ ಮೇಷಭೇ
ವಾಯೌ ವಾ ನಿಋತೌ ಚ ದೃಷ್ಟಮಥವಾ ಸ್ನಾನಾದಿಪಾನಾದಿಷು
ಪ್ರಾಯೋ ನೈಕಜಲಂ ನದೀಜಲಮೃತೇsತೋsನ್ಯತ್ ಪೃಥಕ್ ಕಲ್ಪಯೇತ್ ॥೨೯॥

ತಾತ್ಪರ್ಯ :


ಅಂತರಿಕ್ಷ ಪದದಲ್ಲಿ ಬಾವಿ ತೋಡುವುದು ಮಂಗಲಪ್ರದವಾಗಿದೆ. ಅದೇ ರೀತಿ ಮಹೇಂದ್ರಪದ, ಮಹೀಧರಪದ, ವರುಣಪದ, ಸೋಮಪದ, ಈಶಾನಪದ ಮತ್ತು ಮೇಷರಾಶಿಸ್ಥಾನದಲ್ಲಿ ಕೆರೆಯನ್ನು ತೋಡುವುದು ಹಿತಕಾರಿಯಾಗಿದೆ. ಅಲ್ಲದೆ ವಾಯವ್ಯ ಮತ್ತು ನೈಋತ್ಯ ಕೋನಗಳಲ್ಲಿ ಕೆರೆಯನ್ನು ನಿರ್ಮಿಸುವುದು ಒಳ್ಳೆಯದೆಂದು ಕಂಡುಬಂದಿದೆ. ನದಿಯ ನೀರು ಇಲ್ಲದೇ ಹೋದಲ್ಲಿ ಸ್ನಾನಮಾಡಲಿಕ್ಕೆ ಮತ್ತು ಕುಡಿಯಲಿಕ್ಕೆ ನೀರು ಸಾಕಾಗದೆ ಇರುವುದರಿಂದ ಸ್ನಾನ ಮತ್ತು ಕುಡಿಯುವುದಕ್ಕೆ ಕೆರೆ ಮತ್ತು ಬಾವಿಗಳ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಬೇಕು.

ವಿ.ವಿ. :

ಈ ಶ್ಲೋಕದಲ್ಲಿ ಪುನಃ ಬಾವಿಯ ಸ್ಥಾನವನ್ನು ನಿರ್ದೇಶಿಸಲಾಗಿದೆ. ಅಲ್ಲದೆ ಕೆರೆಯ

ಸ್ಥಾನವನ್ನು ಕೂಡ ತಿಳಿಸಲಾಗಿದೆ.

	ಪದಸ್ಥಾನ/ ರಾಶಿಸ್ಥಾನ	ಪದಸಂಖ್ಯೆ	ದಿಕ್ಕು	ಫಲ
೧. ಕೂಪ (ಬಾವಿ):	ಅಂತರಿಕ್ಷಪದ	8	.	
೨. ಕೆರೆ :	ಇಂದ್ರಪದ	4	ಪೂರ್ವ	ಮಂಗಲದಾಯಕ
	ಮಹೀಧರಪದ	44	ಉತ್ತರ	
	ವರುಣಪದ	21	ಪಶ್ಚಿಮ	
	ಸೋಮಪದ	29	ಉತ್ತರ	ಹಿತಕಾರಕ
	ಶಿವಪದ	1	ಈಶಾನ್ಯ	
	ಮೇಷರಾಶಿ		ಈಶಾನ್ಯ ಪೂರ್ವಗಳ ಮಧ್ಯ	
	ವಾಯವ್ಯ		ವಾಯವ್ಯ	
	ನೈಋತ		ನೈಋತ್ಯ	



ಕೆರೆಯ ಸ್ಥಾನಗಳು

ಚಿ. ೧೦೭, ಅ. ೭, ಶ್ಲೋ. ೨೯

ಶ್ಲೋಕ : ಆಗ್ನೇಯ್ಯಾಂ ಭವನಸ್ಯ ಕೂಪಖನನಂ ಪೂರ್ವಂ ಕೃತಂ ವಾ ತಥಾ
ವಾಪೀ ದಾಹಭಯಾದಿಕಂ ಪ್ರಕುರುತೇ ತದ್ವತ್ ಫಲಂ ದಕ್ಷಿಣೇ
ಗ್ರಾಮಾದೇರಪಿ ದೀರ್ಘಿಕಾದಿ ಕತಿಚಿನ್ನೇಚ್ಛಂತಿ ಯಾಮ್ಯೇ ತಥೈ -
ವಾರಾಮೋ ಗೃಹಸನ್ನಿಧೌ ಫಣಭೃತಾಂ ವಾಸೋಽಪಿ ನೈವೇಷ್ಯತೇ ॥೩೦॥

ತಾತ್ಪರ್ಯ :

ಮನೆಯ ಆಗ್ನೇಯ ದಿಕ್ಕಿನಲ್ಲಿ ಮೊದಲೇ ಮಾಡಿದ ಬಾವಿ ಮತ್ತು ಕೆರೆಯಿದ್ದರೆ ಅಗ್ನಿಭಯವನ್ನು ಉಂಟುಮಾಡುತ್ತದೆ (ಬೆಂಕಿಯಂತೆ ನಾಶಕಾರಕವಾಗುತ್ತದೆ). ದಕ್ಷಿಣ ದಿಕ್ಕಿನಲ್ಲಿದ್ದರೂ ಅದೇ ಫಲ ಸಿಗುತ್ತದೆ. ಗ್ರಾಮಾದಿಗಳಲ್ಲಿಯೂ ದಕ್ಷಿಣಭಾಗದಲ್ಲಿ ಕೆರೆ ಮತ್ತು ಬಾವಿಗಳನ್ನು ತೋಡುವುದು ಒಳ್ಳೆಯದಲ್ಲವೆಂದು ಅದನ್ನು ಒಪ್ಪುವುದೇ ಇಲ್ಲ. ಅದೇ ರೀತಿ ಮನೆಯ ಸಮೀಪದಲ್ಲಿ ಉಪವನವಾಗಲೀ, ನಾಗಬನವಾಗಲೀ ಇರುವುದನ್ನು ಶಾಸ್ತ್ರಜ್ಞರು ಬಯಸುವುದಿಲ್ಲ.

ವಿ.ವಿ. :

ಮನೆಯ ಆಗ್ನೇಯ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಮೊದಲೇ ಮಾಡಿದ ಬಾವಿ ಅಥವಾ ಕೆರೆಗಳಿದ್ದರೂ ಅವುಗಳನ್ನು ಮುಚ್ಚುವುದು ಒಳ್ಳೆಯದು. ಒಂದು ವೇಳೆ ಮುಚ್ಚದೇ ಇದ್ದು ಅವುಗಳ ನೀರನ್ನು ಉಪಯೋಗಿಸಿದರೆ ಅದು ವಿನಾಶವನ್ನು ತಂದೊಡ್ಡುತ್ತದೆ. ಮನೆ ಮಾತ್ರವಲ್ಲ ಗ್ರಾಮಾದಿಗಳಲ್ಲಿಯೂ ಕೂಡ ಆಗ್ನೇಯ ಮತ್ತು ದಕ್ಷಿಣ ಭಾಗಗಳಲ್ಲಿ ಕೆರೆ ಬಾವಿಗಳನ್ನು ರಚಿಸಬಾರದು. ರಚಿಸಿದರೆ ಅದರಿಂದ ಕೆಟ್ಟದ್ದೇ ಆಗುತ್ತದೆ ವಿನಾ ಒಳ್ಳೆಯದಾಗುವುದಿಲ್ಲ.

ವಾಸಮಾಡುವ ಮನೆಯ ಸಮೀಪದಲ್ಲಿ ಉಪವನ ಅಥವಾ ನಾಗಬನಗಳು ಇರಬಾರದು. ಅದಕ್ಕಾಗಿ ನಾಗಬನ - ಉಪವನಗಳಿರುವಲ್ಲಿ ಅವುಗಳ ಸಮೀಪ ಮನೆಗಳನ್ನು ನಿರ್ಮಿಸಲೇಬಾರದು.

ಬಾವಿ-ಕೆರೆ (೧) ಆಗ್ನೇಯ ದಿಕ್ಕು
(೨) ದಕ್ಷಿಣ ದಿಕ್ಕು } ಅಗ್ನಿಭಯ

ಶ್ಲೋಕ : ರಾಜ್ಞಾಂ ಧಾಮನಿ ಭೂಸುರಸ್ಯ ಚ ಗೃಹೇ ನಿತ್ಯಾರ್ಚನಾಯಾಂಗಣೇ
ಶರ್ವೇಂದ್ರಾಗ್ನಿಜಲೇಶದಿಕ್ಷು ಕುಲದೈವಾರ್ಚಾ ಪ್ರತಿಷ್ಠಾದಿ ಚ
ಪ್ರಾಸಾದಾದಿವಿಧಾನಮೀಶಸುರನಾಥಾಗ್ನ್ಯಂತಕಾಶಾಗತಂ
ಕೇತೂತ್ಥಂ ವೃಷಜಂ ಕರೋತು ಚ ನಿಋತ್ಯಾದೌ ಕ್ರಮಾಚ್ಛ್ರೇಯಸೇ ॥೩೧॥

ತಾತ್ಪರ್ಯ :

ರಾಜರ ಅರಮನೆಯಲ್ಲಿ ಮತ್ತೂ ಬ್ರಾಹ್ಮಣರ ಮನೆಯಲ್ಲಿ ನಿತ್ಯಪೂಜೆಗಾಗಿ ಅಂಗಳದಲ್ಲಿ ಹಾಗೂ ಕುಲದೇವತಾರ್ಚನೆ, ದೇವಪ್ರತಿಷ್ಠೆ ಮೊದಲಾದವುಗಳನ್ನು ಮಾಡುವ ಸಲುವಾಗಿ ಈಶಾನ್ಯ, ಪೂರ್ವ, ಆಗ್ನೇಯ ಅಥವಾ ಪಶ್ಚಿಮ ದಿಕ್‌ಸ್ಥಾನಗಳಲ್ಲಿ ಪ್ರಾಸಾದಾದಿಗಳನ್ನು ಕಲ್ಪಿಸಬೇಕು. ಈಶಾನ್ಯ, ಪೂರ್ವ, ಆಗ್ನೇಯ ಮತ್ತು ದಕ್ಷಿಣ ದಿಕ್ಕುಗಳ ಪ್ರಾಸಾದಾದಿಗಳು ಧ್ವಜಯೋನಿಯಲ್ಲಿ ಇರಬೇಕು. ಅಲ್ಲದೆ ನೈಋತ್ಯ ಮೊದಲ್ಗೊಂಡ ದಿಕ್ಕುಗಳ ಪ್ರಾಸಾದಾದಿಗಳು ವೃಷಭಯೋನಿಯಲ್ಲಿರಬೇಕು. ಹಾಗಿದ್ದರೆ ಅದು ಶ್ರೇಯಸ್ಕರವಾಗಿದೆ.

ಶ್ಲೋಕ : ಸೇವಿತಕುಲದೈವತಧಾಮ್ನೈಶನಿಋತ್ಯಾದಿ ಕೇತುವೃಷಭಂ ಸ್ಯಾತ್
ಗೃಹಪುರಪತ್ತನನಗರಗ್ರಾಮಾದಾವಭಿಮುಖಾ ಭವಂತಿ ತದಾ ॥೩೨॥

ತಾತ್ಪರ್ಯ :

ತಾನು ಪೂಜಿಸುವ ಕುಲದೇವತೆಯ ಆಲಯವನ್ನು ಈಶಾನ್ಯಾದಿ ಭಾಗಗಳಲ್ಲಿ ಧ್ವಜಯೋನಿಯಲ್ಲಿ ರಚಿಸಬೇಕು. ನೈಋತ್ಯಾದಿ ಭಾಗಗಳಲ್ಲಿ ವೃಷಭಯೋನಿಯಲ್ಲಿರಬೇಕು. ಆ ದೇವತೆಗಳು ಮನೆ ಪುರ, ಪಟ್ಟಣ, ನಗರ, ಗ್ರಾಮಾದಿಗಳಿಗೆ ಅಭಿಮುಖಿಗಳಾಗಿರುತ್ತವೆ.

ಶ್ಲೋಕ : ನಿರಂಗಸಾಂಗಾದಿವಿಭಿನ್ನಗೇಹಪ್ರತಿಷ್ಠಿತಾ ಯಾಃ ಪ್ರತಿಮಾಸ್ತು ತಾಸಾಮ್
ಚಲಾಚಲತ್ವೋಭಯಭೇದತಸ್ತತ್ಕ್ರಿಯಾವಶಾಚ್ಚಾಪಿ ಭವೇದ್ವಿಶೇಷತಃ ॥೩೩॥

ತಾತ್ಪರ್ಯ :

ದೇವಾಲಯಕ್ಕೆ ಬೇಕಾದ ಎಲ್ಲ ಅವಯವ (ಸಾಂಗ)ಗಳಿರುವ ಮತ್ತು ಅವಯವಗಳಿಲ್ಲದ (ನಿರಂಗ) ಬೇರೆ ಬೇರೆ ದೇವಾಲಯಗಳಲ್ಲಿ ಪ್ರತಿಷ್ಠಿತವಾದ ದೇವತೆಗಳನ್ನು ಅವುಗಳ ಚಲತ್ವ ಮತ್ತು ಅಚಲತ್ವಭೇದಕ್ಕೆ ಅನುಗುಣವಾಗಿ ಅರ್ಚಿಸಿದರೆ ಅವುಗಳು ವಿಶೇಷವಾದ ಶಕ್ತಿಯುಳ್ಳವುಗಳಾಗುತ್ತವೆ.

೧೯. ರಾಜರ ವಿವಿಧ ರೀತಿಯ ಆಲಯಗಳು

ಶ್ಲೋಕ : ಸೌಖ್ಯಾರ್ಥಂ ಧರಣೀಭೃತಾಂ ಮಣಿಗೃಹಂ ಮಿತ್ರೇ ವಿಹಾರೋಽನಿಲೇ
ವ್ಯಾಯಾಮೋಽರ್ಗಲಕೇ ತಥೈವ ನಿಋತೌ ಸ್ನಾನಾದಿಪರ್ಜನ್ಯಕೇ
ಇಂದ್ರೇ ತೋಯಪತೌ ಚ ಭುಕ್ತಿನಿಲಯಂ ನೃತ್ತಾದಿಗಾಂಧರ್ವಕೇ
ಶಸ್ತ್ರಾದ್ಯಂ ನಿಋತೌ ಗೃಹಕ್ಷತಪದೇ ಪ್ರಾಚ್ಯೇ ಚ ಶಯ್ಯಾಗೃಹಂ ॥೩೪॥

ತಾತ್ಪರ್ಯ :


ರಾಜರುಗಳ ಸುಖಸಂತೋಷಕ್ಕಾಗಿ ಮಣಿಖಚಿತವಾದ ವೈಭವದ ಗೃಹವನ್ನು ಮಿತ್ರ ಪದದಲ್ಲಿಯೂ, ವಿಹಾರಗೃಹವನ್ನು ವಾಯುಪದದಲ್ಲಿಯೂ, ವ್ಯಾಯಾಮ ಶಾಲೆಯನ್ನು ಅರ್ಗಲ ಪದದಲ್ಲಿ ಮತ್ತು ನಿಋತಿಪದದಲ್ಲಿಯೂ, ಸ್ನಾನಾಲಯಾದಿಗಳನ್ನು ಪರ್ಜನ್ಯಪದದಲ್ಲಿಯೂ, ಭೋಜನಾಲಯವನ್ನು ಇಂದ್ರ ಮತ್ತು ವರುಣ ಪದಗಳಲ್ಲಿಯೂ, ನೃತ್ಯಶಾಲಾದಿಗಳನ್ನು ಗಂಧರ್ವ ಪದದಲ್ಲಿಯೂ, ಶಸ್ತ್ರಾಗಾರವನ್ನು ನಿಋತಿಪದದಲ್ಲಿಯೂ, ಶಯ್ಯಾಗೃಹವನ್ನು ಗೃಹಕ್ಷತಪದ ಮತ್ತು ಪೂರ್ವದಿಕ್ಕಿನಲ್ಲಿಯೂ ನಿರ್ಮಿಸಬೇಕು.

ವಿ.ವಿ. :

ರಾಜ ಪ್ರಭುತ್ವದ ಕಾಲದಲ್ಲಿ ರಾಜರುಗಳಿಗೆ ನಿರ್ದೇಶಿಸಿದ ಶಾಸ್ತ್ರವಿಧಿಯನ್ನು ಪ್ರಜಾಪ್ರಭುತ್ವದಲ್ಲಿ ರಾಷ್ಟ್ರಾಧ್ಯಕ್ಷರು, ರಾಜ್ಯಪಾಲರು ಮೊದಲಾದವರಿಗೆ ಅನ್ವಯಿಸುವುದು ಸೂಕ್ತವಾಗಿದೆ. ಆದುದರಿಂದ ಈ ಮೇಲಿನ ಶ್ಲೋಕದಲ್ಲಿ ನಿರ್ದೇಶಿಸಿದ ರಾಜರುಗಳ

ಸೌಖ್ಯಾಲಯಾದಿಗಳನ್ನು ರಾಷ್ಟ್ರಾಧ್ಯಕ್ಷರು ಮೊದಲಾದ ರಾಷ್ಟ್ರದ ಉನ್ನತ ಹುದ್ದೆಗಳ ಸ್ಥಾನಗಳಿಗೆ ಅನ್ವಯಿಸಬಹುದು. ಅಂಥವರಿಗೆ ಮೀಸಲಾದ ವಿರಾಮಗೃಹ ಮೊದಲಾದವುಗಳ ಸ್ಥಾನ ನಿರ್ದೇಶವನ್ನು ಇಲ್ಲಿ ಕೊಡಲಾಗಿದೆ.

	ಆಲಯಗಳು	ಸ್ಥಾನಪದಗಳು	ಪದಸಂಖ್ಯೆ	ದಿಕ್ಕು
೧.	ರಾಜರ ಸೌಖ್ಯಾಗಾರ	ಮಿತ್ರ ಪದ	೫	ಪೂರ್ವ
೨.	ವಿಹಾರದ ಮನೆ	ವಾಯು ಪದ	೨೫	ವಾಯವ್ಯ
೩.	ವ್ಯಾಯಾಮ ಶಾಲೆ	ಅರ್ಗಲ ಪದ ನಿಋೃತಿ ಪದ	೩೦ ೧೭	ಉತ್ತರಕ್ಕೆ ಒತ್ತಿ ಈಶಾನ್ಯ ನೈಋತ್ಯ
೪.	ಸ್ನಾನಾಲಯ	ಪರ್ಜನ್ಯಪದ	೨	ಈಶಾನ್ಯಕ್ಕೆ ಒತ್ತಿ ಪೂರ್ವ
೫.	ಭೋಜನಾಲಯ	ಇಂದ್ರಪದ ವರುಣ ಪದ	೪ ೨೧	ಪೂರ್ವಕ್ಕೆ ಒತ್ತಿ ಈಶಾನ್ಯ ಪಶ್ಚಿಮ
೬.	ನೃತ್ಯಶಾಲೆ	ಗಂಧರ್ವ ಪದ	೧೪	ದಕ್ಷಿಣಕ್ಕೆ ಒತ್ತಿ ನೈಋತ್ಯ
೭.	ಶಸ್ತ್ರಶಾಲೆ	ನಿಋತಿ ಪದ	೧೭	ನೈಋತ್ಯ
೮.	ಶಯ್ಯಾಗೃಹ	ಗೃಹಕ್ಷತ ಪದ ಪೂರ್ವ ದಿಕ್ಕು	೧೨	ದಕ್ಷಿಣಕ್ಕೆ ಒತ್ತಿ ಆಗ್ನೇಯದ ಕಡೆ ಪೂರ್ವ



1. ರಾಜನ ಸೌಖ್ಯಾಗಾರ
2. ವಿಹಾರ ಗೃಹ
3. ವ್ಯಾಯಾಮ ಶಾಲೆ
4. ಸ್ನಾನ ಗೃಹ
5. ಭೋಜನಾಲಯ
6. ನೃತ್ಯ ಶಾಲೆ
7. ಶಸ್ತ್ರಾಗಾರ
8. ಶಯ್ಯಾಗೃಹ

ರಾಜರ ಗೃಹ ಸಮೂಹ

ಚಿ. ೧೦೭, ಅ. ೭, ಶ್ಲೋ. ೩೪

೨೦. ಪ್ರಾಕಾರ ರಚನೆ

ಶ್ಲೋಕ : ದಂಡಾಂತಂ ಸಮತೀತ್ಯ ವಪ್ರಮುದಿತಂ ಮೃದ್ಭಿಃ ಶಿಲಾದ್ಯೈಸ್ತಥಾ
ಶ್ರೇಷ್ಠಂ ತತ್ ಪರಿಖಾ ತು ಮಧ್ಯಮಮಥೋ ಶಾಖಾವೃತಿಶ್ಚಾಧಮಮ್
ತತ್ಪಾದಾದಿಷು ಕಂಟಕಿದ್ರುಮಲತಾ ಗ್ರಾಹ್ಯಾಶ್ಚ ವೇಣ್ವಾದಯಃ
ಕುರ್ಯಾತ್ ದ್ರವ್ಯವಶಾದಿಹೈಕಮುದಿತಾನ್ ವೃಕ್ಷಾಂಶ್ಚ ದಿಕ್ಷು ಕ್ರಮಾತ್ ||೩೫||

ತಾತ್ಪರ್ಯ :

ಒಂದು ದಂಡದಷ್ಟು ಸ್ಥಳವನ್ನು ಬಿಟ್ಟು ಅದರ ಹೊರಗೆ ಪ್ರಕಾರವನ್ನು ರಚಿಸಬೇಕು. ಅದನ್ನು ಮಣ್ಣು, ಕಲ್ಲು ಮೊದಲಾದವುಗಳಿಂದ ನಿರ್ಮಿಸಿದರೆ ಅತ್ಯುತ್ತಮ. ತೋಡಿ ಅಗಳು ಮಾಡುವುದು ಮಧ್ಯಮ. ಗೆಲ್ಲುಗಳನ್ನು ನೆಟ್ಟು ಮಾಡುವುದು ಅಧಮ. ಪ್ರಾಕಾರದ ಬುಡದಲ್ಲಿ ಮುಳ್ಳುಗಳಿರುವ ಮರ ಅಥವಾ ಬಳ್ಳಿಗಳಿದ್ದರೆ ಒಳ್ಳೆಯದು. ಬಿದಿರು ಮೊದಲಾದವುಗಳನ್ನು ನೆಡಬಹುದು. ಮಾಡುವವನ ಬಂಡವಾಳದ ಅನುಕೂಲಕ್ಕೆ ತಕ್ಕಂತೆ ಪ್ರಾಕಾರಗಳನ್ನು ಎಷ್ಟು ಉತ್ತಮ ರೀತಿಯಲ್ಲಿಯೂ ಮಾಡಬಹುದು. ಅಲ್ಲದೆ ಪ್ರಾಕಾರದ ಒಳಗೆ ಆಯಾಯ ದಿಕ್ಕುಗಳಲ್ಲಿ, ಹಿಂದೆ ಹೇಳಿದ ತಕ್ಕುದಾದ ಮರಗಳನ್ನು ಕ್ರಮವರಿತು ನೆಡಬೇಕು.

ಶ್ಲೋಕ : ಏವಂ ನಿರ್ಮಾಪ್ಯ ಗೇಹಂ ಪ್ರಥಮಮಿಹ ವೃತ್ತಸ್ತಂತ್ರಿವರ್ಯಸ್ತದಂತೇ
ತತ್ಕರ್ತ್ರೂನ್ ಶಿಲ್ಪಿನಸ್ತಾನ್ ವಲಯಮಣಿಲಸತ್ಕುಂಡಲಾದ್ಯೈರ್ಯಥೇಷ್ಟಮ್
ಸಂತೋಷ್ಯಾಪಾದ್ಯ ಚೈತತ್ ಸ್ವಯಮಪಿ ಯಜಮಾನೇನ ಸಮ್ಯಙ್ಮುಹೂರ್ತೇ
ಗತ್ವಾ ತದ್ವಾಸ್ತುಪೂಜಾದ್ಯಖಿಲಶುಭವಿಧೀನ್ ಸಾಧು ಕುರ್ವೀತ ತಸ್ಮಿನ್ ||೩೬||

ತಾತ್ಪರ್ಯ :

ಈ ರೀತಿಯಾಗಿ ಮನೆಯನ್ನು ನಿರ್ಮಿಸಿ ಮೊದಲು ಗೊತ್ತುಮಾಡಿದ ತಂತ್ರಿವರ್ಯರನ್ನು ಮತ್ತು ಶಿಲ್ಪಿಗಳನ್ನು ಬಳೆ, ಮಣಿಖಚಿತವಾದ ಕುಂಡಲಗಳು ಮೊದಲಾದವುಗಳನ್ನು ಅವರಿಗೆ ಯಥೇಷ್ಟವಾಗಿ ಕೊಟ್ಟು, ಸಂತೋಷಗೊಳಿಸಿ ಅವರಿಂದ ಮನೆಯನ್ನು ಸ್ವೀಕರಿಸಬೇಕು. ಅನಂತರ ಶುಭಮುಹೂರ್ತದಲ್ಲಿ ಮನೆಗೆ ಹೋಗಿ ಅಲ್ಲಿ ವಾಸ್ತುಪೂಜೆ ಮೊದಲಾದ ಎಲ್ಲ ಶುಭಕಾರ್ಯಗಳನ್ನು ಯಜಮಾನನಾದವನು ಮಾಡಬೇಕು.

ಶ್ಲೋಕ : ಕರ್ತಾ ಚಾಥ ಕ್ರಿಯಾಂತೇ ಮಹಿತಗುರುವರಂ ಭೋಜಯಿತ್ವಾ ಯಥೇಷ್ಟಮ್
ಗೋಭೂಮ್ಯಾದ್ಯಂ ಚ ದತ್ವಾ ವಿಧಿವದವಹಿತೋ ದಕ್ಷಿಣಾಂ ಮುಖ್ಯರೂಪಾಮ್
ಆಜ್ಞಾಮಾದಾಯ ತಸ್ಮಾನ್ನಿಖಿಲಮಪಿ ಜನಂ ಪ್ರೀಣಯನ್ ಭೂರಿದಾನೈಃ
ಸ್ವೀಯೈಃ ಸಾರ್ಧಂ ಸ್ವಗೇಹೇ ಸುಚಿರಮಧಿವಸೇತ್ ಪೂರ್ಣಕಾಮಃ ಸುಖೇನ ||೩೭||

ತಾತ್ಪರ್ಯ :


ಅನಂತರ ಯಜಮಾನನು ಪೂಜಾದಿಕ್ರಿಯೆಗಳನ್ನು ನೆರವೇರಿಸಿ, ಆಚಾರ್ಯನಿಗೆ ಯಥೇಷ್ಟವಾದ

ಭೋಜನವನ್ನು ಕೊಟ್ಟು, ಗೋವು, ಭೂಮಿ ಮೊದಲಾದ ದಾನಗಳಿಂದಲೂ ದಕ್ಷಿಣೆಗಳಿಂದಲೂ ಅವನನ್ನು ಶಾಸ್ತ್ರೋಕ್ತವಾಗಿ ಸಂತೋಷಗೊಳಿಸಿ, ಅವನ ಅನುಮತಿಯನ್ನು ಪಡೆದು ಎಲ್ಲ ಜನರನ್ನೂ ಭೂರಿದಾನಗಳಿಂದ ಸಂತೋಷಗೊಳಿಸಬೇಕು. ಅನಂತರ ಪೂರ್ಣಕಾಮನಾಗಿ ತನ್ನವರೊಂದಿಗೆ ಆ ತನ್ನ ಮನೆಯಲ್ಲಿ ಸುಖದಿಂದ ಬಹುಕಾಲ ವಾಸಮಾಡಬೇಕು.


ಇತಿ ಮನುಷ್ಯಾಲಯ ಚಂದ್ರಿಕಾಯಾಂ ಬಾಹ್ಯಗೇಹ ಕೂಪತಟಾಕಾದಿ

ವಿಧಾನಂ ನಾಮ ಸಪ್ತಮೋಧ್ಯಾಯಃ

ಈ ರೀತಿ ಮನುಷ್ಯಾಲಯ ಚಂದ್ರಿಕೆಯಲ್ಲಿ ಬಾಹ್ಯಗೇಹ, ಕೂಪ ತಟಾಕಾದಿವಿಧಾನವೆಂಬ ಏಳನೇ ಅಧ್ಯಾಯವು ಮುಗಿದುದು.




ಹಳೆಯ ಬಾಗಿಲಿನ ಮಾದರಿ



ವಿಷ್ಕಂಭಪಾದದ ಜೋಡಣೆ - ವಿವರ : ಅ. ೬ ಶ್ಲೋ. ೨

(ಹಳೆಯ ಒಂದು ಮಾದರಿ)




ಪಕಾಸುಗಳ ಜೋಡಣೆ - ವಿವರ : ಅ. ೭ ಶ್ಲೋ. ೭
(ಹಳೆಯ ಒಂದು ಮಾದರಿ)




ಕೂಟ - ವಿವರ : ಅ. ೭ ಶ್ಲೋ. ೭
(ಹಳೆಯ ಒಂದು ಮಾದರಿ)



ತ್ರಿಕ್ಕಂಡಿಯೂರು - ಆನಂದ ಮೂರ್ತಿ ಈಶ್ವರ ದೇವಸ್ಥಾನ
(ದೇವಾಲಯದ ಪಕ್ಕದಲ್ಲಿ ಲೇಖಕರು)




ರಾಯಿರಿಮಂಗಲ ಗ್ರಾಮದಲ್ಲಿ ನೃಸಿಂಹ - ಯಾದವ ದೇವಸ್ಥಾನಗಳಿಂದ 200 ಮೀ
ದೂರದಲ್ಲಿರುವ ತಿರುಮಂಗಲವೆಂಬ ಸ್ಥಳ.




ರಾಜ ರಾಜ ಮಂಗಲ (ರಾಯಿರಿಮಂಗಲ) - ನರಸಿಂಹ - ಯಾದವ ದೇವಸ್ಥಾನ




ಹನುಮಾನ್ ಮೂರ್ತಿ - ಆಲತ್ತೂರು



ತಿರುಮಂಗಲವೆಂಬ ಮನೆ (ತೃಪ್ರಂಗೋಡ್ ಸಮೀಪ - 100ಮೀ ದೂರದಲ್ಲಿ)




ಮುಳ್ಳಪಳ್ಳಿ (ವೇಮನ್ನ)



ಆಲತ್ತೂರು (ಪ್ಯೊಲಿಶೆರಿ) ಹನುಮಾನ್ ದೇವಸ್ಥಾನ



ತೃಪ್ರಂಗೋಟ್ ಈಶ್ವರ ದೇವಸ್ಥಾನ



(ಕೆ. ಪುರಂ) - ಕೇರಳಾಧೀಶ್ವರಪುರಂ (ಬೆಣ್ಣೆ ಕೃಷ್ಣ) ದೇವಾಲಯ
(ದೇವಾಲಯದ ಮುಂಭಾಗದಲ್ಲಿ ಲೇಖಕರು)



ಸುಪ್ರೀಂ ಕೋರ್ಟಿನ ನಿವೃತ್ತ ಮುಖ್ಯನ್ಯಾಯಾಧೀಶರಾದ ಜ| ಎಂ. ಎನ್. ವೆಂಕಟಾಚಲಯ್ಯ ರವರು "ಮುನಿಯಂಗಳ ಕೃಷ್ಣ ಭಟ್ಟ" ಎಂಬ ವಾಸ್ತುಶಿಲ್ಪದ ಆಕರ ಗ್ರಂಥವನ್ನು ಬಿಡುಗಡೆ ಮಾಡುವ ಸಮಾರಂಭ. ತಾ. 16-10-97



ವಿಷ್ಕಂಭಪಾದದ ಜೋಡಣೆ - ವಿವರ : ಅ. ೬ ಶ್ಲೋ. ೨
(ಹಳೆಯ ಒಂದು ಮಾದರಿ)

ಅನುಬಂಧ

೧. ಮನುಷ್ಯಾಲಯಚಂದ್ರಿಕೆಯಲ್ಲಿ ಹೆಸರಿಸಿದ ವೃಕ್ಷಾದಿಗಳ ಪರಿಚಯ

ವಾಸ್ತು ಶಿಲ್ಪಕ್ಕೂ ವಾತಾವರಣಕ್ಕೂ ಅತಿನಿಕಟಸಂಬಂಧವಿದೆ. ವಾತಾವರಣವು ಮನುಷ್ಯಾಲಯ ಮತ್ತು ದೇವಾಲಯ ಎರಡರ ಮೇಲೂ ತನ್ನ ಪ್ರಭಾವವನ್ನು ಬೀರುತ್ತದೆ. ಯೋಗ್ಯವಾದ ಸಸ್ಯ ಸಂಪತ್ತಿನಿಂದ ಕೂಡಿದ ಪರಿಸರವು ಮನುಷ್ಯನ ಶಾರೀರಿಕ ಮತ್ತು ಮಾನಸಿಕ ಆರೋಗ್ಯಕ್ಕೆ ತುಂಬ ಸಹಕಾರಿಯಾಗಿದೆ. ಅದರಲ್ಲಿಯೂ ಉತ್ತಮ ಔಷಧೀಯಗುಣವಿರುವ ವೃಕ್ಷಲತೆಗಳಿದ್ದರೆ ಅದರ ಪ್ರಭಾವ ಆರೋಗ್ಯರಕ್ಷಣೆ ಮತ್ತು ವರ್ಧನೆಗೆ ತುಂಬ ಅನುಕೂಲವಾಗುತ್ತದೆ ಎಂಬುದು ಎಲ್ಲರೂ ತಿಳಿದ ಸತ್ಯ. ಮನುಷ್ಯನ ಬದುಕಿಗೆ ಅತ್ಯಗತ್ಯವಾಗಿ ಬೇಕಾದ ಇಂತಹ ಅನುಕೂಲವಾದ ವಾತಾವರಣವನ್ನು ನಿರ್ಮಾಣ ಮಾಡುವ ವಿಷಯಕ್ಕೆ ಭಾರತೀಯ ವಾಸ್ತುಶಾಸ್ತ್ರಜ್ಞರು ಬಹಳ ಮಹತ್ವವನ್ನು ಕೊಟ್ಟಿರುತ್ತಾರೆ. ಆದುದರಿಂದ ವಾಸ್ತುಶಾಸ್ತ್ರವು ಮನೆಗಳ ಮತ್ತು ದೇವಾಲಯಗಳ ಸುತ್ತಮುತ್ತ ಧಾರ್ಮಿಕವಾಗಿ ಶುಭಪ್ರದವಾದ, ಆರೋಗ್ಯದ ದೃಷ್ಟಿಯಿಂದ ಹಿತಕರವಾದ ಹಲ ಕೆಲವು ತರುಲತೆಗಳನ್ನು ಆಯ್ದು, ಅವುಗಳನ್ನು ನೆಟ್ಟು ಬೆಳೆಸಲು ನಿರ್ದೇಶಿಸುತ್ತದೆ. ಮನುಷ್ಯಾಲಯ ಚಂದ್ರಿಕೆಯಲ್ಲಿ ಸೂಚಿಸಿದ ಅಂತಹ ಕೆಲವು ಮರ-ಗಿಡ-ಬಳ್ಳಿಗಳ ಸೂಕ್ಷ್ಮ ಪರಿಚಯವನ್ನು ಅವುಗಳ ಆಯುರ್ವೇದೀಯ ಔಷಧೀಯಗುಣಗಳ ಸಹಿತ ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

(1) ಅಕ್ಷದ್ರುಮ - ಅಕ್ಷದ್ರುಮ, ಬಿಭೀತಕಿ(ಸಂ.) ತಾರೆಕಾಯಿ(ಶಾಂತಿಕಾಯಿ)(ಕ.) ಇದು ಬಹಳ ಎತ್ತರ ಹಾಗೂ ತೋರವಾಗಿ ಬೆಳೆಯುವ ಮರ. ಇದರಲ್ಲಿ ಗಂಡು ಶಾಂತಿ ಮತ್ತು ಹೆಣ್ಣು ಶಾಂತಿ ಎಂಬ ಎರಡು ವಿಧಗಳಿವೆ.

ಔಷಧೀಯ ಗುಣ : ಶಾಂತಿಕಾಯಿಯು ಆಯುರ್ವೇದದಲ್ಲಿ ಹೇಳಿದ ತ್ರಿಫಲಗಳಲ್ಲಿ ಒಂದು. ಇದು ಉಷ್ಣಗುಣವುಳ್ಳ, ಕಫಪಿತ್ತನಾಶಕವಾದುದು. ಇದು ಮಲಬದ್ಧತೆ, ಕೆಮ್ಮು, ಸ್ವರವಿಕೃತಿ ಮೊದಲಾದವುಗಳನ್ನು ಹೋಗಲಾಡಿಸುತ್ತದೆ. ಕಣ್ಣಿಗೆ ಹಿತಕರವೂ, ಕೇಶವರ್ಧಕವೂ ಆಗಿದೆ.

ಇದರ ಬೀಜದಲ್ಲಿರುವ ತಿರುಳು ಬಹಳ ರುಚಿಕರ. ಅದು ಬಾಯಾರಿಕೆ, ವಾಂತಿ, ಕಫ ಮತ್ತು ವಾತಶಮನದ ಶಕ್ತಿಯುಳ್ಳದ್ದು. ಮತ್ತು ಬರಿಸುವ ಗುಣವು ಇದಕ್ಕಿದೆ.

(2) ಅಡಿಕೆ - ಪೂಗ (ಸಂ.) ಅಡಿಕೆ (ಕ.). ಇದರ ಕಾಂಡ ಗಟ್ಟಿಯಾಗಿದ್ದು 60-70 ಅಡಿಗಳಷ್ಟು ಎತ್ತರದ ವರೆಗೆ ಉದ್ದವಾಗಿ ಬೆಳೆಯುತ್ತದೆ. ಇದರಲ್ಲಿ ಕೊಂಬೆರೆಂಬೆಗಳಿಲ್ಲ. ಇದರ ಹಿಂಗಾರವನ್ನು ಪೂಜೆಗೆ ಹಾಗೂ ಅಲಂಕಾರಕ್ಕಾಗಿ ಉಪಯೋಗಿಸುತ್ತಾರೆ. ಅಡಿಕೆಯು ವೀಳ್ಯದೆಲೆಯೊಂದಿಗೆ

ದೇವರಿಗೆ ಸಮರ್ಪಿಸಲು ಮತ್ತು ತಾಂಬೂಲ ಚರ್ವಣಕ್ಕೆ ಬೇಕಾಗುತ್ತದೆ. ಇದು ಬಹಿಸ್ಸಾರದ ಮರವಾದುದರಿಂದ ಇದನ್ನು ಸಿಗಿದು ಸಲಿಕೆಗಳನ್ನಾಗಿ ಮಾಡಿ ಮನೆಯ ಮಾಡುಗಳನ್ನು ರಚಿಸಲು ಉಪಯೋಗಿಸುತ್ತಾರೆ.

ಔಷಧೀಯ ಗುಣ : ಅಡಿಕೆಯು ಗುರು, ರೂಕ್ಷ ಮತ್ತು ಶೀತಗುಣವುಳ್ಳದ್ದು. ಕಫ ಮತ್ತು ಪಿತ್ತನಿವಾರಣಾಶಕ್ತಿ ಇದಕ್ಕಿದೆ. ಅಗ್ನಿದೀಪಕವಾಗಿದ್ದು ಬಾಯಿಯ ರುಚಿಯನ್ನು ಹೆಚ್ಚಿಸುತ್ತದೆ. ಹಸಿ ಅಡಿಕೆಯಲ್ಲಿ ಮತ್ತುಬರಿಸುವ ಗುಣವೂ ಇದೆ.

(3) ಅಭಯ - ಅಭಯ, ಹರೀತಕೀ(ಸಂ.) ಅಣಲೆಕಾಯಿ(ಕ.) ಇದು ಸಾಧಾರಣವಾಗಿ ಎತ್ತರಕ್ಕೆ ಬೆಳೆಯುವ ಮರ. ಕಾಯಿಯನ್ನು ಬಿಡುತ್ತದೆ.

ಔಷಧೀಯ ಗುಣ : ಇದರಲ್ಲಿ ಔಷಧೀಯಗುಣಗಳು ಬಹಳಷ್ಟು ಇವೆ. ಇದು ತ್ರಿಫಲಗಳಾದ ಅಣಲೆಕಾಯಿ, ನೆಲ್ಲಿಕಾಯಿ ಮತ್ತು ಶಾಂತಿಕಾಯಿಗಳ ಪೈಕಿ ಒಂದಾಗಿದೆ. ಇದು ರೂಕ್ಷ ಮತ್ತು ಉಷ್ಣಗುಣಗಳುಳ್ಳದ್ದು. ಇದಕ್ಕೆ ಅಗ್ನಿದೀಪನ ಶಕ್ತಿಯಿದೆ. ಇದು ಬುದ್ಧಿವರ್ಧಕವೂ, ಸರ್ವಧಾತುವರ್ಧಕವೂ, ಕಣ್ಣಿಗೆ ಹಿತಕರವೂ, ಆಯುವರ್ಧಕವೂ ಆಗಿದೆ. ದಮ್ಮು, ಕೆಮ್ಮು, ಬಹುಮೂತ್ರತೆ, ಮೂಲವ್ಯಾಧಿ, ಚರ್ಮರೋಗ, ಅಂಗಾಂಗಗಳಲ್ಲಿ ನೀರು ತುಂಬುವಿಕೆ, ಉದರಕ್ರಿಮಿ, ಸ್ವರಹಾನಿ, ಸಣ್ಣ ಕರುಳಿನ ವಿಕಾರ, ಮಲಬದ್ಧತೆ, ಹೃದ್ರೋಗ, ಉದರ ಶೂಲೆ, ಹೊಟ್ಟೆಯುಬ್ಬರ, ಯಕೃತ್‌ವೃದ್ಧಿ, ಮೂತ್ರದ ಕಲ್ಲು, ಮೂತ್ರಕಟ್ಟುವಿಕೆ ಇತ್ಯಾದಿಗಳನ್ನು ನಾಶಮಾಡುತ್ತದೆ.

(4) ಅಶ್ವತ್ಥ - ಅಶ್ವತ್ಥ, ಪಿಪ್ಪಲತರು (ಸಂ) ಇದು ವಿಶಾಲವಾಗಿ ಬೆಳೆಯುವ ಮರ. ಇದರ ಎಲೆಗಳು ಗಾಳಿಗೆ ಯಾವಾಗಲೂ ಅಲುಗಾಡುತ್ತಿದ್ದು ಗಾಳಿಯ ಪ್ರಸಾರಕ್ಕೆ ಅನುಕೂಲವಾಗಿದೆ. ಇದು ಬಹಳವಾಗಿ ಆಮ್ಲಜನಕವನ್ನು ಬಿಡುಗಡೆ ಮಾಡುತ್ತದೆ. ಧಾರ್ಮಿಕವಾಗಿ ಈ ವೃಕ್ಷಕ್ಕೆ ಪೂಜ್ಯತೆಯಿದೆ. ಇದನ್ನು ವೃಕ್ಷರಾಜ ಎಂದು ಭಾರತೀಯ ಸಂಸ್ಕೃತಿಯಲ್ಲಿ ಗುರುತಿಸುತ್ತಾರೆ. ಇದಕ್ಕೆ ದೇವತಾಸ್ವರೂಪವನ್ನು ಕಲ್ಪಿಸಿ, ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಎಂಬ ತ್ರಿಮೂರ್ತಿಗಳ ಸ್ವರೂಪವೇ ಈ ವೃಕ್ಷ ಎಂದು ಇದನ್ನು ಪೂಜಿಸುತ್ತಾರೆ. ಇದಕ್ಕೆ ಉಪನಯನ ಮತ್ತು ವಿವಾಹಸಂಸ್ಕಾರವನ್ನು ಮಾಡುತ್ತಾರೆ. ಬೆಳಿಗ್ಗೆ ಮತ್ತು ಸಂಜೆ ಈ ಮರಕ್ಕೆ ಪ್ರದಕ್ಷಿಣೆ ಮಾಡಿ ನಮಸ್ಕರಿಸುವುದು ರೂಢಿಯಲ್ಲಿದೆ.

ಔಷಧೀಯ ಗುಣ : ಇದು ಗುರು, ರೂಕ್ಷ ಮತ್ತು ಶೀತಗುಣವುಳ್ಳದ್ದಾಗಿದೆ. ಇದು ಕಷಾಯರಸವನ್ನು ಹೊಂದಿರುತ್ತದೆ. ಪಿತ್ತ, ಕಫ, ವ್ರಣ ರಕ್ತದೋಷನಿವಾರಕವಾಗಿದೆ. ಸ್ತ್ರೀಯರ ಯೋನಿವಿಕಾರಕ್ಕೆ ಇದರ ಕಷಾಯ ಬಹಳ ಪರಿಣಾಮಕಾರಿಯಾಗಿದೆ.

(5) ಅಶೋಕ - ಅಶೋಕ(ಸಂ.) ಇದು ಕೆಂಪು ಹೂವನ್ನು ಬಿಡುವ ಮರ. ಸ್ತ್ರೀಯರ ಪದಾಘಾತದಿಂದ ಇದು ಹೂ ಬಿಡುತ್ತದೆಯೆಂದು ಕವಿಗಳು ಕವಿಸಮಯದಲ್ಲಿ ಉಲ್ಲೇಖಿಸುತ್ತಾರೆ. ಸ್ತ್ರೀಯರ ಗರ್ಭಾಶಯಕ್ಕೆ ಸಂಬಂಧಿಸಿದ ರೋಗಗಳನ್ನು ನಾಶಮಾಡಿ ಅವರ ಶೋಕನಿವಾರಣೆ ಮಾಡುವುದರಿಂದಾಗಿ ಅದಕ್ಕೆ 'ಅಶೋಕ' ಎಂಬ ಹೆಸರು ಬಂದಿದೆಯೆಂದು ಹೇಳಿಕೆಯಿದೆ.

ಔಷಧೀಯ ಗುಣ : ಇದು ಶೀತಗುಣಯುಕ್ತವಾದುದು. ಇದರ ಸಿಪ್ಪೆಯ ಕಷಾಯ ನೀರಡಿಕೆ ಹಾಗೂ ಉರಿಯನ್ನು ಕಡಿಮೆ ಮಾಡುತ್ತದೆ. ಇದು ಕ್ರಿಮಿಶೋಧಕರವೂ, ವಿಷಹರವೂ, ರಕ್ತದೋಷಹರವೂ ಆಗಿದೆ.

